ಶುಕ್ರವಾರ, ಜುಲೈ 29, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹುಲಿ ದಿನ

ವಿಶ್ವ ಹುಲಿ ದಿನದ ಮುನ್ನಾದಿನವಾದ ಗುರುವಾರ ಉತ್ತರ ಪ್ರದೇಶದ ಮೊರಾದಾಬಾದ್‌ನಲ್ಲಿ ವಿದ್ಯಾರ್ಥಿನಿಯರು ಮುಖಕ್ಕೆ ಹುಲಿಯಂತೆ ಬಣ್ಣ ಹಚ್ಚಿಕೊಂಡಿದ್ದರು

ಶುಕ್ರವಾರ, ಜುಲೈ 29, 2022 | ₹ 6.00

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಧಿವೇಶನ

ಅಧಿವೇಶನದಲ್ಲಿ ಪಾಲ್ಗೊಳ್ಳಲು ಗುರುವಾರ ನವದೆಹಲಿಯ ಸಂಸತ್ ಭವನಕ್ಕೆ ಬಂದ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ

ಕೆಎಸ್‌ಐಐಡಿಸಿ | ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ | ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕದ ಅಭಿವೃದ್ಧಿಗೆ ವಿಮಾನಯಾನ ಕ್ಷೇತ್ರದ ಅನುಪಮ ಕೊಡುಗೆ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕದಲ್ಲಿ ನಾಗರಿಕ ವಿಮಾನಯಾನದ ಪ್ರಸ್ತುತ ಸ್ಥಿತಿ :

ಕರ್ನಾಟಕ ಸರ್ಕಾರದ ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ನೇತೃತ್ವದಲ್ಲಿ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮವು ಕರ್ನಾಟಕ ರಾಜ್ಯದ ಆಯಕಟ್ಟಿನ ಸ್ಥಳಗಳಲ್ಲಿ ವಿಮಾನ ನಿಲ್ದಾಣಗಳು, ಏರ್‌ಸ್ಟ್ರಿಪ್‌ಗಳು, ಹೆಲಿಪೋರ್ಟ್‌ಗಳು ಮತ್ತು ವಾಟರ್ ಏರೋಡ್ರಮ್‌ಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ಆರ್‌ಸಿಎಸ್ ಉಡಾನ್ ಯೋಜನೆಯ ಪ್ರಯೋಜನಗಳನ್ನು ಬಳಸಿಕೊಳ್ಳುವುದರ ಮೂಲಕ ಕೆಎಸ್‌ಐಐಡಿಸಿ ರಾಜ್ಯದಲ್ಲಿ ವಿಮಾನಯಾನಕ್ಕಾಗಿ ಅತ್ಯುತ್ತಮ ಪರಿಸರ ವ್ಯವಸ್ಥೆಯನ್ನು ಕಲ್ಪಿಸಿದೆ. ಹೂಡಿಕೆಗಳನ್ನು ಆಕರ್ಷಿಸಲು, ಸೂಕ್ತ ಪ್ರಮಾಣಕ್ಕೆ ಅನುಗುಣವಾದ ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಎಲ್ಲಾ ವಲಯಗಳಲ್ಲೂ ಸ್ಟಾರ್ಟ್‌ಅಪ್ / ವ್ಯಾಪಾರಕ್ಕೆ ಅನುಕೂಲವಾದ ಪರಿಸರ ವ್ಯವಸ್ಥೆಗಳನ್ನು ರೂಪಿಸುವ ದೃಷ್ಟಿಯಿಂದ ಕರ್ನಾಟಕ ಸರ್ಕಾರವು, ರಾಜ್ಯವನ್ನು ಅತ್ಯುತ್ತಮ ವಿಮಾನಯಾನ ಕೇಂದ್ರವನ್ನಾಗಿಸಲು ದೃಢವಾದ ಹೆಜ್ಜೆ ಇಟ್ಟಿದೆ.

ಬೆಳವಣಿಗೆಗೆ ವೇಗವರ್ಧನೆ:

- ರಾಜ್ಯದಲ್ಲಿ ಬೃಹತ್ ಮೂಲಸೌಕರ್ಯಗಳ ಅಭಿವೃದ್ಧಿಗೆ ಕೆಎಸ್‌ಐಐಡಿಸಿ ನೋಡಲ್ ಏಜೆನ್ಸಿಯಾಗಿದೆ.
- ಹಿಂದುಳಿದ ಪ್ರದೇಶಗಳಿಗೆ ವಿಶೇಷ ಒತ್ತು ನೀಡುವ ಮೂಲಕ ರಾಜ್ಯದ ಎಲ್ಲಾ ಪ್ರದೇಶಗಳ ತ್ವರಿತ ಮತ್ತು ಸಮತೋಲಿತ ಕೈಗಾರಿಕಾ ಅಭಿವೃದ್ಧಿಗೆ ಆದ್ಯತೆ.
- ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ.

ಪ್ರಮುಖ ಸಾಧನೆಗಳು:

- ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಪಡಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದು, ಪಿಪಿಪಿ ಆಧಾರದಲ್ಲಿ ಅಭಿವೃದ್ಧಿ ಪಡಿಸಿರುವ ಪ್ರಥಮ ಯಶಸ್ವಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣವಾಗಿದೆ. ಹಾಲಿ ಪ್ರಯಾಣಿಕರ ಸಂಚಾರದ ಪ್ರಮಾಣದಲ್ಲಿ ಭಾರತದ 3 ನೇ ಬೃಹತ್ ವಿಮಾನ ನಿಲ್ದಾಣವಾಗಿದೆ. ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ.
- ಮೈಸೂರು, ಹುಬ್ಬಳ್ಳಿ, ಬೆಳಗಾವಿ, ಕಲಬುರಗಿ ಮತ್ತು ಬೀದರ್ ನಗರಗಳಲ್ಲಿ ಒಟ್ಟು ಐದು ದೇಶೀಯ ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ.
- ಶಿವಮೊಗ್ಗ, ಹಾಸನ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳ ಕಾಮಗಾರಿ ಪ್ರಗತಿಯಲ್ಲಿವೆ.
- ರಾಯಚೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಾಣದ ಕಾರ್ಯ ಕೆಲವೇ ದಿನಗಳಲ್ಲಿ ಪ್ರಾರಂಭವಾಗಲಿದೆ.
- ದಾವಣಗೆರೆ ಮತ್ತು ಕೊಪ್ಪಳಗಳಲ್ಲಿ ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ಕಾರ್ಯಸಾಧ್ಯತಾ ವರದಿಯನ್ನು ಅಂತಿಮಗೊಳಿಸಲಾಗಿದೆ.
- ಕಾರವಾರ ಮತ್ತು ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.
- ಹಂಪಿ, ಕೊಡಗು ಮತ್ತು ಚಿಕ್ಕಮಗಳೂರುಗಳಲ್ಲಿ ಹೆಲಿಪೋರ್ಟ್‌ಗಳ ನಿರ್ಮಾಣಕ್ಕೆ ಪ್ರಸ್ತಾಪಿಸಲಾಗಿದೆ.
- ಮಂಗಳೂರು, ಮಲ್ಪೆ, ಬೈಂದೂರು, ಕಾಳಿ ನದಿ, ತುಂಗಭದ್ರ ಅಣೆಕಟ್ಟು, ಕೃಷ್ಣರಾಜ ಸಾಗರ ಅಣೆಕಟ್ಟು, ಲಿಂಗನಮಕ್ಕಿ ಜಲಾಶಯ, ಆಲಮಟ್ಟಿ ಅಣೆಕಟ್ಟು ಮತ್ತು ಹಿಡ್ಕಲ್ ಅಣೆಕಟ್ಟುಗಳಲ್ಲಿ ವಾಟರ್ ಏರೋಡ್ರಮ್ (ಜಲ ವಿಮಾನ ನಿಲ್ದಾಣಗಳು)ಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.

ಮಾನ್ಯ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವರಾದ ಶ್ರೀ ವಿ. ಸೋಮಣ್ಣ ರವರು ರಾಜ್ಯ ಮಟ್ಟದ ಕರ್ನಾಟಕ ಸಮಗ್ರ ನಾಗರಿಕ ವಿಮಾನಯಾನ ನೀತಿಯ ಕಾರ್ಯಾಗಾರವನ್ನು ಉದ್ಘಾಟಿಸುತ್ತಿರುವುದು.

ಮಾನ್ಯ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವರಾದ ಶ್ರೀ ವಿ. ಸೋಮಣ್ಣ ರವರು ವಿಜಯಪುರ ವಿಮಾನ ನಿಲ್ದಾಣದ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸುತ್ತಿರುವುದು.

ಮಾದರಿ ಬಿಸಿನೆಸ್ ಪಾರ್ಕ್

ಕೆಎಸ್‌ಐಐಡಿಸಿಯು, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ವಿಶ್ವದ ಪ್ರಸಿದ್ಧ ಕಂಪನಿಗಳಿಗಾಗಿ ಬೆಂಗಳೂರು ಸಿಗ್ನೇಚರ್ ಬಿಸಿನೆಸ್ ಪಾರ್ಕ್‌ನ್ನು ನಿರ್ಮಿಸುತ್ತಿದೆ. ಈ ಪಾರ್ಕ್ 407 ಎಕರೆ ಜಮೀನಿನಲ್ಲಿ ನಿರ್ಮಾಣವಾಗಲಿದ್ದು ವಿಮಾನಯಾನ ಮತ್ತು ಅಂತರಿಕ್ಷಯಾನ ಉದ್ಯಮಗಳಿಗೆ ಪ್ರಮುಖ ಹೂಡಿಕೆ ಕೇಂದ್ರವಾಗಲಿದೆ.

ತದಡಿ ಪರಿಸರ ಪ್ರವಾಸೋದ್ಯಮ ಕೇಂದ್ರ

ಕೆಎಸ್‌ಐಐಡಿಸಿಯು, ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ತದಡಿ (ಗೋಕರ್ಣ ಸಮೀಪ) ಯಲ್ಲಿ 1819 ಎಕರೆಯಷ್ಟು ವಿಶಾಲ ಪ್ರದೇಶದಲ್ಲಿ ಪರಿಸರ ಪ್ರವಾಸೋದ್ಯಮ ಪಾರ್ಕ್ ನಿರ್ಮಾಣ ಮಾಡಲಿದೆ. ಇದು ಕರಾವಳಿ ಪ್ರದೇಶದ ಆರ್ಥಿಕ ಚಿತ್ರಣವನ್ನು ಬದಲಾಯಿಸುವುದರ ಜೊತೆಗೆ ರಾಜ್ಯದ ಪ್ರವಾಸೋದ್ಯಮ ಕ್ಷೇತ್ರದ ಕ್ಷಿಪ್ರ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡಲಿದೆ.


ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಕಲಬುರಗಿ ವಿಮಾನ ನಿಲ್ದಾಣ


ಶಿವಮೊಗ್ಗ ವಿಮಾನ ನಿಲ್ದಾಣ


ವಿಜಯಪುರ ವಿಮಾನ ನಿಲ್ದಾಣ

ಹಾಸನ ಮತ್ತು ಕಾರವಾರ ವಿಮಾನ ನಿಲ್ದಾಣ (ನೌಕಾಪಡೆ)

ಕೆಎಸ್‌ಐಐಡಿಸಿ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)

ಗೌರವ ಗುಪ್ತ, ಭಾ.ಆ.ಸೇ.
ಅಪರ ಮುಖ್ಯ ಕಾರ್ಯದರ್ಶಿ,
ಮೂಲಸೌಕರ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಡಾ. ಎಂ.ಆರ್. ರವಿ, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾಸ್ಕ್ ಧರಿಸಿ | ಸಾಮಾಜಿಕ ಅಂತರ ಕಾಪಾಡಿಕೊಳ್ಳಿ (6 ಅಡಿ) | ಕೈಗಳನ್ನು ಸ್ವಚ್ಛಗೊಳಿಸಿ | ಲಸಿಕೆ ಹಾಕಿಸಿಕೊಳ್ಳಿ

ಗುಡುಗು, ಸಿಡಿಲು ಸಹಿತ ಬಿರುಸಿನ ಮಳೆ, ಹಲವೆಡೆ ಮನೆಗಳಿಗೆ ನುಗ್ಗಿದ ನೀರು

ಮಳೆ: ನೆಲಕಚ್ಚಿದ ಬೆಳೆ, ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರ ಗುಡುಗು, ಸಿಡಿಲು ಸಹಿತ ಜೋರು ಮಳೆಯಾಗಿದ್ದು, ಹಲವು ಮನೆಗಳಿಗೆ ಹಾನಿಯಾಗಿದೆ. ಬೆಳೆಗಳು ನೆಲಕಚ್ಚಿವೆ.

ಹುಬ್ಬಳ್ಳಿ- ಧಾರವಾಡ, ಗದಗ, ಬೆಳಗಾವಿ, ಹೊಸಪೇಟೆ ಸೇರಿದಂತೆ ಹಲವೆಡೆ ಧಾರಾಕಾರ ಮಳೆಯಾಗಿದೆ. ನವಲಗುಂದ ಭಾಗದ ಕೆಲವೆಡೆ ಹೆಸರು ಬೆಳೆ ನೆಲಕಚ್ಚಿವೆ. ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ನಾಲ್ಕು ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಗದಗ ಜಿಲ್ಲೆಯ ಮುಂಡರಗಿ ಪಟ್ಟಣದಲ್ಲಿ ಸುರಿದ ಮಳೆಗೆ ಗುರುವಾರ ಸಂಜೆ ಇಲ್ಲಿನ ಬ್ರಾಹ್ಮಣರ ಓಣಿಯಲ್ಲಿ ಚಾವಣಿ ಕುಸಿದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಬೆಳಗಾವಿ ನಗರ, ಬೈಲಹೊಂಗಲ ಪಟ್ಟಣದಲ್ಲಿ ಮಳೆಯ ಆರ್ಭಟಕ್ಕೆ ಹೆಂಚಿನ ಮನೆಯೊಂದು ಕುಸಿದಿದೆ. ಮಹಾರಾಷ್ಟ್ರದ ರಾಜಾಪುರ ಬ್ಯಾರೇಜಿನಿಂದ 30 ಸಾವಿರ ಕ್ಯುಸೆಕ್ ಹಾಗೂ ದೂಧಗಂಗಾ ನದಿಯಲ್ಲಿ 2047 ಕ್ಯುಸೆಕ್ ನೀರು ಸೇರಿ ಕೃಷ್ಣಾ ನದಿಗೆ ಗುರುವಾರ ಬೆಳಿಗ್ಗೆ 8ರಿಂದ 34,765 ಕ್ಯುಸೆಕ್ ನೀರು ಹರಿದು ಬರುತ್ತಿದೆ.

ಹುಬ್ಬಳ್ಳಿ- ಧಾರವಾಡದಲ್ಲಿಯೂ ಧಾರಾಕಾರ ಮಳೆಯಾಗಿದೆ. ಗದಗ ಜಿಲ್ಲೆಯ ಕೆಲ ಬಡಾವಣೆಗಳಲ್ಲಿ ಮನೆಗೆ ನೀರು ನುಗ್ಗಿದೆ. ಶಾಲೆಗಳಿಗೂ ಮಳೆ ನೀರು ನುಗ್ಗಿದ್ದರಿಂದ ರಜೆ ಘೋಷಿಸಲಾಗಿತ್ತು. ಲಕ್ಷ್ಮೇಶ್ವರ, ಶಿರಹಟ್ಟಿ ಹಾಗೂ ನರಗುಂದ ಭಾಗದ ಜಮೀನಿನಲ್ಲಿ ನೀರು ನಿಂತು ಬೆಳೆ ಹಾನಿಯಾಗಿದೆ.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬನ್ನಿಕಲ್ಲು ಗ್ರಾಮದಲ್ಲಿ 3, ಕಿತ್ನೂರು ಗ್ರಾಮದಲ್ಲಿ 1 ಮನೆಗೆ ಹಾನಿಯಾಗಿದೆ. ಹಗರಿಬೊಮ್ಮನಹಳ್ಳಿ ಪಟ್ಟಣದಲ್ಲಿ 14 ಮನೆಗಳಿಗೆ ನೀರು ನುಗ್ಗಿದ್ದರಿಂದ ಗೃಹಪಯೋಗಿ ವಸ್ತುಗಳಿಗೆ ಹಾನಿಯಾಗಿದೆ. ತುಂಗಭದ್ರಾ ಜಲಾಶಯದ ಒಳಹರಿವು ಪುನಃ ಹೆಚ್ಚಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ನಾಟಿಗೆ ತಯಾರಿ ಮಾಡಿಕೊಂಡಿದ್ದ ಭತ್ತ ಸಸಿ ಮಡಿಗಳು ಕೊಚ್ಚಿಕೊಂಡು ಹೋಗಿವೆ. ಗದ್ದೆಗಳಲ್ಲಿ ನೀರು ತುಂಬಿಕೊಂಡಿದೆ. ತಾಲ್ಲೂಕಿನ ಜರೆಕಟ್ಟೆ, ಮಿಟ್ಲಕಟ್ಟೆಗಳಲ್ಲಿ ಸಸಿಮಡಿ ಇದ್ದ ಗದ್ದೆಗಳಿಂದ ನೀರು ಕೆಳಗೆ ಹರಿಸಲು ರೈತರು ಗುರುವಾರ ಹರಸಾಹಸ ಮಾಡಿದರು. ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ಸಮೀಪದ ಲಕ್ಷ್ಮೀಸಾಗರ ಮತ್ತು ಬಸಾಪುರ ಗ್ರಾಮಗಳಲ್ಲಿ ಎರಡು ದಿನಗಳ ಹಿಂದೆ ನಾಟಿ ಮಾಡಿದ ಗದ್ದೆಗಳಿಗೆ ಸೂಳೆಕೆರೆ ಹಳ್ಳದ ನೀರು ನುಗ್ಗಿ ಬೆಳೆ ಕೊಚ್ಚಿಕೊಂಡು ಹೋಗಿದೆ. ಅಡಿಕೆ ತೋಟಗಳಲ್ಲಿ ಮೊಳಕಾಲುದ್ದ ನೀರು ನಿಂತಿದೆ. ಭತ್ತದ ಗದ್ದೆಗಳು ಹಾಳಾಗಿವೆ. ಮೆಕ್ಕೆಜೋಳಕ್ಕೆ ಹಾನಿಯಾಗಿದೆ.

ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಬುಧವಾರ ರಾತ್ರಿಯಿಡೀ ಮಳೆ ಸುರಿದಿದೆ. ಬಾಪೂಜಿ ನಗರದ ಮನೆಗಳಿಗೆ ಹಾಗೂ ಬಾಲರಾಜ್ ಅರಸ್ ರಸ್ತೆಯಲ್ಲಿರುವ ಕೆಲ ಅಂಗಡಿಗಳಿಗೆ ನೀರು ನುಗ್ಗಿತ್ತು.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಕೆಲವೆಡೆ ತೋಟ, ಜಮೀನುಗಳಿಗೆ ನೀರು ನುಗ್ಗಿದೆ. ಕೆ.ಬಿದರೆ, ಬೊಮ್ಮನಹಳ್ಳಿಯಲ್ಲಿ ಒಂದೊಂದು ಮನೆ ಕುಸಿದಿವೆ. ಚೌಳಹಿರಿಯೂರಿನ ದೊಡ್ಡಕೆರೆ ಕೋಡಿ ಬಿದ್ದಿದ್ದು ತೋಟ, ಜಮೀನುಗಳಿಗೆ ನೀರು ನುಗ್ಗಿದೆ. ಚೌಳಹಿರಿಯೂರು–ಆಲದಹಳ್ಳಿ ಮಾರ್ಗದಲ್ಲಿ ಸೇತುವೆಗೆ ಅಳವಡಿಸಿದ್ದ ಸಿಮೆಂಟ್ ಪೈಪುಗಳು ಕೊಚ್ಚಿ ಹೋಗಿದ್ದು, ಯಗಟಿ ಕೆರೆ ಏರಿ ರಸ್ತೆ ಒಂದು ಕಡೆ ಕುಸಿದಿದೆ. ಹೊನ್ನಾಳ ಚೆಕ್‌ಪೋಸ್ಟ್ ಬಳಿ ಗುಡ್ಡದ ಮಣ್ಣು, ಕಲ್ಲುಗಳು ಕುಸಿದಿವೆ.

ಗುರುವಾರ ಸುರಿದ ಭಾರಿ ಮಳೆಗೆ ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬನ್ನಿಕಲ್ಲು ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಬಿದ್ದಿದೆ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕೊಡಗಿನಲ್ಲಿ ಹೆಚ್ಚಿದ ಬಸವನ ಹುಳುಗಳ ಕಾಟ

• ಶ.ಗ.ನಯನತಾರಾ

ಶನಿವಾರಸಂತೆ (ಕೊಡಗು ಜಿಲ್ಲೆ): ಎಡೆಬಿಡದೇ ಸುರಿದ ಮಳೆಯಿಂದಾಗಿ ಕೊಡಗು ಜಿಲ್ಲೆಯ ಹಲವೆಡೆ ಬಸವನ ಹುಳುಗಳ ಕಾಟ ಹೆಚ್ಚಾಗಿದೆ. ದಿನ ಬೆಳಗಾಗುವಷ್ಟರಲ್ಲಿ ಕಾಫಿ ತೋಟದಲ್ಲಿರುವ ಗಿಡಗಳ ಎಲೆಗಳನ್ನು, ಕಾಫಿಯ ಹೀಚುಕಾಯಿಯನ್ನು ತಿಂದು ತೇಗುತ್ತಿದ್ದು, ಅವುಗಳನ್ನು ನಾಶಪಡಿಸಲು ಬೆಳೆಗಾರರು ಕಸರತ್ತು ನಡೆಸಿದ್ದಾರೆ.

ಹಂಡ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಳ್ಳಾರಳ್ಳಿ, ಹಂಡ್ಲಿ, ಶಿರಂಗಾಲ, ಹುಲುಸೆ, ಕೆರೆಹಳ್ಳಿ ಸುತ್ತಮುತ್ತಲ ಹಳ್ಳಿಗಳ ತೋಟಗಳಲ್ಲಿ ಮಳೆಗಾಲದ ಅತಿಥಿಗಳು ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲೇ ಕಾಣಿಸಿಕೊಂಡಿದ್ದು, ಬೆಳೆಗಾರರನ್ನು ಹೈರಣಾಗಿಸಿವೆ.

ಹುಳುಗಳ ಹತೋಟಿಗಾಗಿ ಕಾಫಿ ಮಂಡಳಿಯ ಅಧಿಕಾರಿಗಳು, ಕೀಟ ತಜ್ಞರು ಭೇಟಿ ನೀಡಿ ಪರಿಶೀಲಿಸಿ, ಸಲಹೆಗಳನ್ನು ನೀಡಿದ್ದಾರೆ. ಲಾರ್ವಿನ್ ಮಿಶ್ರಿತ ಆಕರ್ಷಕ ಬಲೆಯ ಮೂಲಕ ಹುಳುಗಳನ್ನು ಹಿಡಿದು ಗುಂಡಿಯಲ್ಲಿ ಉಪ್ಪು ಹಾಕಿ ಮುಚ್ಚುವಂತೆ ಸೂಚಿಸಿದ್ದಾರೆ.

ಹೀಗಾಗಿ, ಬೆಳೆಗಾರರಿಗೆ ಮಳೆಗಾಲದಲ್ಲಿ ಅತಿಯಾದ ಹುಳುಗಳನ್ನು ಹಿಡಿಸುವ ಕೆಲಸದ ಹೊರೆ ಬಿದ್ದಿದೆ. ಹುಳು ಹಿಡಿಯುವ ಮಹಿಳಾ ಕಾರ್ಮಿಕರಿಗೆ ₹ 300, ಪುರುಷ ಕಾರ್ಮಿಕರಿಗೆ ₹ 500 ಕೂಲಿ ನೀಡಬೇಕಿದೆ. ತೌಡಿನ ಜತೆಗೆ ಬೆಲ್ಲ, ಹುಳು ಕೊಲ್ಲುವ ಲಾರ್ವಿನ್ ದ್ರಾವಣ ಮಿಶ್ರ ಮಾಡಿ ಉಂಡೆ ಕಟ್ಟಿ ಅಲ್ಲಲ್ಲಿ ಇರಿಸಿ ಹುಳುಗಳನ್ನು ಆಕರ್ಷಿಸಲಾಗುತ್ತದೆ. ಕೈಗೆ ಗ್ಲೌಸ್ ಧರಿಸಿ ಕಾರ್ಮಿಕರು ಹುಳುಗಳನ್ನು ಸಂಗ್ರಹಿಸಿ ನಂತರ ಗುಂಡಿಯಲ್ಲಿ ಮುಚ್ಚುತ್ತಾರೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಬೆಳ್ಳಾರಳ್ಳಿಯ ಬೆಳೆಗಾರ ಬಿ.ಎಸ್.ಪ್ರತಾಪ್, ‘ಮಳೆಗಾಲದಲ್ಲಿ ಬೆಳೆಗಾರರು ಅನುಭವಿಸುವ ತೊಂದರೆ ಬಸವನ ಹುಳುಗಳ ಕಾಟ. ಆದರೆ, ಈ ಬಾರಿ ಅವುಗಳ ಕಾಟ ಹೆಚ್ಚಾಗಿದೆ. ಅನಿವಾರ್ಯವಾಗಿ ಹೆಚ್ಚಿನ ಖರ್ಚು ಮಾಡಬೇಕಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಶನಿವಾರಸಂತೆ ಸಮೀಪದ ಹಂಡ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಕಂಡು ಬಂದಿರುವ ಮಳೆಗಾಲದ ಅತಿಥಿ ದೈತ್ಯ ಬಸವನ ಹುಳು

ಜುಲೈ ತಿಂಗಳಲ್ಲಿ ಸುರಿದ ಅಧಿಕ ಮಳೆಗೆ ಕಾಫಿ ತೋಟಗಳಲ್ಲಿ ಬಸವನ ಹುಳುಗಳ ಹಾವಳಿ ಹೆಚ್ಚಾಗಿದೆ. ಕಾಫಿ ಮಂಡಳಿ ಸೂಚಿಸಿದಂತೆ ಹತೋಟಿ ಕ್ರಮ ಅನುಸರಿಸಬೇಕು

ವಿಶ್ವನಾಥ್
ಕಿರಿಯ ಸಂಪರ್ಕಾಧಿಕಾರಿ, ಕಾಫಿ ಮಂಡಳಿ, ಸೋಮವಾರಪೇಟೆ

ಸುದ್ದಿ 2 ನಿಮಿಷ

ಮತ್ತೆ ನನ್ನನ್ನು ಸಿಲುಕಿಸಲು ಯತ್ನ: ಡಿ.ಕೆ. ಶಿವಕುಮಾರ್ ಆರೋಪ

ರಾಮನಗರ: ‘ಇದೇ 30ರಂದು ಇ.ಡಿ ವಿಚಾರಣೆ ಇದ್ದು, ಶುಕ್ರವಾರ ದೆಹಲಿಗೆ ತೆರಳುತ್ತಿದ್ದೇನೆ. ನನ್ನನ್ನು ಮತ್ತೆ ಸಿಲುಕಿಸಲು ಹಲವರು ಪ್ರಯತ್ನಿಸುತ್ತಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಚನ್ನಪಟ್ಟಣ ತಾಲ್ಲೂಕಿನ ಗೌಡಗೆರೆಯಲ್ಲಿ ಗುರುವಾರ ಚಾಮುಂಡೇಶ್ವರಿ ದೇವಿಯ ಮಹಾಮಸ್ತಾಭಿಷೇಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ವೇಳೆ ಪತ್ರಕರ್ತರ ಜೊತೆ ಅವರು ಮಾತನಾಡಿದರು.

‘ಕೆಲವರು ಏನೇನೋ ಆಸೆಪಡುತ್ತಿದ್ದಾರೆ. ನನ್ನನ್ನು ಸಿಲುಕಿಸಲು ಏನೇನೋ ಸಂಚು ಮಾಡುತ್ತಿದ್ದಾರೆ. ಆ ಬಗ್ಗೆ ನಿಧಾನವಾಗಿ ಮಾತನಾಡುತ್ತೇನೆ. ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನೇ ಬಿಡುತ್ತಿಲ್ಲ. ಇನ್ನು ನನ್ನನ್ನು ಬಿಡುತ್ತಾರೆಯೇ?’ ಎಂದು ಪ್ರಶ್ನಿಸಿದರು.

ಆಗಸ್ಟ್ 2ಕ್ಕೆ ಹುಬ್ಬಳ್ಳಿಗೆ ರಾಹುಲ್

ಬೆಂಗಳೂರು: ದಾವಣಗೆರೆಯಲ್ಲಿ ಆಗಸ್ಟ್ 3ರಂದು ನಡೆಯಲಿರುವ ಸಿದ್ದರಾಮಯ್ಯ–75 ‘ಅಮೃತ ಮಹೋತ್ಸವ’ದಲ್ಲಿ ಭಾಗವಹಿಸಲು ಎಐಸಿಸಿ ನಾಯಕ ರಾಹುಲ್ ಗಾಂಧಿ ಹಿಂದಿನ ದಿನವೇ (ಆ.2) ಹುಬ್ಬಳ್ಳಿ ತಲುಪಲಿದ್ದಾರೆ.

ದೆಹಲಿಯಿಂದ ಹುಬ್ಬಳ್ಳಿಗೆ ರಾತ್ರಿ 8 ಗಂಟೆ ಸುಮಾರಿಗೆ ತಲುಪಲಿರುವ ರಾಹುಲ್, ಅಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಮರುದಿನ ರಸ್ತೆ ಮಾರ್ಗವಾಗಿ ದಾವಣಗೆರೆಗೆ ತೆರಳಲಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ತಿಳಿಸಿವೆ.

ವಿಧಾನಸಭೆ ಚುನಾವಣೆಗೆ ಸಾಮೂಹಿಕ ನಾಯಕತ್ವ, ಮುಖ್ಯಮಂತ್ರಿ ಗಾದಿ ವಿಚಾರದಲ್ಲಿ ಶಾಸಕ ಜಮೀರ್ ಅಹ್ಮದ್ ಖಾನ್ ನೀಡುತ್ತಿರುವ ಹೇಳಿಕೆ, ರಾಜ್ಯದ ಪ್ರಸಕ್ತ ರಾಜಕೀಯ ವಿದ್ಯಮಾನ, ಜೊತೆಗೆ, ಮರುದಿನ ನಡೆಯಲಿರುವ ಸಿದ್ದರಾಮಯ್ಯ ಅಮೃತ ಮಹೋತ್ಸವದ ಮೂಲಕ ಪಕ್ಷ ಸಂಘಟನೆ ದೃಷ್ಟಿಯಿಂದ ಕಾರ್ಯಕರ್ತರಿಗೆ ನೀಡಬೇಕಾದ ಸಂದೇಶದ ಬಗ್ಗೆ ಪಕ್ಷದ ಹಿರಿಯ ನಾಯಕರ ಜೊತೆ ಹುಬ್ಬಳ್ಳಿಯಲ್ಲಿ ರಾತ್ರಿ ರಾಹುಲ್ ಸಮಾಲೋಚನೆ ನಡೆಸುವ ಸಾಧ್ಯತೆ ಇದೆ ಎಂದೂ ಮೂಲಗಳು ಹೇಳಿವೆ.

ಪದಾಧಿಕಾರಿಗಳ ಮತ್ತೊಂದು ಪಟ್ಟಿ: ಇನ್ನಷ್ಟು ಮಂದಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಕೆಪಿಸಿಸಿಯ ‘ಗಾತ್ರ’ವನ್ನು ಹಿಗ್ಗಿಸಲು ಕಾಂಗ್ರೆಸ್ ನಿರ್ಧರಿಸಿದೆ.

8 ಉಪಾಧ್ಯಕ್ಷರು, 25 ಕಾರ್ಯದರ್ಶಿಗಳು, 240 ಕಾರ್ಯದರ್ಶಿಗಳನ್ನು ಹೆಚ್ಚುವರಿಯಾಗಿ ಸೇರಿಸಲು ಪಕ್ಷದ ವರಿಷ್ಠರಿಗೆ ಪಟ್ಟಿ ಸಲ್ಲಿಸಲಾಗಿದೆ. ಅಲ್ಲದೆ, ಪ್ರಚಾರ ಸಮಿತಿ, ಅಭ್ಯರ್ಥಿಗಳ ಆಯ್ಕೆ ಸಮಿತಿ ಮತ್ತು ಸಮನ್ವಯ ಸಮಿತಿಯನ್ನೂ ರಚಿಸಲು ಕಾಂಗ್ರೆಸ್ ನಾಯಕರು ನಿರ್ಧರಿಸಿದ್ದು, ಈ ಸಮಿತಿಯಲ್ಲಿ ಇರಬೇಕಾದವರ ಪಟ್ಟಿಯೂ ವರಿಷ್ಠರಿಗೆ ಸಲ್ಲಿಕೆ ಆಗಿದೆ ಎಂದೂ ಗೊತ್ತಾಗಿದೆ.

ಇದೇ 30ರಂದು ಜಾರಿ ನಿರ್ದೇಶನಾಲಯದ (ಇಡಿ) ಎದುರು ವಿಚಾರಣೆಗೆ ಹಾಜರಾಗಲು ಶುಕ್ರವಾರ (ಜುಲೈ 29) ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ದೆಹಲಿಗೆ ತೆರಳಲಿದ್ದಾರೆ. ಇದೇ ವೇಳೆ ಅವರು ಈ ಪಟ್ಟಿ ಅಂತಿಮಗೊಳಿಸಿ ರಾಜ್ಯಕ್ಕೆ ಮರಳುವ ಸಾಧ್ಯತೆ ಇದೆ ಎಂದೂ ಪಕ್ಷದ ಮೂಲಗಳು ಹೇಳಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.56	10,540	14,177
ಹಾರಂಗಿ	2,859	2,857.15	2,900	1,000
ಕಬಿನಿ	2,284	2,283.66	6,000	5,000
ಹೇಮಾವತಿ	2,922	2,922.00	8,160	8,105
ಲಿಂಗನಮಕ್ಕಿ	1,819	1,798	7,872	5,886
ಸೂಪಾ (ಮೀ)	564	541.81	5,039	4,116
ಮಾಣಿ	595	584	1,200	-
ತುಂಗಭದ್ರಾ	1,633	1,632.88	97,311	74,516
ಮಲಪ್ರಭಾ	2079.5	2,069.10	2,778	394
ಘಟಪ್ರಭಾ	2175	2,156	4,712	165
ಭದ್ರಾ	186	184	12,358	18,353
ಆಲಮಟ್ಟಿ (ಮೀ)	519.6	518.45	27,154	18,451
ನಾರಾಯಣಪುರ (ಮೀ)	492.25	491.84	20,000	17,480

* ನೆಲಮಟ್ಟದಿಂದ

ಕಿಬ್ಬನಹಳ್ಳಿ: ದಾಖಲೆ ಮಳೆ

ಬೆಂಗಳೂರು: ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿಯಲ್ಲಿ ಬುಧವಾರ ರಾತ್ರಿ 12 ಸೆಂಟಿ ಮೀಟರ್‌ನಷ್ಟು ದಾಖಲೆ ಪ್ರಮಾಣದ ಮಳೆಯಾಗಿದೆ.

ಕರಾವಳಿ ಮತ್ತು ದಕ್ಷಿಣ ಒಳನಾಡಿನ ಬಹುತೇಕ ಕಡೆಗಳಲ್ಲೂ ಮತ್ತು ಉತ್ತರ ಒಳನಾಡಿನ ಹಲವು ಕಡೆಗಳಲ್ಲಿ ಮಳೆಯಾಗಿದೆ. ಸುಬ್ರಮಣ್ಯ ಮತ್ತು ಹಗರಿಬೊಮ್ಮನಹಳ್ಳಿಯಲ್ಲಿಯೂ 11 ಸೆಂ.ಮೀ ಮಳೆಯಾಗಿದೆ.

ಇದೇ 30ರವರೆಗೆ ರಾಜ್ಯದ ಬಹುತೇಕ ಕಡೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ, ಗದಗ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಹಾಸನ, ಬಳ್ಳಾರಿ, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆ, ಹಾಸನ, ಮಂಡ್ಯ, ಮೈಸೂರು, ರಾಮನಗರ ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣವಿದ್ದು, ಕೆಲವು ಬಾರಿ ಗುಡುಗು ಸಹಿತ ಮಳೆ ಬರುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಸರ್ವರ ವಿಕಾಸಕ್ಕೆ ಸಮೃದ್ಧ ಕರ್ನಾಟಕದ ಸಂಕಲ್ಪ • ಸಿ.ಎಂ ಘೋಷಣೆ

ಸ್ವ ಉದ್ಯೋಗ: 5 ಲಕ್ಷ ಜನರಿಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 28 ಸಾವಿರ ಗ್ರಾಮಗಳಲ್ಲಿ ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆಯಡಿ 5 ಲಕ್ಷ ಯುವಕರಿಗೆ ಸ್ವಯಂ ಉದ್ಯೋಗ ತರಬೇತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಯೋಜನೆಯಡಿ ಪ್ರತಿ ಗ್ರಾಮದಲ್ಲಿ ತಲಾ ಒಂದು ವಿವೇಕಾನಂದ ಸ್ವಸಹಾಯ ಸಂಘ ರಚಿಸಿ, ಯುವಕರಿಗೆ ಆರ್ಥಿಕ ನೆರವು, ಬ್ಯಾಂಕ್ ವ್ಯವಸ್ಥೆ,ತರಬೇತಿ, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಲಾಗುವುದು ಎಂದರು.

‘ಸ್ತ್ರೀ ಸಾಮರ್ಥ್ಯ’ ಯೋಜನೆಯಡಿ, ಸ್ತ್ರೀಶಕ್ತಿ ಸಂಘಗಳು ಸ್ವಯಂ ಉದ್ಯೋಗ ಕೈಗೊಳ್ಳಲು ಉತ್ತೇಜನ ನೀಡಲಾಗುವುದು. ಇದಕ್ಕಾಗಿ ₹1.50 ಲಕ್ಷ ನೀಡುವ ಜೊತೆಗೆ ಸುಲಭವಾಗಿ ಸಾಲಸೌಲಭ್ಯ ಒದಗಿಸಲು ಆಧಾರ್ ಸಂಖ್ಯೆ ಜೋಡಣೆ, ತರಬೇತಿ, ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ನೀಡಲಾಗುವುದು. 5 ಲಕ್ಷ ಮಹಿಳೆಯರ ಸ್ವಾವಲಂಬನೆಗೆ ಎಂಡ್ ಟು ಎಂಡ್ ನೆರವು ನೀಡಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

ಪುಣ್ಯಕೋಟಿ ದತ್ತು ಯೋಜನೆಯಡಿ ಗೋ ಸಂರಕ್ಷಣೆಯಲ್ಲಿ ಜನರ ಪಾಲುದಾರಿಕೆ ಉತ್ತೇಜಿಸಲಾಗುವುದು. ಒಬ್ಬ ವ್ಯಕ್ತಿ ವರ್ಷಕ್ಕೆ ₹11,000 ಪಾವತಿಸಿ ಒಂದು ಗೋವಿನ ನಿರ್ವಹಣೆ ಮಾಡಬಹುದು. ವೈಯಕ್ತಿಕವಾಗಿ ದತ್ತು ಪಡೆಯಬಹುದು. ಇಲ್ಲವೇ ಸರ್ಕಾರಕ್ಕೆ ₹11,000 ಪಾವತಿಸಿ ದತ್ತು ಪಡೆಯಬಹುದಾಗಿದೆ ಎಂದು ಹೇಳಿದರು.

ರಾಜ್ಯದ ಎಲ್ಲ ವರ್ಗದವರ ಅಭಿವೃದ್ಧಿಗೆ ಸಮಗ್ರ ಯೋಜನೆಗಳ ಮೂಲಕ ರಾಜ್ಯದ ಆರ್ಥಿಕತೆಯನ್ನು ಹೆಚ್ಚಿಸಿ, ಅದರ ಲಾಭವನ್ನು ಎಲ್ಲರಿಗೂ ತಲುಪಿಸಲು ಸರ್ವರ ವಿಕಾಸವಾಗುವ ಸಮೃದ್ಧ ಕರ್ನಾಟಕವನ್ನು ಕಟ್ಟುವ ಸಂಕಲ್ಪ ಮಾಡಲಾಗಿದೆ ಎಂದುರು.

ನಾಲ್ಕು ತಿಂಗಳಲ್ಲಿ ಬಜೆಟ್ ಅನುಷ್ಠಾನ: ಬಜೆಟ್‌ನಲ್ಲಿ ಘೋಷಿಸಿದ ಕಾರ್ಯಕ್ರಮಗಳನ್ನು ಒಂದೇ ತಿಂಗಳಲ್ಲಿ ಸರ್ಕಾರದ ಆದೇಶವನ್ನು ಹೊರಡಿಸಿ, 4 ತಿಂಗಳ ಅವಧಿಯಲ್ಲಿ ಕಾರ್ಯಕ್ರಮ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಯುವಜನರಿಗೆ ಉದ್ಯೋಗ ನೀಡುವುದರಿಂದ ಹಿಡಿದು ರೈತನವರೆಗೆ, ಕೂಲಿಕಾರರಿಗೆ, ಮಹಿಳೆಯರಿಗೆ, ಎಸ್‌ಸಿಎಸ್‌ಟಿ ಸಮುದಾಯ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಹೇಳಿದರು.

ಇದಕ್ಕೆ ಮುನ್ನ ಹಿರಿಯ ಅಧಿಕಾರಿ ಸಭೆ ನಡೆಸಿದ ಬೊಮ್ಮಾಯಿ, ಕಡತ ವಿಲೇವಾರಿ ಮಾಡುವುದಷ್ಟೇ ತಮ್ಮ ಜವಾಬ್ದಾರಿ ಎಂದು ಭಾವಿಸದೆ, ಸರ್ಕಾರ ಕೈಗೊಂಡ ಜನಪರ ನಿರ್ಣಯಗಳು ಜನರಿಗೆ ತಲುಪಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

‘ನಡೆದು ಬಂದ ಹಾದಿಯನ್ನು ಅವಲೋಕನ ಮಾಡಿಕೊಳ್ಳಬೇಕು ಹಾಗೂ ಮುಂದಿನ ಹೆಜ್ಜೆಯನ್ನು ಗುರುತಿಸಬೇಕು. ಕರ್ನಾಟಕದಲ್ಲಿ ಉತ್ತಮ ಆಡಳಿತ ಪರಂಪರೆ ಇದೆ. ನಾವು ಸಮಾಜಕ್ಕೆ ಏನನ್ನು ಕೊಡುತ್ತೇವೆ ಎನ್ನುವುದು ಮುಖ್ಯ. ರಾಜಕಾರಣಿಗಳ ಅಧಿಕಾರವಧಿ ಐದು ವರ್ಷ. ಆದರೆ ಅಧಿಕಾರಿಗಳು ಶಾಶ್ವತವಾಗಿ ಇರುವವರು. ನಿಮ್ಮ ಸಾಮರ್ಥ್ಯ, ಅನುಭವಗಳನ್ನು ಅಭಿವೃದ್ಧಿಗೆ ಉಪಯೋಗವಾಗುವಂತೆ ಬಳಸಿಕೊಳ್ಳಿ’ ಎಂದರು.

ಸುದ್ದಿಗೋಷ್ಠಿಯಲ್ಲಿ ಕರಾವಳಿ ಜಿಲ್ಲೆಯ ಸಚಿವರುಗಳನ್ನು ಬಿಟ್ಟು ಉಳಿದ ಬಹುತೇಕ ಸಚಿವರು ಇದ್ದರು.

ಆತ್ಮಸಾಕ್ಷಿಯಂತೆ ಕಾರ್ಯಕ್ರಮ ರದ್ದು

‘ನಮ್ಮ ಪಕ್ಷದ ಯುವ ಮುಖಂಡ ಪ್ರವೀಣ್ ಹತ್ಯೆಯ ಘಟನೆ ನಿನ್ನೆ ಇಡೀ ದಿನ ನನ್ನನ್ನು ಕಾಡಿತು. ರಾಜ್ಯದ ಜನ ಮತ್ತು ಕಾರ್ಯಕರ್ತರಿಂದಲೂ ಆಕ್ರೋಶ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ದೊಡ್ಡಬಳ್ಳಾಪುರದಲ್ಲಿ ನಡೆಯಬೇಕಿದ್ದ ಜನೋತ್ಸವ ಮತ್ತು ಬ್ಯಾಂಕ್ವೆಟ್‌ಹಾಲ್‌ನಲ್ಲಿ ನಡೆಯಬೇಕಾಗಿದ್ದ ಕಾರ್ಯಕ್ರಮಗಳನ್ನು ರದ್ದುಪಡಿಸಲಾಯಿತು’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಪ್ರಮೀಳಾ ಜಯಪಾಲ್‌ಗೆ ಕೊಲೆ ಬೆದರಿಕೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿ ಸೆನೆಟರ್ ಆಗಿರುವ ಭಾರತೀಯ ಸಂಜಾತೆ ಪ್ರಮೀಳಾ ಜಯಪಾಲ್ ಅವರಿಗೆ ನಿರಂತರ ಕೊಲೆ ಬೆದರಿಕೆ ಒಡ್ಡಿದ್ದ ಮತ್ತು ಅವರನ್ನು ಹಿಂಬಾಲಿಸಿದ್ದ ಆರೋಪಿ ವಿರುದ್ಧ ಪ್ರಕರಣ ದಾಖಲಾಗಿದೆ

‘ಟೊಟೊ ಪುರಸ್ಕಾರ’ಕ್ಕೆ ಕೃತಿ ಆಹ್ವಾನ

ಬೆಂಗಳೂರು: ಸೃಜನಶೀಲ ಯುವ ಬರಹಗಾರರಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಸ್ಥಾಪಿಸಿರುವ ‘ಟೊಟೊ ಪುರಸ್ಕಾರ’ಕ್ಕೆ ಕನ್ನಡದ ಸೃಜನಶೀಲ ಸಾಹಿತ್ಯ ಕೃತಿಗಳನ್ನು ಆಹ್ವಾನಿಸಲಾಗಿದೆ.

ಈ ಪ್ರಶಸ್ತಿಯನ್ನು ಟಿ.ಎಫ್.ಎ. (ಟೊಟೊ ಫಂಡ್ಸ್ ದಿ ಆರ್ಟ್ಸ್) ಸ್ಥಾಪಿಸಿದೆ. ಕನ್ನಡದ ಸೃಜನಶೀಲ ಯುವ ಬರಹಗಾರರಿಗೆ ಮೀಸಲಾದ 2023ನೇ ಸಾಲಿನ ಟೊಟೊ ಪುರಸ್ಕಾರಕ್ಕಾಗಿ ಪ್ರವೇಶಗಳನ್ನು ಆಹ್ವಾನಿಸಿದೆ. ಈ ಪುರಸ್ಕಾರವು ₹ 50 ಸಾವಿರ ನಗದು ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ. ಭಾರತೀಯ ನಾಗರಿಕರಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. 18ರಿಂದ 29 ವರ್ಷ ವಯಸ್ಸಿನವರಾಗಿರಬೇಕು. ಅಂದರೆ, 1993ರ ಜನವರಿ 1ರಿಂದ 2005ರ ಜನವರಿ 1ರೊಳಗೆ ಹುಟ್ಟಿದವರು ಮಾತ್ರ ಪ್ರವೇಶಗಳನ್ನು ಕಳಿಸಲು ಅರ್ಹರು. ಕಥೆ, ಕವಿತೆ, ನಾಟಕ ಈ ಮೂರರಲ್ಲಿ ಯಾವುದೇ ಪ್ರಕಾರದಲ್ಲಿಯಾದರೂ ಪ್ರವೇಶಗಳನ್ನು ಕಳಿಸಬಹುದು. ಈ ಮೂರು ಪ್ರಕಾರಗಳಿಂದ ಒಬ್ಬರನ್ನು ಪುರಸ್ಕಾರಕ್ಕಾಗಿ ಆಯ್ಕೆ ಮಾಡಲಾಗುತ್ತದೆ.

ಪ್ರವೇಶಗಳನ್ನು ಕಳುಹಿಸಲು ಸೆ.15 ಕೊನೆಯ ದಿನ. ವಿವರಗಳಿಗಾಗಿ http://totofundsthearts.blogspot.in/ ನೋಡಬಹುದು. ಎಂ.ಎಸ್. ವರ್ಡ್‌ನಲ್ಲಿ ನುಡಿ, ಬರಹ ಅಥವಾ ಯೂನಿಕೋಡ್ ಫಾಂಟ್ ಮೂಲಕ ಪ್ರವೇಶಗಳನ್ನು ಇ-ಮೇಲ್ ವಿಳಾಸ totokannada@gmail.comಗೆ ಕಳುಹಿಸಬೇಕು

ತೋಂಟದ ಶ್ರೀಗೆ ‘ಶರಣ ಮಾಗನೂರು ಬಸಪ್ಪ’ ಪ್ರಶಸ್ತಿ

ದಾವಣಗೆರೆ: ಇಲ್ಲಿನ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ ಕೊಡಮಾಡುವ 2022ನೇ ಸಾಲಿನ ‘ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ’ ಪ್ರಶಸ್ತಿಗೆ ಗದುಗಿನ ತೋಂಟದಾರ್ಯ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ಭಾಜನರಾಗಿದ್ದಾರೆ.

ಪ್ರಶಸ್ತಿಯು ₹50,000 ನಗದು, ಫಲಕ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ಇಲ್ಲಿನ ಕನ್ನಡ ಭವನದಲ್ಲಿ ಜುಲೈ 29ರಂದು ಬೆಳಿಗ್ಗೆ 11ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ರಾಜ್ಯದಲ್ಲಿ 286 ಕಿ.ಮೀ. ಹೆದ್ದಾರಿ ನಗದೀಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಆಸ್ತಿ ನಗದೀಕರಣ ಯೋಜನೆಯಡಿ (ಎನ್‌ಎಂಪಿ) ಮೊದಲ ಹಂತದಲ್ಲಿ ಕರ್ನಾಟಕದ 286 ಕಿ.ಮೀ. ಸೇರಿದಂತೆ ದೇಶದ 5,279 ಕಿ.ಮೀ. ರಾಷ್ಟ್ರೀಯ ಹೆದ್ದಾರಿಯ ಆಸ್ತಿ ನಗದೀಕರಣ ಮಾಡಲು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯ ತೀರ್ಮಾನಿಸಿದೆ.

ದೇಶದ ಮೂಲಸೌಕರ್ಯ ಯೋಜನೆಗಳಿಗೆ ಸುಸ್ಥಿರವಾಗಿ ಅನುದಾನ ಒದಗಿಸಲು ಕೇಂದ್ರ ಸರ್ಕಾರವು ₹ 6 ಲಕ್ಷ ಕೋಟಿ ಮೊತ್ತದ ರಾಷ್ಟ್ರೀಯ ಆಸ್ತಿ ನಗದೀಕರಣ ಯೋಜನೆಯನ್ನು ಕೇಂದ್ರ ಸರ್ಕಾರ ಕಳೆದ ವರ್ಷ ಅನಾವರಣ ಮಾಡಿತ್ತು.

ಈ ಯೋಜನೆಯ ಅಡಿಯಲ್ಲಿ ರೈಲು ನಿಲ್ದಾಣಗಳು, ರಸ್ತೆಗಳು, ತೈಲ ಮತ್ತು ನೈಸರ್ಗಿಕ ಅನಿಲ ಸಾಗಣೆ ಕೊಳವೆಮಾರ್ಗ, ವಿದ್ಯುತ್ ವಲಯದ ಯೋಜನೆಗಳನ್ನು ಖಾಸಗಿ ವಲಯದ ಕಂಪನಿಗಳಿಗೆ ಲೀಸ್ ಆಧಾರದಲ್ಲಿ ವರ್ಗಾಯಿಸುವ ಉದ್ದೇಶವನ್ನು ಕೇಂದ್ರ ಸರ್ಕಾರವು ಹೊಂದಿದೆ. ಹಾಲಿ ಆರ್ಥಿಕ ವರ್ಷದಿಂದ ಅನ್ವಯವಾಗುವಂತೆ 4 ವರ್ಷಗಳ ಅವಧಿಯ ಯೋಜನೆ ಇದು.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿರುವ ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು, ‘ಇಲಾಖೆಯಿಂದ ನಾಲ್ಕು ವರ್ಷಗಳ ಅವಧಿಯಲ್ಲಿ ₹1.6 ಲಕ್ಷ ಕೋಟಿ ಆಸ್ತಿ ನಗದೀಕರಣ ಯೋಜನೆ ರೂಪಿಸಲಾಗಿದೆ. ಒಟ್ಟು 26,700 ಕಿ.ಮೀ. ಹೆದ್ದಾರಿಯ ನಗದೀಕರಣ ಮಾಡಲು ಉದ್ದೇಶಿಸಲಾಗಿದೆ. ಆರಂಭಿಕ ಹಂತದಲ್ಲಿ 5,279 ಕಿ.ಮೀ.ಯ ನಗದೀಕರಣ ಮಾಡಲು ಸರ್ವೆ ನಡೆಸಲಾಗಿದೆ’ ಎಂದರು.

ಮಂಕಿಪಾಕ್ಸ್ ತಡೆಗೆ ಕಾರ್ಯಪಡೆ ರಚನೆ

ನವದೆಹಲಿ (ಪಿಟಿಐ): ಮಂಕಿಪಾಕ್ಸ್ ನಿಯಂತ್ರಣ ಸಂಬಂಧ ಸರ್ಕಾರಕ್ಕೆ ಅಗತ್ಯ ಸಲಹೆ ನೀಡುವುದಕ್ಕಾಗಿ ಕಾರ್ಯಪಡೆಯೊಂದನ್ನು ರಚಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ‘ಪ್ರಧಾನಮಂತ್ರಿಯವರ ಪ್ರಧಾನ ಕಾರ್ಯದರ್ಶಿ ನೇತೃತ್ವದಲ್ಲಿ ಇದೇ 26ರಂದು ನಡೆದಿದ್ದ ಸಭೆಯಲ್ಲಿ ಕಾರ್ಯಪಡೆ ರಚನೆ ಸಂಬಂಧ ನಿರ್ಣಯ ಕೈಗೊಳ್ಳಲಾಗಿದೆ. ಮಂಕಿಪಾಕ್ಸ್ ಸೋಂಕಿ ತರ ಪತ್ತೆ ಹಾಗೂ ಅವರ ಮೇಲೆ ನಿಗಾ ಇಡುವ ನಿಟ್ಟಿನಲ್ಲಿ ತ್ವರಿತವಾಗಿ ಕೆಲಸ ಮಾಡಬೇಕೆಂದು ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ ಮತ್ತು ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯಕ್ಕೆ (ಡಿಜಿಎಚ್‌ಎಸ್) ಸೂಚಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಕಮರೊಟ್ಟು ಕಾಂಡ–ಭಾಗ ಎರಡು

ನಾವು ನೋಡಿದ ಸಿನಿಮಾ

ವಿಕ್ರಾಂತ್ ರೋಣ (ಕನ್ನಡ)
ನಿರ್ಮಾಣ: ಭೌಮಿಕ್ ಗೊಂಡಾಲಿಯಾ, ಶಾಲಿನಿ ಜಾಕ್ ಮಂಜು, ಅಲಂಕಾರ್ ಪಾಂಡಿಯನ್
ನಿರ್ದೇಶನ: ಅನೂಪ್ ಭಂಡಾರಿ
ತಾರಾಗಣ: ಸುದೀಪ್, ನಿರೂಪ್ ಭಂಡಾರಿ, ನೀತಾ ಅಶೋಕ್, ರವಿಶಂಕರ್ ಗೌಡ, ಮಧುಸೂದನ್ ರಾವ್, ಜಾಕ್ವೆಲಿನ್ ಫರ್ನಾಂಡಿಸ್

ಇಂಡಿಯಾನಾ-ಜೋನ್ಸ್ ತರಹ ಸುದೀಪ್ ಪ್ರಕಟಗೊಳ್ಳುವ ಹೊತ್ತಿಗೆ ನಿರ್ದೇಶಕ ಅನೂಪ್ ಭಂಡಾರಿ ಕಮರೊಟ್ಟುವಿನೊಳಗೆ ಪ್ರೇಕ್ಷಕರನ್ನು ಬಲವಂತವಾಗಿ ಎಳೆದು ಕೂರಿಸಿಕೊಳ್ಳತೊಡಗಿರುತ್ತಾರೆ. ಇದು ಕೂಡ ‘ರಂಗಿತರಂಗ’ದ ಇನ್ನೊಂದು ಆವೃತ್ತಿಯೇ ಎಂಬ ಅಂದಾಜನ್ನು ಅವರು ಕೊನೆಗೂ ಸುಳ್ಳಾಗಿಸುವುದಿಲ್ಲ.

ನಿರ್ದೇಶಕರ ತಲೆಯೊಳಗೆ ಹೊಕ್ಕಿರುವ ಗುಡ್ಡದ ಭೂತ ಇಲ್ಲಿ ಬ್ರಹ್ಮರಾಕ್ಷಸ. ಜನಪದೀಯವಾಗಿ ಕಥೆ ಹೇಳುವ ಉಮೇದಿಗೆ ಥ್ರಿಲ್ಲರ್ ಹಾಗೂ ಸಸ್ಪೆನ್ಸ್‌ನ ಸಿಂಗಾರ. ಮೇಲಾಗಿ 3ಡಿ ಕನ್ನಡಕದಿಂದ ದೃಶ್ಯಗಳು ನೋಟಕ್ಕಿನ್ನೂ ಹತ್ತಿರ ಎಟಕುವಂಥ ತಂತ್ರಗಾರಿಕೆ.

‘ವಿಕ್ರಾಂತ್ ರೋಣ’ ಕಥಾಹೂರಣದಿಂದಾಗಲೀ, ಶಿಲ್ಪದಿಂದಾಗಲೀ ಹಿಡಿದು ಕೂರಿಸುವುದಿಲ್ಲ. ಸುದೀಪ್ ಸಪೂರ ದೇಹದ ಕದಲಿಕೆಗಳು, ಇರಿಯುವ ನೋಟ ಹಾಗೂ ಕಂಚಿನ ಕಂಠವನ್ನೇ ಬಂಡವಾಳ ಮಾಡಿಕೊಳ್ಳಲು ಅದು ಹೆಣಗಾಡಿದೆ.

ಸಿನಿಮಾ ಮೊದಲರ್ಧದ ಸಾರ ಪ್ರೇಕ್ಷಕರಿಗೆ ಕಥನಪ್ರವೇಶ ಮಾಡಿಸಲು ಇನ್ನಿಲ್ಲದಂತೆ ಹೆಣಗಾಡುತ್ತದೆ. ಬಿಡಿಬಿಡಿಯಾಗಿ ನೋಡಿಸಿಕೊಳ್ಳುವ ದೃಶ್ಯಗಳನ್ನು ಹಿಡಿದಿಟ್ಟಿರುವ ಸೂತ್ರ ಸಡಿಲಸ್ಪಷ್ಟ. ಏನೇನೂ ಆಗುತ್ತಲೇ ಇಲ್ಲವಲ್ಲ ಎಂದೆನಿಸುವುದೇ ‘ಪರಿಣಾಮ’. ಮಧ್ಯಂತರದ ನಂತರ ಅನೂಪ್ ಭಂಡಾರಿ ‘ರಂಗಿತರಂಗ’ ಎರಡನೇ ಆವೃತ್ತಿಯ ಬಂಧದಲ್ಲಿ ಕೂರಿಸಿಕೊಳ್ಳುತ್ತಾರೆ. ಮೊದಲ ಆವೃತ್ತಿಯಲ್ಲಿ ಕೊಲೆಯಾಗುವವರು ಗರ್ಭಿಣಿಯರು. ಇದರಲ್ಲಿ ಮಕ್ಕಳು. ಅದಕ್ಕೊಂದು ತರ್ಕ ದಕ್ಕಿಸಿಕೊಡುವುದು ಕೂಡ ಇಲ್ಲಿ ಕಷ್ಟವಾಗಿದೆ. ಕೊನೆಗೆ ಸೇಡಿನ ಕಥನವಾಗಿ ನಿರ್ದೇಶಕರು ಕಥಾಹಂದರವನ್ನು ಬಗ್ಗಿಸಬೇಕಾಗಿ ಬಂದಿರುವುದಕ್ಕೂ ಅದುವೇ ಕಾರಣ.

ಸಿನಿಮಾದಲ್ಲಿ ಮಳೆಕಾಡಿದ್ದರೂ ಅದು ಕೃತಕ. ಮಕ್ಕಳಿದ್ದರೂ ಹುಟ್ಟದು ಮರುಕ. ಸುದೀಪ್ ಜತೆ ಸದಾ ಇರುವ ಅವರ ಮಗಳ ಮಾತು ಹಾಗೂ ಕೊನೆಯಲ್ಲಿ ಆ ಮಗುವಿನ ನಿಜ ಅಸ್ತಿತ್ವವನ್ನು ಅನಾವರಣಗೊಳಿಸುವ ದೃಶ್ಯದ ತಂತ್ರಗಾರಿಕೆ ಆಸಕ್ತಿಕರ. ಭಾವುಕವಾಗಿಯೂ ಅದು ಇನ್ನೂ ಗಟ್ಟಿಯಾಗಬೇಕಿತ್ತು.

ಸುದೀಪ್ ಇರುವ ದೃಶ್ಯಗಳಿಗೆಲ್ಲ ತೋರಣ ಕಟ್ಟುವ ಗೊಡವೆಗೆ ನಿರ್ದೇಶಕರು ಬಿದ್ದಿದ್ದಾರೆ. ಅಂತಿಮ ಸಾಹಸದ ದೃಶ್ಯಗಳಲ್ಲಿ ಡ್ರೋನ್ ಕ್ಯಾಮೆರಾ ಕಣ್ಣಿನ ಅತಿಯಾಟದಲ್ಲಿ (ಸಿನಿಮಾಟೊಗ್ರಫಿ: ವಿಲಿಯಂ ಡೇವಿಡ್) ರೋಚಕತೆಯೇ ಇಲ್ಲವಾಗಿದೆ. ಅಜನೀಶ್ ಲೋಕನಾಥ್ ಹಿನ್ನೆಲೆ ಸಂಗೀತ ಕಥನಾವಕಾಶಕ್ಕೆ ಪೂರಕವಾಗಿದೆ. ಹಾಡುಗಳಲ್ಲೂ ಅವರ ಕಸುಬುದಾರಿಕೆ ಕಾಣುತ್ತದೆ. ‘ರಕ್ಕಮ್ಮ’ ಹಾಡಿನಲ್ಲಿನ ಸುದೀಪ್–ಜಾಕ್ವೆಲಿನ್ ನೃತ್ಯಲಾಲಿತ್ಯ, ಗಭೀರವಾದ ಗೆರೆಗಳನ್ನೇ ಹೆಚ್ಚಾಗಿ ಮೂಡಿಸುವ ಸಿನಿಮಾದಲ್ಲಿನ ರಿಲೀಫ್.

ಸುದೀಪ್ ಹಿಂದೆ ತಾವು ನಡೆದ ಪಥದಿಂದ ಆಚೆ ಬಂದು, ಈ ಪಾತ್ರವನ್ನು ಒಪ್ಪಿಕೊಂಡಿರುವುದಕ್ಕೆ ಶಹಬ್ಬಾಸ್ ಹೇಳಬೇಕು. ಅಭಿನಯದಲ್ಲೂ ಅವರು ತಮ್ಮತನದ ರುಜು ಹಾಕಿದ್ದಾರೆ. ಪ್ರಮುಖ ಪಾತ್ರಧಾರಿ ನಿರೂಪ್ ಭಂಡಾರಿ ‘ರಂಗಿತರಂಗ’ದಂತೆ ಇಲ್ಲಿ ಗಮನ ಸೆಳೆಯುವುದಿಲ್ಲ. ನೀತಾ ಮುದ್ದು ಮುಖ ಕಣ್ಣು ಕೀಲಿಸಿಕೊಳ್ಳುತ್ತದೆ.

ಒಂದೇ ಜಾಯಮಾನದ ಎರಡು ಸಿನಿಮಾಗಳನ್ನು ಮಾಡುವುದು ಎಂತಹ ನಿರ್ದೇಶಕನಿಗೂ ಸವಾಲೇ. ಅನೂಪ್ ಭಂಡಾರಿ ಈ ಸವಾಲಿಗೆ ಎದೆಗೊಡಲು ಎಷ್ಟೆಲ್ಲ ಚಡಪಡಿಸಿದ್ದಾರೆ ಎನ್ನುವುದಕ್ಕೆ ಚಿತ್ರದಲ್ಲಿ ಸಾಕಷ್ಟು ಸಾಕ್ಷ್ಯಗಳು ಸಿಗುತ್ತವೆ.

ವಿಶಾಖ ಎನ್.



ಸುದೀಪ್, ಜಾಕ್ವೆಲಿನ್

ಬ್ಯಾಂಕ್ ಆಫ್ ಬರೋಡಾ ಶಾಖೆಯಲ್ಲಿ ಖಾತೆ ತೆರೆದು ಹಣ ವರ್ಗಾಯಿಸಿದ್ದ ಅಭ್ಯರ್ಥಿಗಳ ಸಂಬಂಧಿಕರು

ಪಾಟೀಲ ಹೆಸರಲ್ಲಿ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ!

• ಮನೋಜಕುಮಾರ್ ಗುದ್ದಿ

ಕಲಬುರಗಿ: ಹಲವು ಅಭ್ಯರ್ಥಿಗಳ ಕಡೆಯಿಂದ ನೇರವಾಗಿ ನಗದು ಹಣ ಪಡೆದುಕೊಳ್ಳುವ ಬದಲು ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಕಿಂಗ್ ಪಿನ್ ಆರ್.ಡಿ. ಪಾಟೀಲ ತನ್ನ ಹೆಸರಲ್ಲಿ ಕೋಟ್ಯಂತರ ರೂಪಾಯಿ ಮ್ಯೂಚುವಲ್ ಫಂಡ್ ಹೂಡಿಕೆ ಮಾಡಿಸಿದ ಅಂಶ ಸಿಐಡಿ ಅಧಿಕಾರಿಗಳು ನಡೆಸಿದ ತನಿಖೆಯಲ್ಲಿ ಬಯಲಾಗಿದೆ.

ಆರ್.ಡಿ. ಪಾಟೀಲ

ಅದಕ್ಕಾಗಿ ಅಭ್ಯರ್ಥಿಗಳ ಆಪ್ತ ಸಂಬಂಧಿಕರ ಹೆಸರಿನಲ್ಲಿ ಕಲಬುರಗಿಯ ಸೂಪರ್ ಮಾರ್ಕೆಟ್‌ನಲ್ಲಿರುವ ಬ್ಯಾಂಕ್ ಆಫ್ ಬರೋಡಾ ಶಾಖೆಯಲ್ಲಿ ಖಾತೆ ತೆರೆಯಲಾಗುತ್ತಿತ್ತು. ಖಾತೆ ತೆರೆದ ದಿನವೇ ಆ ಖಾತೆಗೆ ₹ 10 ಲಕ್ಷದಿಂದ ₹ 20 ಲಕ್ಷದವರೆಗೂ ಹಣ ಜಮಾ ಆಗುತ್ತಿತ್ತು. ಅದೇ ದಿನವೇ ಆರ್.ಡಿ. ಪಾಟೀಲ ಹೆಸರಿನಲ್ಲಿ ಮ್ಯೂಚುವಲ್ ಫಂಡ್‌ಗೆ ಹಣ ಹೂಡಿಕೆಯಾಗುತ್ತಿತ್ತು ಎಂಬ ಸ್ಫೋಟಕ ಅಂಶ ಹೊರಬಿದ್ದಿದೆ.

ಬ್ಲೂಟೂತ್ ಮೂಲಕ ನಗರದ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆ, ಎಂ.ಎಸ್. ಇರಾನಿ ಕಾಲೇಜು ಹಾಗೂ ನೊಬೆಲ್ ಶಾಲೆಯಲ್ಲಿ ಆರಂಭಿಸಲಾಗಿದ್ದ ಪಿಎಸ್‌ಐ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದ ಅಭ್ಯರ್ಥಿಗಳಿಗೆ ತನ್ನ ತಂಡದ ಮೂಲಕ ಆರ್.ಡಿ. ಪಾಟೀಲ ಉತ್ತರ ಹೇಳಿಸಿದ್ದ. ಅದಕ್ಕೆ ಪ್ರತಿಯಾಗಿ ಪ್ರತಿ ಅಭ್ಯರ್ಥಿಗಳಿಂದ ₹ 30ರಿಂದ ₹ 40 ಲಕ್ಷದವರೆಗೆ ಹಣ ಪಡೆದಿದ್ದ. ವ್ಯವಹಾರದ ಡೀಲ್ ಕುದುರಿದ ಬಳಿಕ ಹಾಗೂ ಪಿಎಸ್‌ಐ ಪರೀಕ್ಷೆಯ ಫಲಿತಾಂಶ ಪ್ರಕಟವಾದ ಬಳಿಕ ಹೀಗೆ ಎರಡು ಕಂತುಗಳಲ್ಲಿ ಅಭ್ಯರ್ಥಿಗಳಿಂದ ಹಣ ಪಡೆದಿದ್ದ.

ನೇರವಾಗಿ ನಗದು ಹಣ ಪಡೆಯುವುದರ ಜೊತೆಗೆ ತನ್ನ ಖಾತೆ ಇರುವ ಬ್ಯಾಂಕ್ ಆಫ್ ಬರೋಡಾ ಶಾಖೆ ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ ಹೆಸರಿನಲ್ಲಿ ಹೂಡಿಕೆ ಮಾಡುವಂತೆ ಅಭ್ಯರ್ಥಿಗಳಿಗೆ ಸೂಚನೆ ನೀಡಿದ್ದ. ಇದನ್ನು ಅನುಸರಿಸಿದ ಅಭ್ಯರ್ಥಿಗಳು ತಮ್ಮ ಆಪ್ತರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಖಾತೆ ತೆರೆಯುತ್ತಿದ್ದರು. ಕೆಲ ಹೊತ್ತಿನಲ್ಲೇ ಪಾಟೀಲ ಹೆಸರಿನಲ್ಲಿ ಮ್ಯೂಚುವಲ್ ಫಂಡ್ ರೂಪದಲ್ಲಿ ಹೂಡಿಕೆಯಾಗುತ್ತಿತ್ತು ಎಂದು ಪ್ರಕರಣದ ವಿಚಾರಣೆ ನಡೆಸಿದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವ್ಯವಸ್ಥಾಪಕ ವಿಚಾರಣೆ: ಆರ್.ಡಿ. ಪಾಟೀಲ ಹೆಸರಲ್ಲಿ ಏಕಾಏಕಿ ₹ 2 ಕೋಟಿಗೂ ಅಧಿಕ ಹಣ ಮ್ಯೂಚುವಲ್ ಫಂಡ್ ಸೇರಿದಂತೆ ವಿವಿಧ ಬಗೆಯಲ್ಲಿ ಹೂಡಿಕೆಯಾದ ಬಗ್ಗೆ ಮಾಹಿತಿ ಪಡೆಯಲು ಬ್ಯಾಂಕ್ ಆಫ್ ಬರೋಡ ಸೂಪರ್ ಮಾರ್ಕೆಟ್ ಶಾಖೆಯ ವ್ಯವಸ್ಥಾಪಕರನ್ನು ಸಿಐಡಿ ಅಧಿಕಾರಿಗಳು ತನಿಖೆಗೆ ಒಳಪಡಿಸಿದ್ದಾರೆ.

ಬಹುತೇಕ ಹೂಡಿಕೆಗಳು ಕಳೆದ ಅಕ್ಟೋಬರ್ ಹಾಗೂ ಜನವರಿ ತಿಂಗಳಲ್ಲೇ ಆಗಿವೆ ಎಂಬ ಮಾಹಿತಿಯನ್ನು ಬ್ಯಾಂಕ್ ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ. ಅಕ್ಟೋಬರ್ 3ರಂದು ಪಿಎಸ್‌ಐ ಪರೀಕ್ಷೆ ನಡೆದಿತ್ತು. ಜನವರಿಯಲ್ಲಿ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟವಾಗಿತ್ತು.

ಪಿಎಸ್‌ಐ ಅಕ್ರಮ: ಸಿಐಡಿಗೆ ಕಮಿಷನರ್ ತಪ್ಪು ಮಾಹಿತಿ!

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮ ನಡೆದ ದಿನ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಪರೀಕ್ಷಾ ಕೇಂದ್ರದ ಉಸ್ತುವಾರಿ ಹೊತ್ತಿದ್ದ ಅಂದಿನ ಡಿವೈಎಸ್ಪಿ ಎಸ್.ಎಸ್. ಹುಲ್ಲೂರ ಅವರನ್ನು ದಿಢೀರ್ ಬದಲಾವಣೆ ಮಾಡಿದ ಬಗ್ಗೆ ಕಲಬುರಗಿ ಪೊಲೀಸ್ ಕಮಿಷನರ್ ಡಾ. ವೈ.ಎಸ್. ರವಿಕುಮಾರ್ ತಪ್ಪು ಮಾಹಿತಿ ನೀಡಿರುವುದು ಬೆಳಕಿಗೆ ಬಂದಿದೆ.

‘ಉಸ್ತುವಾರಿಯಾದವರನ್ನು ಪರೀಕ್ಷೆ ಆರಂಭವಾಗುವ ಕೆಲವೇ ನಿಮಿಷಗಳ ಮುನ್ನ ಬದಲಾಯಿಸಲಾಗುತ್ತದೆ. ಈ ಬಗ್ಗೆ ಗುಮಾನಿ ಬಂದ ಬಳಿಕ ಇದಕ್ಕೆ ಕಾರಣವೇನು’ ಎಂದು ಸಿಐಡಿ ಅಧಿಕಾರಿಗಳು ಪೊಲೀಸ್ ಕಮಿಷನರ್‌ಗೆ ಪತ್ರ ಬರೆದಿದ್ದರು. ಪತ್ರಕ್ಕೆ ಉತ್ತರಿಸಿದ್ದ ಕಮಿಷನರ್ ರವಿಕುಮಾರ್, ‘ರಾಯಚೂರು ಜಿಲ್ಲೆ ಲಿಂಗಸಗೂರು ಉಪವಿಭಾಗದ ಡಿವೈಎಸ್ಪಿ ಹುಲ್ಲೂರ ಅವರ ಸ್ಥಾನಕ್ಕೆ ವರ್ಗಾವಣೆಯಾಗಿ ಬಂದಿದ್ದ ಐಪಿಎಸ್ ಅಧಿಕಾರಿ ಜಗದೀಶ್ ಎಂಬುವವರಿಗೆ ಅಧಿಕಾರ ಹಸ್ತಾಂತರಿಸಲು ತೆರಳಿದ್ದರು. ಹಾಗಾಗಿ, ಅವರನ್ನು ಪರೀಕ್ಷಾ ಕರ್ತವ್ಯದಿಂದ ಬಿಡುಗಡೆ ಮಾಡಲಾಯಿತು’ ಎಂದಿದ್ದಾರೆ.

ಈ ಬಗ್ಗೆ ರಾಯಚೂರು ಎಸ್ಪಿ ಅವರಿಗೆ ಪತ್ರ ಬರೆದ ಸಿಐಡಿ ಅಧಿಕಾರಿಗಳು ಡಿವೈಎಸ್ಪಿ ವರ್ಗಾವಣೆಯಾಗಿದ್ದು ನಿಜವೇ ಎಂದು ಪ್ರಶ್ನಿಸಿದ್ದರು. ಇದಕ್ಕೆ ಉತ್ತರ ಬರೆದಿದ್ದ ಅವರು, ‘ಅಂದು ಅಧಿಕಾರ ವಹಿಸಿಕೊಳ್ಳಲು ಯಾರೂ ಬಂದಿರಲಿಲ್ಲ. ವಾಸ್ತವವಾಗಿ ಅಧಿಕಾರ ಹಸ್ತಾಂತರಿಸುವಂತೆ ನಾವು ಹುಲ್ಲೂರ ಅವರಿಗೆ ಹೇಳಿಯೇ ಇರಲಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

ವಾಸ್ತವವಾಗಿ ಹುಲ್ಲೂರ ಅವರ ದೂರದ ಸಂಬಂಧಿಯೊಬ್ಬರು ತೀರಿಕೊಂಡಿದ್ದರು. ಅವರ ಅಂತ್ಯಕ್ರಿಯೆಗೆ ತೆರಳಿದ್ದರು. ಆದರೆ, ಪ್ರಮುಖ ಪರೀಕ್ಷಾ ಕೇಂದ್ರವೊಂದರ ಉಸ್ತುವಾರಿಯಾಗಿದ್ದ ಹುಲ್ಲೂರ ಅವರು ಆ ಕರ್ತವ್ಯದಿಂದ ತಮ್ಮನ್ನು ಬಿಡುಗಡೆ ಮಾಡುವಂತೆ ಮನವಿಯನ್ನೇ ಸಲ್ಲಿಸಿರಲಿಲ್ಲ ಎಂದು ಸಿಐಡಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಫ್‌ಡಿಎ ಪರೀಕ್ಷೆಯಲ್ಲೂ ಅಕ್ರಮ!

ಕರ್ನಾಟಕ ಲೋಕಸೇವಾ ಆಯೋಗವು ನಡೆಸಿದ ಪ್ರಥಮ ದರ್ಜೆ ಸಹಾಯಕರ ಪರೀಕ್ಷೆಯಲ್ಲೂ ವ್ಯಾಪಕ ಅಕ್ರಮ ನಡೆದಿರುವ ಶಂಕೆ ವ್ಯಕ್ತವಾಗಿದೆ. ಈ ಬಗ್ಗೆ ಪಿಎಸ್‌ಐ ನೇಮಕಾತಿ ಅಕ್ರಮ ನಡೆಸಿದ ಕಿಂಗ್‌ಪಿನ್‌ಗಳಿಂದಲೂ ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಆದರೆ, ಈ ಬಗ್ಗೆ ಕೆಪಿಎಸ್ಸಿಯಿಂದ ಪೂರಕ ಸ್ಪಂದನೆ ಸಿಗುತ್ತಿಲ್ಲ ಎಂದು ಸಿಐಡಿ ತನಿಖಾಧಿಕಾರಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಶುಕ್ರವಾರ, ಜುಲೈ 29, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 209 | ಪುಟ 22

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಬೆಳ್ಳಿತೆರೆಯ ಮೊದಲ ಹೆಜ್ಜೆಯಲ್ಲೇ ತಮ್ಮ ನಟನೆಯ 'ದೊಳ್ಳು' ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಬಂದ ಖುಷಿಯಲ್ಲಿ ಕಾರ್ತಿಕ್ ಮಹೇಶ್

ಆಳ-ಅಗಲ
ವಿಶ್ವ ಹುಲಿ ದಿನ ಇಂದು

ನೇಕಾರ, ಚಾಲಕರ ಮಕ್ಕಳಿಗೂ 'ನಿಧಿ' 3B

'ದೇಶ ಛಿದ್ರ ಮಾಡುವ ಭಯೋತ್ಪಾದಕ ಕೃತ್ಯ' 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
56,857 ▲	16,930 ▲	₹52,800 (ಬೆಂಗಳೂರು) ▲	₹57,400 (ಬೆಂಗಳೂರು) ▲	79.69 ▲

ಸುರತ್ಕಲ್: ಕಾರಿನಲ್ಲಿ ಬಂದ ದುಷ್ಕರ್ಮಿಗಳ ಕೃತ್ಯ

ಮುಸ್ಲಿಂ ಯುವಕನ ಹತ್ಯೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರ ಹೊರವಲಯದ ಸುರತ್ಕಲ್‌ನಲ್ಲಿ ಮಹಮ್ಮದ್ ಫಾಝಿಲ್ (23) ಎಂಬ ಯುವಕನನ್ನು ಗುರುವಾರ ರಾತ್ರಿ ಕೊಚ್ಚಿ ಕೊಲೆ ಮಾಡಲಾಗಿದೆ.

ಫಾಝಿಲ್

'ಸುಳ್ಯದ ಬೆಳ್ಳಾರೆಯಲ್ಲಿ ನಡೆದ ಪ್ರವೀಣ್ ನೆಟ್ಟಾರು ಹತ್ಯೆಗೆ ಪ್ರತೀಕಾರವಾಗಿ ಮಹಮ್ಮದ್ ಅವರ ಕೊಲೆ ನಡೆದಿದೆ' ಎಂದು ಮಾಜಿ ಶಾಸಕ ಮೊಹಿಯುದ್ದೀನ್ ಬಾವ ಆರೋಪಿಸಿದ್ದಾರೆ.

ಸುರತ್ಕಲ್ ಕಾಟಿಪಳ್ಳ ಮಂಗಳಪೇಟೆ ನಿವಾಸಿ ಮಹಮ್ಮದ್ ಫಾಝಿಲ್ ಅವರು, ರಾತ್ರಿ 8 ಗಂಟೆಯ ಸುಮಾರಿಗೆ ಎಂಆರ್‌ಪಿಎಲ್ ರಸ್ತೆಯ ಸುರತ್ಕಲ್ ಮಾರುಕಟ್ಟೆ ಸನಿಹದ ಸಂಕೀರ್ಣದಲ್ಲಿರುವ ಬಟ್ಟೆ ಅಂಗಡಿಗೆ ಹೋಗುತ್ತಿರುವ ಸಂದರ್ಭದಲ್ಲಿ ಕಾರಿನಲ್ಲಿ ಬಂದ ದುಷ್ಕರ್ಮಿಗಳ ತಂಡ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದೆ.

ಈ ದೃಶ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಫಾಝಿಲ್ ಎಚ್‌ಪಿಸಿಎಲ್‌ನಲ್ಲಿ ಗುತ್ತಿಗೆ ಕಾಮಗಾರಿ ನಿರ್ವಹಿಸುತ್ತಿದ್ದರು. ಸುರತ್ಕಲ್ ಸುತ್ತಮುತ್ತ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಪ್ರವೀಣ್ ಹತ್ಯೆ: ಇಬ್ಬರ ಬಂಧನ

ಸಿ.ಎಂಗೂ ತಟ್ಟಿದ ಆಕ್ರೋಶದ ಬಿಸಿ

ಬೆಳ್ಳಾರೆ/ಮಂಗಳೂರು: ಬಿಜೆಪಿ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಇನ್ನೊಂದೆಡೆ ಕಾರ್ಯಕರ್ತರ ಆಕ್ರೋಶದ ಬಿಸಿ ಗುರುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ತಟ್ಟಿತು.

ಕಡಬ ತಾಲ್ಲೂಕಿನ ಸವಣೂರಿನಲ್ಲಿ ಫಾಸ್ಟ್‌ಫುಡ್ ಅಂಗಡಿ ವ್ಯವಹಾರ ನಡೆಸುತ್ತಿರುವ ಮಹಮ್ಮದ್ ಝಾಕೀರ್ ಮತ್ತು ಸುಳ್ಯ ತಾಲ್ಲೂಕಿನ ಗುತ್ತಿಗಾರಿನ ಅಡಿಕೆ ಖರೀದಿ ಅಂಗಡಿಯೊಂದರಲ್ಲಿ ಕೆಲಸಕ್ಕಿದ್ದ ಬೆಳ್ಳಾರೆಯ ಶಫೀಕ್ ಬಂಧಿತರು. ಇವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

5ನೇ ಪುಟ ನೋಡಿ

ಪ್ರವೀಣ್ ನೆಟ್ಟಾರು ಅವರ ಮನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಭೇಟಿ ನೀಡಿದ್ದ ವೇಳೆ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು

ಸುರತ್ಕಲ್‌ನ ಘಟನೆಯನ್ನು ಅತ್ಯುಗ್ರವಾಗಿ ಖಂಡಿಸುತ್ತೇನೆ. ದುಷ್ಕೃತ್ಯ ನಡೆಸಿದವರನ್ನು ಬಂಧಿಸಿ, ಕ್ರಮ ಜರುಗಿಸಲಾಗುವುದು

ಆರಗ ಜ್ಞಾನೇಂದ್ರ, ಗೃಹ ಸಚಿವ

ಆರೋಪಿಗಳ ಬಗ್ಗೆ ಮಾಹಿತಿ: 'ಈ ಘಟನೆಯನ್ನು ಈ ಹಿಂದೆ ನಡೆದಿರುವ ಯಾವುದೇ ಘಟನೆ ಜತೆ ತಳಕು ಹಾಕಲಾಗದು. ಯುವಕನ ಜತೆಗಿದ್ದ ಸ್ನೇಹಿತರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಸಿಸಿಟಿವಿ ಕ್ಯಾಮೆರಾ ಫೂಟೇಜ್‌ನಲ್ಲಿ ಲಭ್ಯವಾಗಿರುವ ಮಾಹಿತಿ ಅನ್ವಯ ಶೀಘ್ರ ಆರೋಪಿಗಳನ್ನು ಪತ್ತೆ ಮಾಡಲಾಗುವುದು' ಎಂದು ಮಂಗಳೂರು ಪೊಲೀಸ್ ಕಮಿಷನರ್ ಶಶಿಕುಮಾರ್ ಪ್ರತಿಕ್ರಿಯಿಸಿದರು.

ಅಗತ್ಯಬಿದ್ದರೆ 'ಯೋಗಿ ಮಾದರಿ': ಬೊಮ್ಮಾಯಿ

ಬೆಂಗಳೂರು: ರಾಜ್ಯದಲ್ಲಿ ಅಗತ್ಯ ಬಿದ್ದರೆ 'ಯೋಗಿ ಮಾದರಿ' ಸರ್ಕಾರವೂ ಬರುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಹೇಳಿದರು.

ತಮ್ಮ ಸರ್ಕಾರಕ್ಕೆ ಒಂದು ವರ್ಷ ತುಂಬಿದ ಹಿನ್ನೆಲೆಯಲ್ಲಿ ಸರ್ಕಾರ ಸಾಧನೆಗಳನ್ನು ವಿವರಿಸಲು ನಡೆಸಿದ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಎಂಥದ್ದೇ ಕಠಿಣ ಕ್ರಮಕ್ಕೂ ತಾವು ಸಿದ್ಧ' ಎಂಬ ಸಂದೇಶವನ್ನೂ ನೀಡಿದರು.

'ಉತ್ತರಪ್ರದೇಶದಲ್ಲಿರುವ ಪರಿಸ್ಥಿತಿ ಬೇರೆ. ಅಲ್ಲಿನ ಸ್ಥಿತಿಗೆ ಯೋಗಿ ಆದಿತ್ಯನಾಥ್ ಮಾದರಿ ಸರಿಯಾಗಿದೆ. ಆದರೆ, ಇಲ್ಲಿ ಪರಿಸ್ಥಿತಿ ನಿಭಾಯಿಸಲು ಹಲವು ವಿಧಾನಗಳನ್ನು ಪ್ರಯೋಗಿಸುತ್ತಿದ್ದೇವೆ. ಪ್ರಸಂಗ ಬಂದರೆ ಯೋಗಿ ಮಾದರಿಯನ್ನೂ ಅನುಸರಿಸಬೇಕಾಗುತ್ತದೆ' ಎಂದು ತಿಳಿಸಿದರು.

5ನೇ ಪುಟ ನೋಡಿ

ಕೆಪಿಎಸ್‌ಸಿ: ಫಲಿತಾಂಶ ಪ್ರಕಟ

ಬೆಂಗಳೂರು: 2017ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ (ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದ) 106 ಹುದ್ದೆಗಳ ನೇಮಕಾತಿಗೆ ನಡೆಸಿದ ಮುಖ್ಯ ಪರೀಕ್ಷೆಯ ಫಲಿತಾಂಶವನ್ನು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಕೊನೆಗೂ ಗುರುವಾರ ಪ್ರಕಟಿಸಿದೆ.

ಈ ಹುದ್ದೆಗಳಿಗೆ ಪೂರ್ವಭಾವಿ ಪರೀಕ್ಷೆ 2020ರ ಆಗಸ್ಟ್ 24ರಂದು ನಡೆದಿತ್ತು. ಮುಖ್ಯ ಪರೀಕ್ಷೆಗೆ 1:20 ಅನುಪಾತದಲ್ಲಿ 20,120 ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಮುಖ್ಯ ಪರೀಕ್ಷೆ 2021ರಲ್ಲಿ ನಡೆದಿತ್ತು. ಇದೀಗ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನ) 1:3 ಅನುಪಾತದಲ್ಲಿ 318 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

'ಬಿಬಿಎಂಪಿ: ವಾರದೊಳಗೆ ವಾರ್ಡ್ ಮೀಸಲಾತಿ ಪ್ರಕಟಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್‌ಗಳ ಮೀಸಲಾತಿ ಅಧಿಸೂಚನೆಯನ್ನು ವಾರದೊಳಗೆ ಪ್ರಕಟಿಸಬೇಕು ಎಂದು ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ಬಿಬಿಎಂಪಿ ಚುನಾವಣೆ ನಡೆಸುವಂತೆ ಕೋರಲಾದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ಪೀಠವು, ಬಿಬಿಎಂಪಿಯ ಚುನಾವಣಾ ಪ್ರಕ್ರಿಯೆಯನ್ನು ಕಾನೂನುಬದ್ಧವಾಗಿ ಸೂಕ್ತ ಸಮಯದಲ್ಲಿ ಪೂರ್ಣಗೊಳಿಸುವಂತೆ ಕರ್ನಾಟಕ ಚುನಾವಣಾ ಆಯೋಗಕ್ಕೆ ನಿರ್ದೇಶಿಸಿದೆ.

2ನೇ ಪುಟ ನೋಡಿ

'ರಾಷ್ಟ್ರಪತ್ನಿ': ಅಧೀರ್ ರಂಜನ್ ಹೇಳಿಕೆಗೆ ಬಿಜೆಪಿ ಆಕ್ರೋಶ

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು 'ರಾಷ್ಟ್ರಪತ್ನಿ' ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ಹೇಳಿರುವುದು ಭಾರಿ ವಿವಾದ ಸೃಷ್ಟಿಸಿದೆ. ಸಂಸತ್ತಿನಲ್ಲಿ ವಿರೋಧ ಪಕ್ಷವನ್ನು ಹಣಿಯಲು ಈ ಅವಕಾಶವನ್ನು ಬಿಜೆಪಿ ಬಳಸಿಕೊಂಡಿದೆ.

ಬೆಲೆ ಏರಿಕೆ ಕುರಿತು ಚರ್ಚೆ ನಡೆಸಬೇಕು ಎಂದು ಜುಲೈ 18ರಂದು ಮುಂಗಾರು ಅಧಿವೇಶನ ಆರಂಭವಾದಾಗಿನಿಂದ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿವೆ. ಈಗ, ವಿರೋಧ ಪಕ್ಷಗಳ ಮೇಲೆ ತಿರುಗಿ ಬೀಳಲು ಬಿಜೆಪಿಗೆ ಅವಕಾಶ ಸಿಕ್ಕಿದೆ.

6ನೇ ಪುಟ ನೋಡಿ



ಚುನಾವಣೆಗೆ ಬಿಜೆಪಿ ಸಿದ್ಧ: ಸಚಿವ ಆರ್‌. ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದಂತೆ ಬಿಬಿಎಂಪಿ ಚುನಾವಣೆ ನಡೆಸಲು ಸರ್ಕಾರ ಬದ್ಧ, ಬಿಜೆಪಿಯು ಚುನಾವಣೆಗೆ ಸಿದ್ಧವಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಒಂದು ವಾರದಲ್ಲಿ ಮೀಸಲಾತಿ ನಿಗದಿ ಮಾಡಲು ಸಿದ್ಧರಿದ್ದೇವೆ. ಬೂತ್, ವಾರ್ಡ್‌ಮಟ್ಟದಲ್ಲಿ ಈಗಾಗಲೇ ಹಲವು ಸಭೆಗಳನ್ನು ನಡೆಸಿದ್ದೇವೆ. ಕಾರ್ಯಕರ್ತರು, ಮುಖಂಡರು ಸಜ್ಜಾಗಿದ್ದಾರೆ. ಚುನಾವಣಾ ಆಯೋಗ ದಿನಾಂಕ ನಿಗದಿ ಮಾಡಿದ ತಕ್ಷಣ ಸರ್ಕಾರ ಉಳಿದ ಕೆಲಸಗಳ ಜವಾಬ್ದಾರಿ ನಿರ್ವಹಿಸಲಿದೆ. ವಾರ್ಡ್ ವಿಂಗಡಣೆಗೆ ಅಸಮಾಧಾನವಿದ್ದರೆ ಆಕ್ಷೇಪಣೆ ಸಲ್ಲಿಸಬಹುದು' ಎಂದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್‌ಗಳ ಮೀಸಲಾತಿ ನಿಗದಿ

ಅಧಿಸೂಚನೆಗೆ ಸರ್ಕಾರ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂಕೋರ್ಟ್ ಆದೇಶದಂತೆ ಒಂದು ವಾರದೊಳಗೆ ವಾರ್ಡ್‌ಗಳ ಮೀಸಲಾತಿ ನಿಗದಿಪಡಿಸಿ ಅಧಿಸೂಚನೆ ಹೊರಡಿಸಲು ಸರ್ಕಾರ ಸಿದ್ಧತೆ ನಡೆಸಿದೆ.

ಶುಕ್ರವಾರ ಅಥವಾ ಶನಿವಾರ ವಾರ್ಡ್ ಮೀಸಲಾತಿಯ ಕರಡು ಅಧಿಸೂಚನೆ ಹೊರಬೀಳಲಿದೆ. ಆಕ್ಷೇಪಣೆ ಸಲ್ಲಿಸಲು ಮೂರು ದಿನದ ಅವಕಾಶ ನೀಡಲಾಗುತ್ತದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ವಾರ್ಡ್ ಮೀಸಲಾತಿ ಕರಡು ಪಟ್ಟಿಗೆ ಕೆಲವು ಮಾರ್ಗಸೂಚಿಯನ್ನು ಅನುಸರಿಸಲು ಸೂಚಿಸಲಾಗಿದೆ.

2012-13ನೇ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸುವ ಸಲುವಾಗಿ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಿ, ಮಹಾನಗರ ಪಾಲಿಕೆಗಳ ಚುನಾವಣೆಗಳಿಗೆ, ವಿವಿಧ ಪ್ರವರ್ಗಗಳಿಗೆ ಸೇರಿದ ಸದಸ್ಯರುಗಳಿಗೆ ವಿವಿಧ ವಾರ್ಡ್‌ಗಳಿಗೆ ರೊಟೇಷನ್ ಮೇಲೆ ಮೀಸಲಾದ ಸ್ಥಾನಗಳನ್ನು ಹಂಚಿಕೆ ಮಾಡಬೇಕು. ಇದಕ್ಕೆ ಕೆಲವು ಮಾರ್ಗದರ್ಶನಗಳನ್ನು ನೀಡಲಾಗಿದೆ. 2011ರ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ನಿಗದಿಯಾಗಲಿದೆ.

ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗಾಗಿ ಮೀಸಲಿರಿಸಬಹುದಾದ ಸ್ಥಾನಗಳ ಸಂಖ್ಯೆಯು ಆಯಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಒಟ್ಟು ಜನಸಂಖ್ಯೆಯ ಒಟ್ಟು ಸ್ಥಾನಗಳ ಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಬೇಕು. ಪರಿಶಿಷ್ಟ ಜಾತಿಗೆ ಸಂಬಂಧಪಟ್ಟ ಅಭ್ಯರ್ಥಿಯು ಲಭ್ಯವಾಗದಿದ್ದರೆ ಆ ಸಂದರ್ಭದಲ್ಲಿ ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟ ಅಭ್ಯರ್ಥಿಯಿಂದ ಭರ್ತಿ ಮಾಡಬಹುದಾಗಿದೆ. ಪ್ರತಿಯೊಂದು ವರ್ಗದಲ್ಲಿ ಅಂದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಪ್ರವರ್ಗ 'ಎ' ಮತ್ತು 'ಬಿ' ಮತ್ತು ಮೀಸಲಾತಿ (ಸಾಮಾನ್ಯ) ಸ್ಥಾನಗಳಲ್ಲಿ ಶೇ 50ಕ್ಕೆ ಮೀರದಂತೆ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು ಎಂದು ಸೂಚಿಸಲಾಗಿದೆ.

ಮತದಾರರ ಪಟ್ಟಿ ಪರಿಷ್ಕರಣೆಗೆ ಶೀಘ್ರ ವೇಳಾಪಟ್ಟಿ

ಬಿಬಿಎಂಪಿ ಚುನಾವಣೆಗೆ ಸಿದ್ಧವಾಗಲು ಸುಪ್ರೀಂ ಕೋರ್ಟ್ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗ ಮತದಾರರ ಪಟ್ಟಿ ಪರಿಷ್ಕರಣೆಗೆ ಒಂದೆರಡು ದಿನಗಳಲ್ಲಿ ವೇಳಾಪಟ್ಟಿ ಪ್ರಕಟಿಸಲಿದೆ.

'ಚುನಾವಣೆ ಸಿದ್ಧತೆಯನ್ನು ನಾವು ಈಗಾಗಲೇ ಆರಂಭಿಸಿದ್ದೇವೆ. ಜಿಲ್ಲಾ ಚುನಾವಣಾಧಿಕಾರಿಯನ್ನು ಸೇರಿದಂತೆ ಚುನಾವಣೆ ಕಾರ್ಯಕ್ಕೆ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗಿದೆ. ಅವರಿಗೆ ತರಬೇತಿ ನೀಡುವ ಕಾರ್ಯವೂ ನಡೆಯುತ್ತಿದೆ. ಮತದಾರರ ಪಟ್ಟಿ ಪರಿಷ್ಕರಣೆಗೆ ಯಾವ ಕಾರ್ಯ ಯಾವಾಗ ನಡೆಯಬೇಕು ಎಂಬ ವಿವರವಾದ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಬಿಡುಗಡೆ ಮಾಡಲಿದ್ದೇವೆ' ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಬಸವರಾಜ ತಿಳಿಸಿದರು.

'ರಾಜ್ಯ ಸರ್ಕಾರ ವಾರ್ಡ್‌ಗಳಿಗೆ ಮೀಸಲಾತಿ ನಿಗದಿ ಮಾಡಿ, ಅಧಿಸೂಚನೆ ಹೊರಡಿಸಿದ ನಂತರ ನಾವು ಚುನಾವಣೆ ವೇಳಾಪಟ್ಟಿಯನ್ನು ಘೋಷಿಸುತ್ತೇವೆ' ಎಂದರು.

'ವಾರದೊಳಗೆ ವಾರ್ಡ್ ಮೀಸಲಾತಿ ಪ್ರಕಟಿಸಿ'

ಒಂದನೇ ಪುಟದಿಂದ

ಚುನಾವಣೆ ನಡೆಸುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಕಾಂಗ್ರೆಸ್‌ನ ಅಬ್ದುಲ್ ವಾಜಿದ್ ಹಾಗೂ ಶಿವರಾಜು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಕರ್ನಾಟಕ ಸರ್ಕಾರದ ಪರ ವಾದಿಸಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಹಾಜರಾಗಿ, 'ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆ ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೈಗೊಂಡ ಕ್ರಮದ ಕುರಿತು ವರದಿಯನ್ನು ಸಲ್ಲಿಸಲಾಗಿದೆ. ಜೂನ್ 9ರಂದು ವಾರ್ಡ್‌ಗಳ ಮರುವಿಂಗಡಣೆಯ ಕರಡನ್ನು ಪ್ರಕಟಿಸಲಾಯಿತು. ಅಂತಿಮ ಅಧಿಸೂಚನೆಯನ್ನು ಜೂನ್ 14ರಂದು ಹೊರಡಿಸಲಾಯಿತು' ಎಂದರು.

'ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಖಾತರಿಪಡಿಸಿದ ಬಳಿಕವೇ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ವರ್ಗೀಕರಿಸಿ ಚುನಾವಣೆ ನಡೆಸಬೇಕು ಎಂದು ಸುಪ್ರೀಂಕೋರ್ಟ್ ಹೇಳಿತ್ತು. ಹಿಂದುಳಿದ ವರ್ಗಗಳನ್ನು ಗುರುತಿಸುವ ಸಲುವಾಗಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ. ಭಕ್ತವತ್ಸಲ ಅಧ್ಯಕ್ಷತೆಯಲ್ಲಿ ಆಯೋಗವನ್ನು ಕರ್ನಾಟಕ ಸರ್ಕಾರ ರಚಿಸಿತ್ತು. ಆ ಸಮಿತಿಯು ಸರ್ಕಾರಕ್ಕೆ ಕಳೆದ ವಾರ ವರದಿ ಸಲ್ಲಿಸಿದೆ' ಎಂದರು.

ಬಳಿಕ ನ್ಯಾಯಪೀಠವು, 'ರಾಜ್ಯ ಸರ್ಕಾರವು ವಾರ್ಡ್‌ವಾರು ಮೀಸಲಾತಿ ಪಟ್ಟಿಯನ್ನು ಕೂಡಲೇ ಪ್ರಕಟಿಸಬೇಕು. ಈ ಮೂಲಕ ಸೂಕ್ತ ಸಮಯದೊಳಗೆ ಚುನಾವಣಾ ಆಯೋಗವು ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಲು ನೆರವಾಗಬೇಕು' ಎಂದು ಸೂಚಿಸಿದರು.

ಒಂದು ವೇಳೆ ಕರ್ನಾಟಕ ಸರ್ಕಾರ ಅಧಿಸೂಚನೆ ಹೊರಡಿಸುವಲ್ಲಿ ವಿಳಂಬ ಮಾಡಿದರೆ ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತರಬಹುದು ಎಂದೂ ಪೀಠ ಹೇಳಿತು.

ವಾರ್ಡ್‌ಗಳ ಪುನರ್ ವಿಂಗಡಣೆ ಹಾಗೂ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿ ಅಂತಿಮಗೊಳಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದ ಕೂಡಲೇ ಬಿಬಿಎಂಪಿ ಚುನಾವಣೆ ನಡೆಸುವಂತೆ ಕರ್ನಾಟಕ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಮೇ 20ರಂದು ಸೂಚಿಸಿತ್ತು. ಬಿಬಿಎಂಪಿ ವಾರ್ಡ್‌ಗಳ ಪುನರ್ ವಿಂಗಡಣೆ ಮತ್ತು ಒಬಿಸಿ ಮೀಸಲಾತಿ ನಿರ್ಣಯದ ಪ್ರಕ್ರಿಯೆ ಪೂರ್ಣಗೊಳಿಸಲು ಸರ್ಕಾರಕ್ಕೆ ಎಂಟು ವಾರಗಳ ಕಾಲಾವಕಾಶ ನೀಡಿತ್ತು.

ಬಿಬಿಎಂಪಿ ಸದಸ್ಯರ ಅಧಿಕಾರದ ಅವಧಿಯು 2019ರ ಸೆಪ್ಟೆಂಬರ್ 10ರಂದು ಪೂರ್ಣಗೊಂಡಿತ್ತು. ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ, 2020ರ ಡಿಸೆಂಬರ್ 4ರಂದು ರಾಜ್ಯ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ 2020ರ ಡಿಸೆಂಬರ್ 18ರಂದು ಅಮಾನತಿನಲ್ಲಿ ಇರಿಸಿತ್ತು.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ-2020ರ ಅನ್ವಯ ರಚಿಸಲಾದ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರದ ಸ್ಥಳೀಯ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಇತರ ಹಿಂದುಳಿದವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಸಂಬಂಧ, ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಲೆಂದೇ ನೂತನ ಕಾನೂನನ್ನು ಅಂಗೀಕರಿಸಲಾಗಿದೆ ಎಂದು ಮೇಲ್ಮನವಿಯಲ್ಲಿ ಹೇಳಿತ್ತು.

ಅಲ್ಲದೆ, ಹೊಸದಾಗಿ ಜಾರಿಗೊಳಿಸಲಾದ ಕಾಯ್ದೆಯನ್ನು ರಿಟ್ ಅರ್ಜಿಯ ಮೂಲಕ ಪ್ರಶ್ನಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಯಾವುದೇ ರೀತಿಯ ಅಧಿಕಾರವಿಲ್ಲ ಎಂದೂ ಹೇಳಿತ್ತು.

'ಚುನಾವಣೆ ಮುಂದೂಡುತ್ತಿರುವ ಸರ್ಕಾರ'

ಕೆ.ಆರ್.ಪುರ: ನಾಗರಿಕರ ಸಮಸ್ಯೆಗಳನ್ನು ಆಲಿಸಲು ಕಳೆದ ಎರಡು ವರ್ಷಗಳಿಂದ ಚುನಾಯಿತ ಪ್ರತಿನಿಧಿಗಳಿಲ್ಲದೆ ಬಿಬಿಎಂಪಿ ಅನಾಥವಾಗಿದ್ದು, ಪ್ರಜಾಪ್ರಭುತ್ವದಲ್ಲಿ ಸಂದಿಗ್ಧತೆ ಇಲ್ಲದ ರಾಜ್ಯ ಬಿಜೆಪಿ ಸರ್ಕಾರ ಚುನಾವಣೆಯನ್ನು ಮುಂದೂಡುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಹಾಗೂ ಪಾಲಿಕೆಯ ಮಾಜಿ ಸದಸ್ಯ ಎಸ್. ಉದಯಕುಮಾರ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಶಾಸಕರು ಹಾಗೂ ಸರ್ಕಾರದಲ್ಲಿರುವವರು ಬೇಕಂತಲೇ ಚುನಾವಣೆ ಮುಂದೂಡುತ್ತಾ ಬರುತ್ತಿದ್ದಾರೆ. ಬಿಬಿಎಂಪಿ ಸದಸ್ಯರಿದ್ದರೆ ಹಣ ಲೂಟಿ ಹೊಡೆಯಲು ಆಗುವುದಿಲ್ಲ ಎಂದು ಚುನಾವಣೆ ನಡೆಸಲು ಶಾಸಕರಿಗೆ ಇಚ್ಛಾಶಕ್ತಿ ತೋರುತ್ತಿಲ್ಲ' ಎಂದರು.

ಬಿಬಿಎಂಪಿ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ಎಂಟು ವಾರಗಳ ಗಡುವು ನೀಡಿದ್ದರೂ ಸರ್ಕಾರ ಚುನಾವಣೆ ನಡೆಸಲು ಮೀನಮೇಷ ಎಣಿಸುತ್ತಿದೆ. ನಗರದ ಸಾರ್ವಜನಿಕರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಶಾಸಕರು ಕಾಮಗಾರಿ ಪೂಜೆ ಮಾಡಿ, ಕಮಿಷನ್ ಹೊಡೆಯುತ್ತಿದ್ದಾರೆ ಎಂದು ಆರೋಪಿಸಿದರು.

ಕೆಪಿಸಿಸಿ ಎಸ್ಸಿ ಘಟಕದ ಉಪಾಧ್ಯಕ್ಷ ನಲ್ಲೂರಹಳ್ಳಿ ನಾಗೇಶ್, 'ಮಹದೇವಪುರ ಕ್ಷೇತ್ರದಲ್ಲಿ ಶಾಸಕ ಅರವಿಂದ ಲಿಂಬಾವಳಿ ಸಾರ್ವಜನಿಕ ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ವಿಫಲರಾಗಿದ್ದಾರೆ' ಎಂದು ಟೀಕಿಸಿದರು.

ಈ ಸಂದರ್ಭದಲ್ಲಿ ವರ್ತೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಟಿ.ಬಿ.ಬಾಬು, ಮುಖಂಡರಾದ ಜಯರಾಮ್ ರೆಡ್ಡಿ, ಶ್ರೀನಿವಾಸ್ ರೆಡ್ಡಿ, ಲಕ್ಷ್ಮಿ ಪ್ರಸಾದ್, ಹೂಡಿ ನಾಗರಾಜ್, ಚಂದ್ರಣ್ಣ ಇದ್ದರು.

8 ಪುನರ್ವಸತಿ ಗ್ರಾಮಗಳ ದತ್ತು

ಬೀಳಗಿ (ಬಾಗಲಕೋಟೆ): ಕೃಷ್ಣಾ ಮೇಲ್ದಂಡೆ ಯೋಜನೆ ಹಿನ್ನೀರಿನಿಂದ ಬಾಧಿತವಾದ ಹೆಗ್ಗೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯ 8 ಗ್ರಾಮಗಳ ಪುನರ್ವಸತಿ ಕೇಂದ್ರಗಳನ್ನು ದತ್ತು ತೆಗೆದುಕೊಳ್ಳಲಾಗುವುದು ಎಂದು ಎಸ್.ಆರ್. ಪಾಟೀಲ ಶಿಕ್ಷಣ ಪ್ರತಿಷ್ಠಾನದ ಕಾರ್ಯದರ್ಶಿ ಎಂ.ಎನ್.ಪಾಟೀಲ ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲ್ಲೂಕಿನ ಬಾಡಗಂಡಿಯ ಬಾಪೂಜಿ ಅಂತರರಾಷ್ಟ್ರೀಯ ವಸತಿ ಶಾಲಾ ಆವರಣದಲ್ಲಿ ಇದೇ 31ರಂದು ಬೆಳಿಗ್ಗೆ 10.30ಕ್ಕೆ ತಲಾ ₹1 ಲಕ್ಷ ನಗದು ಬಹುಮಾನದ ಅಬ್ಬೆ ಹಾಗೂ ಪ್ರಗತಿಪರ ರೈತ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Agricultural Land Converted

North

WANTED OUTRIGHT 1to2 acre, joint venture 2to5 acres BBMP limits Hebbal, international airport Road, Bagaluru, Kogilu. 9844092859/ 9632377775.

Sites

Devanahalli

WANTED TO buy site - 8000- 10000 sq ft in Jade Garden/ Hollywood/ SwissTown Bona fide owner or Genuine brokers may please email bhagwansanath@gmail.com or contact at 9880548147

Vishweshwariah Layout

WANTED SITES 20x30,30x40,40x60,50x80 Vishveshwaraiah layout, Kempegowda Layout, RHCS-Layout, NGEF-Layout, ITI-Layout, Arkavathi Layout-8861063532

Indiranagar

HAL 3RD Stage Independent Duplex House in 30x45 site built up area 1500 sq.ft. West facing. Price- 2.6 Cr. Only Genuine buyers call #8762018445. (Brokers excuse)

Sites

Bannerghatta Road

BANNERGHATTA ROAD GOTTIGERE Sites Sale 'A' khatha. W/F 1) 38'x38' 2) 37'x38' 3) 33x130. 9341890909.

Mysore Road

MYSORE ROAD KENGERI 100×100 sft golden Residential property for sale. reasonable price(Near Global Village) Are Surrounded Apartments, RR Educational Institutions and Hospital. Call: 9845066467 /9844027560.

REAL ESTATE SELLING

Agricultural Land Converted

Hosur Road

SALE: 3.5 Acres Residential Conversion Land And JD Apartment 2.5 Acres AECS Layout C Block, Singsandra 7676666616.

Flat

Jayanagar

FLATS FOR Sale at Shanthi Apartments at Jayanagar 9th Block, Bangalore. Contact: +91 9900260618

House

Banashankari

BANASHANKARI 2ND STAGE, Building (GF, FF) for Sale 30'x45' S/F opposite to Umamaheshwara Park 9341890909.

Vishweshwariah Layout

SALE: NEAR AMMA-ASHRAM NAGADEVANAHALLI 20X42 BBMP 'A'-KHATHA EF INDIPENDENT & DUPLEX HOUSE- 9845021795/ 9980733501

Vishweshwariah Layout

BDA SITE 40x60 South facing @ Visveswaraiah Layout 8th Block. Price 9100/ sqft negotiable. Contact: 9972917388

RENTAL PROPERTIES

Accommodation Available

Commercial

AVAILABLE OFFICE Space for Rent 1300 sq.ft on Second Floor on Madras Bank Road (off St.Marks Road) Near M.G.Road. Contact: 9448397461/ 9482585944. Brokers Excuse.

JOB OPPORTUNITIES

Accounts & Finance

WANTED LADIES For Accounts (Married) B.com with Tally Knowledge in&Around Jayanagar And JP-Nagar Contact: 9980921763/ 9632201671

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

Marketing & Sales

WANTED COUNTER Sales Executives (M/F) for a 2 Wheeler Showroom in Koramangala & JP Ngr, Salary+Incentives.Call: 9945083900, 9731028676.

EDUCATION CORNER

2nd PU Failed?

Don't be left behind!

A golden opportunity to study degree under Bangalore University this academic year and save one precious year of your life.

BBA B.Com BCA BA

Limited seats. For admissions call:

2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:

7846000222

BUSINESS

Business Offers

Finance

WE FINANCE to NPA/ Default Properties to Release from Banks and Sell at Best Market Price.Call Verna Developers, MG-Road. 9916310226/ 9353128035

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

OTHERS

For Sale

OWNER LEAVING LEATHER SOFA TEAK DINING COT MATTRESS AUTOMATIC GAS STOVE DIWAN. CALL: 9845414482/ 7019263843

PERSONAL

Change of Name

I, NEHAL STALEKAR D/o. Rajendra Shashidhar Stalekar R/a C1101, NCC Urban Ivory Heights, Sathya Layout, B.Narayanapura, Mahadevapura Narayanapura Bangalore-560016 Have Changed My Name From NEHAL RAJENDRA STALEKAR to NEHAL STALEKAR vide Affidavit Dated 28-07-2022 Before Notary Rajanna SM Bangalore

I, AMBIKA S alias AMBIKA RAVINDRANATH, SHIVAKUMAR AMBIKA, R/a#8, 1st Cross, A.P.C.Layout, Thindlu, PO Vidyaranyapura, Bangalore North, Bangalore-97 declare that all names pertain to me only, vide affidavit dt.28.07.2022 before Notary M. Devaraj, Bangalore. Henceforth I shall be called as AMBIKA S only.

I, PAVITHRAN .K. JC-760051K EX-SUBEDAR, residing at #189, Austin Town, Viveknagar Post, Bangalore-47, have changed my son's name from UDAY KIRAN to VIJAY UDAI KIRAN. P vide affidavit dated 10.11.2021 before Notary K. Venkateshan, Bangalore.

I, SOMASHEKARAIAH .S, residing at No. 16, 2nd cross, NSR Road, A. Narayanapura, Bangalore-16, have changed my name to SHEKAR .S vide affidavit dated 22.03.2022 before Notary S. Vijayakumar, Bangalore.

I, S. LAZARUS SANTHOSH ROY, residing at No.111, 11th cross, Pipeline, behind Canara Bank, Malleswaram, Bangalore-03, have changed my name to SANTHOSH LAZARUS ROY P vide affidavit dated 28.07.2022 before Notary L. Veena, Bangalore. Henceforth I shall be known as SANTHOSH LAZARUS ROY P only.

I, VASANT Nayak.S S/o Shankar Nayak Residing at #FA 151,HAL Quarters, Vimanapura, Bangalore-560017. Have Changed my Minor Daughter Name From MANASA V to MANASA V NAYAK (DOB:01-02-2010) vide affidavit Dated: 26/07/2022 Sworn before VI Addl. Chief Metropolitan Magistrate, Bangalore.

I, VASANT Nayak.S S/o Shankar Nayak Residing at #FA 151,HAL Quarters, Vimanapura, Bangalore-560017. Have Changed my Minor Daughter Name From HARSHITHA V to HARSHITHA V. NAYAK (DOB:10-05-2008) vide affidavit Dated: 26/07/2022 Sworn before VI Addl. Chief Metropolitan Magistrate, Bangalore.

I, VASANT Nayak.S S/o Shankar Nayak Residing at #FA 151,HAL Quarters, Vimanapura, Bangalore-560017. Have Changed my Minor Daughter Name From MEGHANA V to MEGHANA V NAYAK (DOB:17-04-2016) vide affidavit Dated: 26/07/2022 Sworn before VI Addl. Chief Metropolitan Magistrate, Bangalore.

I, PAVITHRAN .K residing at #189, Austin Town, Viveknagar Post, Bangalore-560047, have changed my son's name from KRISHNA P to ANAND PAVITHRAN vide affidavit dated 18.07.2022 before Notary S. Ramesh, Bangalore.

14827312X- NK/ MT-KARCHE ANANDRAV YASHWANT at ASC Centre (South) Bangalore changed my Minor Daughter's name TEJASVI ANANDRAV KARCHE to TEJASVI ANANDRAO KARCHE notary K.V.Mani, Bangalore.

I, AKARSH Raj Chetan S/o Chetan V, R/a. #143, 'MATHRU KRUPA' AGS Colony RMV 2nd Stage New BEL Road, Bengaluru-560094, have changed my name to AKARSH RAJ VEERA, vide affidavit dated 30.07.2021 Sworn to before Notary Gangaraju B. N., Bengaluru.

I, LATHA, residing at #94/95, Jewellery Street, Bangalore- 560001, have changed my name to HEMALATHA vide affidavit dated 28.07.2022 before Notary S.I. Balaguru, Bangalore. Henceforth I shall be called HEMALATHA only.

I, POOJA residing #No.47, Prateek, Bluemoon Garden, Vidyaranyapura, Bangalore-560097 have changed my name to POOJA PATIL affidavit dated 25.07.2022 notary V.Anjanappa, Bangalore.

I, JAYA BHASKAR REDDY.C have changed my daughter's name from VEENA RANJITHA.C To VEENA RANJITHA CHEMIKALA vide affidavit dated: 26/7/2022 Before Notary R.Raghunath Rao Bangalore.

Lost

ಕಳೆದುಹೋಗಿದೆ

ಶ್ರೀಮತಿ ಯಶೋಧಮ್ಮ ಕೋಂ ಶ್ರೀ ಬಸವರಾಜು ಜಿ. ವಯಸ್ಸು 40 ವರ್ಷ ವಿಳಾಸ: 18ನೇ ವಾರ್ಡ್, ವೀರಭದ್ರನಪಾಳ್ಯ, ದೊಡ್ಡಬಳ್ಳಾಪುರ ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ವಾಸವಾಗಿದ್ದು 2ನೇ ವಾರ್ಡ್ ವೀರಭದ್ರನಪಾಳ್ಯಕ್ಕೆ ಸೇರಿದ ಖಾತೆ ನಂ. 1905/250/V.S 1676/250ರ ಬಾಬ್ತು 45X40 ಅಡಿಗಳ ಸ್ವತ್ತನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ದಿನಾಂಕ 19-06-1986 ರಂದು 1ನೇ ಪುಸ್ತಕದ 1692ನೇ ಸಂಪುಟದ 171 ರಿಂದ 174ನೇ ಪುಟಗಳಲ್ಲಿ ರಿಜಿಸ್ಟರ್ ನಂ. 828/1986-87 ರಂತೆ ಶ್ರೀ ಗೌತಮ್‌ಚಂದನ್ ರವರು ಕ್ರಯಕ್ಕೆ ಪಡೆದಿದ್ದು ನಂತರ ಶ್ರೀಮತಿ ಯಶೋಧಮ್ಮ ರವರು ಶ್ರೀ ಗೌತಮ್‌ಚಂದನ್ ರವರಿಂದ ಪಡೆದ ಸದರಿ ಒರಿಜಿನಲ್ ಕ್ರಯಪತ್ರವು ಕಳೆದುಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದ್ದಲ್ಲಿ ಸಂಪರ್ಕಿಸಿ: 9972317287 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ.

I, CHAITRA Nilagar Jogin, have lost my original 10th Marks Card with Registration No. 107329 (April- 1996) on 18.07.2022, while travelling. If found please send it to any nearest Police Station or call 8095201535.

PUBLIC NOTICE

kassia

NOTIFICATION

KARNATAKA SMALL SCALE INDUSTRIES ASSOCIATION
Vijayanagar, Bangalore- 560 040
70TH AGM & CALENDAR OF EVENTS FOR THE ELECTIONS 2022-23

1. PRESIDENT- 1 Post (Considered to any eligible candidates other than BBMP (Bruhat Bengaluru Mahanagar Palike) area as per clause 18 (a) & 41 (d) 2. VICE-PRESIDENT -1Post (Considered to any eligible candidates as per clause 18(b) & 41 (h). 3. Council of Management from among the individual members of the Association – 25 Posts 4. Women members to the Council of Management – 3 Posts (out of which one may be reserved for other than BBMP area 5. Council of Management from among the individual members of the Association Other than BBMP area – 12 Posts 6. Council of Management from among the Affiliated Associations members located either in BBMP area or Bengaluru City – 10 Posts 7.Council of Management from among the Affiliated Associations members located in any part of the Karnataka other than BBMP area – 10 Posts Election: 21st August, 2022, 9.00 am to 4.00 p.m. at KASSIA Parking area (Basement floor) 29-07-2022 at 11.00 am: Nomination Box kept ready for filing of Nomination forms. 05-08-2022 at 5.30 pm: Last Date & Time for receiving Nomination Forms 06-08-2022 at 11.00 am: Scrutiny of Nomination Forms & announcement of list of eligible candidates 08-08-2022 & 10-08-2022, 11.00 am to 3.00 p.m.: Withdrawal of Nominations 10-08-2022: Publishing of final List of contesting candidates after withdrawal 21-08-2022: Counting & Announcement of Results after completion of polling. Date of AGM: 21.08.2022, 8.30 am at KASSIA Auditorium.

Note: 1) KASSIA is sending the 70th AGM Meeting Notice along with Nomination Paper to all its eligible members by post. In case members could not get the Nomination Paper in time, they may also collect the same in KASSIA Office during working hours. 2) Eligible Members are allowed to participate in the Annual General Body Meeting and cast vote in the elections only against the Photo ID Card issued by KASSIA duly signed by the Administrator. ID Cards issued earlier by KASSIA is not valid for the present AGM and Election. 3) Code of Conduct is effective from 29.07.2022. 4) Further any queries kindly contact KASSIA Office during Office hours.

Sd/-
ADMINISTRATOR
KASSIA & Dy. Registrar of Societies, Zone-4, Bangalore Urban

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
ಪ್ರಜಾವಾಣಿ

Classifieds
EDUCATION SPECIAL
SPECIAL RATES FOR
Admission Notice,
Education Success
Congratulation Ads

For More Details Contact:
Jerry Louis : 9731810277
Ravichandra : 9901641752
Vishal GM : 9845114560
Tanveer : 9886213331
Email : dhclassifieds@deccanherald.co.in



PVR CINEMAS {Phoenix Marketcity, 9:25, 10:05, 12:10, 12:55, 3:30, 6:55, 9:30 p.m. | Forum Mall, 9:15, 10:25, 1:20, 4:30, 7:25, 10:15, 10:30 p.m. | Orion Mall, 9:20, 10:00, 11:00, 4:00, 4:50, 7:40, 10:05, 10:30 p.m. | Orion Uptown Mall, 10:35, 1:25, 7:25, 10:00 p.m. | MSR Regalia Mall, 9:20, 2:00, 4:50, 6:40, 9:30 p.m. | Spirit Mall, 10:00, 12:50, 3:25, 9:30 p.m. | VR Mall, 10:00, 11:10, 12:50, 2:00, 3:30, 4:50, 6:55, 7:40, 9:30, 10:30 p.m. | Vaishnavi Saphire Mall, 9:40, 3:50, 3:55, 6:40, 9:30 p.m. | Superplex Vegacity Mall, 10:00, 12:50, 4:50, 6:55, 7:40, 10:30 p.m. | The Cinema @ GT Mall, Magadi Road, 9:15, 12:40, 3:10, 6:40, 9:30 p.m. | Aura Cinema, Whitefield, 10:35, 1:25, 7:25, 10:15 p.m.} | INOX {Lido, 9:25, 1:40, 4:30, 7:20, 10:10 p.m. | Brookefield Mall, 10:10, 4:10, 7:15, 10:10 p.m. | Forum Value Mall, 9:10, 10:00, 1:50, 4:40, 7:30, 10:20 p.m. | Garuda Mall, 10:05, 12:50, 3:40, 6:30, 9:20, 10:20 p.m., IN DOLBY ATMOS:- 10:50 a.m., 7:25 p.m. | Mantri Mall, 10:00, 10:50, 1:40, 3:30, 7:35, 10:00 p.m. | Central Mall, JP Nagar, 9:00, 1:25, 4:10, 7:00, 9:50 p.m. | Garuda, Yelahanka, 10:25, 1:15, 4:05, 6:55, 9:45 p.m. | Swagath Mall, 10:00, 4:00, 6:50, 10:10 p.m. | Galleria Mall, RMZ Yelahanka, 9:05, 10:40, 2:15, 4:30, 7:15, 10:20 p.m. | SBR Horizon, 9:20, 11:00, 1:50, 4:40, 7:30, 9:20, 10:20 p.m.} | CINEPOLIS {ETA Mall, 9:40, 11:00, 1:50, 4:40, 6:25, 7:30, 9:30, 10:20 p.m. | Orion East Mall, 9:50, 10:50, 1:40, 4:30, 7:20, 10:10 p.m. | Royal Meenakshi Mall, 10:00, 11:00, 12:50, 4:05, 6:50, 9:40 p.m. | Shantiniketan, 10:00, 11:00, 12:50, 1:10, 1:50, 4:40, 7:20, 9:20, 10:00, 10:30 p.m. | SJR Spectrum Mall, 9:30, 11:00, 1:50, 4:40, 7:30, 10:20 p.m. | Sigma Mall, 10:30, 1:20, 4:10, 7:00, 9:50 p.m.} | GOPALAN {Innovation Mall, 10:15, 4:45, 9:30 p.m. | Arcade Mall, 3:45, 10:00 p.m. | Signature Mall, 12:00, 5:00, 7:30 p.m. | Grand Mall, 10:30, 1:45, 7:15, 9:45 p.m. | Legacy Mall, 10:00, 12:30, 3:00, 7:30, 9:45 p.m.} | INNOVATIVE MULTIPLEX {Marathahalli, 10:00, 12:45, 3:45, 7:30, 9:45 p.m.} | ROCKLINE CINEMAS {Jalahalli Cross, 10:30, 4:05, 6:45 p.m.} | KINO CINEMAS {Seegehalli Road, 1:05, 9:30 p.m.} | MUKTA A2 CINEMAS {Uttarahalli, 2:00, 7:20 p.m.} | SWAGATH SHANKARNAG {M. G. Road, 11:45 a.m., 8:00 p.m.} | LAKSHMI TALKIES {Tavarekere, 1:15, 7:00, 10:00 p.m.} | ANAND THEATRE {Tanny Road, Daily 4 Shows} | SANTOSH THEATRE {RPC Layout, Daily 4 Shows} | RENUKA PRASANNA THEATRE {1:15, 6:30 p.m.} | PVR CINEMAS {Fiza Mall, Mangalore, 10:20, 1:15, 4:05, 6:55, 9:45 p.m. | Forum Mall, Mysore, 10:05, 12:55, 4:00, 6:55, 9:45 p.m. | Garuda Mall, Mysore, 9:30, 1:20, 3:30, 7:25 p.m.} | INOX {Central, Manipal, 10:05, 1:05, 3:50, 6:40, 10:00 p.m. | SS Mall, Tumkur, 9:45, 12:30, 3:15, 6:00, 9:50 p.m. | Satyam Mall, Mysore, 9:30, 2:05, 4:50, 7:35, 10:20 p.m.} | CINEPOLIS {City Centre Mall, Mangalore, 10:00, 11:00, 1:50, 4:40, 7:30, 10:20 p.m.} | BHARATH CINEMAS {Mangalore, 10:30, 1:00, 7:30, 10:15 p.m. | Manipal, 10:30, 4:30, 10:00 p.m. | Shivamoga, 12:00, 2:30, 7:45 p.m. | Kundapura, 12:00, 2:30, 7:45 p.m.} | CINE GALAXY NOVA CINEMAZ {Mangalore, 10:15, 7:45, 10:20 p.m.} | DRC CINEMAS {Mysore, 4:30, 7:30, 10:00 p.m.} | LIDO THEATRE {Mysore, Daily 4 Shows} | BALAJI DELUXE THEATRE {Mysore, Daily 4 Shows} | JAYALAKSHMI THEATRE {Mandya, Daily 4 Shows} | SRI GURU THEATRE {Hassan, Daily 4 Shows} | VEERABHADRESHWARA THEATRE {Shivamoga, Daily 4 Shows} | BASAVESHWARA THEATRE {Chitradurga, Daily 4 Shows} | MOVIETIME {Davangere, 3:00, 8:00, 10:35 p.m.} | TRISHUL THEATRE {Davanagere, Daily 4 Shows} | NATARAJ THEATRE {Bellary, Daily 4 Shows} | LAKSHMI THEATRE {Hospet, Daily 4 Shows} | DIANA THEATRE {Udupi, Daily 4 Shows} | SOBAGU THEATRE {Doddaballapura, Daily 2 Shows} | PRABHATH THEATRE {Kolar, 2 Shows} | RADHIKA THEATRE {Mulubagilu, Daily 2 Shows}.

FOR ANY CHANGES OR CANCELLATION IN SHOW TIMINGS, PLEASE CONTACT THE THEATRE

farnazfever

ತೋಟಗಾರಿಕೆ ಇಲಾಖೆ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ಜಿಲ್ಲಾ ಪಂಚಾಯತ್), ಶ್ರೀನಿವಾಸಪುರ
ದೂ: 08157-246442, ಇ-ಮೇಲ್: sadhsvpura@gmail.com
ಸಂಖ್ಯೆ: ಹಿಸತೋನಿ/ಜಿಪಂ/ಶ್ರೀ/ವಿನಿ/06/2022-23 ದಿನಾಂಕ: 11.07.2022

ಟೆಂಡರ್ ಪ್ರಕಟಣೆ

ವಿಷಯ: 2022-23ನೇ ಸಾಲಿಗೆ ಡಾಟಾ ಎಂಟ್ರಿ ಆಪರೇಟರ್ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲು ಟೆಂಡರ್ ಆಹ್ವಾನಿಸುವ ಬಗ್ಗೆ.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ಶ್ರೀನಿವಾಸಪುರ ಇವರ ಕಛೇರಿಯಲ್ಲಿ 2022-23ನೇ ಸಾಲಿಗೆ ಡಾಟಾ ಎಂಟ್ರಿ ಆಪರೇಟರ್ ರವರ ಅವಶ್ಯಕತೆಯಿದ್ದು, ಹೊರಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್ ಸೇವೆಯನ್ನು ಪಡೆದುಕೊಳ್ಳುವ ಸಲುವಾಗಿ ಅರ್ಹ ಮಾನವ ಸಂಪನ್ಮೂಲ ಪೂರೈಕೆ ಸಂಸ್ಥೆಗಳಿಂದ ಕೆ.ಟಿ.ಪಿ.ಪಿ. ಕಾಯ್ದೆ 2000ರನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. (1) ವಿವರ: (DEO). ಪ್ರಮಾಣ/ಸಂಖ್ಯೆ: 01. ಟೆಂಡರ್ ಫಾರಂ ದರ: ರೂ.200/-. ಇಎಂಡಿ ಮೊತ್ತ: ರೂ.5,000/-. ಟೆಂಡರ್ ಅರ್ಜಿಗಳನ್ನು ದಿನಾಂಕ: 11.07.2022ರಿಂದ ಕಛೇರಿಯ ಅವಧಿಯಲ್ಲಿ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29.07.2022ರ ಸಂಜೆ 4.00 ಗಂಟೆ. ಟೆಂಡರ್ ಅರ್ಜಿಗಳನ್ನು ತೆರೆಯುವ ದಿನಾಂಕ: 30.07.2022 ಮಧ್ಯಾಹ್ನ 3.00 ಗಂಟೆ. ಅನಿವಾರ್ಯ ಕಾರಣಗಳಿಂದಾಗಿ ಟೆಂಡರ್ ಅರ್ಜಿಗಳನ್ನು ನಿಗದಿತ ದಿನಾಂಕದಂದು ತೆರೆಯಲು ಸಾಧ್ಯವಾಗದಿದ್ದಲ್ಲಿ, ಮುಂದಿನ ಕಛೇರಿಯ ದಿನಾಂಕದಲ್ಲಿ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಅರ್ಜಿಗಳನ್ನು ತೆರೆಯಲಾಗುವುದು. ಆಸಕ್ತ ಟೆಂಡರ್‌ದಾರರು ಟೆಂಡರ್ ತೆರೆಯುವ ಸಂದರ್ಭದಲ್ಲಿ ಹಾಜರಿರಬಹುದು. ತಾಂತ್ರಿಕ ಬಿಡ್‌ನಲ್ಲಿ ಅನರ್ಹವಾದ ಟೆಂಡರ್‌ದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಹಿ/-
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ಜಿಲ್ಲಾ ಪಂಚಾಯತ್, ಶ್ರೀನಿವಾಸಪುರ

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 207/ಎಂಸಿಎ/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮನೆ ನಿರ್ಮಾಣಕ್ಕೆ ಅಫಿಡವಿಟ್ ಬೇಡ

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಶೀಘ್ರ: ಬಿಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಒದಗಿಸುವ ಕಾಮಗಾರಿಯನ್ನು ಚುರುಕುಗೊಳಿಸುವಲ್ಲಿ ಬಿಡಿಎ ನಿರ್ಲಕ್ಷ್ಯ ವಹಿಸಿದೆ ಎಂದು ವಿಧಾನಸಭೆ ಅರ್ಜಿಗಳ ಸಮಿತಿ ಸದಸ್ಯರು ಗುರುವಾರ ಆಕ್ರೋಶ ವ್ಯಕ್ತಪಡಿಸಿದರು.

ಸಮಿತಿ ಸದಸ್ಯರು ಜೂನ್ 2ರಂದು ಬಡಾವಣೆಗೆ ಭೇಟಿ ನೀಡಿದಾಗ ಬಿಡಿಎ ಅಧಿಕಾರಿಗಳು ಮನೆ ಕಟ್ಟಿಕೊಳ್ಳಲು ಮುಂದೆ ಬರುವವರಿಗೆ ಮೂಲಸೌಕರ್ಯ ಕಲ್ಪಿಸುವುದಾಗಿ ಭರವಸೆ ನೀಡಿದ್ದರು. ಆದರೆ ಈಗ ಅಫಿಡವಿಟ್ ಕೇಳುತ್ತಿದ್ದಾರೆ ಎಂದು ಶಾಸಕ ಅಪ್ಪಚ್ಚು ರಂಜನ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದೂರಲಾಯಿತು.

ಇದಕ್ಕೆ ಪ್ರತಿಕ್ರಿಯಿಸಿದ ಬಿಡಿಎ ಅಧಿಕಾರಿಗಳು, 'ಅಫಿಡವಿಟ್‌ಗಳನ್ನು ಕೇಳುವುದಿಲ್ಲ. ಆದರೆ ಮನೆ ನಿರ್ಮಿಸಲು ಬಯಸುವವರಿಗೆ ನೀರು, ಯುಜಿಡಿ, ವಿದ್ಯುತ್ ಮತ್ತು ಕನಿಷ್ಠ ರಸ್ತೆಗಳಂತಹ ಕನಿಷ್ಠ ಮೂಲಸೌಕರ್ಯಗಳನ್ನು ಒದಗಿಸುವ ತಾತ್ಕಾಲಿಕ ದಿನಾಂಕಗಳನ್ನು ಎರಡು ವಾರಗಳಲ್ಲಿ ಸಮಿತಿಗೆ ತಿಳಿಸುತ್ತೇವೆ' ಎಂದರು.

ನಾಡಪ್ರಭು ಕೆಂಪೇಗೌಡ ಬಡಾವಣೆ

ನಾಡಪ್ರಭು ಕೆಂಪೇಗೌಡ ಬಡಾವಣೆ ಎಂಬುದನ್ನು ಬಿಟ್ಟು ಬಿಡಿಎ ಜಾಹೀರಾತನ್ನು ಹೊರಡಿಸಿರುವುದನ್ನು ಸಮಿತಿ ಆಕ್ಷೇಪಿಸಿದಾಗ, ಅದನ್ನು ಸರಿಪಡಿಸುವುದಾಗಿ ಮತ್ತು ಕಾಲಮಿತಿಯೊಳಗೆ ಬಡಾವಣೆಯನ್ನು ಅಭಿವೃದ್ಧಿಪಡಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದರು. ಸಂಪೂರ್ಣ ಮಾರಾಟ ಪತ್ರವನ್ನು ನೀಡುವಾಗ, ಐದು ವರ್ಷಗಳಲ್ಲಿ ಮನೆ ನಿರ್ಮಿಸದ ಆಧಾರದ ಮೇಲೆ ದಂಡ ವಿಧಿಸುವುದಿಲ್ಲ ಎಂದು ಬಿಡಿಎ ಭರವಸೆ ನೀಡಿದೆ.

ಸುರೇಶ್ ಕುಮಾರ್ ನೇತೃತ್ವದ ಹಂಚಿಕೆದಾರರ ನಿಯೋಗಕ್ಕೆ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲು ಬಿಡಿಎ ಒಪ್ಪಿಕೊಂಡಿತು. ಶೀಘ್ರದಲ್ಲೇ ದಿನಾಂಕವನ್ನು ನಿಗದಿಪಡಿಸಲಾಗುವುದು ಎಂದು ಹೇಳಿತು.

ಸಮಿತಿ ಸದಸ್ಯರಾದ ಎಸ್ ಸುರೇಶ್ ಕುಮಾರ್, ವೀರಭದ್ರಯ್ಯ, ಉಮಾನಾಥ ಕೋಟ್ಯಾನ್, ರಾಜಶೇಖರ್ ಪಾಟೀಲ್, ನೆಹರು ಓಲೇಕಾರ್ ಇದ್ದರು.

ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಡಿಎ ಆಯುಕ್ತ ರಾಜೇಶ್ ಗೌಡ, ಬಿಡಿಎ ಎಂಜಿನಿಯರ್ ಸದಸ್ಯ ಎಚ್.ಆರ್. ಶಾಂತರಾಜಣ್ಣ ಇದ್ದರು.

ಬಾಲಕನಿಗೆ ಬೈಕ್ : ಮಾಲೀಕನಿಗೆ ದಂಡ!

ಚನ್ನಪಟ್ಟಣ: ಬಾಲಕನಿಗೆ ಚಾಲನೆ ಮಾಡಲು ಬೈಕ್ ನೀಡಿದ್ದ ಮಾಲೀಕನಿಗೆ ನಗರದ ಜೆಎಂಎಫ್ ನ್ಯಾಯಾಲಯ ₹ 34 ಸಾವಿರ ದಂಡ, ಒಂದು ದಿನ ಸೆರೆವಾಸ ವಿಧಿಸಿದೆ.

ನಗರದ ಅನ್ವರ್ ಖಾನ್ ಶಿಕ್ಷೆಗೆ ಒಳಗಾದವರು.

ತಮ್ಮ ಬೈಕನ್ನು ಸಂಬಂಧಿಕರ ಮಗನಿಗೆ ಚಾಲನೆ ಮಾಡಲು ನೀಡಿದ್ದರು. ಬೈಕ್ ಚಾಲನೆ ಮಾಡುವಾಗ ಸರ್ಕಾರಿ ಬಸ್ ಡಿಪೊ ಮುಂಭಾಗ ಆಯ ತಪ್ಪಿ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದ. ವಿಚಾರಣೆ ನಡೆಸಿದ ಪ್ರಧಾನ ಸಿವಿಲ್ ನ್ಯಾಯಾಧೀಶ ಮಹೇಂದ್ರಕುಮಾರ್ ಬಾಲಕನಿಗೆ ವಾಹನ ಚಲಾಯಿಸಲು ನೀಡಿದ್ದಕ್ಕೆ ದಂಡ ವಿಧಿಸಿದ್ದಾರೆ.

ಪ್ರತಿಭಾ ಕಾರಂಜಿ: ಧಾರ್ಮಿಕ ಪಠಣಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಧಾರ್ಮಿಕ ಪಠಣ ಸ್ಪರ್ಧೆಗೆ ಅವಕಾಶ ಕಲ್ಪಿಸಿರುವ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ಆದೇಶಕ್ಕೆ ವಿರೋಧ ವ್ಯಕ್ತವಾಗಿದೆ.

ಭಗವದ್ಗೀತೆಯನ್ನು ಕನ್ನಡ ಶಾಲೆಯ ಮಕ್ಕಳು ಸಂಸ್ಕೃತದಲ್ಲಿ ಹಾಗೂ ಉರ್ದು ಶಾಲೆಯ ಮಕ್ಕಳು ಅರೇಬಿಕ್ ಭಾಷೆಯಲ್ಲಷ್ಟೆ ಪಠಿಸಲು ಅವಕಾಶ ನೀಡಿರುವುದೂ ಸರಿಯಲ್ಲ. ಯಾವುದೇ ಭಾಷೆಯಲ್ಲಿ ಪಠಣ ಮಾಡಲು ಹಿಂದೆ ಅವಕಾಶ ಕಲ್ಪಿಸಲಾಗಿತ್ತು. ಈಗ ಸಂಸ್ಕೃತಕ್ಕೆ ಆದ್ಯತೆ ನೀಡಿರುವುದು ಹಿಂದೂ ಧರ್ಮವನ್ನು ಸಂಸ್ಕೃತಕ್ಕೆ ಸೀಮಿತ ಮಾಡುತ್ತಿರುವ ಹುನ್ನಾರ. ಒಕ್ಕೂಟ ವ್ಯವಸ್ಥೆಯಲ್ಲಿ ಕನ್ನಡ ರಾಜ್ಯಕ್ಕೆ ಮಾಡಿದ ಅಪಮಾನ ಎಂದು ಅಭಿವೃದ್ಧಿ ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ, ಶಿಕ್ಷಣ ಚಿಂತಕ ಜಿ.ರಾಮಕೃಷ್ಣ, ಲೇಖಕಿ ವಸುಂಧರಾ ಭೂಪತಿ, ಸಾಮಾಜಿಕ ಕಾರ್ಯಕರ್ತೆ ಮಲ್ಲಿಗೆ, ನಿವೃತ್ತ ಪ್ರಾಧ್ಯಾಪಕ ಟಿ. ಆರ್. ಚಂದ್ರಶೇಖರ್, ಪ್ರಯೋಗಶೀಲ ರಾಷ್ಟ್ರೀಯ ರಂಗ ನಿರ್ದೇಶಕ ಗೋಪಾಲಕೃಷ್ಣನಾಯರಿ, ಪೋಷಕರ ಸಮನ್ವಯ ವೇದಿಕೆಯ ಬಿ.ಎನ್.ಯೋಗಾನಂದ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಂವಿಧಾನವು ಜಾತ್ಯತೀತ ಮೌಲ್ಯಗಳನ್ನು ಪ್ರತಿಪಾದಿಸುವುದರಿಂದ ಸಾರ್ವಜನಿಕ ಸಂಸ್ಥೆಗಳಲ್ಲಿ ಧರ್ಮ ಹಾಗೂ ಸಂಪ್ರದಾಯದ ವಿಷಯಗಳನ್ನು ತರಬಾರದು. ಧಾರ್ಮಿಕ ಪಠಣಗಳ ಬದಲು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ, ಭಾರತದ ಸಂವಿಧಾನ, ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗಳಿಂದ ಆಯ್ದ ಪ್ರಸ್ತಾವನೆ, ಪರಿಚ್ಛೇಧ ಅಥವಾ ಹೆಸರಾಂತ ಸಮಾಜ ಸುಧಾರಕರು, ಕವಿಗಳು ಹಾಗೂ ದಾರ್ಶನಿಕರ ಮಾನವನ ಘನತೆ, ಸಮಾನತೆಯನ್ನು ಎತ್ತಿ ಹಿಡಿಯಲು ರಚಿಸಿದ ಪದ್ಯ, ಗದ್ಯ ಅಥವಾ ಕವನಗಳಿಂದ ಆಯ್ದ ಸಾಲುಗಳನ್ನು ಪಠಣ ಮಾಡಬಹುದು ಎಂದು ಸಲಹೆ ನೀಡಿದ್ದಾರೆ.

ದೇಶದಲ್ಲಿ ಶಾಲೆಯನ್ನು ಒಂದು ಜಾತ್ಯತೀತ, ಧರ್ಮಾತೀತ ಚೌಕಟ್ಟಿನ ಮಾನವೀಯತೆಯ ತಾಣವನ್ನಾಗಿಸುವುದು ತುಂಬಾ ಮಹತ್ವದ ವಿಷಯ. ಶಾಲೆಯಲ್ಲಿ ಪ್ರತಿಭಾಕಾರಂಜಿ ಆಯೋಜಿಸುವುದು ಮಕ್ಕಳ ಜ್ಞಾನ, ಭಾಷಾ ಕೌಶಲ ಪರಿಶೀಲಿಸಿ ಪ್ರತಿಭೆಗಳನ್ನು ಪ್ರೋತ್ಸಾಹಿಸುವುದಕ್ಕೆ ಹೊರತು ಧಾರ್ಮಿಕ ಪ್ರಚಾರಕ್ಕಲ್ಲ. ಧಾರ್ಮಿಕ ಪಠಣ ಸ್ಪರ್ಧೆ ಮಾಡಲೇಬೇಕೆಂದರೆ ಸಿಖ್, ಬೌದ್ಧ, ಜೈನ, ಪಾರ್ಸಿ, ಕ್ರಿಶ್ಚಿಯನ್, ಹಿಂದೂ ಹಾಗೂ ಲಿಂಗಾಯಿತ ಧರ್ಮಗಳ ಗ್ರಂಥಗಳಿಂದ ಆಯ್ದ ಅಂಶಗಳ ಧಾರ್ಮಿಕ ಪಠಣವಿರಬೇಕು. ಇದು ಸರ್ವಧರ್ಮ ಸಮನ್ವಯಕ್ಕೆ ಭೂಮಿಕೆ ಕಲ್ಪಿಸುತ್ತದೆ ಎಂದು ಕಿವಿಮಾತು ಹೇಳಿದ್ದಾರೆ.

ಬಾಲಕನಿಗೆ ರೋಬೋಟಿಕ್ ಹೃದಯ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪೊಲೊ ಆಸ್ಪತ್ರೆಯ ವೈದ್ಯರು ಒಂಬತ್ತು ವರ್ಷದ ಬಾಲಕನಿಗೆ ರೋಬೋಟಿಕ್ ಪೀಡಿಯಾಟ್ರಿಕ್ ಹೃದಯ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದರು.

ಹುಡುಗ ತನ್ನ ಶ್ವಾಸಕೋಶ ಮತ್ತು ಹೃದಯಕ್ಕೆ ಮತ್ತೆಂದೂ ಸರಿಪಡಿಸಲಾಗದಷ್ಟು ಹಾನಿ ಉಂಟಾಗುವ ಅಪಾಯ ಎದುರಿಸುತ್ತಿದ್ದ. ಆಸ್ಪತ್ರೆಯ ರೋಬೋಟಿಕ್ ಮತ್ತು ಕನಿಷ್ಠ ಗಾಯದ ಹೃದಯ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯ ಶಸ್ತ್ರಚಿಕಿತ್ಸಕ ಡಾ.ಸಾತ್ಯಕಿ ನಂಬಲಾ ನೇತೃತ್ವದ ವೈದ್ಯರ ತಂಡವು ಒಂದೂವರೆ ಗಂಟೆಯಲ್ಲಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತು.

'ಒಂಬತ್ತು ವರ್ಷದ ರೋಗಿಯು ಬೆಂಗಳೂರಿನ ಅಪೊಲೊ ಹಾಸ್ಪಿಟಲ್ಸ್‌ಗೆ ಭೇಟಿ ನೀಡಿದಾಗ, ಹೃತ್ಕರ್ಣದ ಸೆಪ್ಟಲ್ ಡಿಫೆಕ್ಟ್ (ಎಎಸ್‌ಡಿ) ಅಥವಾ ಹೆಚ್ಚು ಸಾಮಾನ್ಯವಾಗಿ ತಿಳಿದಿರುವ ರೋಗನಿರ್ಣಯ ಪ್ರಕ್ರಿಯೆ ನೆರವೇರಿಸಲಾಯಿತು. ಹೃದಯದಲ್ಲಿ ರಂಧ್ರ ಇದ್ದರೆ ಪರಿಹರಿಸಲು ಏಕೈಕ ಆಯ್ಕೆ ತೆರೆದ ಹೃದಯದ ಶಸ್ತ್ರಚಿಕಿತ್ಸೆ. ಪ್ರಕರಣದ ಹೆಚ್ಚಿನ ವಿಶ್ಲೇಷಣೆ ಮತ್ತು ಮೌಲ್ಯಮಾಪನದ ನಂತರ, ಬೆಂಗಳೂರಿನ ಅಪೊಲೊ ಹಾಸ್ಪಿಟಲ್ಸ್ ತಜ್ಞರ ತಂಡವು ದೋಷವನ್ನು ರೋಬೋಟಿಕ್ ಮುಚ್ಚುವಿಕೆ ಅಥವಾ ರೋಬೋಟಿಕ್ ಹೃದಯ ಶಸ್ತ್ರಚಿಕಿತ್ಸೆ ನಡೆಸುವ ನಿರ್ಧಾರಕ್ಕೆ ಬಂದಿತು' ಎಂದು ಡಾ. ಸಾತ್ಯಕಿ ನಂಬಲಾ ಮಾಹಿತಿ ನೀಡಿದರು.

'ರೋಬೋಟಿಕ್ ಶಸ್ತ್ರಚಿಕಿತ್ಸೆ ಹೃದಯ ಶಸ್ತ್ರಚಿಕಿತ್ಸಾ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲಾಗಿದೆ. ಶಸ್ತ್ರಚಿಕಿತ್ಸೆ ಬಳಿಕ ಒಂದೇ ದಿನದಲ್ಲಿ ಬಾಲಕ ಆಸ್ಪತ್ರೆಯಿಂದ ಮನೆಗೆ ಹೋದ' ಎಂದು ಅವರು ಹೇಳಿದರು.

8 ಎಂಎಂ ಪೋರ್ಟ್‌ಗಳ ಮೂಲಕ ಸೇರಿಸಲಾದ ಕ್ಯಾಮೆರಾ ಸಹಾಯದಿಂದ ಬಹು ರೋಬೋಟಿಕ್ ತೋಳುಗಳ ಮೂಲಕ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ಇದರಿಂದ ಆಗುವ ಗಾಯಗಳ ಪ್ರಮಾಣ ಕಡಿಮೆ. ಯಾವುದೇ ರಕ್ತದ ನಷ್ಟ ಆಗುವುದಿಲ್ಲ. ಶಸ್ತ್ರಚಿಕಿತ್ಸೆಯ ನಂತರ ನೋವು ನಿವಾರಕಗಳ ಅವಶ್ಯಕತೆಯು ತುಂಬಾ ಕಡಿಮೆಯಾಗಿದೆ ಎಂದು ವಿವರಿಸಿದರು.

ತಿದ್ದುಪಡಿ

ಗುರುವಾರದ (ಜುಲೈ 28) ಸಂಚಿಕೆಯಲ್ಲಿ 'ಗೂಗಲ್ ಸಿಗ್ನಲ್‌ಲೈಟ್ ವ್ಯವಸ್ಥೆ...' ಎಂಬ ಶೀರ್ಷಿಕೆಯಡಿ ಸುದ್ದಿಯಲ್ಲಿ '44 ಸಾವಿರ ಜಂಕ್ಷನ್‌ಗಳು' ನಗರದಲ್ಲಿವೆ ಎಂದು ಪ್ರಕಟವಾಗಿತ್ತು. ಇದು '44 ಸಾವಿರ ಕೂಡುರಸ್ತೆಗಳು' ಎಂದಾಗಬೇಕಿತ್ತು.

–ಸಂ

ನಗರದಲ್ಲಿ ಇಂದು

ಅಂತರ ಕಾಲೇಜು ವಾಲಿಬಾಲ್ ಟೂರ್ನಿ: ಉದ್ಘಾಟನೆ: ಸನೋಜ್.ವಿ.ಆರ್., ಅಧ್ಯಕ್ಷತೆ: ಜಿ. ರಾಜಾರಾಮ್, ಗುರುರಾಜ್.ಎಸ್., ಆಯೋಜನೆ ಮತ್ತು ಸ್ಥಳ: ವಿದ್ಯಾ ಪೂರ್ಣಪ್ರಜ್ಞಾ ಪದವಿ ಪೂರ್ವ ಕಾಲೇಜು, ಬೆಳಿಗ್ಗೆ 9

ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅತಿಥಿಗಳು: ಲಕ್ಷ್ಮೀ ನಾಗೇಶ್ವರ, ಅಧ್ಯಕ್ಷತೆ: ಪದ್ಮಜಾ.ಪಿ.ವಿ., ಬೆಳಕೆರೆ ಲಿಂಗರಾಜಯ್ಯ, ಆಯೋಜನೆ: ಎಂ.ಎಲ್.ಎ ಅಕಾಡೆಮಿ ಆಫ್ ಹೈಯರ್ ಲರ್ನಿಂಗ್, ಪ್ರಥಮ ದರ್ಜೆ ಮಹಿಳಾ ಕಾಲೇಜು, ಸ್ಥಳ: ರುಕ್ಕಮ್ಮ ರಾಘವಾಚಾರ್ ಸಭಾಂಗಣ, ಎಂ.ಎಲ್.ಎ., ಪ್ಲಾಟಿನಂ ಜ್ಯೂಬಿಲಿ ಬಿಲ್ಡಿಂಗ್ ಮಲ್ಲೇಶ್ವರ, ಬೆಳಿಗ್ಗೆ 10

'ರಸ್ಟಿಕ್ ಟೇಲ್ಸ್' ಏಕಚಿತ್ರಕಲಾ ಪ್ರದರ್ಶನ: ಸಿ.ಎಸ್. ಕೃಷ್ಣ ಸೆಟ್ಟಿ, ಅತಿಥಿಗಳು: ಚಂದ್ರನಾಥ ಆಚಾರ್ಯ, ಕೆ.ಎಸ್. ಅಪ್ಪಾಜಯ್ಯ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಬೆಳಿಗ್ಗೆ 10

ಸಾರ್ವಜನಿಕ ಶಿಕ್ಷಣ ಉಳಿಸಿ ದಿನ: ಭಾಷಣಕಾರರು: ಎಸ್.ಜಿ. ಸಿದ್ಧರಾಮಯ್ಯ, ವಿ.ಪಿ.ನಿರಂಜನಾರಾಧ್ಯ, ವಿ.ಎನ್. ರಾಜಶೇಖರ್, ಅಧ್ಯಕ್ಷತೆ: ಅಭಯಾ ದಿವಾಕರ್, ಆಯೋಜನೆ: ಎಐಡಿಎಸ್‌ಒ, ಸ್ಥಳ: ಯು.ವಿ.ಸಿ.ಇ ಅಲ್ಯುಮ್ನಿ ಅಸೋಸಿಯೇಷನ್ ಸಭಾಂಗಣ, ಕೆ.ಆರ್. ವೃತ್ತ, ಬೆಳಿಗ್ಗೆ 10.30

ಅಭಿನಂದನಾ ಸಮಾರಂಭ: ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ಎಸ್.ಟಿ. ನಾರಾಯಣಗೌಡ, ಎಂ.ಆರ್. ಲಕ್ಷ್ಮಿ ಮನೋಹರ್, ಎಚ್.ಜಿ. ಬಾಲಗೋಪಾಲ, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಕಾನೂನು ಕಾಲೇಜು, ಗಾಯತ್ರಿನಗರ, ಬೆಳಿಗ್ಗೆ 10.30

ಸಂತೋಷ್ ಎನ್ ಹೆಗ್ಡೆ

ಏಷ್ಯಾ ಜ್ಯುವೆಲ್ಸ್ ಷೋ: ಉದ್ಘಾಟನೆ: ಹರ್ಷಿಕಾ ಪೂಣಚ್ಚ, ಸ್ಥಳ: ಗಾಯತ್ರಿ ವಿಹಾರ ಅರಮನೆ ಮೈದಾನ, ಮಧ್ಯಾಹ್ನ 12

ಅಂತರರಾಷ್ಟ್ರೀಯ ಹುಲಿ ದಿನ: ಅಂತರರಾಷ್ಟ್ರೀಯ ಮಟ್ಟದ ಪ್ರಖ್ಯಾತಿ ಪಡೆದ ವೈಲ್ಡ್ ಲೈಫ್ ಫೋಟೊಗ್ರಾಫರ್ ಛಾಯಾಚಿತ್ರ ಪ್ರದರ್ಶನ: ಉದ್ಘಾಟನೆ: ಅನೂಪ್ ಭಂಡಾರಿ, ನೀತಾ ಅಶೋಕ, ಸ್ಥಳ: ಗರುಡಾ ಮಾಲ್, ಮಧ್ಯಾಹ್ನ 3

ನಮ್ಮ ಆರೋಗ್ಯ ಯೋಧರು: ಅತಿಥಿಗಳು: ಬಸವರಾಜ ಬೊಮ್ಮಾಯಿ, ರಾಜೀವ ಚಂದ್ರಶೇಖರ, ಡಾ.ಕೆ. ಸುಧಾಕರ್, ರಮೇಶ್ ಅರವಿಂದ್, ಆಯೋಜನೆ: ನಮ್ಮ ಬೆಂಗಳೂರು ಅವಾರ್ಡ್ಸ್ ಮೈ ಸಿಟಿ ಹೀರೋಸ್, ಸ್ಥಳ: ಕೋರಮಂಗಲ ಕ್ಲಬ್, ಸಂಜೆ 5

ಚೈತನ್ಯ ಸಂಜೆ ದತ್ತಿ ಶಿವಕುಮಾರ್ ದತ್ತಿ ಉಪನ್ಯಾಸ: ಅಧ್ಯಕ್ಷತೆ: ಗೀತಾ ಜಯಂತ್, ಉಪನ್ಯಾಸ: ವಿಜಯ ಜಗದೀಶ್, ಆಯೋಜನೆ: ನಗರ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್ ಕಾಲೇಜು ಸಭಾಂಗಣ, ಜಯನಗರ, ಸಂಜೆ 5.30

ವಚನ ಶ್ರಾವಣ: ಉದ್ಘಾಟನೆ: ಬನಶಂಕರಿ ಅಂಗಡಿ, ಅತಿಥಿಗಳು: ಎಸ್.ರಾಜು, ಉಪಸ್ಥಿತಿ: ಗುರುಪ್ರಸಾದ ಕುಚ್ಚಂಗಿ, ಅಧ್ಯಕ್ಷತೆ: ಮಹೇಶ ಬೆಲ್ಲದ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಗಂಗಾಂಬಿಕೆ, ಮುನಿರಾಜಪ್ಪ ಗೃಹ, ವಿಜಯನಗರ, ಸಂಜೆ 6

ಕಟ್ಟಡ ಕಾಮಗಾರಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಸಂಶೋಧನಾ ಕೇಂದ್ರದಲ್ಲಿ ಕೈಗೊಂಡಿರುವ ಸುಮಾರು ₹1 ಕೋಟಿ ವೆಚ್ಚದ ಕಟ್ಟಡ ನಿರ್ಮಾಣ ಮತ್ತಿತರ ಮೂಲಸೌಕರ್ಯ ನಿರ್ಮಾಣ ಕಾಮಗಾರಿ ಹಾಗೂ ಅಲ್ಲಿನ ಶೈಕ್ಷಣಿಕ ಚಟುವಟಿಕೆಗಳನ್ನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಸ್.ಎಂ. ಡಾ. ಜಯಕರ್ ಅವರು ಗುರುವಾರ ಪರಿಶೀಲಿಸಿದರು.

ಸಂಶೋಧನಾ ಕೇಂದ್ರದಲ್ಲಿನ ಡಾ.ಬಿ. ಆರ್. ಅಂಬೇಡ್ಕರ್ ಪ್ರತಿಮೆಗೆ ಗೌರವಾರ್ಪಣೆ ಸಲ್ಲಿಸಿದ ಬಳಿಕ ಕುಲಪತಿಗಳು, ಸಂಶೋಧನಾ ಕೇಂದ್ರದ ನಿರ್ದೇಶಕರು, ಬೋಧಕ-ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳೊಂದಿಗೆ ಸಂಶೋಧನಾ ಕೇಂದ್ರವನ್ನು ಇನ್ನಷ್ಟು ಬಲಪಡಿಸುವ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸಿದರು.

ಮುಂಬರುವ ಶೈಕ್ಷಣಿಕ ಸಾಲಿನಿಂದ ಅಂಬೇಡ್ಕರ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಸಂಶೋಧನಾ ವಿಧಾನ , ಬುಡಕಟ್ಟು ಜನಾಂಗ ಮತ್ತು ಪಾಲಿ ಭಾಷೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸುವ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು.

ಸುಗಮ ಸಂಚಾರಕ್ಕೆ ಸೂತ್ರ; ಅನುಷ್ಠಾನವಾಗದ ಕೆಲಸಗಳು – ಸಂಚಾರ ಪೊಲೀಸರ ಅಸಮಾಧಾನ

ತುರ್ತು ಕಾಮಗಾರಿಗೂ ಸಿಕ್ಕಿಲ್ಲ ವೇಗ

• ಆರ್. ಮಂಜುನಾಥ್

ತುರ್ತಾಗಿ ಕೈಗೊಳ್ಳಬೇಕಾದ ಸಿವಿಲ್ ಕಾಮಗಾರಿ	
ಒಟ್ಟು ತುರ್ತು ಕಾಮಗಾರಿಗಳು	50
ಪೂರ್ಣಗೊಂಡಿದ್ದು	22
ತಾತ್ಕಾಲಿಕವಾಗಿ ಕೆಲಸ	16
ಪೂರ್ಣಗೊಂಡಿದ್ದರೂ ಸರಿಯಾಗಿಲ್ಲದ್ದು	1
ಭಾಗಶಃ ನಿರ್ವಹಣೆ	4
ಕೆಲಸ ನಡೆಯುತ್ತಿರುವುದು	4
ದೀರ್ಘಾವಧಿ ಬಾಕಿ	2
ಏನೂ ಮಾಡಿಲ್ಲ	1

ರಸ್ತೆ ಮೂಲಸೌಕರ್ಯ ಕಾಮಗಾರಿ	
ಒಟ್ಟು	54
ಪೂರ್ಣಗೊಂಡಿದ್ದು	8
ಭಾಗಶಃ ನಿರ್ವಹಣೆ	4
ತಾತ್ಕಾಲಿಕ ಕೆಲಸ	16
ಕೆಲಸ ನಡೆಯುತ್ತಿರುವುದು	19
ಏನೂ ಮಾಡಿಲ್ಲ	7

ಸಾಂದರ್ಭಿಕ ಚಿತ್ರ

ಬೆಂಗಳೂರು: ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಎಲ್ಲ ಇಲಾಖೆಗಳ ಸಮನ್ವಯ ಸಭೆ, ರಾತ್ರಿ ಜಂಟಿ ತಪಾಸಣೆ ನಡೆಸಿದರೂ ತುರ್ತಾಗಿ ಆಗಬೇಕಾದ ಕಾಮಗಾರಿಗಳಲ್ಲಿ ಶೇ 50ರಷ್ಟೂ ಮುಗಿದಿಲ್ಲ.

ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಅವರ ನೇತೃತ್ವದಲ್ಲಿ ಬಿಬಿಎಂಪಿ, ಬಿಡಿಎ, ಜಲಮಂಡಳಿ, ಬಿಎಂಆರ್‌ಸಿಎಲ್, ಸ್ಮಾರ್ಟ್ ಸಿಟಿ ಸೇರಿ ಎಲ್ಲ ಪ್ರಮುಖ ಸಂಸ್ಥೆಗಳ ಮುಖ್ಯಸ್ಥರ ಸಮನ್ವಯ ಸಮಿತಿಯನ್ನು ರಚಿಸಿ, ಒಂದೂವರೆ ತಿಂಗಳಿಂದ ಜಂಟಿ ಸಭೆ, ರಾತ್ರಿ ತಪಾಸಣೆ ಎಂದು ನಡೆಸಲಾಗಿತ್ತು. ಆದರೆ, ತುರ್ತಾಗಿ ಆಗಬೇಕಾದ ಕೆಲಸಗಳು ಇನ್ನೂ ಆಗಿಲ್ಲ. ಅದರಲ್ಲೂ ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದಿಂದ ರಸ್ತೆಗಳ ದುರಸ್ತಿ ಕಾರ್ಯ ಬಹುತೇಕ ನಡೆದೇ ಇಲ್ಲ.

ಮಳೆಯಿಂದ ಹಾನಿಗೊಳಗಾಗಿದ್ದ ಸ್ಥಳಗಳಲ್ಲಿ ಸಂಚಾರ ಅತ್ಯಂತ ಹದಗೆಟ್ಟಿತ್ತು. ಇದನ್ನು ನಿವಾರಿಸಲು ಬೆಂಗಳೂರು ಸಂಚಾರ ಪೊಲೀಸರು ಮಳೆಯಿಂದ ಹಾನಿಗೊಳಗಾಗಿದ್ದ 50 ಸ್ಥಳಗಳಲ್ಲಿ ತುರ್ತಾಗಿ ಕೈಗೊಳ್ಳಬೇಕಾದ ಸಿವಿಲ್ ಕಾಮಗಾರಿ ಹಾಗೂ 54 ರಸ್ತೆಗಳನ್ನು ಸಂಪೂರ್ಣ ಅಭಿವೃದ್ಧಿ ಮಾಡಬೇಕು ಎಂದು ವರದಿ ನೀಡಿದ್ದರು. ಇದನ್ನು ಸಮನ್ವಯ ಸಮಿತಿ ರಾತ್ರಿ ತಪಾಸಣೆ ಮಾಡಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಬಹುತೇಕ ಪೂರ್ಣ

ನಾವು ಗುರುತಿಸಿದ್ದ ತುರ್ತು ಕಾಮಗಾರಿಗಳನ್ನು ಕಡಿಮೆ, ಮಧ್ಯಮ ಹಾಗೂ ದೀರ್ಘ ಅವಧಿಯ ಕಾಮಗಾರಿಗಳೆಂದು ನಿಗದಿಪಡಿಸಲಾಗಿದೆ. ಇದರಲ್ಲಿ ಕಡಿಮೆ ಅವಧಿಯ ಬಹುತೇಕ ಕಾಮಗಾರಿಗಳು ಮುಗಿದಿವೆ. ವರದಿಯಲ್ಲಿ ನೀಡಿರುವ 104 ಸ್ಥಳಗಳಲ್ಲಿ ಕಾಮಗಾರಿಗಳು ಪೂರ್ಣಗೊಂಡರೆ ಸಂಚಾರ ಸಾಕಷ್ಟು ಪ್ರಮಾಣದಲ್ಲಿ ಸುಗಮವಾಗಲಿದೆ.

ರವಿಕಾಂತೇಗೌಡ, ಸಂಚಾರ ಪೊಲೀಸ್ ಜಂಟಿ ಕಮಿಷನರ್

ಆದರೆ, ಒಂದೂವರೆ ತಿಂಗಳಾದರೂ ಈ ಕಾಮಗಾರಿಗಳಲ್ಲಿ ಪೂರ್ಣಗೊಂಡಿರುವುದು 22 ಮಾತ್ರ ಎಂದು ಸಂಚಾರ ಪೊಲೀಸರು ಜುಲೈ 25ರಂದು ನೀಡಿರುವ 'ಕ್ರಮ ತೆಗೆದುಕೊಂಡ ವರದಿಯಲ್ಲಿ' ವಿವರವಾದ ಮಾಹಿತಿ ನೀಡಿದ್ದಾರೆ.

ಬಿಬಿಎಂಪಿ 22 ಕಾಮಗಾರಿಗಳನ್ನು ಮಾತ್ರ ಪೂರ್ಣಗೊಳಿಸಿದೆ. ಬಿಎಂಆರ್‌ಸಿಎಲ್, ಜಲಮಂಡಳಿ ತಲಾ ಒಂದು ಕಾಮಗಾರಿ ಪೂರ್ಣಗೊಳಿಸಿವೆ. ಎಚ್‌ಎಸ್‌ಆರ್ ಬಡಾವಣೆ, ನ್ಯೂ ಬಿಇಎಲ್ ರಸ್ತೆ, ಮಾರತ್ ಹಳ್ಳಿ ಹೊರವರ್ತುಲ ರಸ್ತೆ, ಟಿ.ಸಿ.ಪಾಳ್ಯ ರಸ್ತೆ, ವೈಟ್‌ಫೀಲ್ಡ್ ಮುಖ್ಯರಸ್ತೆ, ಸದಾನಂದ ನಗರ ಮುಖ್ಯರಸ್ತೆ, ಹಳೇ ಏರ್‌ಪೋರ್ಟ್ ರಸ್ತೆ, ಖೋಡೆ ಜಂಕ್ಷನ್, ಹಳೇ ಮೈಸೂರು ರಸ್ತೆ ರೈಲ್ವೆ ಸೇತುವೆ, ಕೆಂಗೇರಿ–ಮೈಸೂರು ಮುಖ್ಯರಸ್ತೆ ಮಸೀದಿ ಬಳಿ, ಮಲ್ಲೇಶ್ವರ ವ್ಯಾಪ್ತಿಯ ವಾಟಾಳ್ ನಾಗರಾಜ್ ರಸ್ತೆ, ಯಶವಂತಪುರದಲ್ಲಿ ತುಮಕೂರು ರಸ್ತೆ– ಸರ್ವಿಸ್ ರಸ್ತೆ, ವಿ.ವಿ ಪುರಂನ ಎನ್.ಆರ್. ರಸ್ತೆ, ಬಸವನಗುಡಿ ಆರ್.ವಿ. ಜಂಕ್ಷನ್, ಯಲಹಂಕ ಎಂ.ಎಸ್. ಪಾಳ್ಯ ಬಸ್ ಡಿಪೊ, ಪುಟ್ಟೇನಹಳ್ಳಿ ಬಸ್ ಡಿಪೊ, ಕೋಗಿಲು ಕ್ರಾಸ್ ಬಳಿ, ಆರ್.ಟಿ.ನಗರದ ಸಂಜಯನಗರ ಯು ತಿರುವು ಮುಂದಿನ ರಸ್ತೆ, ಸಿಬಿಐ ಬಸ್ ನಿಲ್ದಾಣ, ಯುಎಎಸ್ ಅಂಡರ್‌ಪಾಸ್, ಹೆಬ್ಬಾಳ ಮೇಲುರಸ್ತೆ, ವೀರಣ್ಣಪಾಳ್ಯ–ನಾಗವಾರ ರಸ್ತೆಗಳಲ್ಲಿ ತಾತ್ಕಾಲಿಕ ಅಥವಾ ಭಾಗಶಃ ಮಾತ್ರ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ.

ವಿ.ವಿ ಪುರಂನ ಸಜ್ಜನ್‌ರಾವ್ ವೃತ್ತದಿಂದ ಮಿನರ್ವ ಜಂಕ್ಷನ್‌ನಲ್ಲಿ ಚರಂಡಿ ನಿರ್ಮಾಣ ಕಾರ್ಯ ಕೈಗೊಂಡಿಲ್ಲ. ಮಾಳಗಾಳ ಸರ್ವಿಸ್ ರಸ್ತೆಯನ್ನು ದುರಸ್ತಿ ಪಡಿಸಲಾಗಿದ್ದರೂ ಅದನ್ನು ಸರಿಯಾಗಿ ಮಾಡಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ. ಪೀಣ್ಯ ವ್ಯಾಪ್ತಿಯ ನೆಲಗೆದರನಹಳ್ಳಿ ರಸ್ತೆಯಲ್ಲಿ ರಾಜಕಾಲುವೆ ದೀರ್ಘಾವಧಿಯಿಂದ ಸಂಪೂರ್ಣ ಒತ್ತುವರಿಯಾಗಿದ್ದು, ಬಿಬಿಎಂಪಿ ಇನ್ನೂ ಯಾವುದೇ ಕ್ರಮಕೈಗೊಂಡಿಲ್ಲ.

ಶಿವಾಜಿನಗರ ಮೀನಾಕ್ಷಿ ಕೊಯಿಲ್ ಸ್ಟ್ರೀಟ್ ರಸ್ತೆಯ ದೀರ್ಘ ಅವಧಿಯಿಂದ ಹಾಳಾಗಿದ್ದು, ಅದನ್ನು ಬಿಎಂಆರ್‌ಸಿಎಲ್ ಇನ್ನೂ ದುರಸ್ತಿಪಡಿಸಿಲ್ಲ.

54 ರಸ್ತೆಗಳು ಬಹುತೇಕ ಹಾಳಾಗಿದ್ದು, ಇದರಿಂದ ವಾಹನ ದಟ್ಟಣೆ ಉಂಟಾಗುತ್ತಿದೆ ಎಂದು ವರದಿ ನೀಡಲಾಗಿತ್ತು. ಬಿಬಿಎಂಪಿಯ ರಸ್ತೆ ಮೂಲಸೌಕರ್ಯ ವಿಭಾಗದಿಂದ ಈ ಕಾಮಗಾರಿಗಳು ನಡೆಯಬೇಕಿದ್ದವು. ಆದರೆ, ಒಂದೂವರೆ ತಿಂಗಳಲ್ಲಿ ಈ 54 ರಸ್ತೆಗಳಲ್ಲಿ ಕೇವಲ 8 ರಸ್ತೆಗಳಲ್ಲಿ ದುರಸ್ತಿ ಕಾರ್ಯ ನಡೆದಿದೆ.

ಸುದ್ದಿ 2 ನಿಮಿಷ

ವೃಷಭಾವತಿ ಒತ್ತುವರಿ ತೆರವಿಗೆ ಗಡುವು ನೀಡಿದ ಹೈಕೋರ್ಟ್

ಬೆಂಗಳೂರು: 'ವೃಷಭಾವತಿ ಮತ್ತು ಅದರ ಉಪನದಿ ವ್ಯಾಪ್ತಿಯಲ್ಲಿನ ಒತ್ತುವರಿಯನ್ನು ಸೆಪ್ಟೆಂಬರ್ 30ರೊಳಗೆ ತೆರವುಗೊಳಿಸಬೇಕು' ಎಂದು ಹೈಕೋರ್ಟ್ ಬಿಬಿಎಂಪಿಗೆ ಗಡುವು ವಿಧಿಸಿದೆ.

ವಕೀಲೆ ಗೀತಾ ಮಿಶ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಗುರುವಾರ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯ ಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಕೀಲರು, ವೃಷಭಾವತಿ ನದಿ ಜಲಾಯನ, ಉಪ ನದಿಗಳು ಮತ್ತು ನದಿಗಳನ್ನು ಸಂಪರ್ಕಿಸುವ ಕೆರೆ ಪ್ರದೇಶದ ಸರ್ವೆ ಕುರಿತಾದ ಆರು ಸಂಪುಟಗಳ ಸಮಗ್ರ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಖಾಸಗಿ ವ್ಯಕ್ತಿಗಳು ಮತ್ತು ಸರ್ಕಾರಿ ಪ್ರಾಧಿಕಾರಗಳಿಂದ ಒತ್ತುವರಿಯಾಗಿರುವ ವಿವರಗಳನ್ನು ಒಳಗೊಂಡ ಈ ವರದಿಯಲ್ಲಿ, ವೃಷಭಾವತಿ ನದಿ ಜಲಾನಯನ, ಕಣಿವೆ, ಉಪ ನದಿಗಳು ಮತ್ತು ಅವುಗಳನ್ನು ಸಂಪರ್ಕಿಸುವ ಕೆರೆಯ ಪ್ರದೇಶ ಹಾಗೂ ಅವುಗಳ ಬಫರ್ ಝೋನ್ ಸರ್ವೆ ನಡೆಸಲಾಗಿದೆ.

ವರದಿಯನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಸೆಪ್ಟೆಂಬರ್ 30ರೊಳಗೆ ಒತ್ತುವರಿ ತೆರವುಗೊಳಿಸಬೇಕು. ಈ ಆದೇಶದ ಅನುಪಾಲನಾ ವರದಿಯನ್ನು ಅಕ್ಟೋಬರ್ 11ಕ್ಕೆ ಸಲ್ಲಿಸಬೇಕು' ಎಂದು ಬಿಬಿಎಂಪಿಗೆ ನಿರ್ದೇಶಿಸಿ ವಿಚಾರಣೆಯನ್ನು ಅ.19ಕ್ಕೆ ಮುಂದೂಡಿತು.

4 ಸಾವಿರ ಕೆ.ಜಿ. ಪ್ಲಾಸ್ಟಿಕ್ ಜಪ್ತಿ

ಬೆಂಗಳೂರು: ದಾಸರಹಳ್ಳಿ ವಲಯ ಶೆಟ್ಟಿಹಳ್ಳಿ ವಾರ್ಡ್‌ನಲ್ಲಿ ಸುಭದ್ರ ಕಾರ್ಖಾನೆ ಮೇಲೆ ದಾಳಿ ನಡೆಸಿರುವ ಬಿಬಿಎಂಪಿ ಅಧಿಕಾರಿಗಳು, 4,160 ಕೆ.ಜಿ. ಪ್ಲಾಸ್ಟಿಕ್ ಉತ್ಪನ್ನಗಳನ್ನು ಜಪ್ತಿ ಮಾಡಿದ್ದಾರೆ.

ಏಳು ಆಟೊ ಟಿಪ್ಪರ್‌ಗಳಲ್ಲಿ ವಶಪಡಿಸಿಕೊಂಡ ಪ್ಲಾಸ್ಟಿಕ್ ಅನ್ನು ದಾಸರಹಳ್ಳಿ ವಲಯ ಜಂಟಿ ಆಯುಕ್ತರು ಪರಿಶೀಲಿಸಿದರು. ಚೂರು ಚೂರು ಮಾಡಿ ದೊಡ್ಡಬಿದರಕಲ್ಲು ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ವಿಲೇವಾರಿ ಮಾಡಲು ಸೂಚನೆ ನೀಡಿದರು.

ಘನತ್ಯಾಜ್ಯ ನಿರ್ವಹಣೆ ವಿಭಾಗದ ಅಧೀಕ್ಷಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಕಿರಿಯ/ಘನತ್ಯಾಜ್ಯ ಪರಿವೀಕ್ಷಕರು, ಮಾರ್ಷಲ್ ಸೂಪರ್‌ವೈಸರ್ ದಾಳಿ ಸಂದರ್ಭದಲ್ಲಿ ಭಾಗವಹಿಸಿದ್ದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದು, ಅದನ್ನು ಬಳಕೆ ಮಾಡುತ್ತಿರುವ ಮಾರಾಟ ಮಳಿಗೆಗಳು, ಉತ್ಪಾದಿಸುತ್ತಿರುವ ಘಟಕಗಳ ಮೇಲೆ ಅನಿರೀಕ್ಷಿತ ತಪಾಸಣೆ ನಡೆಸಿ ವಶಪಡಿಸಿಕೊಳ್ಳುವ ಜೊತೆಗೆ ದಂಡ ವಿಧಿಸಲಾಗುತ್ತಿದೆ ಎಂದು ಘನತ್ಯಾಜ್ಯ ವಿಭಾಗದ ಅಧೀಕ್ಷಕ ಎಂಜಿನಿಯರ್ ನಂದೀಶ್ ತಿಳಿಸಿದ್ದಾರೆ.

'ತಂತ್ರಜ್ಞಾನದ ಬೆಳವಣಿಗೆಯನ್ನು ಪತ್ರಕರ್ತರು ಸಕಾರಾತ್ಮಕವಾಗಿ ಬಳಸಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಂತ್ರಜ್ಞಾನದ ಬೆಳವಣಿಗೆಯನ್ನು ಮಾಧ್ಯಮಗಳು ಸಕಾರಾತ್ಮಕವಾಗಿ ಬಳಸಿಕೊಳ್ಳುವ ಅಗತ್ಯವಿದೆ. ಈ ಮೂಲಕ ಪರಿಣಾಮಕಾರಿ ಸಾಮಾಜಿಕ ಬದಲಾವಣೆ ತರಲು ಸಾಧ್ಯ' ಎಂದು ಪತ್ರಕರ್ತ ನಾಗೇಶ ಹೆಗಡೆ ಅಭಿಪ್ರಾಯಪಟ್ಟರು.

ಕರ್ನಾಟಕ ಪತ್ರಕರ್ತರ ಸಹಕಾರ ಸಂಘ, ಬೆಂಗಳೂರು ಪ್ರೆಸ್ ಕ್ಲಬ್ ಮತ್ತು ಕರ್ನಾಟಕ ಪತ್ರಕರ್ತೆಯರ ಸಂಘದ ಸಹಯೋಗದಲ್ಲಿ ಬದುಕು-ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್ ಆಯೋಜಿಸಿದ್ದ 'ಪತ್ರಕರ್ತರಿಗಾಗಿ ಪರ್ಯಾಯ ಜೀವನೋಪಾಯ ಸಾಧ್ಯತೆಗಳು' ಕುರಿತ ಎರಡು ದಿನಗಳ ಕಾರ್ಯಾಗಾರವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.



ನಾಗೇಶ ಹೆಗಡೆ

'ಬುಂದೇಲ್ ಖಂಡದ ಕಬರ್ ಲಹರಿಯಾ ತಂಡ ತಂತ್ರಜ್ಞಾನದ ಬೆಳವಣಿಗೆಯನ್ನು ಸಕಾರಾತ್ಮಕವಾಗಿ ಬಳಸಿಕೊಂಡಿರುವುದಕ್ಕೆ ಉತ್ತಮ ಉದಾಹರಣೆ. ಈಗ ಸುಲಭವಾಗಿ ಡಿಜಿಟಲ್ ಮಾಧ್ಯಮವನ್ನು ರೂಪಿಸಲು ಸಾಧ್ಯವಿರುವುದರಿಂದ ಇದುವರೆಗೂ ಮಾಧ್ಯಮದಲ್ಲಿ ಬರದೇ ಇರುವ ವಿಷಯಗಳನ್ನು ಜನರಿಗೆ ತಲುಪಿಸುವ ಸಾಧ್ಯತೆ ಇಂದು ಹಿಂದೆದಿಗಿಂತ ಹೆಚ್ಚಾಗಿದೆ' ಎಂದರು.

'ಪತ್ರಕರ್ತರು ಕೇವಲ ಜಾಹಿರಾತು ಏಜೆನ್ಸಿಯಾಗಿ ಕೆಲಸ ಮಾಡುವ ಒತ್ತಡಕ್ಕೆ ಒಳಗಾಗದೆ ಸ್ವತಂತ್ರ ಆಲೋಚನೆಯಿಂದ ಕೆಲಸ ಮಾಡಬೇಕು. ಆದರೆ, ಭಾರತದಲ್ಲಿ ಮಾಧ್ಯಮ ಜಗತ್ತು ನಿರ್ಭೀತಿಯಿಂದ ಕಾರ್ಯನಿರ್ವಹಿಸುವ ವಾತಾವರಣ ಕಡಿಮೆಯಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ನಾವು ಕ್ರಿಯಾಶೀಲವಾಗಿ, ಸೃಜನಶೀಲವಾಗಿ ಅಲೋಚಿಸಿದಾಗ ನಮ್ಮ ಮುಂದೆ ಇರುವ ಸವಾಲುಗಳನ್ನು ಎದುರಿಸಲು ಸಾಧ್ಯವಿದೆ. ಸಂವೇದನಾಶೀಲ ಪತ್ರಕರ್ತರಾಗಲು ಕೇವಲ ಶೈಕ್ಷಣಿಕ ಹಿನ್ನೆಲೆ ಇದ್ದರೆ ಮಾತ್ರ ಸಾಲದು, ನಮ್ಮ ಬುದ್ಧಿ ಹಾಗೂ ಮನಸ್ಸು ಸದಾ ಜಾಗೃತವಾಗಿ ನಮ್ಮ ನಡುವಿನ ಬದಲಾವಣೆಗಳನ್ನು ಗಮನಿಸುತ್ತಿರಬೇಕು' ಎಂದರು.

ಮಂಗಗಳ ಉಪಟಳ: ಪ್ರಮಾಣಪತ್ರ ಸಲ್ಲಿಕೆಗೆ ಹೈಕೋರ್ಟ್ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಮಂಗಗಳ ಹಾವಳಿ ಬಗ್ಗೆ ದೂರು ನೀಡಲು ಸ್ಥಾಪಿಸಲಾಗಿರುವ ಹೆಲ್ಪ್‌ಲೈನ್ ಹಾಗೂ ದೂರವಾಣಿ ಸಂಖ್ಯೆಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಬೇಕು ಎಂದು ಆದೇಶಿಸಿದ್ದರೂ ಸರ್ಕಾರ ಈ ಬಗ್ಗೆ ಯಾವುದೇ ಗಮನ ಹರಿಸಿಲ್ಲ' ಎಂದು ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಈ ಸಂಬಂಧ ವಕೀಲ ರಾಧಾ ನಂದನ್ ಸಲ್ಲಿಸಿರುವ ಪಿಐಎಲ್‌ಅನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಧಾನಂದನ್, 2021ರ ಆಗಸ್ಟ್ 8ರಂದು ಹೈಕೋರ್ಟ್ ಹೊರಡಿಸಿರುವ ಆದೇಶದ ಬಗ್ಗೆ ಗಮನ ಸೆಳೆದು, 'ಕೋತಿಗಳನ್ನು ಸೆರೆ ಹಿಡಿಯುವ ಅನಧಿಕೃತ ಗುಂಪುಗಳು ಹುಟ್ಟಿಕೊಂಡಿದೆ. ಆದ್ದರಿಂದ ಅಗತ್ಯ ನಿರ್ದೇಶನಗಳನ್ನು ನೀಡಬೇಕು' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನಗರದಲ್ಲಿ ಮಂಗಗಳ ಉಪಟಳ ತಪ್ಪಿಸಲು ಕಾರ್ಯಯೋಜನೆ ರೂಪಿಸುವ ದಿಸೆಯಲ್ಲಿ, 2021ರ ಆಗಸ್ಟ್ 4ರಂದು ಹೊರಡಿಸಿರುವ ಆದೇಶವನ್ನು ಪಾಲಿಸಿರುವ ಬಗ್ಗೆ ಒಂದು ವಾರದಲ್ಲಿ ಪ್ರಮಾಣ ಪತ್ರ ಸಲ್ಲಿಸಿ' ಎಂದು ಬಿಬಿಎಂಪಿ ಮತ್ತು ಅರಣ್ಯ ಇಲಾಖೆಗೆ ತಾಕೀತು ಮಾಡಿ ವಿಚಾರಣೆಯನ್ನು ಆಗಸ್ಟ್ 10ಕ್ಕೆ ಮುಂದೂಡಿತು.

ಬಾನೆಟ್ ಮಂಕಿ

'ಬೆಂಗಳೂರು ಸುತ್ತಮುತ್ತ ಹೆಚ್ಚಾಗಿ ಕಾಣಿಸಿಕೊಳ್ಳುವ ಅಪರೂಪದ ಬಾನೆಟ್ ಮಂಕಿ (ಉದ್ದ ಬಾಲದ ಕೋತಿ) ತಳಿಯನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ--1972ರ ಅಡಿಯಲ್ಲಿ ಸಂರಕ್ಷಿತ ತಳಿ ಎಂದು ಘೋಷಿಸಲಾಗಿದೆ. ಹಾಗಾಗಿ, ಇವುಗಳ ಉಪಟಳ ತಡೆಯುವುದು ಎಷ್ಟು ಮುಖ್ಯವೋ, ಅವುಗಳ ರಕ್ಷಣೆ ಪುನರ್ವಸತಿ ಕೂಡ ಅಷ್ಟೇ ಮುಖ್ಯವಾಗಿದೆ' ಎಂಬುದು ಅರ್ಜಿದಾರರ ವಾದ.

ಸಾಂಸ್ಕೃತಿಕ ಕೇಂದ್ರಕ್ಕೆ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರಣ್ಯಪುರ ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷರಾಗಿ ಆರ್.ಅಶ್ವತ್ಥ್ ಹಾಗೂ ಕಾರ್ಯದರ್ಶಿ ಆಗಿ ವಿ.ಜಿ.ಜಗದೀಶ್ ಆಯ್ಕೆಗೊಂಡಿದ್ದಾರೆ.

ಉಪಾಧ್ಯಕ್ಷರಾಗಿ ನಾಗರಾಜ್, ಜಂಟಿ ಕಾರ್ಯದರ್ಶಿಯಾಗಿ ಕುಮಾರಸ್ವಾಮಿ, ಖಜಾಂಚಿಯಾಗಿ ಚಿನ್ನ ಶ್ರೀನಿವಾಸ ಮೂರ್ತಿ ನೇಮಕವಾಗಿದ್ದಾರೆ.



ಅಶ್ವತ್ಥ್

ಜಗದೀಶ್

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ನೂತನವಾಗಿ ನಿರ್ಮಿಸಲಾದ ನೆಲಮಟ್ಟದ ಜಲಸಂಗ್ರಹಗಾರದ ಉದ್ಘಾಟನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ನೆರವೇರಿಸುತ್ತಿರುವುದು.

ಸಾಧನೆಯ ಹೆಜ್ಜೆಗಳು

ಕಾವೇರಿ ನೀರು ಸರಬರಾಜು ಯೋಜನೆ 5ನೇ ಹಂತ :

- ಕಾವೇರಿ ನೀರು ಸರಬರಾಜು 5 ನೇ ಹಂತದ ಯೋಜನೆಗೆ ಜೈಕಾ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ರೂ. 5550 ಕೋಟಿಗಳ ವೆಚ್ಚಕ್ಕೆ ಘನ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.
- ಬಿ.ಬಿ.ಎಂ.ಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡ 110 ಹಳ್ಳಿಗಳ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಬೆಂಗಳೂರು ನಗರಕ್ಕೆ ಹೆಚ್ಚುವರಿಯಾಗಿ ಪ್ರತಿದಿನ 775 ದಶಲಕ್ಷ ಲೀಟರ್ ನೀರು ದೊರೆಯುತ್ತದೆ. ಮೊದಲನೇ ಹಂತದಲ್ಲಿ 500 ದಶಲಕ್ಷ ಲೀಟರ್ ಮತ್ತು ಎರಡನೇ ಹಂತದಲ್ಲಿ 275 ದಶಲಕ್ಷ ಲೀಟರ್ ನೀರು ಪೂರೈಸಲಾಗುವುದು.
- 810 ದಶಲಕ್ಷ ಲೀಟರ್ ಸಾಮರ್ಥ್ಯದ ಕಚ್ಚಾ ನೀರು ಶುದ್ಧೀಕರಣ ಘಟಕ, ಬೃಹತ್ ಕೊಳವೆ ಮಾರ್ಗಗಳು ಮತ್ತು ಜಲಸಂಗ್ರಹಾಗಾರಗಳು ನಿರ್ಮಾಣ ಹಂತದಲ್ಲಿರುತ್ತವೆ.

110 ಹಳ್ಳಿಗಳಿಗೆ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆ :

ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾದ 110 ಹಳ್ಳಿಗಳಿಗೆ ರೂ. 1500 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ ಮತ್ತು ಲೆಕ್ಕಕ್ಕೆ ಸಿಗದ ನೀರಿನ ನಿಯಂತ್ರಣ ಯೋಜನೆಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿದೆ ಮತ್ತು ಅಂದಾಜು ರೂ. 1000 ಕೋಟಿ ವೆಚ್ಚದ ಒಳಚರಂಡಿ ಕಲ್ಪಿಸುವ ಯೋಜನೆಯ ಶೇಕಡ 90ರಷ್ಟು ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಜೈಕಾ ಸಂಸ್ಥೆಯ ಹಣಕಾಸಿನ ನೆರವಿನೊಂದಿಗೆ ರೂ.1014.00 ಕೋಟಿ ವೆಚ್ಚದಲ್ಲಿ ಮೂರು ಪ್ಯಾಕೇಜ್‌ಗಳಾಗಿ ವಿಂಗಡಿಸಿ, ಆರ್.ಆರ್.ನಗರ ಮತ್ತು ದಾಸರಹಳ್ಳಿ ವಲಯ, ಮಹದೇವಪುರ ಮತ್ತು ಬೊಮ್ಮನಹಳ್ಳಿ ವಲಯದ ಹಾಗೂ ಬ್ಯಾಟರಾಯನಪುರ ವಲಯದ 110 ಹಳ್ಳಿಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಒಟ್ಟು 240 ಕಿ.ಮೀ.ಗಳಷ್ಟು ಉಪ ಮುಖ್ಯ ಒಳಚರಂಡಿ ಕೊಳವೆ ಮತ್ತು ಟ್ರಂಕ್ ಸೀವರ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. 14 ತ್ಯಾಜ್ಯ ನೀರು ಸಂಸ್ಕರಣಾ ಘಟಕ **(STP)** ಮತ್ತು 8 ಮಧ್ಯಂತರ ಒಳಚರಂಡಿ ನೀರಿನ ಜಲಾಗಾರ **(ISPS)** ಗಳನ್ನು ಸ್ಥಾಪಿಸುವ ಕಾಮಗಾರಿಯನ್ನು ಜುಲೈ 2021ರಲ್ಲಿ ಕೈಗೆತ್ತಿಕೊಂಡಿದ್ದು, ಸದರಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಮೆಗಾಸಿಟಿ ರಿವಾಲ್ವಿಂಗ್ ಯೋಜನೆ :

- ವೃಷಭಾವತಿ ಕಣಿವೆಯ ಬಳಿ ದಿನಂಪ್ರತಿ 150 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು 470.93 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಘಟಕದ ನಿರ್ಮಾಣವನ್ನು ತ್ಯಾಜ್ಯ ನೀರು ಶುದ್ಧೀಕರಣದ ಭಾಗವನ್ನು ಏಪ್ರಿಲ್ 2022ರಲ್ಲಿ ಪೂರ್ಣಗೊಳಿಸಿ ಕಾರ್ಯಚಾಲನೆ ಮಾಡಲಾಗಿದೆ. ಈ ಘಟಕದ ಸ್ಲಡ್ಜ್ ಸಂಸ್ಕರಣಾ ಭಾಗದ ಕಾಮಗಾರಿಗಳು ಪ್ರಗತಿಯಲ್ಲಿದ್ದು 2022 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.
- ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯ ಬಳಿ ದಿನಂಪ್ರತಿ 150 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕದ ನಿರ್ಮಾಣವನ್ನು 297.37 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಘಟಕದ ತ್ಯಾಜ್ಯ ನೀರು ಶುದ್ಧೀಕರಣದ ಭಾಗವನ್ನು ಮಾರ್ಚ್ 2021 ರಲ್ಲಿ ಪೂರ್ಣಗೊಳಿಸಿ ಕಾರ್ಯಚಾಲನೆ ಮಾಡಲಾಗಿದೆ. ಈ ಘಟಕದ ಸ್ಲಡ್ಜ್ ಸಂಸ್ಕರಣಾ ಭಾಗದ ಕಾಮಗಾರಿಗಳು ಪ್ರಗತಿಯಲ್ಲಿದ್ದು 2022 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.
- ಹೆಬ್ಬಾಳ ಬಳಿ ದಿನಂಪ್ರತಿ 100 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕದ ನಿರ್ಮಾಣವನ್ನು 360.77 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಘಟಕವನ್ನು ಆಗಸ್ಟ್ 2021 ರಲ್ಲಿ ಪೂರ್ಣಗೊಳಿಸಿ ಕಾರ್ಯಚಾಲನೆ ಮಾಡಲಾಗಿದೆ.
- ಕರ್ನಾಟಕ ಸರ್ಕಾರದ ಅನುದಾನದಡಿಯಲ್ಲಿ ಹೆಸರಘಟ್ಟದಲ್ಲಿ 3 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕದ ಕಾಮಗಾರಿಯನ್ನು ಕೈಗೊಂಡಿದ್ದು, 2022ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ತಿಪ್ಪಗೊಂಡನಹಳ್ಳಿ ಜಲಾಶಯದ ಪುನಃಶ್ಚೇತನ ಮೊದಲನೇ ಹಂತ :

ಎತ್ತಿನಹೊಳೆ ನೀರನ್ನು ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹರಿಸಿ ಬೆಂಗಳೂರಿಗೆ ಪೂರೈಸಲು ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಹಾಗೂ ಶುದ್ಧ ನೀರು ಶುದ್ಧೀಕರಣ ಘಟಕಗಳ ಪುನಃಶ್ಚೇತನ ಕಾಮಗಾರಿಗಳು ಪ್ರಸ್ತುತ ಪ್ರಗತಿಯಲ್ಲಿದೆ.

ಜನಸ್ನೇಹಿ ಕಾರ್ಯಕ್ರಮಗಳು :

- **ನೀರು ಮತ್ತು ಒಳಚರಂಡಿಯ ಹೊಸ ಸಂಪರ್ಕ ಸೇವೆ :** ಗ್ರಾಹಕರ ಬೇಡಿಕೆ ಪತ್ರವನ್ನು ಸಕಾಲ ಕಾಲಮಿತಿಯಲ್ಲಿ ನೀಡುವುದು ಹಾಗೂ ಹಣ ಪಾವತಿ, ಮಂಜೂರಾತಿಯನ್ನು ಆನ್‌ಲೈನ್ ಮುಖಾಂತರ ವ್ಯವಸ್ಥೆ.
- **ಕೇಂದ್ರೀಕೃತ ಬಿಲ್ಲಿಂಗ್ ಮತ್ತು ವಸೂಲಿ ವ್ಯವಸ್ಥೆ :** ಗ್ರಾಹಕರಿಗೆ ಬಿಲ್ ಪಾವತಿಸಲು ಹಾಗೂ ಆರು ತಿಂಗಳ ನೀರಿನ ಬಳಕೆ ಪ್ರಮಾಣ ಮತ್ತು ಬೇಡಿಕೆ ಪತ್ರದ ವಿವರಗಳನ್ನು ಪಡೆಯಲು ಆನ್‌ಲೈನ್ ಮುಖಾಂತರ ವ್ಯವಸ್ಥೆ.
- **ಅಧ್ಯಕ್ಷರೊಂದಿಗೆ ನೇರ ಫೋನ್ ಇನ್ ಕಾರ್ಯಕ್ರಮ :** ಸಾರ್ವಜನಿಕ ಕುಂದು ಕೊರತೆಗಳ ಪರಿಹಾರಕ್ಕಾಗಿ ಪ್ರತಿ ತಿಂಗಳ ಮೊದಲನೇ ಹಾಗೂ ಐದನೇ ಶನಿವಾರ ಬೆಳಿಗ್ಗೆ 9.00 ರಿಂದ 10.30 ರವರೆಗೆ
- **ಉಚಿತ ಕಾವೇರಿ ಕುಡಿಯುವ ನೀರು :** ನಗರದಲ್ಲಿನ ಕೊಳಚೆ ಪ್ರದೇಶ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಯ ಅಂದಾಜು 1.03 ಲಕ್ಷ ಕುಟುಂಬಗಳಿಗೆ ಪ್ರತೀ ತಿಂಗಳು 10,000 ಲೀಟರ್ ಉಚಿತ ನೀರು ಸರಬರಾಜು.
- **ಬಿಲ್ ಪಾವತಿಗಾಗಿ :** 74 ಕಿಯೋಸ್ಕ್ ಯಂತ್ರಗಳ ಬಳಕೆ ಮೂಲಕ, ಬೆಂಗಳೂರು ಒನ್, ಇ.ಸಿ.ಎಸ್, ಬಿ.ಬಿ.ಪಿ.ಎಸ್., ಕರ್ನಾಟಕ ಮೊಬೈಲ್ ಆ್ಯಪ್ ಮತ್ತು PayTM ಮುಖಾಂತರ ಪಾವತಿಸಲು ಅವಕಾಶ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.
24x7 ಸಹಾಯವಾಣಿ 1916
8762228888, Email : chairman@bwssb.gov.in
Website: https://bwssb.karnataka.gov.in

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ನೀರು ಪುನರ್‌ಬಳಸಿ ಬೆಂಗಳೂರು ಉಳಿಸಿ

ನೇಕಾರ, ಚಾಲಕರ ಮಕ್ಕಳಿಗೂ 'ನಿಧಿ'

ವರ್ಷ ಪೂರೈಸಿದ ಬಸವರಾಜ ಬೊಮ್ಮಾಯಿ ಸರ್ಕಾರ: ಜನ ಕಲ್ಯಾಣ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಮಕ್ಕಳಿಗೆ ನೀಡುತ್ತಿರುವ 'ವಿದ್ಯಾನಿಧಿ' ವಿದ್ಯಾರ್ಥಿ ವೇತನ ಯೋಜನೆಯನ್ನು ನೇಕಾರರು, ಮೀನುಗಾರರು, ಟ್ಯಾಕ್ಸಿ ಚಾಲಕರ ಮಕ್ಕಳಿಗೂ ರಾಜ್ಯ ಸರ್ಕಾರ ವಿಸ್ತರಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸೌಧದಲ್ಲಿ ಗುರುವಾರ ಈ ವಿಷಯ ಪ್ರಕಟಿಸಿದರು. ತಮ್ಮ ಸರ್ಕಾರಕ್ಕೆ ಒಂದು ವರ್ಷ ತುಂಬಿದ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿಯ ಮೂಲಕ ಈ ಅವಧಿಯಲ್ಲಿ ಜಾರಿ ತಂದ ಯೋಜನೆಗಳು ಮತ್ತು ಹೊಸ ಯೋಜನೆಗಳ ಮಾಹಿತಿ ನೀಡಿದರು.

ಪಕ್ಷದ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಯ ಹಿನ್ನೆಲೆಯಲ್ಲಿ ಸರ್ಕಾರದ ಅಧಿಕೃತ ಕಾರ್ಯಕ್ರಮ ಮತ್ತು ದೊಡ್ಡಬಳ್ಳಾಪುರದಲ್ಲಿ ನಡೆಸಲು ಉದ್ದೇಶಿಸಿದ್ದ ಜನೋತ್ಸವವನ್ನು ರದ್ದುಪಡಿಸಲಾಗಿತ್ತು.

'ವಿದ್ಯಾನಿಧಿ ಯೋಜನೆಯಡಿ ನೇಕಾರರ ಸಮುದಾಯದ 12 ಸಾವಿರ ಮಕ್ಕಳು, ಟ್ಯಾಕ್ಸಿ ಚಾಲನೆ ಮಾಡುವ 50 ಸಾವಿರ ಚಾಲಕರ ಮಕ್ಕಳಿಗೆ ಹಾಗೂ ಮೀನುಗಾರರ ಮಕ್ಕಳಿಗೂ ಯೋಜನೆಯನ್ನು ವಿಸ್ತರಿಸಲಾಗಿದೆ. ₹2 ಸಾವಿರದಿಂದ ₹11ಸಾವಿರದ- ವರೆಗೆ ವಿದ್ಯಾರ್ಥಿವೇತನ ಸಿಗಲಿದೆ. ಇದಕ್ಕಾಗಿ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಈ ಎಲ್ಲ ಯೋಜನೆಗಳಿಗೆ ಇಂದೇ ಚಾಲನೆ ನೀಡಿದ್ದೇವೆ' ಎಂದು ಬೊಮ್ಮಾಯಿ ತಿಳಿಸಿದರು.

ಇತರ ಹೊಸ ಯೋಜನೆಗಳು

- ಎಸ್‌ಸಿ/ಎಸ್‌ಟಿ ಸಮುದಾಯದ ಬಡ ಕುಟುಂಬಗಳಿಗೆ 75 ಯೂನಿಟ್‌ವರೆಗೆ ಉಚಿತ ವಿದ್ಯುತ್. ಈ ಯೋಜನೆಯಡಿ ಫಲಾನುಭವಿಗಳಿಗೆಗೆ ಡಿಬಿಟಿ (ಖಾತೆಗೆ ನೇರ ವರ್ಗಾವಣೆ) ಮೂಲಕ ಹಣ ವರ್ಗಾವಣೆ ಆರಂಭವಾಗಿದೆ. ಇದರಿಂದ 25 ಲಕ್ಷ ಕುಟುಂಬಗಳಿಗೆ ಅನುಕೂಲವಾಗಲಿದೆ.
- 'ಬಾಬು ಜಗಜೀವನ್‌ರಾಂ ಸ್ವಯಂ ಉದ್ಯೋಗ' ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ತಲಾ 100 ಯುವಕರಿಗೆ ಸ್ವಯಂ ಉದ್ಯೋಗ ನೀಡುವ ಯೋಜನೆಗೆ ಚಾಲನೆ.
- 'ವಿವೇಕ' ಯೋಜನೆಯಡಿ ಮೊದಲ ಬಾರಿಗೆ 8,000 ಶಾಲೆ ಕೊಠಡಿಗಳ ನಿರ್ಮಾಣಕ್ಕೆ ಚಾಲನೆ.
- ಸಮುದಾಯ ಆರೋಗ್ಯ ಕೇಂದ್ರಗಳ ಉನ್ನತೀಕರಣ. ರಾಜ್ಯದ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು (ಪಿಎಚ್‌ಸಿ) ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ (ಸಿಎಚ್‌ಸಿ) ಉನ್ನತೀಕರಣಗೊಳಿಸುವ ಯೋಜನೆಗೆ ಚಾಲನೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸುಮಾರು 71 ಪಿಎಚ್‌ಸಿಗಳನ್ನು ರಾಜ್ಯದ ಸರಾಸರಿಗಿಂತ ಕಡಿಮೆ ಸೂಚ್ಯಂಕ ಇರುವ ಪ್ರದೇಶಗಳಲ್ಲಿ ಸ್ಥಾಪಿಸಲಾಗುವುದು.

ಹಾಸನ–ಮಾರೇನಹಳ್ಳಿ ಚತುಷ್ಪಥ ಮಾರ್ಚ್‌ಗೆ

ನವದೆಹಲಿ: ಹಾಸನ- ಮಾರನಹಳ್ಳಿ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್ 75) ಚತುಷ್ಪಥ ಕಾಮಗಾರಿ 2023ರ ಮಾರ್ಚ್ 17ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದರು. ಸಂಸದ ಪ್ರಜ್ವಲ್ ರೇವಣ್ಣ ಅವರ ಪ್ರಶ್ನೆಗೆ ಸಚಿವರು ಈ ಮಾಹಿತಿ ನೀಡಿದರು.

ಅಮೀನ್ ಮಟ್ಟುಗೆ ಹರ್ಮನ್ ಮೊಗ್ಲಿಂಗ್ ಪ್ರಶಸ್ತಿ

ದಿನೇಶ್ ಅಮೀನ್ ಮಟ್ಟು

ಸಿದ್ದಾಪುರ: ಕರ್ನಾಟಕ ಜರ್ನಲಿಸ್ಟ್ ಯೂನಿಯನ್‌ನ ಉತ್ತರ ಕನ್ನಡ ಜಿಲ್ಲಾ ಘಟಕ ನೀಡುವ 'ಹರ್ಮನ್ ಮೊಗ್ಲಿಂಗ್-2022' ರಾಜ್ಯಮಟ್ಟದ ಪ್ರಶಸ್ತಿಗೆ ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಅವರು ಆಯ್ಕೆಯಾಗಿದ್ದಾರೆ.

ಪಟ್ಟಣದ ಬಾಲಭವನದಲ್ಲಿ ಜುಲೈ 30ರಂದು ಮಧ್ಯಾಹ್ನ 3 ಗಂಟೆಗೆ ಯೂನಿಯನ್ ವತಿಯಿಂದ ನಡೆಯುವ ಮಾಧ್ಯಮ ದಿನಾಚರಣೆ, ಸನ್ಮಾನ ಮತ್ತು ಅಭಿನಂದನಾ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಶಿರಸಿ ಉಪವಿಭಾಗದ ಸಹಾಯಕ ಆಯುಕ್ತ ದೇವರಾಜ್ ಆರ್. ಕಾರ್ಯಕ್ರಮ ಉದ್ಘಾಟಿಸಲಿದ್ದು, ಯೂನಿಯನ್‌ನ ರಾಜ್ಯ ಘಟಕದ ಅಧ್ಯಕ್ಷ ಬಿ.ನಾರಾಯಣ ಅಧ್ಯಕ್ಷತೆ ವಹಿಸಲಿದ್ದಾರೆ. 'ಅಮಿನ್ ಮಟ್ಟು ಅವರು 39 ವರ್ಷಗಳಿಂದ ಮುದ್ರಣ ಮಾಧ್ಯಮ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಪರಿಗಣಿಸಿ ಹರ್ಮನ್ ಮೊಗ್ಲಿಂಗ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ' ಎಂದು ಯೂನಿಯನ್ ಗೌರವಾಧ್ಯಕ್ಷ ಕನ್ನೇಶ ಕೋಲಶಿರ್ಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾವೇರಿ, ಯಾದಗಿರಿ ವೈದ್ಯ ಕಾಲೇಜಿಗೆ ಪ್ರವೇಶ

ಬೆಂಗಳೂರು: ಹಾವೇರಿ ಮತ್ತು ಯಾದಗಿರಿಯಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ 2022-23ನೇ ಶೈಕ್ಷಣಿಕ ಸಾಲಿನಿಂದ ತಲಾ 150 ಎಂಬಿಬಿಎಸ್ ಸೀಟುಗಳೊಂದಿಗೆ ಪ್ರವೇಶಾತಿ ಆರಂಭಿಸಲು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಅನುಮತಿ ನೀಡಿದೆ.

ಪ್ರಯೋಗಾಲಯ, ಗ್ರಂಥಾಲಯ, ವಿದ್ಯಾರ್ಥಿನಿಲಯ, ಆಸ್ಪತ್ರೆ ಮತ್ತು ಪ್ರಾಧ್ಯಾಪಕರ ಲಭ್ಯತೆ ಇತ್ಯಾದಿ ವಿವರಗಳ ಬಗ್ಗೆ ತಜ್ಞರ ವರದಿ ಆಧರಿಸಿ ಆಯೋಗದ ಪರಿಶೀಲನಾ ತಂಡ ಅನುಮೋದನೆ ನೀಡಿದೆ.

ಪುಣ್ಯಕೋಟಿ ಯೋಜನೆ: 100 ಗೋವುಗಳ ದತ್ತು

ಬೆಂಗಳೂರು: ಸರ್ಕಾರಿ, ಖಾಸಗಿ ಗೋಶಾಲೆಗಳಲ್ಲಿ 100 ಗೋವುಗಳನ್ನು ಸಾರ್ವಜನಿಕರು ದತ್ತು ಪಡೆದಿದ್ದಾರೆ. ಗೋಶಾಲೆಗಳಿಗೆ 1,314 ಜನ ದೇಣಿಗೆ ನೀಡಿದ್ದಾರೆ ಎಂದು ಪಶುಸಂಗೋಪನಾ ಸಚಿವ ಪ್ರಭು ಬಿ.ಚವ್ಹಾಣ್ ಹೇಳಿದರು.

ಪುಣ್ಯಕೋಟಿ ದತ್ತು ಯೋಜನೆ ಪೋರ್ಟಲ್‌ಗೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಪ್ರತಿ ಜಿಲ್ಲೆಯ ಗೋಶಾಲೆಯಿಂದ ಒಂದರಂತೆ ನಾನೂ ಸಹ 31 ಗೋವುಗಳನ್ನು ದತ್ತು ಪಡೆದಿದ್ದೇನೆ' ಎಂದು ತಿಳಿಸಿದರು.

ಪುಣ್ಯಕೋಟಿ ದತ್ತು ಯೋಜನೆ ಪೋರ್ಟಲಿನಲ್ಲಿ 123 ಗೋಶಾಲೆಗಳು ನೋಂದಣಿಯಾಗಿವೆ. 60 ಗೋಶಾಲೆಗಳ ನೋಂದಣಿ ಪ್ರಗತಿಯಲ್ಲಿದೆ. 16,650 ಜಾನುವಾರುಗಳನ್ನು ನೋಂದಾಯಿಸಲಾಗಿದೆ ಎಂದು ವಿವರ ನೀಡಿದರು.

ಮಿಗ್–21 ಅಪಘಾತ: ಇಬ್ಬರು ಪೈಲಟ್‌ಗಳ ಸಾವು

ನವದೆಹಲಿ (ಪಿಟಿಐ): ಮಿಗ್-21 ತರಬೇತಿ ವಿಮಾನವು ಶುಕ್ರವಾರ ರಾತ್ರಿ ರಾಜಸ್ಥಾನದ ಬರ್ಮರ್ ಬಳಿ ಅಪಘಾತಕ್ಕೆ ಒಳಗಾಗಿದ್ದು, ಭಾರತೀಯ ವಾಯುಪಡೆಯ ಇಬ್ಬರು ಪೈಲಟ್‌ಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ರಾಜಸ್ಥಾನದ ಉತರಲೈ ವಾಯುನೆಲೆಯಿಂದ ಹಾರಾಟ ಆರಂಭಿಸಿದ್ದ ವಿಮಾನ ರಾತ್ರಿ 9.10ರ ವೇಳೆಗೆ ಅಪಘಾತಕ್ಕೆ ಒಳಗಾಗಿದೆ' ಎಂದು ವಾಯುಪಡೆಯು ಈ ಕುರಿತ ಹೇಳಿಕೆಯಲ್ಲಿ ತಿಳಿಸಿದೆ.

ಕೃತ್ಯದ ಕಾರಣ ತಿಳಿಯಲು ವಾಯುಪಡೆಯು ತನಿಖೆಗೆ ಆದೇಶಿಸಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಏರ್ ಚೀಫ್ ಮಾರ್ಷಲ್ ವಿ.ಆರ್.ಚೌಧರಿ ಅವರೊಂದಿಗೆ ಚರ್ಚಿಸಿ, ಘಟನೆಯ ಮಾಹಿತಿ ಪಡೆದರು.

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ
(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702–ಬಿ, 7ನೇ ಮಹಡಿ, ಕನೆಕ್ಟಸ್ ಟವರ್–2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೇರಿ ಗೇಟ್, ನವದೆಹಲಿ–110002 ಫೋನ್: +91–11–23232854, ಫ್ಯಾಕ್ಸ್: +91–11–23232835

ಇ–ಟೆಂಡರ್ ಮುಖಾಂತರ ಪ್ರಸ್ತಾವಣೆಗೆ ಮನವಿ
(ಆರ್‌ಎಫ್‌ಪಿ ನೋಟಿಸ್ ನಂ. ಆರ್‌ಎಲ್‌ಡಿಎ/ಆರ್‌ಎಫ್‌ಪಿ/ಸಿಡಿ–48/2022 ದಿನಾಂಕ 05.07.2022)
ಆಂಧ್ರಪ್ರದೇಶದ ಧರ್ಮಾವರಂ ರೈಲು ನಿಲ್ದಾಣ ರಸ್ತೆಯ ಬದಿಯ ಉದ್ದಕ್ಕೂ ಇರುವ ಸುಮಾರು 3.5 ಎಕರೆ (14,164.50 ಚ.ಮೀ.) ರೈಲ್ವೆ ಭೂಮಿಯಲ್ಲಿ ವಾಣಿಜ್ಯ ಅಭಿವೃದ್ಧಿಗಾಗಿ 45 ವರ್ಷಗಳ ಭೋಗ್ಯ ಮಂಜೂರಾತಿ

ಭೂಮಿ	ನಿವೇಶನದ ವಿಸ್ತೀರ್ಣ	ಬಿಲ್ಟಪ್ ಪ್ರದೇಶ	ಬಿಡ್ ಸೆಕ್ಯೂರಿಟಿ	ಮೀಸಲು ಬೆಲೆ
ಧರ್ಮಾವರಂ (ರೈಲ್ವೆ ನಿಲ್ದಾಣದ ಸಮೀಪ)	14,164.50 ಚ.ಮೀ.	26,770.91 ಚ.ಮೀ.	ರೂ. 30.00 ಲಕ್ಷ	ರೂ. 9.58 ಕೋಟಿ

ವೆಬೆಕ್ಸ್‌ನಲ್ಲಿ ಬಿಡ್‌ಪೂರ್ವ ಆನ್‌ಲೈನ್ ಸಭೆ: 8 ಆಗಸ್ಟ್, 2022 ರಂದು 11:30 ಗಂಟೆಗೆ.
(ಬಿಡ್‌ಪೂರ್ವ ಆನ್‌ಲೈನ್ ಸಭೆಯ ವಿವರಗಳನ್ನು ಡೆ. ಜನರಲ್ ಮ್ಯಾನೇಜರ್/ಮಾರ್ಕೆಟಿಂಗ್/ಎಸ್‌ಸಿ ರವರಿಂದ ಪಡೆದುಕೊಳ್ಳಬಹುದು)
ಆನ್‌ಲೈನ್‌ನಲ್ಲಿ ಇ–ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 13.09.2022 ರಂದು 15:00 ಗಂಟೆವರೆಗೆ.
ಯೋಜನೆಯ ಕುರಿತಾದ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ www.rlda.indianrailways.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನ www.tenderwizard.in/RLDA ಪೋರ್ಟಲ್‌ನಲ್ಲಿರುವ 'ಇ–ಟೆಂಡರ್' ಶೀರ್ಷಿಕೆಯನ್ನು ಪರಿಶೀಲಿಸಿರಿ.
ಯಾವುದೇ ಸ್ಪಷ್ಟೀಕರಣಗಳಿಗಾಗಿ ದಯವಿಟ್ಟು ಇವರನ್ನು ಸಂಪರ್ಕಿಸಿರಿ:–

ಡೆ. ಜನರಲ್ ಮ್ಯಾನೇಜರ್ ಮಾರ್ಕೆಟಿಂಗ್/ಎಸ್‌ಸಿ	ಜಾ. ಜನರಲ್ ಮ್ಯಾನೇಜರ್/ ಪ್ಲಾನಿಂಗ್–1	ಚೀಫ್ ಪ್ರಾಜೆಕ್ಟ್ ಮ್ಯಾನೇಜರ್/ ಸಿಕಂದರಾಬಾದ್	ಕನ್ಸಲ್ಟಂಟ್/ಆರ್‌ಎಲ್‌ಡಿಎ– ಶ್ರೀ. ವಾಸುದೇವ
ಮೊ: 73375 50024	ಮೊ: 78781 82717	ಮೊ: 63054 89280	ಮೊ: 86503 19273
rorldasc@gmail.com	negi18rlda@gmail.com	cpmrldasc22@gmail.com	imvdeva07@gmail.com

ಸೂಚನೆ:– ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಆರ್‌ಎಲ್‌ಡಿಎ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಎಎಂ/ಟೆಂಡರ್, (ಮೊ) 87505 54811

IN THE COURT OF THE CITY CIVIL JUDGE (CCH-14) AT BENGALURU
G. & W.C. 13/2019
PETITIONERS : 1. N. NARAYANA aged about 75 years, son of late Narasimhaiah
2. Mrs. P. R. JAGADAMBA aged about 58 years, wife of Mr. N. Narayana;
Both of them residing at No.32, 9th Cross, 'I' Block, Ramakrishna Nagar, Mysore - 570 023.
3. LOHITH N. aged about 33 years, son of Mr. N. Narayana, R/a No. A-103, Rajni Ashish Apartment, Vibgyor School Road, Whitefield, Bangalore - 560 066.
versus
RESPONDENTS : M.N. MOHAN and 2 others
SUMMONS FOR SERVICE BY ADVERTISEMENT TO RESPONDENTS 1, 2 AND 3
To: RESPONDENTS : 1. M.N. MOHAN, aged about 45 years, son of Pandit V. M. Nagaraj;
2. V.M. NAGARAJ aged about 74 years, son of V.V. Madhuswamy, Principal Nada Vahini, Sri Datta Sangeetha Vidya Nikethana ®, No. 14/3, 1st Floor, 8th Cross Road, Ashoknagar, Banashankari 1st Stage, Bangalore - 560 050.
3. Mrs. POORNIMA, Major in age, wife of Mr. M.N. Mohan, Nos.1 and 3 residing at Door No.11/2, 2nd Main Road, Rajeshwari Temple Street, Kaveri Nagar, Banashankari 2nd Stage, Bangalore - 560 085.
Whereas, the Petitioners have filed a case against you under Sections 7 and 8 read with Section 41 (E) of The Guardians and Wards Act, 1890 for the reliefs of declaring that the Respondent No.1 has ceased to be guardian of Kum. Rakshitha on his marriage with Respondent No.3 and their having a child through that marriage; consequentially to discharge Respondent No.1 as guardian of Rakshitha and to appoint Petitioners Nos. 1 to 3 as her guardians: and for other consequential reliefs before the Hon'ble City Civil Judge (CCH-14) at Bengaluru. You are hereby summoned to appear before this Court in person or through a Pleader **on 02 September, 2022 at 11.00 a.m.** to answer the same, failing which, you will be placed ex parte and case will be proceeded with against you.
Given under my hand and the seal of this Court on this the 26th day of July, 2022 at Bengaluru.
By order of the Court, Assistant Registrar, City Civil Court, Bangalore.
Advocate for Petitioners:
Vasanth V. Fernandes, Advocate
16, Albert Street, Richmond Town, Bangalore-560025. (M) : 9845510679

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ (**'ಕಕ್ಷಿದಾರ'**) ಈ ಕೆಳಕಂಡ **"ಷೆಡ್ಯೂಲ್"** ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನುಮುಂದೆ **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡಲಾಗಿದ್ದು, **ಕೆ.ಎಂ.ಕೆ ದೆವೆಲಪ್ಪರ್ಸ್ ಪ್ರೈವೇಟ್ ಲಿಮಿಟೆಡ್ ('ಮಾಲೀಕರು')** ಇವರು ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ಕೆಲವೊಂದು ವ್ಯವಹಾರ ನಡೆಸಲು ಅಪೇಕ್ಷಿಸಿರುತ್ತಾರೆ. ಹಾಗೂ ತಾವೆ ಸದರಿ ಷೆಡ್ಯೂಲ್ ಸ್ವತ್ತುಗಳ ಏಕಮೇವ ಮತ್ತು ನಿರುಪಾಧಿಕ ಮಾಲೀಕರೆಂದೂ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ಯಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಋಣಬಾಧ್ಯತೆ ಅಥವಾ ಮತ್ಯಾವುದೇ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಂತಹ ತಮ್ಮ ಕ್ಲೇಮುಗಳನ್ನು ಮತ್ತು ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **14 (ಹದಿನಾಲ್ಕು)** ದಿನಗಳ ಅವಧಿಯೊಳಗೆ ನಮಗೆ ತಲುಪುವಂತೆ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಮೇಲ್ಕಂಡ **14 (ಹದಿನಾಲ್ಕು)** ದಿನಗಳ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಹಕ್ಕು, ಅಧಿಕಾರ, ಹಿತಾಸಕ್ತಿ ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತುಗಳ ವಿವರಗಳು)

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ದೊಮ್ಮಸಂದ್ರ ಗ್ರಾಮದ ಸ್ಥಿರಾಸ್ತಿ ಸ್ವತ್ತಿನ ಸರ್ವೆ ನಂಬರುಗಳಾದ 44/1 ಮತ್ತು 44/2 ಮತ್ತು ಕುಂಬೇನ ಅಗ್ರಹಾರ ಗ್ರಾಮದ ಸರ್ವೆ ನಂಬುರುಗಳಾದ 108/1 ಮತ್ತು 107/2 ರ ಒಟ್ಟಾರೆ ವಿಸ್ತೀರ್ಣ 10 ಎಕರೆಗಳು, ಈ ಸ್ವತ್ತುಗಳ ಸಂಪೂರ್ಣ ವಿವರಗಳು ಈ ಕೆಳಕಂಡಂತಿವೆ.

ಸರ್ವೆ ನಂ	ವಿಸ್ತೀರ್ಣ	ಚಕ್ಕುಬಂದಿಗಳು: ಪೂರ್ವಕ್ಕೆ :	ಪಶ್ಚಿಮಕ್ಕೆ :	ಉತ್ತರಕ್ಕೆ :	ದಕ್ಷಿಣಕ್ಕೆ :
44/1	1 ಎಕರೆ	ಸರ್ವೆ ನಂ. 45 ಮತ್ತು 44/2	ಸರ್ವೆ ನಂ. 43	ಕುಂಬೇನ ಅಗ್ರಹಾರ ಗ್ರಾಮದ ಗಡಿ, ಸರ್ವೆ ನಂ.108	ಸರ್ವೆ ನಂ. 42 ಮತ್ತು 44/2
44/2	18 ಗುಂಟೆಗಳು	ಸರ್ವೆ ನಂ. 45	ಸರ್ವೆ ನಂ. 44/1	ಸರ್ವೆ ನಂ. 44/1	ಸರ್ವೆ ನಂ. 42 ಮತ್ತು 45
108/1(ಪಿ) (ಹಳೇ ಸರ್ವೆ ನಂ.108)	4 ಎಕರೆಗಳು 12 ಗುಂಟೆಗಳು	ಸರ್ವೆ ನಂ.107/2	ನಾಲೆ	ಸರ್ವೆ ನಂ.108/1 ರ ಉಳಿಕೆ ಭಾಗ	ದೊಮ್ಮಸಂದ್ರ ಗ್ರಾಮದ ಗಡಿ, ಸರ್ವೆ ನಂ.44 ಮತ್ತು 45
108/1(ಪಿ) (ಹಳೇ ಸರ್ವೆ ನಂ.108)	13 ಗುಂಟೆಗಳು	ಸರ್ವೆ ನಂ.107/2	ಸರ್ವೆ ನಂ.108/1 ರ ಉಳಿಕೆ ಭಾಗ	ಸರ್ವೆ ನಂ.108/2	ಸರ್ವೆ ನಂ.108/1 ರ ಉಳಿಕೆ ಭಾಗ
107/2(ಪಿ)	03 ಎಕರೆಗಳು 37 ಗುಂಟೆಗಳು	ನಾಲೆ	ಸರ್ವೆ ನಂ.108 ಮತ್ತು ಸರ್ವೆ ನಂ.109	ನಾಲೆ	ಸರ್ವೆ ನಂ.107/2 ರ ಉಳಿಕೆ ಭಾಗ

ಎನ್.ಕೆ. ದಿಲೀಪ್ / ಎಸ್. ರಘುನಂದನ / ಅಂಕುಶ್ ವಿ.ಹೆಚ್.
ತತ್ವ ಲೀಗಲ್ ಬೆಂಗಳೂರು, ವಕೀಲರು
4ನೇ ಮಹಡಿ, ಫೋಯೆನಿಕ್ಸ್ ಪಿನಾಕಲ್,
ನಂ.46, ಹಲಸೂರು ರಸ್ತೆ, ಬೆಂಗಳೂರು–560042.
ದಿನಾಂಕ: 29/07/2022
ಸ್ಥಳ: ಬೆಂಗಳೂರು

कार्यालय कलेक्टर (खनिज शाखा) जिला – नर्मदापुरम (म0प्र0)
ई–मेल :– modgmhos@mp.gov.in
क्रमांक/423/खनिज/रेत निवर्तन/2022–23 — नर्मदापुरम, दिनांक 22/07/2022
संशोधित

रेत भंडारण की ई–निविदा सह–नीलामी सूचना

एतद् द्वारा सर्वसाधारण की जानकारी के लिये यह प्रकाशित किया जाता है कि जिला–नर्मदापुरम (म0प्र0) की तहसील–नर्मदापुरम, सिवनीमालवा, पिपरिया, माखननगर एवं इटारसी में स्थित नीचे दी गई अनुसूची के विनिर्दिष्ट रेत के राजसात किये गये भंडारणों का निर्वतन करने हेतु MP Tender Portal के द्वारा "निविदा सह–नीलामी" (Tender Cum Auction) विकल्प के माध्यम से नीलामी की प्रक्रिया किया जाना है। इस संबंध में म0प्र0 शासन, खनिज साधन विभाग, मंत्रालय का पत्र क्र0–1950/865/2020/12/1. भोपाल, दिनांक 26/05/2020 के बिन्दु क्र0–4 तथा पत्र क्रमांक–8345/865/2020/12/1. भोपाल, दिनांक 10/08/2020 में दिये गये प्रावधानों के अनुरूप निवर्तन की कार्यवाही किया जाना है। समूह की 25 प्रतिशत सुरक्षा निधि के साथ तकनीकी प्रस्ताव एवं वित्तीय निविदा जमा करने की अवधि **27/07/2022 से 05/08/2022** अपरान्ह 05:00 बजे तक रहेगी। निविदा प्रक्रिया उपरांत सफल निविदाकर की ऑनलाईन नीलामी में भाग ले सकेगे।

निविदा सह–नीलामी की विस्तृत प्रक्रिया, समूह का विवरण, विस्तृत शर्ते तथा प्रक्रिया का विवरण https://mptenders.gov.in के अतिरिक्त मध्यप्रदेश राज्य खनिज निगम की अधिकृत बेवसाईट http://www.mpsmcl.mp.gov.in तथा संचालनालय, भौमिकी तथा खनिकर्म के पोर्टल http://ekhanij.mp.gov.in पर भी उपलब्ध है। निविदा सह–नीलामी प्रक्रिया के संबंध में किसी भी प्रकार के संशय के निवारण हेतु ई–मेल modgmhos@mp.gov.in पर पृच्छा भेजी जा सकती है, साथ ही निविदा–सह–नीलामी प्रस्तुत करने हेतु निविदाकार के डिजिटल सिग्नेचर (क्लास–III) आवश्यक होंगे। उक्त स्थलों पर भंडारित रेत का पृथक–पृथक समूह में न होकर क्रमांक–01 से 17 तक का एक ही समूह रहेगा, उल्लेखित भंडारण स्थलों में निविदत्त मात्रा एवं निविदा सह–नीलामी हेतु शासकीय मूल्य का विवरण निम्नानुसार है :–

क्र	जिले का नाम	समूह संख्या	ग्राम का नाम	तहसील	सर्वे क्र	रकबा	समूह की निविदा हेतु कुल मात्रा (घ.मी. में)	निविदा हेतु शासकीय मूल्य (अपसेट प्राइज रू @327.50 प्रति घनमीटर की दर से)
1	2	3	4	5	6	7	8	9
1	नर्मदापुरम	1	मगरिया	नर्मदापुरम	–	–	114.70	37,564/–
2			धानाबड	नर्मदापुरम	–	–	1020	3,34,050/–
3			बाबरी	सिवनीमालवा	–	–	540	1,76,850/–
4			कजलास	डोलरिया	–	–	75	24,563/–
5			ग्वाड़ी	सिवनीमालवा	–	–	90	29,475/–
6			डिमावर	सिवनीमालवा	52/3	0.405	15	4,913/–
7			रायपुर	नर्मदापुरम	–	–	12	3,930/–
8			सर्राकिशोर	पिपरिया	–	–	60	19,650/–
9			बाबरी	सिवनीमालवा	–	–	30	9,825/–
10			मनबाड़ा	माखननगर	202/2	–	20	6,550/–
11			जासलपुर	नर्मदापुरम	691/1/घ	0.809	450	1,47,375/–
12			जासलपुर	नर्मदापुरम	705/1ख	2.817	4500	14,73,750/–
13			निमसाडिया	नर्मदापुरम	610	0.405	26775	87,68,813/–
14			निमसाडिया	नर्मदापुरम	1234	0.983	17748	58,12,470/–
15			मरोडा	इटारसी	285	1.943	4791	15,69,053/–
16			मरोडा	इटारसी	445	0.958	1501	4,91,578/–
17			मरोडा	इटारसी	345/1	0.729	600	1,96,500/–
			योग				58,341.70	1,90,15,307/–

ऑनलाईन निविदा सह–नीलामी प्रस्तुत करने की अंतिम तिथि के पूर्व निविदा प्रक्रिया में कोई तकनीकी त्रुटि या अन्य विसंगति परिलक्षित होती है, तो जिला कलेक्टर द्वारा नियमानुसार निविदा दस्तावेजों/शर्तो में सुधार कर सकेगा तथा जिसकी जानकारी जिले की बेवसाईट एवं http://www.mpsmcl.mp.gov.in, http://ekhanij.mp.gov.in एवं https://mptenders.gov.in में ही प्रदर्शित की जावेगी। ऐसा सुधार निविदाकर्ताओं पर बंधनकारी होगा।

नोटः– जिला स्तर पर मॉडल प्रारूप में आवश्यक संशोधन किया जा सकेगा।

अपर कलेक्टर
जिला – नर्मदापुरम
(G-14800/22) पहला डोज़ रक्षा – दूसरा डोज़ सुरक्षा ।

ನೈಋತ್ಯ ರೈಲ್ವೆ
Azadi Ka Amrit Mahotsav
ಇ–ಟೆಂಡರ್ ಪ್ರಕಟಣೆ ಬಿಡ್ ಸಂ. ಜಿಇಎಂ/2022/ಬಿ/2370277
ದಿನಾಂಕ : 21–07–2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗ : ಎರಡು ವರ್ಷಗಳ ಅವಧಿಗೆ ಬೆಂಗಳೂರು ಸಿಟಿ ಮತ್ತು ಯಶವಂತಪುರ ಕೋಚಿಂಗ್ ಡಿಪೋಗಳಿಂದ ಕೊಳೆಯಾದ ಎಸಿ ಕೋಚ್ ಕರ್ಟನ್‌ಗಳ ಸಂಗ್ರಹಣೆ ಮತ್ತು ಗುತ್ತಿಗೆದಾರರ ಆವರಣಕ್ಕೆ ಸಾಗಾಣಿಕೆ ಮತ್ತು ಒಗೆದ, ಐರನ್ ಮಾಡಿದ ಕರ್ಟನ್‌ಗಳನ್ನು ಮರಳಿ ವಿತರಿಸುವುದು ಮತ್ತು ಎರಡೂ ಕೋಚಿಂಗ್ ಡಿಪೋಗಳಲ್ಲಿನ ಟ್ರೈನ್‌ಗಳ ಆಯಾ ಕೋಚ್‌ಗಳಲ್ಲಿ ಕರ್ಟನ್‌ಗಳ ಬದಲಾವಣೆ.	ರೂ. 1,11,01,126.64

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11–08–2022 ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ https://gem.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್
ಪಿಯುಬಿ/262/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 ಬೆಂಗಳೂರು
S.W.Railways SWRRLY SWRRLY

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099. ದೂ.: 080–27835122
ಫ್ಯಾಕ್ಸ್: 080–27836569 www.anekal.tpa.gov.in www.e-vinyasa.kar.nic.in
ಸಂಖ್ಯೆ: ಆಯೋಪ್ರಾ/ಸಾ.ಪ್ರ/01/2022–23 — ದಿನಾಂಕ: 27.07.2022

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 72 ಬೆಂರೂಪ್ರಾ 2003, ದಿನಾಂಕ: 03.03.2006ರಂದು ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿರುತ್ತದೆ. ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 36 ಬಿಎಂಆರ್ 2016, ದಿನಾಂಕ: 24.06.2016ರಲ್ಲಿ ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶ ಘೋಷಿಸುವ ಸಲುವಾಗಿ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ 170 ಗ್ರಾಮಗಳ ಪೈಕಿ 47 ಗ್ರಾಮಗಳನ್ನು ಹಿಂಪಡೆದಿದ್ದು, ಪ್ರಸ್ತುತ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ 123 ಗ್ರಾಮಗಳನ್ನು ಒಳಗೊಂಡಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ದಿನಾಂಕ: 03.09.2014ರಲ್ಲಿ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ–2031ಅನ್ನು ಅನುಮೋದಿಸಲಾಗಿರುತ್ತದೆ.

ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಭೂ ಪರಿವರ್ತಿತ ಜಮೀನುಗಳನ್ನು ಅಭಿವೃದ್ಧಿಪಡಿಸುವ ಮುಂಚೆ ಅಂದರೆ ವಿನ್ಯಾಸ ಅಭಿವೃದ್ಧಿ ಸಂಬಂಧ ವಿನ್ಯಾಸ ನಕ್ಷೆ, ಕಟ್ಟಡ ನಿರ್ಮಾಣ ಸಂಬಂಧ ಪ್ರಾರಂಭಿಕ ಪ್ರಮಾಣ ಪತ್ರವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರಡಿಯಲ್ಲಿ ಈ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಖಾಸಗಿಯವರು ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕರು ನಿವೇಶನಗಳನ್ನು ಕ್ರಯಕ್ಕೆ ಪಡೆಯುವ ಮೊದಲು ಪ್ರಾಧಿಕಾರದಿಂದ ವಿನ್ಯಾಸ ನಕ್ಷೆ ಅನುಮೋದನೆ ಆಗಿರುವುದನ್ನು ಖಚಿತಪಡಿಸಿಕೊಂಡು ನಿವೇಶನ ಖರೀದಿಸಲು ತಿಳಿಸಲಾಗಿದೆ. ಅನಧಿಕೃತ ವಸತಿ ವಿನ್ಯಾಸ / ಬಡಾವಣೆಗಳಲ್ಲಿ ಖರೀದಿಸಿದಂತಹ ನಿವೇಶನಗಳಿಗೆ ಪ್ರಾಧಿಕಾರದ / ಸ್ಥಳೀಯ ಸಂಸ್ಥೆಯ ವತಿಯಿಂದ ದೊರೆಯಬಹುದಾದ ಸೌಲಭ್ಯಗಳು ಲಭ್ಯವಾಗುವುದಿಲ್ಲ. ಅಲ್ಲದೆ, ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಬಡಾವಣೆಗಳಲ್ಲಿ ಎಲ್ಲಾ ರೀತಿಯ ಮೂಲ ಸೌಲಭ್ಯಗಳನ್ನು ಅಭಿವೃದ್ಧಿದಾರರಿಂದ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಒದಗಿಸಲಾಗುವುದು ಹಾಗೂ ಸದರಿ ಮೂಲಭೂತ ಸೌಲಭ್ಯಗಳನ್ನು ಕಾಲಕಾಲಕ್ಕೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಾಧಿಕಾರವು ತರಬಯಸುತ್ತದೆ.

ಈ ಪ್ರಾಧಿಕಾರದಿಂದ ಅನುಮೋದನೆಯಾಗದ ವಿನ್ಯಾಸಗಳನ್ನು ಹಾಗೂ ಈ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆದು ನಿವೇಶನಗಳನ್ನು ಬಿಡುಗಡೆ ಪಡೆಯದ ನಿವೇಶನಗಳನ್ನು, ಸಾರ್ವಜನಿಕರು ಖರೀದಿಸಬಾರದೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಅಂತಹ ನಿವೇಶನಗಳ ಖರೀದಿಯಿಂದ ಮುಂದೆ ಆಗಬಹುದಾದ ಯಾವುದೇ ತೊಂದರೆಗಳಿಗೆ ನಿವೇಶನ ಖರೀದಿದಾರರದೇ ಸಂಪೂರ್ಣ ಜವಾಬ್ದಾರರಾಗಿರುತ್ತದೆ.

ಅನುಮೋದಿತ ವಿನ್ಯಾಸದಲ್ಲಿನ ಸಾರ್ವಜನಿಕ ಉಪಯೋಗಕ್ಕಾಗಿ ಕಾಯ್ದಿರಿಸಿರುವ ರಸ್ತೆಗಳು, ಉದ್ಯಾನವನ ಹಾಗೂ ಬಯಲು ಪ್ರದೇಶ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಜಾಗಗಳು ಸಾರ್ವಜನಿಕ ಆಸ್ತಿಗಳಾಗಿದ್ದು, ಅವುಗಳನ್ನು ಅತಿಕ್ರಮಿಸುವುದು, ಅನಧಿಕೃತವಾಗಿ ಬಳಸುವುದು ಕಾನೂನು ಬಾಹಿರವಾಗಿರುತ್ತದೆ. ಆದ ಕಾರಣ ಅವುಗಳನ್ನು ಅತಿಕ್ರಮಿಸಿದಲ್ಲಿ ಅಥವಾ ಅನಧಿಕೃತವಾಗಿ ಉಪಯೋಗಿಸುತ್ತಿದ್ದಲ್ಲಿ ಕೂಡಲೇ ಸ್ವಯಂ ತೆರವುಗೊಳಿಸಿಕೊಳ್ಳಲು ತಿಳಿಸಲಾಗಿದೆ.

ಈ ಮೇಲ್ಕಂಡ ಮಾಹಿತಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್
ವಾಸಾಸಂಇ/ವಾಪ್ರ/ಎಲ್‌ಸಿ/1539/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

3M ಇಂಡಿಯಾ ಲಿಮಿಟೆಡ್
(CIN: L31300KA1987PLC013543)
ನೋಂದಾಯಿತ ಕಛೇರಿ: ಪ್ಲಾಟ್ ನಂ. 48–51, ಇಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100, ಕಾರ್ಪೊರೇಟ್ ಕಛೇರಿ: ವಿವರ್ಕ್ ಪ್ರೆಸ್ಟೀಜ್ ಸೆಂಟ್ರಲ್, 3ನೇ ಮಹಡಿ, 36 ಇನ್‌ಫೆಂಟ್ರಿ ರಸ್ತೆ, ಟಸ್ಕರ್ ಟೌನ್, ಬೆಂಗಳೂರು–560 001. ದೂರವಾಣಿ: 080–22231414, ಫ್ಯಾಕ್ಸ್: 080–2223 1450,
ಇಮೇಲ್: investorhelpdesk.in@mmm.com, ವೆಬ್‌ಸೈಟ್: www.3m.com/in

35ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ, ರಿಮೋಟ್ ಇ–ಮತದಾನದ ಬಗ್ಗೆ ಮಾಹಿತಿ ಮತ್ತು ಪುಸ್ತಕಗಳ ಮುಚ್ಚುವಿಕೆ

[illegible]

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 28, 2022
3M ಇಂಡಿಯಾ ಲಿಮಿಟೆಡ್‌ಗಾಗಿ

ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್
(CIN: U70102KA1937PLC001292)
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ನಂ. 51, 1ನೇ ಕ್ರಾಸ್, ಜೆ. ಸಿ. ರಸ್ತೆ, ಬೆಂಗಳೂರು 560027 ಫೋನ್: 080–41575566
ಇಮೇಲ್: ed_secretary@bgse.co.in; Website:www.bgse.co.in

59ನೇ ಎಜಿಎಂ ಸೂಚನೆ

ಎಜಿಎಮ್ ಸೂಚನೆ: ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್ (ಕಂಪನಿ), ತನ್ನ 59ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (AGM) ಸೋಮವಾರ, 22ನೇ ಆಗಸ್ಟ್, 2022 ರಂದು ಬೆಳಿಗ್ಗೆ 09.30 ಗಂಟೆಗೆ ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದೆಯೇ, ಕಂಪನಿಗಳ ಅಧಿನಿಯಮ, 2013ರ ಅನ್ವಯವಾಗುವ ನಿಬಂಧನೆಗಳನ್ನು [illegible]

ಸ್ಥಳ: ಬೆಂಗಳೂರು
ದಿನಾಂಕ: 15/07/2022
ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್
ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ
ಸಹಿ/– (ವಿನೋದ್ ಜಿ ಜೈನ್)
ಕಾರ್ಯನಿರ್ವಾಹಕ ನಿರ್ದೇಶಕರು DIN: 00248275



ಭಾರತ್ ಎಲೆಕ್ಟ್ರಾನಿಕ್ಸ್ / भारत इलेक्ट्रॉनिक्स / BHARAT ELECTRONICS
QUALITY. TECHNOLOGY. INNOVATION.
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045. ಫೋನ್: 080-25039300, 25039266
ಫ್ಯಾಕ್ಸ್: 080-25039266, ಇ–ಮೇಲ್: secretary@bel.co.in, ವೆಬ್‌ಸೈಟ್: www.bel-india.in

68ನೇ ವಾರ್ಷಿಕ ಸರ್ವಸದಸ್ಯರ ಸಭೆ, ಇ-ಮತದಾನ ಮತ್ತು ಲೆಕ್ಕ ಪುಸ್ತಕ ಅಂತಿಮಗೊಳಿಸುವ ಸೂಚನೆ

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಸರ್ವಸದಸ್ಯರ 68ನೇ ವಾರ್ಷಿಕ ಮಹಾಸಭೆಯು (AGM) ಗುರುವಾರ, 25ನೇ ಆಗಸ್ಟ್, 2022 ರಂದು ಬೆಳಿಗ್ಗೆ 10:00 ಗಂಟೆಗೆ (ಐ ಎಸ್ ಟಿ) ನಡೆಯಲಿದೆ ಎಂದು ಈ ಮೂಲಕ ತಿಳಿಸಲಾಗುತ್ತದೆ.

ಕೋವಿಡ್ ಮಹಾಮಾರಿ ಮುಂದುವರೆಯುತ್ತಿರುವ ದೃಷ್ಟಿಯಿಂದ, ಕಾರ್ಪೊರೇಟ್ ವ್ಯವಹಾರಿಗಳು ("ಎಮ್.ಸಿ.ಎ.") ಸಾಮಾನ್ಯ ಸುತ್ತೋಲೆಗಳ ಸಂಖ್ಯೆ ದಿನಾಂಕ 8ನೇ ಏಪ್ರಿಲ್ 2020ರ ಸಂಖ್ಯೆ 14/2020, ಅನ್ನು ದಿನಾಂಕ 13ನೆ ಏಪ್ರಿಲ್ 2020ರ ಸಂಖ್ಯೆ 17/2020, 5ನೇ ಮೇ 2020ರ ಸಂಖ್ಯೆ 20/2020ರ ನೂತನವಾಗಿ ದಿನಾಂಕ 5ನೇ ಮೇ 2022ರ ಜೊತೆ ಓದಲಾಗಿದ್ದು ಮತ್ತು ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿಯ ದಿನಾಂಕ 13ನೆ ಮೇ 2022ರ ಸುತ್ತೋಲೆ ಸಂಖ್ಯೆ ಎಸ್.ಈ.ಬಿ.ಐ. / ಎಚ್.ಒ./ಸಿ.ಎಫ್.ಡಿ./ಸಿ.–ಎಮ್.ಡಿ.2./ಸಿ.ಐ.ಆರ್./ಪಿ./2022/62ರಲ್ಲಿ ತಿಳಿಸಿದಂತೆ (ಸಮಗ್ರವಾಗಿ ಸುತ್ತೋಲೆಗಳು [illegible]

ಬೆಂಗಳೂರು
28ನೇ ಜುಲೈ 2022
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಪರವಾಗಿ
ಎಸ್. ಶ್ರೀನಿವಾಸ್
ಕಂಪನಿ ಕಾರ್ಯದರ್ಶಿ
'ಹರ್ ಘರ್ ಕಾ ತಿರಂಗ'

ವಿವಿಧ ಜಿಲ್ಲೆಗಳಲ್ಲಿ ಮುಂದುವರಿದ ರಾಜೀನಾಮೆ • ಅಲುಗಾಡುತ್ತಿದೆ ಬಿಜೆಪಿ ಬೇರು

ಪ್ರವೀಣ್ ಹತ್ಯೆ: ಕೇಸರಿ ಪಡೆ ಆಕ್ರೋಶ ಭುಗಿಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಳ್ಯ ತಾಲ್ಲೂಕು ಬೆಳ್ಳಾರೆಯಲ್ಲಿ ಪ್ರವೀಣ್ ಹತ್ಯೆಯ ಬಳಿಕ ಭುಗಿಲೆದ್ದ ಪಕ್ಷದ ಕಾರ್ಯಕರ್ತರ ಆಕ್ರೋಶ ಮತ್ತು ವಿವಿಧ ಜಿಲ್ಲಾ ಘಟಕಗಳಲ್ಲಿ ಮುಂದುವರಿದ ಯುವ ಮೋರ್ಚಾ ಪದಾಧಿಕಾರಿಗಳ ಸಾಮೂಹಿಕ ರಾಜೀನಾಮೆ ಪರ್ವ ರಾಜ್ಯ ಬಿಜೆಪಿಯ ಬೇರನ್ನೇ ಅಲುಗಾಡಿಸಿದೆ.

ಬೆಳ್ಳಾರೆಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ವಾಹನಕ್ಕೆ ಮುತ್ತಿಗೆ ಹಾಕಿ ಅದನ್ನು ಉರುಳಿಸುವಷ್ಟರ ಮಟ್ಟಿಗೆ ಕಾರ್ಯಕರ್ತರ ಆಕ್ರೋಶ ಪಕ್ಷದ ಹಿರಿಯ ನಾಯಕರನ್ನು ತಲ್ಲಣಗೊಳಿಸಿದೆ. ಈ ವಿಷಯವನ್ನು ಪಕ್ಷದ ರಾಷ್ಟ್ರೀಯ ವರಿಷ್ಠರ ಗಮನಕ್ಕೆ ತರಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

'ಬಿಜೆಪಿ ಅಧಿಕಾರಕ್ಕೆ ಏರಲು ಬಳಸಿಕೊಳ್ಳುವುದು, ಅಧಿಕಾರ ಹಿಡಿದ ನಂತರ ಕಾರ್ಯಕರ್ತರನ್ನು ಕಡೆಗಣಿಸಿ ಮೈಮರೆಯುವ ನಾಯಕರ ವಿರುದ್ಧ ಆಕ್ರೋಶ ಹೆಪ್ಪುಗಟ್ಟಿದೆ. ಕಾರ್ಯಕರ್ತರ ಈ ಆಕ್ರೋಶ ಪಕ್ಷಕ್ಕೆ ಎಚ್ಚರಿಕೆಯ ಗಂಟೆ. ಘಟನೆ ನಡೆದಾಗ ಕಣ್ಣೀರು ಸುರಿಸಿ ಬಳಿಕ ಮರೆತು ಬಿಡುತ್ತಾರೆ. ಅಲ್ಲದೆ, ಎಲ್ಲ ಘಟನೆಗಳಿಗೂ ಕಾಂಗ್ರೆಸ್ ಅಥವಾ ಇತರೆ ಪಕ್ಷಗಳಿಗೆ ತಳುಕು ಹಾಕಿ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದು ಸರಿಯಲ್ಲ' ಎಂದು ಹೆಸರು ಹೇಳಲು ಬಯಸದ ಬಿಜೆಪಿ ಮುಖಂಡರೊಬ್ಬರು ಹೇಳಿದರು.

'ಎಷ್ಟೋ ಸಂದರ್ಭದಲ್ಲಿ ಸಿದ್ಧಾಂತಕ್ಕಾಗಿ ಪ್ರತಿಭಟನೆ ನಡೆಸಿಯೋ, ಹೊಡೆದಾಡಿಯೋ ಇಕ್ಕಟ್ಟಿಗೆ ಸಿಲುಕಿದರೆ, ಪಕ್ಷದವರಾಗಲಿ, ಪರಿವಾರದವರಾಗಲಿ ನೆರವಿಗೆ ಧಾವಿಸುವುದಿಲ್ಲ. ನಷ್ಟಕ್ಕೆ ಒಳಗಾದಾಗ ಬದುಕು ಕಟ್ಟಿಕೊಡಲು ಕೈಜೋಡಿಸುವುದಿಲ್ಲ. ನಡು ನೀರಿನಲ್ಲಿ ಕೈಬಿಡುತ್ತಾರೆ. ಇವರನ್ನು ನಂಬಿಕೊಳ್ಳುವುದು ಹೇಗೆ. ನಮ್ಮ ಮೇಲೆ ಕೇಸ್‌ಗಳು ಬಿದ್ದರೆ, ನಾವೇ ಬಡಿದಾಡಬೇಕು. ಇದ್ದಿಯೋ ಬಿಟ್ಟೆಯೊ ಎಂದು ಕೇಳುವವರಿಲ್ಲ' ಎಂದು ಬಿಜೆಪಿಯ ಮತ್ತೊಬ್ಬ ನಾಯಕರು ಹೇಳಿದರು.

ಬಿಜೆಪಿ ಹುದ್ದೆಗಳಿಗೆ ಮೊಗವೀರ ಮುಖಂಡರ ರಾಜೀನಾಮೆ

ಮಂಗಳೂರು: ಮೊಗವೀರ ಸಮುದಾಯ ದವರಿಗೆ ನಾಲ್ಕು ದಶಕಗಳಿಂದ ಯಾವ ಸ್ಥಾನವನ್ನೂ ನೀಡಲಿಲ್ಲವೆಂದು ಆರೋಪಿಸಿ ಬಿಜೆಪಿ ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯ ರಾಮಚಂದರ್ ಬೈಕಂಪಾಡಿ ಸೇರಿದಂತೆ ಪ್ರಮುಖರು ಪಕ್ಷದ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ.

ಪತ್ರಿಕಾಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಮಚಂದರ್ ಅವರು 'ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಮೀನುಗಾರ ಪ್ರಕೋಷ್ಠದ ಅಧ್ಯಕ್ಷ ಗಿರೀಶ್ ಕರ್ಕೇರ ತಣ್ಣೀರುಬಾವಿ ಮತ್ತು 9 ಮಂದಿ ಸದಸ್ಯರು, ಜಿಲ್ಲಾ ಬಿಜೆಪಿ ಕಾರ್ಯಕಾರಿ ಸಮಿತಿ ಸದಸ್ಯ ಪ್ರೇಮನಾಥ ಉಳ್ಳಾಲ, ಪ್ರಕೋಷ್ಠದಲ್ಲಿ ಅಧ್ಯಕ್ಷರಾಗಿದ್ದ ನವೀನ್ ತಣ್ಣೀರುಬಾವಿ, ಶೋಭೇಂದ್ರ ಸಸಿಹಿತ್ಲು, ಯಶವಂತ ಉಳ್ಳಾಲ, ನಗರಸಭಾ ಸದಸ್ಯ ಬಾಬು ಬಂಗೇರ ಉಳ್ಳಾಲ, ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಲ್ಲಿ ವಿವಿಧ ಹುದ್ದೆಯಲ್ಲಿರುವವರು ರಾಜೀನಾಮೆ ಸಲ್ಲಿಸಿದ್ದಾರೆ. ನಾನು ರಾಜ್ಯೋತ್ಸವ ಪ್ರಶಸ್ತಿ ಹಿಂದಿರುಗಿಸಿದ್ದೇನೆ'ಎಂದು ತಿಳಿಸಿದರು.

'ಮೊಗವೀರ ಸಮುದಾಯಕ್ಕೆ ಬಿಜೆಪಿ ನಿರಂತರವಾಗಿ ಮೋಸ ಮಾಡುತ್ತ ಬಂದಿದೆ. ರಾಜ್ಯ ಮೀನುಗಾರರ ನಿಗಮಕ್ಕೆ ಬೇರೆ ಸಮುದಾಯದವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ. ಈ ಕುರಿತು ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಜಾಗೃತಿ ಮೂಡಿಸಲಾಗುವುದು. ಮುಂಬರುವ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯನ್ನು ಬಹಿಷ್ಕರಿಸಿ ಸಮುದಾಯದ ಶಕ್ತಿಯನ್ನು ಸಾಬೀತು ಮಾಡಲಾಗುವುದು. ಗಂಗಾಮತಸ್ಥ ಸಮುದಾಯದ ರಾಜ್ಯ ಘಟಕ, ರಾಜ್ಯ ಬೆಸ್ತರ ಸಂಘ, ದಕ್ಷಿಣ ಕನ್ನಡ ಜಿಲ್ಲಾ ಮೊಗವೀರ ಮಹಾಜನ ಸಂಘ, ಉತ್ತರ ಕನ್ನಡದ ಖಾರ್ವಿ ಮತ್ತು ಹರಿಕಾಂತ ಸಮುದಾಯದ ಮುಖಂಡರು ಇದಕ್ಕೆ ಬೆಂಬಲ ಘೋಷಿಸಿದ್ದಾರೆ' ಎಂದರು.

> ಮುಂದಿನ ದಿನಗಳಲ್ಲಿ ಬೀದಿ ಹೆಣವಾಗಿ ನನ್ನ ಸಂಸಾರಕ್ಕೆ ಇನ್ಯಾರೋ ಹಣ ಹಾಕಿ ಓಂ ಶಾಂತಿ ಎಂದು ಹೇಳಿ ಅನುಕಂಪ ತೋರಿಸೋ ಪರಿಸ್ಥಿತಿಗೆ ತಲುಪಲು ಇಷ್ಟವಿಲ್ಲದ ಕಾರಣ ಜವಾಬ್ದಾರಿ ಮುಕ್ತಳಾಗುತ್ತೇನೆ
>
> **ಶಕುಂತಲ ಎಚ್.ಎಸ್,** ಬಿಜೆಪಿ ಕಾರ್ಯಕರ್ತೆ

> ಕಠಿಣ ಕ್ರಮ ಜರುಗಿಸುತ್ತೇನೆ. ಕಾನೂನಿನ ಅಡಿಯಲ್ಲಿ ಶಿಕ್ಷಿಸಲಾಗುವುದು. ಹತ್ಯೆಯನ್ನು ತೀವ್ರವಾಗಿ ಖಂಡಿಸುತ್ತೇನೆ ಎಂಬ ಈ ಸ್ಲೋಗನ್ ಬೇಡ. ಇನ್ನು ಅಗಲಿದ ಕಾರ್ಯಕರ್ತರ ಪೋಸ್ಟ್ ಹಾಕುವುದಿಲ್ಲ. ಓಂ ಶಾಂತಿ ಸರ್ಕಾರ
>
> **ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು**

'ಸಾಂತ್ವನದಲ್ಲೂ ತಾರತಮ್ಯ'

ಮಂಗಳೂರು: ಸುರತ್ಕಲ್‌ನಲ್ಲಿ ಮಹಮ್ಮದ್ ಫಾಝಿಲ್ ಎಂಬ ಯುವಕನ ಹತ್ಯೆ ಮಾಡಿರುವ ಆರೋಪಿಗಳನ್ನು ಶೀಘ್ರ ಪತ್ತೆ ಹಚ್ಚಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಯು.ಟಿ. ಖಾದರ್ ಒತ್ತಾಯಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಣಿ ಕೊಲೆಗಳು ಸಂಭವಿಸುತ್ತಿದ್ದು, ಕೋಮು ಸೌಹಾರ್ದ ಹಾಳಾಗುವ ಸೂಚನೆ ದಟ್ಟವಾಗಿದೆ. ಆದ್ದರಿಂದ ಸರ್ಕಾರ ಹಾಗೂ ಗೃಹ ಇಲಾಖೆ ಗಂಭೀರವಾಗಿ ಪರಿಗಣಿಸಿ ಜಿಲ್ಲೆಯಲ್ಲಿ ಶಾಂತಿ ಸೌಹಾರ್ದ ಉಳಿಸಲು ತಕ್ಷಣ ಕಾರ್ಯ ಪ್ರವೃತ್ತರಾಗಬೇಕು ಎಂದು ಆಗ್ರಹಿಸಿದ್ದಾರೆ.

ತಾರತಮ್ಯ ಸರಿಯಲ್ಲ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೊಲೆಯಾದ ಪ್ರವೀಣ್ ಕುಟುಂಬವನ್ನು ಭೇಟಿ ನೀಡಿ ಸಾಂತ್ವನ ಹೇಳಿದ್ದು ಸ್ವಾಗತಾರ್ಹ. ಅದೇ ರೀತಿ ಹತ್ಯೆಯಾದ ಮಸೂದ್ ಕುಟುಂಬದವರನ್ನೂ ಭೇಟಿಯಾಗಿದ್ದರೆ, ಆ ಕುಟುಂಬಕ್ಕೂ ಧೈರ್ಯ ಸಿಕ್ಕಿದಂತಾಗುತ್ತಿತ್ತು ಎಂದರು.

ನೋವಿನ ಮನೆಯಲ್ಲಿ ಮುಖ್ಯಮಂತ್ರಿ ತಾರತಮ್ಯ ಮಾಡುವುದು ಸರಿಯಲ್ಲ. ಇದರಿಂದ ಮಸೂದ್ ಕುಟುಂಬಕ್ಕೆ ನಷ್ಟವಿಲ್ಲ. ಮುಖ್ಯಮಂತ್ರಿ ಗಾದಿಯ ಘನತೆಗೆ ಕುಂದುಟಾಗುತ್ತದೆ ಅಷ್ಟೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಪ್ರೇಮ ಪ್ರಕರಣದ ಮಾಹಿತಿಯಿಲ್ಲ'

ಮಂಗಳೂರು: ಫಾಝಿಲ್ ಕೊಲೆಯ ಪ್ರೇಮ ಪ್ರಕರಣಕ್ಕೆ ಸಂಬಂಧಿಸಿ ಕೊಲೆ ಮಾಡಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಹರಿದಾಡುತ್ತಿದೆ. ಕುರಿತು ಪ್ರತಿಕ್ರಿಯಿಸಿರುವ ಕಮಿಷನರ್ ಶಶಿಕುಮಾರ್, 'ಅಂತಹ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ವಿನಾಕಾರಣ ವಿಷಯಗಳನ್ನು ಚರ್ಚಿಸಬಾರದು. ಶಾಂತಿಯನ್ನು ಕಾಪಾಡಬೇಕು' ಎಂದು ವಿನಂತಿಸಿದ್ದಾರೆ.

ಮೃತರ ಕುಟುಂಬಕ್ಕೆ ಸುಸಜ್ಜಿತ ಮನೆ

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಭರವಸೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಒಬ್ಬನೇ ಮಗನನ್ನು ಕಳೆದುಕೊಂಡ ಪ್ರವೀಣ್ ಕುಟುಂಬ ಸಂಕಷ್ಟಕ್ಕೆ ಸಿಲುಕಿದೆ. ಅವರ ಮನೆಯೂ ಬೀಳುವ ಸ್ಥಿತಿಯಲ್ಲಿದೆ. ಕುಟುಂಬಕ್ಕೆ ಗಟ್ಟಿಮುಟ್ಟಾದ ಮನೆ ಕಟ್ಟಿಕೊಡಲು ಪಕ್ಷದ ಪ್ರಮುಖರು ಹಾಗೂ ಈ ಭಾಗದ ಶಾಸಕರು ಸೇರಿ ತೀರ್ಮಾನಿಸಿದ್ದೇವೆ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಪ್ರವೀಣ್ ನೆಟ್ಟಾರು ಅವರ ಮನೆಗೆ ಗುರುವಾರ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪ್ರವೀಣ್ ಅವರ ಕುಟುಂಬಕ್ಕೊದಗಿದ ಸ್ಥಿತಿ ಕಂಡು ಏನು ಹೇಳಬೇಕೆಂದೇ ತೋಚುತ್ತಿಲ್ಲ. ಮಗನ ಸ್ಥಾನ ತುಂಬಲು ಸಾಧ್ಯವಿಲ್ಲ. ಕುಟುಂಬಕ್ಕೆ ಸ್ಥೈರ್ಯ ತುಂಬುವ ಪ್ರಯತ್ನ ಮಾಡಿದ್ದೇವೆ ಅಷ್ಟೇ' ಎಂದರು.

'ಪ್ರವೀಣ್ ಅವರ ಪತ್ನಿಗೆ ಸರ್ಕಾರಿ ಕೆಲಸ ಕೊಡಿಸುವ ನಿಟ್ಟಿನಲ್ಲೂ ಪ್ರಯತ್ನಿಸುತ್ತೇವೆ' ಎಂದರು.

'ಕೃತ್ಯದ ಹಿಂದೆ ಯಾವುದೇ ಸಮಾಜಘಾತುಕ ಶಕ್ತಿಗಳ ಕೈವಾಡ ಇದ್ದರೂ ಅಂತಹವುಗಳನ್ನು ನಿರ್ದಾಕ್ಷಿಣ್ಯವಾಗಿ ಮಟ್ಟ ಹಾಕಬೇಕು. ಇತ್ತೀಚಿನ ದಿನಗಳಲ್ಲಿ ಇಂತಹ ಹತ್ಯೆಗಳು ಜಾಸ್ತಿ ಆಗುತ್ತಿವೆ. ರಾಜಸ್ಥಾನದಲ್ಲಿ ಟೈಲರ್ ಹತ್ಯೆ ನಡೆಯಿತು. ಶಿವಮೊಗ್ಗದಲ್ಲಿ ಹರ್ಷನ ಕೊಲೆಯಾಗಿದೆ. ಸರಪಣಿಯಂತೆ ಇಂತಹ ಘಟನೆಗಳು ಮರುಕಳಿಸುತ್ತಿವೆ. ಸಹಜವಾಗಿಯೇ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಈ ರೀತಿ ಆಗಬಾರದಿತ್ತು' ಎಂದರು.

'ಆರೋಪಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ. ಉತ್ತರ ಪ್ರದೇಶ ಮಾದರಿಯ ಕಾನೂನು ಸಾಲದು, ಅದಕ್ಕಿಂತಲೂ ಹೆಚ್ಚಿನ ಕ್ರಮದ ಅಗತ್ಯ ಇದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಚಿವ ಎಸ್.ಅಂಗಾರ, ಶಾಸಕರಾದ ಹರೀಶ್ ಪೂಂಜ, ರಾಜೇಶ್ ನಾಯ್ಕ್ ಉಳಿಪ್ಪಾಡಿಗುತ್ತು ಹಾಗೂ ಪಕ್ಷದ ಪ್ರಮುಖರು ಜೊತೆಯಲ್ಲಿದ್ದರು.

ಎಲ್ಲ ತಾಲ್ಲೂಕುಗಳಲ್ಲಿ ಶ್ರದ್ಧಾಂಜಲಿ ಸಭೆ: 'ಪ್ರವೀಣ್ ಹತ್ಯೆಯಿಂದ ಇಡೀ ರಾಜ್ಯದಲ್ಲಿ ನೋವಿನ ವಾತಾವರಣ ನಿರ್ಮಾಣವಾಗಿದ್ದು, ಬಜರಂಗ ದಳದ ನೇತೃತ್ವದಲ್ಲಿ ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿ ಶುಕ್ರವಾರ ಶ್ರದ್ಧಾಂಜಲಿ ಸಭೆ ನಡೆಯಲಿದೆ' ಎಂದು ವಿಶ್ವ ಹಿಂದೂ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ ಸಂಯೋಜಕ ಸುನಿಲ್ ಕೆ.ಆರ್. ತಿಳಿಸಿದರು.

ಪ್ರವೀಣ್ ಹತ್ಯೆ ಪ್ರಕರಣದ ತನಿಖೆಗೆ ವಿಶೇಷ ಪೊಲೀಸ್ ತನಿಖಾ ದಳವನ್ನು (ಎಸ್‌ಐಟಿ) ರಚಿಸಬೇಕು. ಇದು ಮತಾಂಧ ಮುಸ್ಲಿಮರು ನಡೆಸಿದ ಯೋಜಿತ ಕೃತ್ಯವಾಗಿದ್ದು, ದಕ್ಷ ಪೊಲೀಸ್ ಅಧಿಕಾರಿಯ ನೇತೃತ್ವದಲ್ಲಿ ತನಿಖೆ ನಡೆಯಬೇಕು ಎಂದು ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

'ಜೈಲಿನಲ್ಲಿ ರಾಜಾತಿಥ್ಯ; ಭಯವೇ ಇಲ್ಲ': 'ವಾರದ ಹಿಂದೆಯೇ ಕರಾವಳಿ ಭಾಗದಲ್ಲಿ ಕೊಲೆ ನಡೆದಿತ್ತು. ಪ್ರಕರಣದ ನಂತರ ಪೊಲೀಸ್ ಇಲಾಖೆ ಎಚ್ಚೆತ್ತುಕೊಳ್ಳದ ಪರಿಣಾಮವೇ ಪ್ರವೀಣ್ ಹತ್ಯೆಯಾಗಿದೆ. ಹರ್ಷ ಕೊಲೆ ಆರೋಪಿಗಳಿಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ರಾಜಾತಿಥ್ಯ ನೀಡಲಾಯಿತು. ಹೀಗಾಗಿ ಹಂತಕರಿಗೆ ಪೊಲೀಸರ ಭಯವೇ ಇಲ್ಲದಂತಾಗಿದೆ' ಎಂದು ಶಿವಮೊಗ್ಗದಲ್ಲಿ ಕೊಲೆಯಾಗಿದ್ದ ಬಜರಂಗದಳ ಕಾರ್ಯಕರ್ತ ಹರ್ಷ ಅವರ ಸಹೋದರಿ ಅಶ್ವಿನಿ ಹೇಳಿದ್ದಾರೆ.

'ದುರ್ಬಲ ವರ್ಗದವರೇ'

'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಹತ್ಯೆಗಳ ಹಿಂದಿರುವ ನೈಜ ಶಕ್ತಿ ಯಾವುದು ಎಂದು ಪತ್ತೆ ಹಚ್ಚಿ, ಕಠಿಣ ಶಿಕ್ಷೆ ವಿಧಿಸಿದಾಗ ಮಾತ್ರ ಇಂತಹ ಘಟನೆಗಳು ಮರುಕಳಿಸುವುದು ನಿಲ್ಲುತ್ತವೆ. ಜಿಲ್ಲೆಯಲ್ಲಿ ನಡೆದಿರುವ ಘಟನೆಗಳಲ್ಲಿ ಹತ್ಯೆಯಾದ ಯುವಕರು ಮತ್ತು ಜೈಲಿಗೆ ಹೋದ ಯುವಕರು, ಅವರು ಹಿಂದೂ ಸಮುದಾಯದವರೇ ಇರಲಿ ಅಥವಾ ಮುಸ್ಲಿಂ ಸಮುದಾಯದವರೇ ಇರಲಿ ಎಲ್ಲರೂ ದುರ್ಬಲ ವರ್ಗದವರೇ ಆಗಿದ್ದಾರೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ರಮಾನಾಥ ರೈ ದೂರಿದರು.

ಶಂಕಿತ ಉಗ್ರರ ಬಂಧನ ಪ್ರಕರಣ • ಹೇಳಿಕೆ ಪಡೆದ ತನಿಖಾ ಸಂಸ್ಥೆಗಳು

'ಅನುಮಾನ, ಅವಮಾನ ಸಹಿಸದೆ ಉಗ್ರನಾಗಲು ಹೊರಟಿದ್ದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್‌ಕೈದಾ ಉಗ್ರ ಸಂಘಟನೆ ಸೇರಲು ಅಫ್ಗಾನಿಸ್ತಾನಕ್ಕೆ ಹೊರಟಿದ್ದ ಇಬ್ಬರು ಶಂಕಿತ ಉಗ್ರರ ವಿಚಾರಣೆ ಮುಂದುವರಿಸಿರುವ ನಗರದ ಸಿಸಿಬಿ ಹಾಗೂ ರಾಜ್ಯ ಗುಪ್ತದಳದ ಅಧಿಕಾರಿಗಳು, ವಿಡಿಯೊ ಚಿತ್ರೀಕರಣ ಸಮೇತ ಇಬ್ಬರಿಂದಲೂ ಹೇಳಿಕೆ ಪಡೆದುಕೊಂಡಿದ್ದಾರೆ.

'ಬೆಂಗಳೂರಿನ ತಿಲಕ್‌ನಗರದಲ್ಲಿ ಜುಲೈ 24ರಂದು ಬಂಧಿಸಲಾಗಿರುವ ಅಖ್ತರ್ ಹುಸೇನ್ ಲಷ್ಕರ್ (24) ಹಾಗೂ ತಮಿಳುನಾಡಿನ ಸೇಲಂನಲ್ಲಿ ಸಿಕ್ಕಿಬಿದ್ದಿರುವ ಅಬ್ದುಲ್ ಅಲೀಂ ಮಂಡಲ್ ಅಲಿಯಾಸ್ ಜುಬಾನನ್ನು (23) ವಿಚಾರಣೆ ಒಳಪಡಿಸಲಾಗುತ್ತಿದೆ. ಈಗಾಗಲೇ ಇವರಿಂದ ಹೇಳಿಕೆಯೊಂದನ್ನು ಪಡೆಯಲಾಗಿದ್ದು, ಪರಿಶೀಲನೆ ನಡೆದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಸ್ಸಾಂ ಹಾಗೂ ಹಿಂದಿ ಭಾಷೆಯಲ್ಲಿ ಶಂಕಿತರು ಹೇಳಿಕೆ ನೀಡಿದ್ದು, ಅದನ್ನು ಇಂಗ್ಲಿಷ್‌ಗೆ ಭಾಷಾಂತರಿಸಲಾಗಿದೆ. ಇದನ್ನೇ ನ್ಯಾಯಾಲಯಕ್ಕೂ ಸಲ್ಲಿಸಲಾಗುವುದು' ಎಂದು ತಿಳಿಸಿವೆ.

ಅಖ್ತರ್ ಹುಸೇನ್ ಲಷ್ಕರ್

ಅಖ್ತರ್ ಹುಸೇನ್ ಹೇಳಿಕೆಯಲ್ಲಿ ಏನಿದೆ?: 'ಬಾಲ್ಯದಿಂದಲೂ ಧರ್ಮದ ಬಗ್ಗೆ ಅಭಿಮಾನವಿತ್ತು. ಧರ್ಮದ ಪ್ರತಿಯೊಂದು ಸಂದೇಶವನ್ನು ಶ್ರದ್ಧೆಯಿಂದ ಪಾಲಿಸುತ್ತಿದ್ದೆ. ಧರ್ಮದ ಬಗ್ಗೆ ಯಾರಾದರೂ ಕೆಟ್ಟದಾಗಿ ಮಾತನಾಡಿದರೆ, ಕೋಪ ಬರುತ್ತಿತ್ತು. ಮಾತಿನ ಮೂಲಕವೇ ಆಕ್ರೋಶ ವ್ಯಕ್ತಪಡಿಸುತ್ತಿದೆ' ಎಂಬುದಾಗಿ ಅಖ್ತರ್ ಹುಸೇನ್ ಹೇಳಿರುವುದಾಗಿ ಮೂಲಗಳು ಹೇಳಿವೆ.

'ಬೆಂಗಳೂರಿಗೆ ಬಂದ ನಂತರವೂ ಧರ್ಮ ಪಾಲಿಸುತ್ತಿದ್ದೆ. ಗಡ್ಡ ಬಿಟ್ಟು, ನಿತ್ಯವೂ ಪ್ರಾರ್ಥನೆ ಸಲ್ಲಿಸುತ್ತಿದ್ದೆ. ಕೆಲಸಕ್ಕಾಗಿ ಹುಡುಕಾಡುವಾಗ, ನನ್ನ ಭಾಷೆ ಹಾಗೂ ಗಡ್ಡ ನೋಡಿ ಯಾರೂ ಕೆಲಸ ಕೊಡಲಿಲ್ಲ. ಎಲ್ಲರೂ ಅನುಮಾನದಿಂದ ನೋಡಿದರು. ಊಟಕ್ಕೆ ಪರದಾಡುವ ಸ್ಥಿತಿ ನಿರ್ಮಾಣವಾದಾಗ, ಸ್ನೇಹಿತರೊಬ್ಬರ ಮೂಲಕ ಜೊಮ್ಯಾಟೊ ಡೆಲಿವರಿ ಬಾಯ್ ಆಗಿ ಕೆಲಸಕ್ಕೆ ಸೇರಿದ್ದೆ. ನಂತರ, ತಿಲಕ್‌ನಗರದಲ್ಲಿ ಬಾಡಿಗೆ ಕೊಠಡಿಯಲ್ಲಿ ವಾಸವಿದ್ದೆ.'

'ತಮ್ಮನನ್ನೂ ನಗರಕ್ಕೆ ಕರೆಸಿಕೊಂಡು ಆತನಿಗೂ ಕೆಲಸ ಕೊಡಿಸಿದ್ದೆ. ಇಬ್ಬರೂ ದುಡಿದು ಊರಿಗೂ ಹಣ ಕಳುಹಿಸುತ್ತಿದ್ದೆವು. ಆಹಾರ ಪೂರೈಕೆ ಮಾಡಲು ಹೋದಾಗ, ನನ್ನ ಗಡ್ಡ ನೋಡಿ ಗ್ರಾಹಕರು ಸಂಶಯ ಪಡುತ್ತಿದ್ದರು. ಕೆಲವರು, ನನ್ನ ಕೈಯಿಂದ ಆಹಾರ ಪೊಟ್ಟಣ ತೆಗೆದುಕೊಳ್ಳಲು ನಿರಾಕರಿಸಿದರು. ಇಷ್ಟೆಲ್ಲ ಅನುಭವಿಸಿದ ನಂತರ, ನನ್ನ ಆಕ್ರೋಶ ಮತ್ತಷ್ಟು ಹೆಚ್ಚಾಯಿತು' ಎಂದು ಅಖ್ತರ್ ತಿಳಿಸಿರುವುದಾಗಿ ಮೂಲಗಳು ವಿವರಿಸಿವೆ.

'ಜಮ್ಮು–ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದಾಯಿತು, ಮುಸ್ಲಿಂ ಬಳಿ ವ್ಯಾಪಾರ ಮಾಡಬೇಡಿ ಎಂಬ ಅಭಿಯಾನ ಶುರುವಾಯಿತು, ಹಿಜಾಬ್ ವಿಚಾರದಲ್ಲೂ ಅನ್ಯಾಯ ಆಯಿತು. ಇದರ ವಿರುದ್ಧ ಆಕ್ರೋಶ ಹೊರಹಾಕಲು, ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ಖಾತೆ ತೆರೆದೆ. ದೇಶದ ವಿರುದ್ಧವಾಗಿ ಪ್ರಚೋದನಕಾರಿ ಪೋಸ್ಟ್ ಪ್ರಕಟಿಸುತ್ತಿದ್ದೆ. ನನ್ನ ಪೋಸ್ಟ್‌ಗೆ ಕಾಮೆಂಟ್ ಮಾಡುತ್ತಿದ್ದ ಪಶ್ಚಿಮ ಬಂಗಾಳದ ವ್ಯಕ್ತಿಯೊಬ್ಬರ ಮೂಲಕ ಅಲ್‌ಕೈದಾ ಉಗ್ರರು ಪರಿಚಿತರಾದರು. ಹಲವು ಇ-ಬುಕ್‌ಗಳನ್ನು ಕಳುಹಿಸಿದರು. ವೇತನ ಹಾಗೂ ಎಲ್ಲ ಸೌಕರ್ಯ ಕಲ್ಪಿಸುವುದಾಗಿಯೂ ಹೇಳಿದರು. ವ್ಯವಸ್ಥೆಯಿಂದ ಬೇಸತ್ತಿದ್ದ ನಾನು, ಉಗ್ರನಾಗಲು ತೀರ್ಮಾನಿಸಿ ಅಫ್ಗಾನಿಸ್ತಾನ್‌ಗೆ ಹೋಗಲು ಸಿದ್ಧವಾಗಿದ್ದೆ' ಎಂದೂ ಅಖ್ತರ್ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

'ಅಲ್ಲಾಹನ ಸರ್ಕಾರ ತರಲು ನನ್ನ ಬಲಿ'

'ಪ್ರವಾದಿಗಳ ಸಂದೇಶ ಪಾಲಿಸುವುದು ನಮ್ಮ ಆದ್ಯ ಕರ್ತವ್ಯ. ಭಾರತ ಹಾಗೂ ಎಲ್ಲ ದೇಶಗಳಲ್ಲಿ ಅಲ್ಲಾಹನ ಸರ್ಕಾರ ಬರಬೇಕು. ಅದಕ್ಕಾಗಿ ನಾನು ಬಲಿಯಾಗಲೂ ಸಿದ್ಧನಿರುವುದಾಗಿ ಅಲ್‌ಕೈದಾ ಉಗ್ರರಿಗೆ ಹೇಳಿದ್ದೆ. ನನ್ನನ್ನು ನೇಮಕ ಮಾಡಿಕೊಂಡು ತರಬೇತಿ ನೀಡುವುದಾಗಿ ಉಗ್ರರು ತಿಳಿಸಿದ್ದರು' ಎಂದೂ ಅಖ್ತರ್ ವಿಚಾರಣೆಯಲ್ಲಿ ಹೇಳಿರುವುದಾಗಿ ಗೊತ್ತಾಗಿದೆ.

ಅಸ್ಸಾಂ, ಪಶ್ಚಿಮ ಬಂಗಾಳಕ್ಕೆ ವಿಶೇಷ ತಂಡ

'ಶಂಕಿತರ ಬಗ್ಗೆ ಮಾಹಿತಿ ಕಲೆಹಾಕಲೆಂದು ರಾಜ್ಯ ವಿಶೇಷ ತಂಡದ ಅಧಿಕಾರಿಗಳು, ಅಸ್ಸಾಂ ಹಾಗೂ ಪಶ್ಚಿಮ ಬಂಗಾಳಕ್ಕೆ ಹೋಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪಘಾತ: ದಂಪತಿ ಸಾವು

ಬೆಂಗಳೂರು: ಪೀಣ್ಯ ಮೇಲ್ಸೇತುವೆಯಲ್ಲಿ ಬುಧವಾರ ರಾತ್ರಿ ಅಪಘಾತ ಸಂಭವಿಸಿದ್ದು, ರುದ್ರೇಶ್ (36) ಹಾಗೂ ಪತ್ನಿ ಸುನೀತಾ(30) ಮೃತಪಟ್ಟಿದ್ದಾರೆ.

'ದಾಸನಪುರದ ಸಿದ್ದನಹೊಸಹಳ್ಳಿ ನಿವಾಸಿಗಳಾದ ದಂಪತಿ, ಬೈಕ್‌ನಲ್ಲಿ ಹೊರಟಿದ್ದರು. ಅಪರಿಚಿತ ವಾಹನವೊಂದು ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ದಂಪತಿ ಅಸುನೀಗಿದ್ದಾರೆ' ಎಂದು ಪೀಣ್ಯ ಸಂಚಾರ ಠಾಣೆ ಪೊಲೀಸರು ಹೇಳಿದರು.

'ರುದ್ರೇಶ್ ಗಾರೆ ಕೆಲಸ ಮಾಡುತ್ತಿದ್ದರು. ಸುನೀತಾ ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗಿ. ಇಎಸ್‌ಐ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಸಂಬಂಧಿಕರ ಆರೋಗ್ಯ ವಿಚಾರಿಸಿಕೊಂಡು ದಂಪತಿ ವಾಪಸು ಮನೆಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ.

ಮತದಾರರ ಗುರುತಿನ ಚೀಟಿ: 17 ವರ್ಷ ಮೇಲ್ಪಟ್ಟವರಿಗೂ ಅರ್ಜಿ ಸಲ್ಲಿಸಲು ಅವಕಾಶ

ನವದೆಹಲಿ (ಪಿಟಿಐ): ಮತದಾನ ಪ್ರಕ್ರಿಯೆಯಲ್ಲಿ ಯುವ ಜನರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಚುನಾವಣಾ ಆಯೋಗವು 17 ವರ್ಷ ಮೇಲ್ಪಟ್ಟವರು ಮುಂಚಿತವಾಗಿಯೇ ಮತದಾರರ ಗುರುತಿನ ಚೀಟಿಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಹೀಗೆ ಅರ್ಜಿ ಸಲ್ಲಿಸಿದವರಿಗೆ 18 ವರ್ಷ ಪೂರ್ಣಗೊಂಡ ಬಳಿಕ ಗುರುತಿನ ಚೀಟಿ ಸಿಗಲಿದೆ.

ಆಯಾ ವರ್ಷದ ಜನವರಿ 1ರಂದು ಅಥವಾ ಜನವರಿ 1ರೊಳಗೆ 18 ವರ್ಷ ಪೂರ್ಣಗೊಳಿಸಿದವರಿಗಷ್ಟೇ ಈ ಮೊದಲು ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತಿತ್ತು. ಜನವರಿ 1ರ ನಂತರ 18 ವರ್ಷ ಪೂರ್ಣಗೊಳಿಸಿದವರು ಮತದಾರರ ಗುರುತಿನ ಚೀಟಿಗಾಗಿ ಹೆಸರು ನೋಂದಾಯಿಸಲು ಮುಂದಿನ ವರ್ಷದವರೆಗೆ ಕಾಯಬೇಕಾಗಿತ್ತು.

ಇದನ್ನು ತಪ್ಪಿಸುವ ಸಲುವಾಗಿ ಚುನಾವಣಾ ಕಾನೂನಿನಲ್ಲಿ ಕೆಲ ಮಾರ್ಪಾಡುಗಳನ್ನು ಮಾಡಲಾಗಿದ್ದು, ಇನ್ನು ಮುಂದೆ ಜನವರಿ 1, ಏಪ್ರಿಲ್ 1, ಜುಲೈ 1 ಹಾಗೂ ಅಕ್ಟೋಬರ್ 1ರೊಳಗೆ 18 ವರ್ಷ ಪೂರ್ಣಗೊಂಡವರೂ ಗುರುತಿನ ಚೀಟಿಗಾಗಿ ಹೆಸರು ನೋಂದಣಿ ಮಾಡಿಕೊಳ್ಳಬಹುದಾಗಿದೆ.

'ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಮತ್ತು ಚುನಾವಣಾ ಆಯುಕ್ತ ಅನೂಪ್‌ಚಂದ್ರ ಪಾಂಡೆ ನೇತೃತ್ವದ ಸಮಿತಿಯು 17 ವರ್ಷ ಮೇಲ್ಪಟ್ಟವರಿಗೆ ಮುಂಚಿತವಾಗಿಯೇ ಅರ್ಜಿ ಸಲ್ಲಿಸಲು ಅವಕಾಶ ನೀಡುವ ಸಂಬಂಧ ನಿರ್ಣಯ ಕೈಗೊಂಡಿದೆ. ಇದನ್ನು ಕಾರ್ಯಗತಗೊಳಿಸುವಂತೆ ರಾಜ್ಯ ಚುನಾವಣಾ ಆಯೋಗಗಳಿಗೆ ನಿರ್ದೇಶನ ನೀಡಲಾಗಿದೆ. ಇದರ ಜಾರಿಗೆ ತಾಂತ್ರಿಕವಾಗಿ ಏನಾದರೂ ತೊಂದರೆಗಳಿದ್ದರೆ ಅದನ್ನು ನಿವಾರಿಸುವಂತೆಯೂ ಸೂಚಿಸಿದೆ' ಎಂದು ಚುನಾವಣಾ ಆಯೋಗ ಗುರುವಾರ ಪ್ರಕಟಣೆಯಲ್ಲಿ ತಿಳಿಸಿದೆ.

'ಇನ್ನು ಮುಂದೆ ಪ್ರತಿ ನಾಲ್ಕು ತಿಂಗಳಿಗೊಮ್ಮೆ ಮತದಾರರ ಪಟ್ಟಿಯು ಪರಿಷ್ಕರಣೆಯಾಗಲಿದೆ. 2023ರ ಏಪ್ರಿಲ್ 1, ಜುಲೈ 1 ಮತ್ತು ಅಕ್ಟೋಬರ್ 1ರೊಳಗೆ 18 ವರ್ಷ ಪೂರ್ಣಗೊಂಡರೆ ಅಂತಹವರು ಮುಂಚಿತವಾಗಿಯೇ ಅರ್ಜಿ ಸಲ್ಲಿಸಬಹುದು' ಎಂದು ವಿವರಿಸಿದೆ.

ವಿಶ್ವನೀಡಂ ರೋಟರಿ: ವಿದ್ಯಾರ್ಥಿಗಳಿಗೆ ಟ್ಯಾಬ್

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕೋವಿಡ್ ಸಮಯದಲ್ಲಿ ಆನ್‌ಲೈನ್ ಪಾಠದಿಂದ ವಂಚಿತರಾಗಿದ್ದ ನೂರಾರು ವಿದ್ಯಾರ್ಥಿಗಳಿಗೆ ವಿಶ್ವನೀಡಂ ರೋಟರಿ ಸಂಸ್ಥೆಯವರು ಉಚಿತ ಟ್ಯಾಬ್‌ಗಳನ್ನು ನೀಡಿ, ಮಾನವೀಯತೆ ಮೆರೆದಿದ್ದಾರೆ ಎಂದು ಬೆಂಗಳೂರು ಜಿಲ್ಲಾ ನಿಯೋಜಿತ ಗವರ್ನರ್ ಶ್ರೀನಿವಾಸ ಮೂರ್ತಿ ಮೆಚ್ಚುಗೆ ವ್ಯಕ್ತಪಡಿಸಿದರು.

ನಾಗರಭಾವಿಯಲ್ಲಿ ಹಮ್ಮಿಕೊಂಡಿದ್ದ ವಿಶ್ವನೀಡಂ ರೋಟರಿ ಕ್ಲಬ್ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಕೋವಿಡ್ ಸಮಯದಲ್ಲಿ ದೇಶದ ಎಲ್ಲ ರೋಟರಿ ಸಂಸ್ಥೆಗಳು ₹200 ಕೋಟಿ ಖರ್ಚು ಮಾಡಿ ಸಮಾಜಮುಖಿ ಸೇವೆ ಮಾಡುವ ಕಾರ್ಯದಲ್ಲಿ ಕೈಜೋಡಿಸಿ ಶ್ರಮಿಸಿದ ಎಲ್ಲರಿಗೂ ಧನ್ಯವಾದ. ಮುಂದೆಯೂ ಸಮಸ್ಯೆ ಎದುರಾದಾಗ ಸೇವೆ ಮಾಡಲು ಎಲ್ಲರೂ ಸಿದ್ಧರಾಗಿ' ಎಂದು ಮನವಿ ಮಾಡಿದರು.

ಸಹಾಯಕ ಜಿಲ್ಲಾ ರೋಟರಿ ಗವರ್ನರ್ ಕೆ.ಟಿ. ನಿರಂಜನ್ ಮಾತನಾಡಿ, 'ಕೋವಿಡ್ ಸಮಯದಲ್ಲಿ ಸರ್ಕಾರಿ, ಅನುದಾನಿತ ವಿದ್ಯಾ ಸಂಸ್ಥೆಗಳ ನೂರಾರು ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್, ಟ್ಯಾಬ್‌ಗಳನ್ನು ವಿಶ್ವನೀಡಂ ರೋಟರಿ ಸಂಸ್ಥೆಯ ಪದಾಧಿಕಾರಿಗಳು ವಿತರಿಸಿದ್ದಾರೆ' ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ವಿಶ್ವನೀಡಂ ರೋಟರಿ ಕ್ಲಬ್‌ನ ಮಾಜಿ ಅಧ್ಯಕ್ಷ ಪರಮೇಶ್‌ಗೌಡ ಸಿ.ಜಿ ಮಾತನಾಡಿ, 'ಜಿಲ್ಲಾ ಸಹಾಯಕ ಗವರ್ನರ್ ಕೆ.ಟಿ.ನಿರಂಜನ್ ಅವರು ಹಲವಾರು ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಆರ್ಥಿಕ ಸಹಾಯ, ಲ್ಯಾಪ್‌ಟಾಪ್‌ಗಳನ್ನು ನೀಡಿದ್ದಲ್ಲದೆ ಪರಿಸರ, ಆರೋಗ್ಯ ಸೇವೆಯಲ್ಲಿಯೂ ಮುಂಚೂಣಿಯಲಿದ್ದಾರೆ' ಎಂದು ಹೇಳಿದರು.

ವಿಶ್ವನೀಡಂನ ನಿರ್ಗಮಿತ ಅಧ್ಯಕ್ಷ ಸತೀಶ್ ಅವರು ನೂತನ ಅಧ್ಯಕ್ಷ ಮೋಹನ್‌ಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಮಾಡಿದರು. ಕಾರ್ಯದರ್ಶಿ ಚಂದ್ರಶೇಖರ್, ಖಜಾಂಚಿ ರವಿಕುಮಾರ್ ಪ್ರಮಾಣ ವಚನ ಸ್ವೀಕರಿಸಿದರು.

ಸಂಗೀತ ಮತ್ತು ಸಮಾಜ ಸೇವಕಿ ನಾಗಚಂದ್ರಿಕ ಭಟ್ ಅವರನ್ನು ವಿಶ್ವ ನೀಡಂ ರೋಟರಿ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ಬೆಂಗಳೂರು ಜಿಲ್ಲಾ ನಿಯೋಜಿತ ಗೌರ್ನರ್ ಶ್ರೀನಿವಾಸ ಮೂರ್ತಿ, ಕೆ.ಟಿ.ನಿರಂಜನ್, ಮೋಹನ್ ಕುಮಾರ್, ಸತೀಶ್, ಬಿ.ಎಸ್.ಪ್ರಭುದೇವರು, ಮಲ್ಲಿಕಾರ್ಜುನ, ಚಂದ್ರಶೇಖರ್ ಇದ್ದಾರೆ

ಕಳ್ಳನ ಬಂಧನ: ಬೆಂಗಳೂರಿನ 6 ಬೈಕ್ ಜಪ್ತಿ

ಪ್ರಜಾವಾಣಿ ವಾರ್ತೆ

ಜಾಲಹಳ್ಳಿ (ರಾಯಚೂರು ಜಿಲ್ಲೆ): ದೇವದುರ್ಗ ತಾಲ್ಲೂಕು ಜಾಲಹಳ್ಳಿ ಪೊಲೀಸ್ ಠಾಣೆ ಪೊಲೀಸರು ಗುರುವಾರ ಬೆಳಗಿನ ಜಾವ ಕಾರ್ಯಾಚರಣೆ ನಡೆಸಿ ಬೈಕ್ ಕಳ್ಳನನ್ನು ಬಂಧಿಸಿದ್ದು, ಆರೋಪಿಯಿಂದ ಆರು ಬೈಕ್ ಜಪ್ತಿ ಮಾಡಿಕೊಂಡಿದ್ದಾರೆ.

ರಂಗನಾಥ ದುರುಗಪ್ಪ

ಬೆಂಗಳೂರಿನಲ್ಲಿ ವಾಸವಿರುವ ಜಾಲಹಳ್ಳಿಯ ರಂಗನಾಥ ದುರುಗಪ್ಪ ದೊಡ್ಡಮನಿ ಬಂಧಿತ ಆರೋಪಿ.

ಬೆಂಗಳೂರಿನಲ್ಲಿ ಪಲ್ಸರ್ ಹಾಗೂ ರಾಯಲ್ ಎನ್‌ಫೀಲ್ಡ್ ಬೈಕ್ ಕಳ್ಳತನ ಮಾಡಿಕೊಂಡು ತಂದು, ಜಾಲಹಳ್ಳಿ ಮತ್ತು ಸುತ್ತಲಿನ ಗ್ರಾಮಗಳ ಜನರಿಗೆ ಮಾರಾಟ ಮಾಡುತ್ತಿದ್ದುದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ತಿಂಥಣಿ ಬ್ರಿಡ್ಜ್ ಕಡೆಯಿಂದ ಜಾಲಹಳ್ಳಿಗೆ ಬೆಳಗಿನ ಜಾವ ರಾಯಲ್ ಎನ್‌ಫೀಲ್ಡ್‌ನಲ್ಲಿ ಬರುತ್ತಿದ್ದ ಆರೋಪಿಯು ದೂರದಿಂದ ಪೊಲೀಸರನ್ನು ಗಮನಿಸಿ ವಾಪಸ್ ಹೋಗಿದ್ದು ಸಂಶಯಕ್ಕೀಡು ಮಾಡಿತ್ತು. ಪೊಲೀಸರು ಬೆನ್ನುಬಿದ್ದು ವಿಚಾರಿಸಿದಾಗ ಬೈಕ್ ಕಳ್ಳತನ ಬಯಲಾಗಿದೆ. ಆರೋಪಿಯು ಬೆಂಗಳೂರಿನಲ್ಲಿ ಛಾಯಾಚಿತ್ರಗ್ರಾಹಕ ವೃತ್ತಿ ಮಾಡುತ್ತಿರುವುದಾಗಿ ತಿಳಿಸಿದ್ದಾನೆ.

ಪಿಎಸ್‌ಐ ಮುದ್ದುರಂಗಸ್ವಾಮಿ, ಸಿಬ್ಬಂದಿ ಬಾಲಗೌಡ, ವೆಂಕಟೇಶ, ದೇವರಾಜ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು ಎಂದು ಲಿಂಗಸುಗೂರು ಡಿವೈಎಸ್‌ಪಿ ಎಸ್.ಮಂಜುನಾಥ ಮಾಹಿತಿ ನೀಡಿದರು.

ಸಿಪಿಐ ಖಾಜಾಹುಸೇನ್ ಇದ್ದರು.

ರಾಯಚೂರು ಜಿಲ್ಲೆ ಜಾಲಹಳ್ಳಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಗುರುವಾರ ಕಳ್ಳತನವಾಗಿರುವ ಬೈಕ್ ಸಮೇತವಾಗಿ ಆರೋಪಿಯನ್ನು ಬಂಧಿಸಿದ ಪೊಲೀಸರು

ಬೀಗ ಹಾಕಿರುತ್ತಿದ್ದ ಮನೆ ಗುರುತಿಸಿ ಕಳ್ಳತನ

ಬೆಂಗಳೂರು: ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದ ಆರೋಪಿ ನವಾಜ್ ಷರೀಫ್ (55) ಎಂಬುವರನ್ನು ಕಾಮಾಕ್ಷಿಪಾಳ್ಯ ಕೃತ್ಯ ಎಸಗುತ್ತಿದ್ದ. ಈತನಿಂದ ₹ 5.10 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹1.50 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ನವಾಜ್, ಸಣ್ಣ–ಪುಟ್ಟ ಕೆಲಸ ಮಾಡುತ್ತಿದ್ದ. ಅದರಿಂದ ಬಂದ ಹಣ ಖರ್ಚಿಗೆ ಸಾಲುತ್ತಿರಲಿಲ್ಲ. ಐಷಾರಾಮಿ ಜೀವನಕ್ಕೆ ಹಣ ಹೊಂದಿಸಲು ಕಳ್ಳತನ ಎಸಗಲಾರಂಭಿಸಿದ್ದ. ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲೇ ಇತ್ತೀಚೆಗೆ ಎರಡು ಮನೆಗಳಲ್ಲಿ ಕಳ್ಳತನ ಮಾಡಿದ್ದ' ಎಂದೂ ತಿಳಿಸಿದರು.

ಅಪರಾಧ ಸುದ್ದಿ

ಮದ್ಯಕ್ಕಾಗಿ ಗಲಾಟೆ: ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಟಿ ಮಾರ್ಕೆಟ್ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ತಡರಾತ್ರಿ ಪ್ರಶಾಂತ್ (38) ಎಂಬುವರನ್ನು ಕೊಲೆ ಮಾಡಲಾಗಿದ್ದು, ಇಬ್ಬರು ಸ್ನೇಹಿತರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ಬನಶಂಕರಿಯ ಕದಿರೇನಹಳ್ಳಿ ನಿವಾಸಿ ಪ್ರಶಾಂತ್, ಹೂವು ವ್ಯಾಪಾರ ಮಾಡುತ್ತಿದ್ದರು. ಮದ್ಯದ ವಿಚಾರಕ್ಕಾಗಿ ಇವರ ಜೊತೆ ಜಗಳ ತೆಗೆದ ಸ್ನೇಹಿತರೇ ಕೊಲೆ ಮಾಡಿರುವ ಮಾಹಿತಿ ಇದೆ. ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬುಧವಾರ ರಾತ್ರಿ ಹೂವಿನ ವ್ಯಾಪಾರ ಮುಗಿಸಿದ್ದ ಪ್ರಶಾಂತ್, ನಾಲ್ವರು ಸ್ನೇಹಿತರ ಜೊತೆ ಸಿಟಿ ಮಾರ್ಕೆಟ್‌ನ ಬಾರ್‌ಗೆ ಹೋಗಿದ್ದರು. ಮದ್ಯ ಕುಡಿದು ಹೊರಬಂದಿದ್ದರು. ಮದ್ಯಕ್ಕೆ ಹಣ ನೀಡುವ ಹಾಗೂ ಮದ್ಯ ಕುಡಿದ ವಿಚಾರದಲ್ಲಿ ಸ್ನೇಹಿತರ ನಡುವೆ ಗಲಾಟೆ ಶುರುವಾಗಿತ್ತು. ಇದೇ ವೇಳೆಯೇ ಆರೋಪಿಗಳು, ಬಿಯರ್ ಬಾಟಲಿ ಹಾಗೂ ಮರದ ಪಟ್ಟಿಯಿಂದ ತಲೆಗೆ ಹೊಡೆದಿದ್ದರು. ತೀವ್ರ ರಕ್ತಸ್ರಾವದಿಂದ ಪ್ರಶಾಂತ್ ಸ್ಥಳದಲ್ಲೇ ಮೃತಪಟ್ಟಿದ್ದರು. ಸದ್ಯ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಇನ್ನಿಬ್ಬರು ತಮಿಳುನಾಡಿಗೆ ಹೋಗಿರುವ ಮಾಹಿತಿ ಇದ್ದು, ಅವರ ಬಗ್ಗೆ ವಿಶೇಷ ತಂಡ ಮಾಹಿತಿ ಕಲೆಹಾಕುತ್ತಿದೆ' ಎಂದಿವೆ.

'ಸ್ವಾಮಿ ಭದ್ರಾನಂದಜಿಗೆ ಭದ್ರತೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಲಭೂತವಾದಿಗಳಿಂದ ಪ್ರಾಣ ಬೆದರಿಕೆ ಎದುರಿಸುತ್ತಿದ್ದಾರೆ ಎನ್ನಲಾದ ಕೇರಳದ ವಿವಾದಾತ್ಮಕ ಸ್ವಾಮೀಜಿ ಭದ್ರಾನಂದಜಿ ಅವರಿಗೆ ಸೂಕ್ತ ಪೊಲೀಸ್ ಭದ್ರತೆ ಒದಗಿಸುವಂತೆ ಹೈಕೋರ್ಟ್ ಸರ್ಕಾರಕ್ಕೆ ನಿರ್ದೇಶಿಸಿದೆ.

'ಸೂಕ್ತ ಪೊಲೀಸ್ ರಕ್ಷಣೆ ಒದಗಿಸಲು ನಿರ್ದೇಶಿಸಬೇಕು' ಎಂದು ಕೋರಿ ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ ಭದ್ರಾನಂದಜಿ ಹಾಗೂ ಅವರ ತಾಯಿ ಡಾ.ಟಿ.ಆರ್. ಮಧುಜಾ ಹೇಮಚಂದ್ರನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಸ್ವಾಮೀಜಿಗೆ ಗನ್‌ಮ್ಯಾನ್ ಮತ್ತು ಅವರ ತಾಯಿ ನೆಲೆಸಿರುವ ನಿವಾಸಕ್ಕೆ ಸೂಕ್ತ ಪೊಲೀಸ್ ಭದ್ರತೆ ಒದಗಿಸಬೇಕು' ಎಂದು ಆದೇಶಿಸಿದ ನ್ಯಾಯಪೀಠ, ಅರ್ಜಿಗೆ ಸಂಬಂಧಿಸಿದಂತೆ ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿದೆ.

ಇದೇ ವೇಳೆ ಸರ್ಕಾರಿ ವಕೀಲ ವಿನೋದ್ ಕುಮಾರ್, 'ಅರ್ಜಿದಾರರು ಪಿಸ್ತೂಲ್ ಹೊಂದಲು ಈಗಾಗಲೇ ಪರ ವಾನಗಿ ನೀಡಲಾಗಿದೆ. ಅವರ ನಿವಾಸದ ಬಳಿ ಪೊಲೀಸ್ ಬೀಟ್ ವ್ಯವಸ್ಥೆ ಮಾಡಲಾಗಿದೆ' ಎಂದರು.

'ಮೂಲಭೂತವಾದಿಗಳು ಜಾಲತಾಣಗಳಲ್ಲಿ ಜೀವ ಬೆದರಿಕೆ ಒಡ್ಡುತ್ತಿದ್ದಾರೆ. ಈ ಕುರಿತಂತೆ ನಾನು ಪೊಲೀಸರಿಗೆ ಮನವಿ ಸಲ್ಲಿಸಿದ್ದೇನೆ. ಆದರೆ, ಅದನ್ನು ಇನ್ನೂ ಪರಿಗಣಿಸಿಲ್ಲ. ಹಾಗಾಗಿ, ಹೆಚ್ಚಿನ ಭದ್ರತೆ ಒದಗಿಸಬೇಕು' ಎಂದು ಸ್ವಾಮಿ ಭದ್ರಾನಂದಜಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಕೋರ್ಟ್‌ಗೆ ಟೆಂಪೊ ತುಂಬ ದಾಖಲೆ ತಂದ ಕಂದಾಯ ಇಲಾಖೆ

27 ಸಾವಿರ ಗ್ರಾಮಗಳಿಗೆ ಸ್ಮಶಾನ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಒಟ್ಟು 29,616 ಗ್ರಾಮಗಳ ಪೈಕಿ 27,099 ಗ್ರಾಮಗಳಲ್ಲಿ ಈಗಾಗಲೇ ಸ್ಮಶಾನ ಸೌಲಭ್ಯ ಒದಗಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ವಕೀಲ ಮೊಹಮ್ಮದ್ ಇಕ್ಬಾಲ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠಕ್ಕೆ ಹಾಜರುಪಡಿಸಲು ಕಂದಾಯ ಇಲಾಖೆ ಶೇಖರಿಸಿದ್ದ ಬೃಹತ್ ದಾಖಲೆಗಳನ್ನು ಟೆಂಪೊಗಳಲ್ಲಿ ತುಂಬಿಕೊಂಡು ತರಲಾಗಿತ್ತು. 31 ಜಿಲ್ಲೆಗಳ 27 ಸಾವಿರಕ್ಕೂ ಹೆಚ್ಚು ಬಂಡಲ್‌ಗಳನ್ನು ಒಳಗೊಂಡಿದ್ದ ಈ ದಾಖಲೆಗಳಲ್ಲಿ 1,006 ಬೇಚರಾಕ್ (ದಾಖಲೆ ರಹಿತ ಜನ ವಸತಿಯ ಹಳ್ಳಿ) ಗ್ರಾಮಗಳ ಮಾಹಿತಿಯನ್ನೂ ಅಡಕಗೊಳಿಸಲಾಗಿತ್ತು.



ಬೆಂಗಳೂರು ವ್ಯಾಪ್ತಿ: 'ಬೆಂಗಳೂರು ನಗರ ಜಿಲ್ಲೆಯ 813 ಗ್ರಾಮಗಳಲ್ಲಿ 760 ಗ್ರಾಮಗಳಲ್ಲಿ ಸ್ಮಶಾನ ಸೌಲಭ್ಯ ಒದಗಿಸಲಾಗಿದೆ. 53 ಗ್ರಾಮಗಳ ಪೈಕಿ 28 ಗ್ರಾಮಗಳಲ್ಲಿ ಸರ್ಕಾರಿ ಜಮೀನು ಇಲ್ಲದ್ದರಿಂದ ನೆರೆಗ್ರಾಮದ ಸ್ಮಶಾನಗಳನ್ನೇ ನಿಗದಿಪಡಿಸಲಾಗಿದೆ' ಎಂದು ತಿಳಿಸಲಾಗಿದೆ.

'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ 23 ಗ್ರಾಮಗಳಿದ್ದು, ಇಲ್ಲಿ ಚಿತಾಗಾರ ನಿಗದಿಪಡಿಸಲಾಗಿದೆ. ಉಳಿದಂತೆ 2 ಗ್ರಾಮಗಳಲ್ಲಿ ಈ ಹಿಂದಿನಿಂದಲೂ ಪಕ್ಕದ ಗ್ರಾಮದ ಸ್ಮಶಾನವನ್ನು ಉಪಯೋಗಿಸಲಾಗುತ್ತಿದೆ' ಎಂದು ತಿಳಿಸಲಾಗಿದೆ. ದಾಖಲೆಗಳ ಮಾಹಿತಿಯನ್ನು ಅರ್ಜಿದಾರರಿಗೂ ಒದಗಿಸುವಂತೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಎರಡು ವಾರ ಕಾಲ ಮುಂದೂಡಿದೆ.

'ಸ್ಮಶಾನಕ್ಕೆ ಜಾಗ ಇಲ್ಲದ ಗ್ರಾಮ ಮತ್ತು ಪಟ್ಟಣ ಪ್ರದೇಶಗಳಿಗೆ ಅಗತ್ಯ ಜಮೀನು ಒದಗಿಸಿರುವ ಕುರಿತಂತೆ ಗ್ರಾಮವಾರು ಮಾಹಿತಿ ಒದಗಿಸಿ' ಎಂದು ಹೈಕೋರ್ಟ್, 2022ರ ಜೂನ್ 30ರಂದು ರಾಜ್ಯ ಸರ್ಕಾರಕ್ಕೆ ಆದೇಶಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಈಗಾಗಲೇ ಮೂರು ರಿಟ್ ಅರ್ಜಿಗಳನ್ನು ಸಲ್ಲಿಸಿ ಕಾನೂನು ಹೋರಾಟ ನಡೆಸಿದ್ದರು.

ಪುಣೆ ರೇಸ್

ಪೆಟ್ರೋನಿಯಾ ಗೆಲ್ಲುವ ನಿರೀಕ್ಷೆ

ಎಸ್.ಆರ್.ಕ್ಯಾಪ್ಟನ್ ಟ್ರೋಫಿ ಶುಕ್ರವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪೆಟ್ರೋನಿಯಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮೆಜೆಸ್ಟಿಕ್ ವಾರಿಯರ್ 1, ಪೆಪ್ಪರ್ 4, ರಿದ್ಮ್ ಆಫ್ ನೇಚರ್ 6
2ನೇ ರೇಸ್: ಸ್ಕೈಸ್ಟಾರ್ಮ್ 3, ಫೇರ್‌ಮಾಂಟ್ 2, ಜೆರುಸಲೆಮ್ 4
3ನೇ ರೇಸ್: ಡಾಲಿ ಸ್ವಿರ್ಲ್ 2, ಅರೇಬಿಯನ್ ಫಿನಿಕ್ಸ್ 1, ಮೈ ಟ್ರೆಷರ್ 6
4ನೇ ರೇಸ್: ಪೆಟ್ರೋನಿಯಾ 3, ಸ್ಕೈ ಫಾಲ್ 8, ಕಿನ್ನರ 6
5ನೇ ರೇಶ್: ರಾಸ್ಪುಟಿನ್ 1, ಕ್ವೀನ್ ಓ ವಾರ್ 4, ಅಲ್ಕೈಸ್ಟರ್ 7
6ನೇ ರೇಸ್: ಕ್ವೀನ್ಸ್ ಪ್ರೈಡ್ 13, ಎಸ್ಪರಾಂಜ 5, ಹೈ ಸ್ಪಿರಿಟ್ 7
7ನೇ ರೇಸ್: ಆಂಪೆಡ್ 2, ಮ್ಯಾಡ್ ಲವ್ 1, ಸೋ ಸೋ ಸ್ಪೆಷಲ್ 3

ಉತ್ತಮ ಬೆಟ್: ಮೆಜೆಸ್ಟಿಕ್ ವಾರಿಯರ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಧ್ವಜ ಸತ್ಯಾಗ್ರಹ ಇಂದಿನಿಂದ



ಮೈಸೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯಲ್ಲಿ ಸಿಂಥೆಟಿಕ್‌ನಿಂದ ಮಾಡಿದ ಧ್ವಜ ಬಳಕೆ ವಿರೋಧಿಸಿ ಇಲ್ಲಿನ 'ನಾಗರಿಕ ಸಮಿತಿ' ವಿವಿಧ ಸಂಘಟನೆಗಳ ಸಹಯೋಗದಲ್ಲಿ ಜುಲೈ 29ರಿಂದ ರಾಜ್ಯದಾದ್ಯಂತ ಧ್ವಜ ಸತ್ಯಾಗ್ರಹ ಹಮ್ಮಿಕೊಂಡಿದೆ.

'ದೇಶದ ಖಾದಿ ಉತ್ಪಾದನಾ ಕೇಂದ್ರಗಳ ಮೇಲೆ ನೂರಾರು ಕೋಟಿ ಸಾಲವಿದೆ. ಆಸ್ತಿ ಮಾರಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ನೂಲುವ, ನೇಯುವ ಲಕ್ಷಾಂತರ ಗ್ರಾಮೀಣರ ಕತ್ತುಹಿಸುಕುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ' ಎಂದು ರಂಗಕರ್ಮಿ ಪ್ರಸನ್ನ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

'29ರಂದು ಮೈಸೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸತ್ಯಾಗ್ರಹ, ಪಾದಯಾತ್ರೆ ನಡೆಸಲಾಗುವುದು. ಆ. 10ರಂದು ಬೆಂಗಳೂರು, ತುಮಕೂರು, ಚಾಮರಾಜನಗರ, ಸಾಗರ ಸೇರಿ ರಾಜ್ಯದೆಲ್ಲೆಡೆ ಸತ್ಯಾಗ್ರಹ ನಡೆಸಲಾಗುವುದು. ಆ.14ರ ಭಾನುವಾರ ಬೆಂಗಳೂರಿನ ರಾಗಿಕಣದಲ್ಲಿ ದೊಡ್ಡ ಮಟ್ಟದ ಸತ್ಯಾಗ್ರಹ ನಡೆಯಲಿದೆ' ಎಂದರು.

ಪರಿಶಿಷ್ಟ ಜಾತಿ–ಪಂಗಡಗಳ ಸುಳ್ಳು ಜಾತಿ ಪ್ರಮಾಣಪತ್ರಗಳ ವಿರೋಧಿ ಹೋರಾಟ ಸಮಿತಿ ಪ್ರತಿಭಟನೆ

'ಸಂವಿಧಾನಬದ್ಧ ಮೀಸಲಾತಿ ಕದಿಯುವ ಹುನ್ನಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಡ ಜಂಗಮರು ಎಂಬ ಸುಳ್ಳು ಪ್ರಮಾಣಪತ್ರದ ಮೂಲಕ ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳನ್ನು ಬಂಧಿಸಬೇಕು' ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸುಳ್ಳು ಜಾತಿ ಪ್ರಮಾಣಪತ್ರಗಳ ವಿರೋಧಿ ಹೋರಾಟ ಸಮಿತಿ ಆಗ್ರಹಿಸಿದೆ.

ವಿವಿಧ ಜಿಲ್ಲೆಗಳ ಕಾರ್ಯಕರ್ತರು ಮೀಸಲಾತಿ ಸೌಲಭ್ಯ ಕಬಳಿಕೆ ಕುರಿತು ವೀರಶೈವ ಸಮುದಾಯದ ವಿರುದ್ಧ ಗುರುವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟಿಸಿದರು. ಬೇಡ ಜಂಗಮರ ವೇಷ ಧರಿಸಿ ಸಾಂಸ್ಕೃತಿಕ ಕಲೆಗಳನ್ನು ಪ್ರದರ್ಶಿಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

'ಮಾನವ ಶಾಸ್ತ್ರ ಸರ್ವೇಕ್ಷಣ ಸಂಸ್ಥೆ 1985 ರಿಂದ 1990ರಲ್ಲಿ ಕೆ.ಎಸ್. ಸಿಂಗ್ ಅವರ ನೇತೃತ್ವದಲ್ಲಿ ನಡೆದ ಅಧ್ಯಯನದ ಪ್ರಕಾರ ವೀರಶೈವ ಜನಾಂಗದವರು ಬೇಡ ಜಂಗಮರಲ್ಲ ಎಂದು ವರದಿ ನೀಡಿದೆ. ಆದರೆ ರಾಜ್ಯದಲ್ಲಿ ಪ್ರಬಲವಾಗಿರುವ ವೀರಶೈವ ಸಮುದಾಯದವರು ಬೇಡ ಜಂಗಮರ ಹೆಸರಿನಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಮೀಸಲಾತಿ ಕಬಳಿಸುತ್ತಿದ್ದಾರೆ' ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ಸಂಚಾಲಕ ಆರ್. ಮೋಹನರಾಜ್ ಆಕ್ರೋಶ ವ್ಯಕ್ತಪಡಿಸಿದರು.

'ಪರಿಶೀಲಿಸದೇ ಜಾತಿ ಪ್ರಮಾಣಪತ್ರ ನೀಡುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸುಳ್ಳು ಜಾತಿ ಪ್ರಮಾಣಪತ್ರದ ಪ್ರಕರಣಗಳ ತ್ವರಿತ ವಿಲೇವಾರಿಗೆ ಪ್ರತಿ ಜಿಲ್ಲೆಯಲ್ಲಿ ವಿಶೇಷ ನ್ಯಾಯಾಲಯ ಸ್ಥಾಪಿಸಬೇಕು' ಎಂದು ಒತ್ತಾಯಿಸಿದರು.

'ಮೀಸಲಾತಿ ಸೌಲಭ್ಯ ಕಬಳಿಸುವವರಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು. ಸಂವಿಧಾನ ನೀಡಿರುವ ಹಕ್ಕುಗಳನ್ನು ರಕ್ಷಿಸಿಕೊಳ್ಳಬೇಕು' ಎಂದು ಕರೆ ನೀಡಿದರು.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸುಳ್ಳು ಜಾತಿ ಪ್ರಮಾಣಪತ್ರಗಳ ವಿರೋಧಿ ಹೋರಾಟ ಸಮಿತಿ ಸದಸ್ಯರು ಮತ್ತು ಬೇಡ ಜಂಗಮ ವೇಷಧಾರಿಗಳು ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

'39 ಮಕ್ಕಳಿಗೆ ಒಂದೇ ಸಿರಿಂಜ್‌ನಲ್ಲಿ ಲಸಿಕೆ'

ಸಾಗರ್ (ಮಧ್ಯಪ್ರದೇಶ): 39 ಮಕ್ಕಳಿಗೆ ಒಂದೇ ಸಿರಿಂಜ್ ಬಳಸಿ ಕೋವಿಡ್–19 ಲಸಿಕೆ ಹಾಕಿರುವ ಪ್ರಕರಣ ಮಧ್ಯಪ್ರದೇಶದ ಸಾಗರ್ ನಗರದ ಖಾಸಗಿ ಶಾಲೆಯಲ್ಲಿ ಬುಧವಾರ ವರದಿಯಾಗಿದೆ.

ಲಸಿಕೆ ಹಾಕುವವನು ಒಂದೇ ಸಿರಿಂಜ್ ಬಳಸುತ್ತಿದ್ದುದನ್ನು ಗಮನಿಸಿದ ಕೆಲವು ಮಕ್ಕಳ ಪೋಷಕರು, ಸಿಬ್ಬಂದಿಯ ಬೇಜವಾಬ್ದಾರಿತನದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಲಸಿಕೆ ಹಾಕಿದ ಸಿಬ್ಬಂದಿ ಜಿತೇಂದ್ರ ಅಹಿರ್ವಾರ್ ವಿರುದ್ಧ ಸದ್ಯ ಎಫ್‌ಐಆರ್ ದಾಖಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ತಿಕೋಟಾ: ಷಣ್ಮುಖ ಶಿವಾಚಾರ್ಯ ಸ್ವಾಮೀಜಿ ನಿಧನ

ತಿಕೋಟಾ (ವಿಜಯಪುರ ಜಿಲ್ಲೆ): ಉಜ್ಜಯಿನಿ ಪೀಠದ ಶಾಖಾಮಠ ತಿಕೋಟಾ ತಾಲ್ಲೂಕಿನ ಬಾಬಾನಗರ ಗ್ರಾಮದ ಹಿರೇಮಠದ ಷಣ್ಮುಖ ಶಿವಾಚಾರ್ಯ ಸ್ವಾಮೀಜಿ (82) ಗುರುವಾರ ಲಿಂಗೈಕ್ಯರಾದರು.

ಮಠದಲ್ಲೆ ಅಂತಿಮ ದರ್ಶನಕ್ಕೆ ವ್ಯವಸ್ಥೆಯಾಗಿದೆ. ಇಡೀ ರಾತ್ರಿ ಭಕ್ತರಿಂದ ಜಾಗರಣೆ, ಭಕ್ತಿಗೀತೆ, ಭಜನೆ ಜರುಗಿತು. ಶುಕ್ರವಾರ ಬೆಳಿಗ್ಗೆ 10 ಗಂಟೆಯಿಂದ ಶ್ರೀಗಳ ಅಂತಿಮ ಯಾತ್ರೆ ನಡೆಯಲಿದ್ದು ಅಂತ್ಯ ಸಂಸ್ಕಾರದಲ್ಲಿ ಉಜ್ಜಯಿನಿ ಪೀಠದ ಜಗದ್ಗುರು ಪಾಲ್ಗೊಳ್ಳುವರು. ಮಠದ ಆವರಣದಲ್ಲೇ ಅಂತ್ಯಕ್ರಿಯೆ ನಡೆಯಲಿದೆ ಎಂದು ಮಠದ ಮೂಲಗಳು ತಿಳಿಸಿವೆ.

'ಷಣ್ಮುಖ ಶಿವಾಚಾರ್ಯರು ಭಕ್ತರ ಮನಸ್ಸನ್ನು ಗೆದ್ದವರು. ಎಂದೂ ವೈಭವ ಅನುಭವಿಸಲಿಲ್ಲ, ಬಡ ಭಕ್ತರ ಆಶ್ರಯದಾತರಾಗಿದ್ದರು' ಎಂದು ಮನಗೂಳಿ ಹಿರೇಮಠದ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ನೆನಪಿಸಿಕೊಂಡರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ.
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಶಿರಾ–572137 ದೂ:08135–277578 email: cdposira@Yahoo.com
ಸಂ:ಶಿಅಯೋಶಿ:ಮೊ.ಖ.ಟೆಂ.ಪ್ರ/2022–23 ದಿನಾಂಕ: 22.072022

ಇ–ಟೆಂಡರ್ ಪ್ರಕಟಣೆ

2022–23ನೇ ಸಾಲಿನಲ್ಲಿ ಶಿರಾ, ಶಿಶು ಅಭಿವೃದ್ಧಿ ಯೋಜನೆಯಲ್ಲಿ ಮೊಟ್ಟೆ ಖರೀದಿಗಾಗಿ ಟೆಂಡರ್ ಸಂಖ್ಯೆ:DWCD/2022–23/IND1691 dated: 20.07.2022 ಕೆ.ಟಿ.ಟಿ.ಪಿ ನಲ್ಲಿ ಅರ್ಹರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **20.08.2022** ರ ಸಂಜೆ 5.00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಶಿರಾ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಶಿರಾ.
DIPR/TUM/354/MCA/2022-23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬದಾಮಿ.
ಕ.ಸಂ: ಕೃಉಮಾಸ/ಬ/ಅಭಿಕೆ/ /2022–23 ದಿನಾಂಕ: 27–07–2022

ಇ–ಟೆಂಡರ ಪ್ರಕಟಣೆ

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ)
1	(1)CONSTRUCTION OF 20(24) NOS SUNDRY SHOPS AT MAIN MARKET YARD OF APMC BADAMI AND (2)REPAIR AND COLOURING TO ADMINISTRATIVE OFFICE BUILDING AT MAIN MARKET YARD BADAMI OF APMC BADAMI UNDER ANNUAL ACTION PLAN FOR THE YEAR 2021-22. APMC/2022-23/OW/WORK_INDENT5182	ರೂ.126.40 (GST ಪ್ರತ್ಯೇಕ)	ರೂ. 1.90

ಮೇಲ್ಕಂಡಂತೆ ಇ–ಪೋರ್ಟಲ್ (E-Portal) ಮೂಲಕ ಟೆಂಡರ ಹೊರಡಿಸಲಾಗಿದ್ದು, ಭರ್ತಿ ಮಾಡಿದ ಟೆಂಡರನ್ನು ಸ್ವೀಕರಿಸುವ ಕೊನೆಯ ದಿನಾಂಕ: 30–08–2022 ರ ಸಾಯಂಕಾಲ 5–30 ಗಂಟೆಗೆ ನಿಗಧಿಪಡಿಸಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ಹಾಗೂ http://eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸಹಿ/–ಕಾರ್ಯದರ್ಶಿ ಸಹಿ/–ಆಡಳಿತಾಧಿಕಾರಿಗಳು

ಕರ್ನಾಟಕ ಸರ್ಕಾರ
ತಾಲೂಕ ಪಂಚಾಯತ್ ರಾಣೇಬೆನ್ನೂರ
ನಂ.ತಾಪಂರಾ/ಇ–ಟೆಂಡರ್/ವಹಿ–01/2022–23 ದಿನಾಂಕ : 27.07.2022

ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ

ರಾಣೇಬೆನ್ನೂರ ತಾಲೂಕು ಪಂಚಾಯತ್ ಕಾರ್ಯಾಲಯಕ್ಕೆ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಸೇವಾರ್ಥಿಗಳ ಸೇವೆಯನ್ನು ಪಡೆಯಲು ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ. (1) ಟೆಂಡರ್ ಪ್ರಕಟಣೆ ದಿನಾಂಕ : **27.07.2022** (2) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : **12.08.2022** ರ ಅಪರಾಹ್ನ 1–00 ಗಂಟೆಗೆ (3) ಪಡೆಯಲು ಬಯಸಿರುವ ಸೇವೆಗಳ ವಿವರ & ಸಂಖ್ಯೆ ಗ್ರೂಪ್ ಡಿ–02, ವಾಹನ ಚಾಲಕ–01 (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ : **15.08.2022** ರ ಅಪರಾಹ್ನ 02.30 ಗಂಟೆಗೆ (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **17.08.2022** ರ ಅಪರಾಹ್ನ 12.00 ಗಂಟೆಗೆ (6) ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) ರೂ. **16,750/–** ಗಳು
(1) ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ದಾಖಲೆಗಳನ್ನು **https://eproc.karnataka.gov.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವುದು (2) ಹೆಚ್ಚಿನ ವಿವರಗಳಿಗಾಗಿ ತಾಲೂಕು ಪಂಚಾಯತ್, ರಾಣೇಬೆನ್ನೂರ ಕಾರ್ಯಾಲಯವನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ : **08373–266425** ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು,
ವಾಸಾಸಂಇ/ಹಾವೇರಿ/ಎಂ.ಸಿ.ಎ/185/2022–23 ತಾಲೂಕ ಪಂಚಾಯತ್, ರಾಣೇಬೆನ್ನೂರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಮಹಾಲಕ್ಷ್ಮೀಪುರಂ ವಿಭಾಗ, 12ನೇ ಮುಖ್ಯ ರಸ್ತೆ, 11ನೇ ಅಡ್ಡ ರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ಬೆಂಗಳೂರು. ದೂರವಾಣಿ ಸಂಖ್ಯೆ: 080–23197031
ಸಂಖ್ಯೆ: ಕಾಪಾಅ/ಮಲಪು/ಟೆಂಡರ್/ಇ–ಪ್ರೊಕ್/09/2022–23 ದಿನಾಂಕ: 27/07/2022

ಟೆಂಡರ್‌ಗಾಗಿ ಆಹ್ವಾನ
(ಅಲ್ಪಾವಧಿ ಟೆಂಡರ್ ಪ್ರಕಟಣೆ ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ, ಬೃಬೆಂಮಪಾ, [illegible]

ಕ್ರ. ಸಂ.	ಕೆಲಸದ ಹೆಸರು	ಕೆಲಸದ ಅಂದಾಜು ಮೌಲ್ಯ (ರೂ ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1.	ಶಕ್ತಿಗಣಪತಿನಗರ ವಾರ್ಡ್ ಸಂಖ್ಯೆ 74 ರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವ್ಯಾಪ್ತಿಯಲ್ಲಿ ರಸ್ತೆಗಳ ಹಾಗೂ ಚರಂಡಿಗಳ ಅಭಿವೃದ್ಧಿ	99.00	198000.00

[illegible]
ಸಹಿ/– ಕಾರ್ಯಪಾಲಕ ಅಭಿಯಂತರರು ಮಹಾಲಕ್ಷ್ಮೀಪುರಂ ವಿಭಾಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆಂಗೇರಿ ವಿಭಾಗ, 2ನೇ ಮುಖ್ಯರಸ್ತೆ, ಜಗಜ್ಯೋತಿ ಬಡಾವಣೆ, ಬೆಂಗಳೂರು.
ಸಂಖ್ಯೆ: ಕಾಅ/ಕೆಂಗೇರಿ/ಟೆಂಡರ್/07/2022–23 ದಿನಾಂಕ: 28–07–2022

ಟೆಂಡರ್ ಮುಂದೂಡಿಕೆ ಪ್ರಕಟಣೆ

ಉಲ್ಲೇಖ: 1) ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: **ಕಾಅ/ಕೆಂಗೇರಿ/ಟೆಂಡರ್/07/2022–23 ದಿನಾಂಕ: 24–06–2022**
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ರೀತ್ಯಾ ಟೆಂಡರ್ ಕರೆಯಲಾಗಿದ್ದು, **ತಾಂತ್ರಿಕ ಕಾರಣಗಳಿಂದ ಟೆಂಡರ್‌ನ್ನು ಮುಂದೂಡಲಾಗಿರುತ್ತದೆ. ಕಾರಣಾಂತರಗಳಿಂದ ಟೆಂಡರ್‌ನ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ.**
1) ಟೆಂಡರ್ ದಸ್ತಾವೇಜುಗಳನ್ನು ಇ–ಪೋರ್ಟಲ್ ಮೂಲಕ ದಿನಾಂಕ: **29–07–2022 ರಂದು ಸಂಜೆ 4.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಯಾವುದೇ ವಿಚಾರಣೆಗಳನ್ನು ದಿನಾಂಕ: **06–08–2022ರಂದು ಸಂಜೆ 4.00 ಗಂಟೆವರೆಗೆ** ಸಲ್ಲಿಸಬಹುದು. 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **08–08–2022 ರಂದು ಸಂಜೆ 4.00 ಗಂಟೆವರೆಗೆ.** 4) ಬಿಡ್ ತೆರೆಯುವ ದಿನಾಂಕ: **10–08–2022 ರಂದು ಸಂಜೆ 4.00 ಗಂಟೆಗೆ.** ಉಳಿದಂತೆ ಇನ್ಯಾವುದೇ ಬದಲಾವಣೆಗಳಿರುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬಿಬಿಎಂಪಿ.
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ಡಿವಿಜನ್, ನೆಲ ಮಹಡಿ, ನಂ.09, ಅನೆಕ್ಸ್–3 ಬಿಲ್ಡಿಂಗ್, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು 560002.
ಸಂಖ್ಯೆ: ಕಾಅ/ಟಿಇಸಿ/ಟೆಂಡರ್/07/2022–23 ದಿನಾಂಕ: 28–07–2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಟೆಂಡರ್) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ಡಿವಿಜನ್, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1	ಲಭ್ಯವಿರುವ ಪ್ರೀ–ಕಾಸ್ಟ್ ಎಲಿಮೆಂಟ್‌ಗಳನ್ನು ಉಪಯೋಗಿಸುವ ಮೂಲಕ ಸಂಜಯನಗರ ಮುಖ್ಯರಸ್ತೆಗೆ U–ಟರ್ನ್‌ಗೆ ಅನುವಾಗಿಸಲು ಬಳ್ಳಾರಿ ಮುಖ್ಯರಸ್ತೆಯಲ್ಲಿ ಹೆಚ್ಚುವರಿ ಮಾರ್ಗ ನಿರ್ಮಾಣ.	251.46	4,00,000/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಿನಾಂಕ: **29–07–2022** ರಿಂದ ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ದಿನಾಂಕ: **04–08–2022. 3)** ಬಿಡ್ ಪೂರ್ವಭಾವಿ ಸಭೆ ದಿನಾಂಕ: **04–08–2022ರಂದು 15.30 ಗಂಟೆಗೆ. 4)** ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **12–08–2022ರಂದು 16.00 ಗಂಟೆವರೆಗೆ. 5)** ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **16–08–2022ರಂದು 11.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ಡಿವಿಜನ್–ಆರ್‌ಐ, ಬಿಬಿಎಂಪಿ.
ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು–560040.
ಸಂಖ್ಯೆ: ಕಾಅ(ಗೋರಾನ)/ಟೆಂಡರ್/ಜಿಎಲ್–09/2022–23 ದಿನಾಂಕ: 27–07–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಕಾಮಗಾರಿಗಳು) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

[illegible]

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ವಾರ್ಡ್ ಸಂಖ್ಯೆ 103, ಕಾವೇರಿಪುರ ಇಲ್ಲಿ ಚರಂಡಿಗಳ ಅಭಿವೃದ್ಧಿ ಮತ್ತು ಅಡ್ಡರಸ್ತೆಗಳು ಮತ್ತು ಮುಖ್ಯರಸ್ತೆಗಳ ಡಾಂಬರೀಕರಣ.	200.00	300000.00

ಟೆಂಡರ್ ವೇಳಾಪಟ್ಟಿ: [illegible] www.eproc.karnataka.gov.in [illegible]
ಸಹಿ/– ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ, ಬಿಬಿಎಂಪಿ.
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
[illegible] ಫೋನ್: 2778, [illegible] –560 027
ಸಂ: ಕರಾಸಾ/ಕೇಕ/ಲೆಪ/ಸ್ಕ್ರ ವಿವರಣೆ/1523/2022–23 ದಿನಾಂಕ: 28.07.2022

ಆಸಕ್ತಿ ವ್ಯಕ್ತಪಡಿಸುವಿಕೆ

[illegible]
ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು
ವಾಸಾಸಂಇ/ವಾ.ಪ್ರ/1549/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಜೆಇ–3:ಟೆಂಡರ್–37:2022–23/1489 ದಿನಾಂಕ: 26.07.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ **ಅರ್ಹ ಗುತ್ತಿಗೆದಾರರಿಂದ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ **ದ್ವಿ ಲಕೋಟೆ ಪದ್ಧತಿಯಲ್ಲಿ** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿಗಳ ವಿವರ:–ಇ–ಪ್ರೊಕ್ಯೂರ್‌ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ:– ಲೆಕ್ಕ ಶೀರ್ಷಿಕೆ: 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ:– (1) ಹೊಸದುರ್ಗ ತಾ. ಮಂಡ್ಯ–ಹಡಗಲಿ ರಸ್ತೆಯಿಂದ ಗರಗ ಎಣ್ಣೆಗೆರೆ ರಸ್ತೆಗೆ ಸೇರುವ ರಸ್ತೆ ಮಾರ್ಗ ನಾಯಿಗೆರೆ, ನಗರಗೆರೆ, ಮೈಲಾರಪುರ ಕುರುಬರಹಳ್ಳಿ ರಸ್ತೆಗೆ ಸೇರುವ ರಸ್ತೆ ಕಿ.ಮೀ. 0.00 ರಿಂದ 9.00 ಕಿ.ಮೀ. ವರೆಗೆ ಆಯ್ದ ಭಾಗಗಳ ಅಭಿವೃದ್ಧಿ ಮತ್ತು ಡಾಂಬರೀಕರಣ. (ವ.ಇಂ. 152726)/2ನೇ ಕರೆ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–300.00** (2) ಎ)ಹೊಸದುರ್ಗ ತಾ. ರಾಜ್ಯಹೆದ್ದಾರಿ–47ರ ಗೊರವಿಗೊಂಡನಹಳ್ಳಿಯಿಂದ ರಾಜ್ಯ ಹೆದ್ದಾರಿ–24 ರಲ್ಲಿ ರಂಗವ್ವನಹಳ್ಳಿ ಭೋವಿಹಟ್ಟಿ ಮಾರ್ಗ ಅತ್ತಿಘಟ್ಟ, ಕಪ್ಪಗೆರೆ, ಹುಣಸೇಕಟ್ಟೆ, ಕೊರಚರಹಟ್ಟಿ ರಸ್ತೆಗೆ ಸೇರುವ ರಸ್ತೆ ಕಿ.ಮೀ. 0.00 ರಿಂದ 15.00 ರವರೆಗೆ ಆಯ್ದ ಭಾಗಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಬಿ) ಹೊಸದುರ್ಗ ತಾಲ್ಲೂಕು ಬುರಡೇಕಟ್ಟೆಯಿಂದ ಹೊಸದುರ್ಗ ರೈಲ್ವೆಸ್ಟೇಷನ್ ರಸ್ತೆಯ ಅಭಿವೃದ್ಧಿ ಮತ್ತು ಡಾಂಬರೀಕರಣ. (ವ.ಇಂ. 152625)/2ನೇ ಕರೆ.**ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–450.00 ಲೆಕ್ಕ ಶೀರ್ಷಿಕೆ: 5054–04–337–0–01–160 ಜಿಲ್ಲಾ ಮತ್ತು ಇತರೆ ರಸ್ತೆಗಳ ನವೀಕರಣ:–**(3) ಎ) ಹೊಸದುರ್ಗ ತಾಲ್ಲೂಕು ಹೆಚ್.ಎ. ರಸ್ತೆಯಿಂದ ಹೊಸದುರ್ಗ ರೈಲ್ವೆ ಸ್ಟೇಷನ್ ರಸ್ತೆಯ ಕಿ.ಮೀ. 0.00 ರಿಂದ 10.56 ಕಿ.ಮೀ. ವರೆಗೆ ಆಯ್ದ ಭಾಗಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಬಿ) ಹೊಸದುರ್ಗ ತಾಲ್ಲೂಕು ಕಲ್ಕೆರೆಯಿಂದ ಬಲ್ಲಾಳಸಮುದ್ರ ಆಲಘಟ್ಟ ತಾಲ್ಲೂಕು ಗಡಿವರೆಗೆ ಆಯ್ದ ಭಾಗಗಳ ಅಭಿವೃದ್ಧಿ ಮತ್ತು ಮರು ಡಾಂಬರೀಕರಣ. (ವ.ಇಂ. 152617)/2ನೇ ಕರೆ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–250.00 ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ:–** (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 05–08–2022 ಸಮಯ 17–30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 06–08–2022 ಸಮಯ 16–00 (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 08–08–2022 ಸಮಯ 16–01 (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 10–08–2022 ಸಮಯ 11–00 ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.
DIPR/CTA/MCA/398/2022-23 ಸಹಿ/– ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಚಿತ್ರದುರ್ಗ.

ತೋಟಗಾರಿಕೆ ಇಲಾಖೆ
ತೋಟಗಾರಿಕೆ ಉಪನಿರ್ದೇಶಕರ ಕಛೇರಿ, ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನ, ಬೆಂಗಳೂರು.
ಸಂಖ್ಯೆ: ತೋಉನಿ/ಕಉ/ಸುಕಉಪ್ರ/ವಿನಿ4/03/2021–22 ದಿನಾಂಕ: 27–07–2022

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ

ತೋಟಗಾರಿಕೆ ಉಪನಿರ್ದೇಶಕರು, ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್), ಬೆಂಗಳೂರು ರವರು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಪಾರ್ಕ್) ಆಯ್ದ 2 ಸ್ಥಳಗಳಲ್ಲಿ ಸಾರ್ವಜನಿಕ ವಾಹನ ನಿಲುಗಡೆ ಶುಲ್ಕ ವಸೂಲಾತಿ ಕಾರ್ಯಕ್ಕೆ ದ್ವಿ–ವಾರ್ಷಿಕ ಅಲ್ಪಾವಧಿ ಮರು ಇ–ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್: **http://eproc.karnataka.gov.in** ನಲ್ಲಿ ಹಾಗೂ ಈ ಕೆಳಸಹಿದಾರರ ಕಛೇರಿಯಿಂದ (ಸರ್ಕಾರಿ ಕೆಲಸದ ದಿನಗಳಲ್ಲಿ ಕೆಲಸದ ಅವಧಿಯಲ್ಲಿ) ಪಡೆಯಬಹುದಾಗಿರುತ್ತದೆ.
1) ಟೆಂಡರ್‌ನ ಅಂದಾಜು ಮೊತ್ತ: **ರೂ. 55.00 ಲಕ್ಷಗಳು. 2)** ಅರ್ಜಿ ನಮೂನೆ ಶುಲ್ಕ: ಅರ್ಜಿ ಶುಲ್ಕವನ್ನು **e-Procurement Government of Karnataka, Bangalore** ರವರು ನಿರ್ದೇಶಿಸಿದಂತೆ ಪಾವತಿಸುವುದು. 3) ಇ.ಎಂ.ಡಿ: **ರೂ. 1,10,000/– ಗಳನ್ನು e-Procurement Government of Karnataka** ರವರ ಹೆಸರಿಗೆ ಸಲ್ಲಿಸುವುದು. 4) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **10–08–2022ರಂದು ಸಂಜೆ 5.30 ಗಂಟೆವರೆಗೆ. 5)** ಬಿಡ್ ಪೂರ್ವಭಾವಿ ಸಭೆ ದಿನಾಂಕ: **03–08–2022ರಂದು 12.00 – 1.00 ಗಂಟೆ. 6)** ತಾಂತ್ರಿಕ ಟೆಂಡರ್ ಫಾರಂ ತೆರೆಯುವ ದಿನಾಂಕ: **12–08–2022ರಂದು 11.00 ಗಂಟೆಗೆ. 7)** ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: **17–08–2022ರಂದು 11.00 ಗಂಟೆಗೆ.** ಟೆಂಡರ್ ಅಂಗೀಕರಿಸುವ ಇಲ್ಲವೇ ತಿರಸ್ಕರಿಸುವ ಅಧಿಕಾರವನ್ನು ಟೆಂಡರ್ ಪ್ರಾಧಿಕಾರವು ಹೊಂದಿರುತ್ತದೆ.
ವಾಸಾಸಂಇ/ವಾ.ಪ್ರ/1542/ಅಡ್ವರ್ಟೋರ್/2022–23
ಸಹಿ/– ತೋಟಗಾರಿಕೆ ಉಪನಿರ್ದೇಶಕರು ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನ, ಬೆಂಗಳೂರು.
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ. ಸುಭಾಷನಗರ, ಮಿನಿವಿಧಾನ ಸೌಧದ ಹತ್ತಿರ, ದೂರವಾಣಿ ಸಂಖ್ಯೆ : 08230–262627
E-Mail Address: Cdpokrp@gmail.com
ಸಂ.ಶಿಅಯೋ/ಕೆಆರ್‌ಪೇ/ಕೋ.ಮೊ.ಟೆಂ/2022–23 ದಿನಾಂಕ:22–07–2022

ಸಂಕ್ಷಿಪ್ತ ಇ – ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನೆ, ಕೃಷ್ಣರಾಜಪೇಟೆ ತಾಲ್ಲೂಕಿಗೆ ಸಂಬಂಧಿಸಿದಂತೆ 2022–23ನೇ ಸಾಲಿಗೆ ಐಸಿಡಿಎಸ್ ಯೋಜನೆಯಡಿ ಕೋಳಿಮೊಟ್ಟೆ ಖರೀದಿಸಿ ಕೃಷ್ಣರಾಜಪೇಟೆ ತಾಲ್ಲೂಕಿನ 398 ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲು **(ಅಂದಾಜು ವಾರ್ಷಿಕ ವೆಚ್ಚ ರೂ 63,18,936/–)** ಇ–ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದೆ ಟೆಂಡರ್ ಷರತ್ತುಗಳು ಮತ್ತು ಟೆಂಡರ್ ಅಪ್‌ಲೋಡ್‌ಗೆ website http://eproc.karnataka.gov.in - e-procurment Tender Number :DWCD/2022-23/IND1903) ವಿಳಾಸವನ್ನು ಸಂಪರ್ಕಿಸುವುದು. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 24.08.2022 ರಂದು ಸಂಜೆ 5.00 PM** ಗಂಟೆಯಾಗಿರುತ್ತದೆ.
ಸಹಿ/–ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ.
ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/245/2022–23

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಳಗಾವಿ

ಅಲ್ಪಾವಧಿ ಇ–ಟೆಂಡರ್ ಮರುಪ್ರಕಟಣೆ
(Re e-Procurement mode only)

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಾರ್ಯಾಲಯ ಬೆಳಗಾವಿ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ, ವಿದ್ಯಾರ್ಥಿನಿಲಯ, [illegible] ಟೆಂಡರ್ ಸಂಖ್ಯೆ:MWD/OS/TENDER/CR-41/2021-22,ಇ.ಎಂ.ಡಿ. ಮೊತ್ತ:ರೂ.3.22 ಲಕ್ಷ,ಟೆಂಡರ್ ಸಲ್ಲಿಸುವ ಆರಂಭ ದಿನಾಂಕ:27–07–2022, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ:10–08–2022 ಸಾಯಂಕಾಲ–05.00, ಟೆಂಡರ್ ತೆರೆಯುವ ದಿನಾಂಕ:12–08–2022.
ಹೆಚ್ಚಿನ ಮಾಹಿತಿಯನ್ನು http://eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ ಅಥವಾ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ:0831–2950349 ಮೂಲಕ ಪಡೆಯಬಹುದಾಗಿದೆ.
ಸಹಿ/–ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಳಗಾವಿ.
DIPR/BGM/RO-NO-619/MCA/2022-23

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ನಾಗಮಂಗಲ ಯೋಜನೆ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ–571432
ಇ–ಮೇಲ್:cdponmg@ymail.com
ಸಂಖ್ಯೆ:ಶಿಅಯೋ/ನಾ/ಟೆಂ.ಪ್ರಕಟಣೆ/2022–23/158 ದಿ:27.07.2022

ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಅಂಗನವಾಡಿ ಕೇಂದ್ರಗಳಿಗೆ ಕೋಳಿಮೊಟ್ಟೆ ಪೂರೈಕೆಗೆ ಟೆಂಡರ್ ದಸ್ತಾವೇಜು ಟೆಂಡರ್ ವೇಳಾಪಟ್ಟಿ

(1) ಟೆಂಡರ್ ಉಲ್ಲೇಖ ಸಂಖ್ಯೆ : **ಸಂಖ್ಯೆ: DWCD/2022-23/IND1920 ದಿನಾಂಕ:27.07.2022.** (2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://eproc.karnataka.gov.in** ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ : **27.07.2022.** (3) ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ : **06.08.2022 ಬೆಳಗ್ಗೆ 11:00 AM ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, #313, 02ನೇ ಮಹಡಿ, ಮಿನಿ ವಿಧಾನಸೌಧ ಕಟ್ಟಡ ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ–571432 ದೂ:+91–9845522017.** (4) ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **11.08.2022 up to 05:00 PM.** (5) ಇ–ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **29.08.2022 up to 5:00 PM ರವರೆಗೆ.** (6) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : **30.08.2022 After 5.00 PM** (7) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **Shall be intimated in e-procrement portal.** (8) ಟೆಂಡರ್‌ಗಳನ್ನು ತೆರೆಯುವ ಸ್ಥಳ : **e-procrement portal.** (9) ಸಂವಹನಕ್ಕಾಗಿ ವಿಳಾಸ : **ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, #313, 02ನೇ ಮಹಡಿ, ಮಿನಿ ವಿಧಾನಸೌಧ ಕಟ್ಟಡ ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ–571432 ದೂ:+91–9845522017 ಇಮೇಲ್:cdponmg@ymail.com ವೆಬ್‌ಸೈಟ್ https://wcd.karnataka.gov.in**
ಸಹಿ/–ಶಿಶು ಅಭಿವೃದ್ಧಿ ಯೋಜನಾಧಿಕಾರಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ
ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/ 242/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು–570 023.
ಸಂ.ಕಾಅ/ಪಂ.ರಾ.ಇಂ.ವಿ/ಮೈ/ಇ–ಪ್ರಕ್ಯೂರ್‌ಮೆಂಟ್/ಸ.ಇಂ.–1/

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ (ದ್ವಿಲಕೋಟೆ) ಸಂಖ್ಯೆ.06/2022–23/ದಿನಾಂಕ: 25.07.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಬೆಂಗಳೂರುರವರ ಸಹಯೋಗದೊಂದಿಗೆ, CPWD/ /KPWD/WRDO/PRED and any other Government Organisation ನಲ್ಲಿ ನೊಂದಾಯಿತರಾಗಿರುವ ಅಂದರೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಕಡ್ಡಾಯವಾಗಿ ಎನ್‌ರೋಲ್ ಮಾಡಿರುವ 1ನೇ ದರ್ಜೆ ಗುತ್ತಿಗೆದಾರರಿಂದ ಟೆಂಡರ್ ನಮೂನೆ **KW-4** ಪದ್ಧತಿಯಂತೆ 2022–23ನೇ ಸಾಲಿನ 5054 ಮುಖ್ಯ ಮಂತ್ರಿ ವಿಶೇಷ ಮಂಜೂರಾತಿ ಯೋಜನೆ ಅನುದಾನದಡಿ ಟೆಂಡರ್ ಆಹ್ವಾನಿಸಲಾಗಿದ್ದು, ಮೈಸೂರು ತಾಲ್ಲೂಕಿನಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಾಗಿದ್ದು, ಸದರಿ ಕಾಮಗಾರಿಗಳಲ್ಲಿ ಸಿ.ಸಿ. ರಸ್ತೆ ಮತ್ತು ಸಿ.ಸಿ. ಚರಂಡಿಗಳ ನಿರ್ಮಾಣ/ಅಭಿವೃದ್ಧಿ ಹಾಗೂ ಡಾಂಬರ್ ರಸ್ತೆ ಮತ್ತು ಇತರೆ ಕಾಮಗಾರಿಗಳಾಗಿರುತ್ತವೆ. ಸದರಿ ಕಾಮಗಾರಿಗಳ ಮೊತ್ತವು ರೂ.500.00 ಲಕ್ಷಗಳಾಗಿದ್ದು, ಒಟ್ಟು 05 ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ **ಅಲ್ಪಾವಧಿ** ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಕಾಮಗಾರಿಗಳ ಇ.ಎಂ.ಡಿ. ಮೊತ್ತವು ರೂ.7,50,000/– ಗಳಿಗೆ ಸಾಮಾನ್ಯ ವರ್ಗಕ್ಕೆ ಕಾಮಗಾರಿಗಳನ್ನು ಮೀಸಲಿರಿಸಿದೆ. ಇದರಂತೆ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು **ದಿ: 30.07.2022 ರಿಂದ 08.08.2022 ಸಂಜೆ 16.00 ಘಂಟೆಯವರೆಗೆ** ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ **ದಿ: 06.08.2022,** 16.00 ಘಂಟೆಯಾಗಿದ್ದು, ಟೆಂಡರ್ ತೆರೆಯುವ **ದಿ: 10.08.2022ರ ಸಂಜೆ 17.00 ಘಂಟೆಯ ನಂತರ** ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://eprockarnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821–2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮೈಸೂರು
DIPR/DDMYS/MCA/304/2021-22

ಬಾರದ ಲೋಕಕ್ಕೆ ಪ್ರವೀಣ್: ಆರದ ಕಿಚ್ಚು; ತಣಿಯದ ನೋವು...

• ಪ್ರವೀಣ ಕುಮಾರ್ ಪಿ.ವಿ

ಬೆಳ್ಳಾರೆ (ದಕ್ಷಿಣ ಕನ್ನಡ): ಹೃದ್ರೋಗದಿಂದ ನರಳುತ್ತಿರುವ ತಂದೆ, ರಕ್ತದೊತ್ತಡದಿಂದ ಬಳಲುತ್ತಿರುವ ತಾಯಿ, ಬದುಕಿನ ಬಗ್ಗೆ ಬಣ್ಣ ಬಣ್ಣದ ಕನಸುಗಳನ್ನು ಕಟ್ಟಿಕೊಂಡಿದ್ದ ಪತ್ನಿ... ಇವರನ್ನೆಲ್ಲ ಬಿಟ್ಟು ಪ್ರವೀಣ್ ನೆಟ್ಟಾರು ಅವರು ಬಾರದ ಲೋಕಕ್ಕೆ ಹೋಗಿದ್ದಾರೆ. ಅವರ ಚಿತೆಯ ಬೆಂಕಿ ಇನ್ನೂ ಆರಿಲ್ಲ. ಅಂತೆಯೇ ಅವರ ಸಾವಿನ ಬಗ್ಗೆ ಅವರ ಕುಟುಂಬದವರಲ್ಲಿ ಹಾಗೂ ಬಿಜೆಪಿ ಕಾರ್ಯಕರ್ತರಲ್ಲಿ ಆಕ್ರೋಶದ ಕಿಚ್ಚೂ ಕಡಿಮೆ ಆಗಿಲ್ಲ.

'ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದ ಪ್ರವೀಣ್‌ಗೆ ಬೆದರಿಕೆ ಇದ್ದರೂ ಅವರ ಹತ್ಯೆ ತಪ್ಪಿಸಲು ಸರ್ಕಾರ ಏನೂ ಕ್ರಮಕೈಗೊಳ್ಳಲಿಲ್ಲ' ಎಂಬ ಅಸಮಾಧಾನ ಕುಟುಂಬದವರನ್ನು ಹಾಗೂ ಅವರ ಒಡನಾಡಿಗಳನ್ನು ತೀವ್ರವಾಗಿ ಕಾಡುತ್ತಿದೆ.

'ಪಕ್ಷದಲ್ಲಿ ಸಾಮಾನ್ಯ ಬಡ ಕಾರ್ಯಕರ್ತರಿಗೆ ಬೆಲೆ ಇಷ್ಟೇ' ಎಂದು ಅವರ ಬಂಧುಗಳು ನೋವಿನಿಂದ ಹೇಳುತ್ತಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಂಸದ ನಳಿನ್ ಕುಮಾರ್ ಕಟೀಲ್ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಸುನಿಲ್ ಕುಮಾರ್ ಅವರ ಕಾರಿಗೆ ಮುತ್ತಿಗೆ ಹಾಕಿದ್ದನ್ನೇ ನೆಪವಾಗಿಟ್ಟುಕೊಂಡು ಕಾರ್ಯಕರ್ತರ ವಿರುದ್ಧವೇ ಪೊಲೀಸರಿಂದ ಲಾಠಿಚಾರ್ಜ್ ಮಾಡಿಸಿದ್ದಾರೆ ಎಂದು ಹರಿಹಾಯುತ್ತಿದ್ದಾರೆ.

ನಳಿನ್ ಕುಮಾರ್ ಒಡನಾಡಿ

'ಪ್ರವೀಣ್ ಬಾಲ್ಯದಿಂದಲೂ ಸಂಘಪರಿವಾರದ ಬಗ್ಗೆ ಒಲವು ಹೊಂದಿದ್ದ. ಈ ಹಿಂದೆ ಇನೊವಾ ಕಾರನ್ನು ಬಾಡಿಗೆಗೆ ಬಿಟ್ಟಿದ್ದ. ನಳಿನ್ ಕುಮಾರ್ ಸಂಸದರಾಗುವುದಕ್ಕೆ ಮುನ್ನವೇ ಅವರ ಒಡನಾಡಿ ಆಗಿದ್ದ. ಬಿಜೆಪಿ ಯುವ ಮೋರ್ಚಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಬಳಿಕವೂ ಅವರಿಗೆ ಆಪ್ತನಾಗಿದ್ದ. ಆದರೆ ಅವನ ಹತ್ಯೆ ನಡೆದ ರಾತ್ರಿ ಯಾರೂ ಕುಟುಂಬದ ನೋವಿಗೆ ಸರಿಯಾಗಿ ಸ್ಪಂದಿಸಲಿಲ್ಲ' ಎಂದು ಬಂಧುವೊಬ್ಬರು ನೋವು ತೋಡಿಕೊಂಡರು.

ಮನೆಯಲ್ಲಿ ತುಂಬಿವೆ ಸ್ಮರಣಿಕೆಗಳು

ನೆಟ್ಟಾರಿನಲ್ಲಿ ಕಟ್ಟಿಸಿರುವ ಹಂಚಿನ ಪುಟ್ಟ ಮನೆಯ ಮೂಲೆಯಲ್ಲಿರುವ ಕಪಾಟಿನ ತುಂಬಾ ಪ್ರವೀಣ್ ಅವರ ಸನ್ಮಾನ ಪತ್ರಗಳು, ಸ್ಮರಣಿಕೆಗಳು ತುಂಬಿವೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಕುಟುಂಬದವರಲ್ಲಿ ಮಡುಗಟ್ಟಿರುವ ಈ ಆಕ್ರೋಶವನ್ನು ತಣಿಸಲು ಬಿಜೆಪಿಯ ಸ್ಥಳೀಯ ನಾಯಕರು ಸಾಕಷ್ಟು ಪ್ರಯತ್ನ ಪಟ್ಟರೂ ಅವರು ಅದಕ್ಕೆ ಕಿವಿಗೊಡುವ ಸ್ಥಿತಿಯಲ್ಲಿರಲಿಲ್ಲ. ಸಾಂತ್ವನ ಹೇಳಲು ಮನೆಗೆ ಬಂದ ಮುಖ್ಯಮಂತ್ರಿ, ಸಂಸದ ನಳಿನ್ ಕುಮಾರ್ ಕಟೀಲ್, ಸಚಿವ ಸುನಿಲ್ ಕುಮಾರ್, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಚಿವ ಎಸ್. ಅಂಗಾರ, ಶಾಸಕರಾದ ಸಂಜೀವ ಮಠಂದೂರು, ಹರೀಶ್ ಪೂಂಜಾ, ರಾಜೇಶ್ ಶೆಟ್ಟಿ ಉಳಿಪಾಡಿ, ಅವರೆಲ್ಲರೂ ಕುಟುಂಬದವರ ಕಿಡಿ ನುಡಿಗಳಿಗೆ ನಿರುತ್ತರರಾದರು.

ಹೃದ್ರೋಗದಿಂದ ಬಳಲುತ್ತಿದ್ದ ಶೇಖರ ಪೂಜಾರಿ ಅವರಂತೂ ಮಗನನ್ನು ಕಳೆದುಕೊಂಡ ಶೋಕದಿಂದ ಪದೇ ಪದೇ ಆಘಾತಕ್ಕೊಳಗಾಗುತ್ತಿದ್ದರು. ಪಕ್ಷದ ನಾಯಕರು ಬಂದು ಸಾಂತ್ವನ ಹೇಳುತ್ತಿದ್ದಂತೆಯೇ ನೋವು ತಡೆಯಲಾಗದೇ ಕುಸಿದು ಬೀಳುತ್ತಿದ್ದರು.

'ನನಗೆ ಆಸರೆಯಾಗಿದ್ದ ಒಬ್ಬನೇ ಮಗನಿಗೆ ಇಂತಹ ಪರಿಸ್ಥಿತಿಯನ್ನೇಕೆ ತಂದಿತ್ತಿರಿ. ನಾನು ಕೂಲಿ ನಾಲಿ ಮಾಡಿಕೊಂಡು ಕಷ್ಟ ಪಟ್ಟು ಬೆಳೆಸಿದ್ದೆ. ನಮ್ಮ ಬದುಕನ್ನೇ ಕತ್ತಲು ಮಾಡಿದಿರಲ್ಲಾ. ಬದುಕಿನ ಕೊನೆಗಾಲದಲ್ಲಿ ನಮಗೆ ಯಾರು ದಿಕ್ಕು' ಎಂದು ಮನೆಗೆ ಬಂದ ನಾಯಕರನ್ನು ಪ್ರಶ್ನಿಸುತ್ತಿದ್ದರು.

ಮನೆಗೆ ಬಂದ ನಾಯಕರನ್ನು ಎರಿದ ಧ್ವನಿಯಲ್ಲಿ ತರಾಟೆಗೆ ತೆಗೆದುಕೊಳ್ಳುತ್ತಿದ್ದ ಪ್ರವೀಣ್ ಅವರ ಹತ್ತಿರದ ಬಂಧುಗಳ ಸಿಟ್ಟನ್ನು ತಣಿಸಲು ಮನೆಯ ಮಹಿಳೆಯರು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದರು.

'ಪ್ರವೀಣ ಯಾವತ್ತೂ ತಾಳ್ಮೆ ಕಳೆದುಕೊಂಡವನಲ್ಲ. ಅವನಿಗೆ ನೋವಾಗುವಂತೆ ನಡೆದುಕೊಳ್ಳದಿರಿ' ಎಂದು ಸಮಾಧಾನಪಡಿಸುತ್ತಿದ್ದರು.

'ನಮ್ಮವರು ಯಾವತ್ತೂ ಕುಟುಂಬದ ಬಗ್ಗೆ ತಲೆ ಕೆಡಿಸಿಕೊಂಡವರಲ್ಲ. ಮನೆಗಿಂತಲೂ ಸಮಾಜ ಸೇವೆಗೇ ಹೆಚ್ಚು ಮಹತ್ವ ನೀಡುತ್ತಿದ್ದರು. ಅವರ ಯಾವ ಕೆಲಸಕ್ಕೂ ನಾನು ಬೇಡ ಎನ್ನಲಿಲ್ಲ. ಆದರೆ ಈಗ ಅವರೇ ಇಲ್ಲ. ಇಂತಹ ಪರಿಸ್ಥಿತಿ ಎದುರಾಗುತ್ತದೆ ಎಂದು ನಾನು ಯಾವತ್ತೂ ಊಹಿಸಿರಲಿಲ್ಲ' ಎಂದು ಪ್ರವೀಣ್ ಅವರ ಪತ್ನಿ ನೂತನಾ ಕಣ್ಣೀರಿಟ್ಟರು.

'ಪತಿ ಬೆಳ್ಳಾರೆಯಲ್ಲಿ ಆರಂಭಿಸಿದ್ದ ಕೋಳಿ ಅಂಗಡಿಯಲ್ಲೇ ನಾನು ಕುಳಿತುಕೊಳ್ಳುತ್ತಿದ್ದೆ. ನಾನು ಸಂಘ ಪರಿವಾರದ ಕೆಲಸ ಮಾಡಬೇಕು ಎಂಬ ಕಾರಣಕ್ಕಾಗಿಯೇ ಅವರು ನನ್ನನ್ನು ಸಂಘ ಪರಿವಾರದ ಆಡಳಿತಕ್ಕೊಳಪಟ್ಟ ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿಸಿದರು. ಸಂಘದ ಕಾರ್ಯವೇ ಅವರ ಪಾಲಿಗೆ ಮುಳುವಾಗುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ನಾನು ಕೋಳಿ ಅಂಗಡಿಯಲ್ಲೇ ಕೆಲಸ ಮುಂದುವರಿಸುತ್ತಿದ್ದರೆ ಪತಿಗೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲವೇನೋ' ಎಂದು ಕಂಬನಿ ಮಿಡಿದರು.

'ಮುಸ್ಲಿಂ ಸಂಘಟನೆಗಳ ಕೃತ್ಯಗಳನ್ನು ಸೈದ್ಧಾಂತಿಕವಾಗಿ ವಿರೋಧ ಮಾಡುತ್ತಿದ್ದರೂ ಪ್ರವೀಣ್ ಯಾರ ಮೇಲೂ ದ್ವೇಷ ಇಟ್ಟುಕೊಂಡವರಲ್ಲ. ಅವರಿಗೆ ಮುಸ್ಲಿಮರಲ್ಲೂ ಸಾಕಷ್ಟು ಗೆಳೆಯರಿದ್ದರು. ಹತ್ಯೆಗೊಳಗಾದ ದಿನವೂ ತಮ್ಮ ಗೆಳೆಯ ಆರಿಫ್ ಅವರ ಗೃಹಪ್ರವೇಶಕ್ಕೆ ಹೋಗಿ ಬಂದಿದ್ದ' ಎಂದು ಸ್ಮರಿಸುತ್ತಾರೆ ಪ್ರವೀಣ್ ಅವರ ಹತ್ತಿರದ ಬಂಧು ರಂಜಿತ್.

'ಪ್ರಾಣಿ ಪಕ್ಷಿಗಳ ಮೇಲೂ ತಮ್ಮನಿಗೆ ವಿಪರೀತ ಅಕ್ಕರೆ. ಹಸಿದ ನಾಯಿ-ಬೆಕ್ಕುಗಳನ್ನು ಕಂಡರೆ ಅವುಗಳಿಗೆ ಆಹಾರ ಹಾಕದೆ ಮುಂದಕ್ಕೆ ಹೋಗುತ್ತಿರಲಿಲ್ಲ. ಅಂತಹವನ್ನು ಬರ್ಬರವಾಗಿ ಹತ್ಯೆ ಮಾಡಲು ಮನಸ್ಸಾದರೂ ಹೇಗೆ ಬಂತು ಎಂದು' ಪ್ರಶ್ನಿಸುತ್ತಾರೆ ಪ್ರವೀಣ್ ಸೋದರಿ ರೋಹಿಣಿ.

ರಾಜ್ಯದಲ್ಲಿ ಬಿಜೆಪಿ ಕಾರ್ಯಕರ್ತರು ಸೇರಿದಂತೆ ಯಾರಿಗೂ ರಕ್ಷಣೆ ಇಲ್ಲ. ಸರ್ಕಾರವೇ ಅನೈತಿಕ ಪೊಲೀಸ್‌ಗಿರಿಗೆ ಪ್ರೋತ್ಸಾಹ ನೀಡಿದೆ. ಆ ಮೂಲಕ ಪರಿಸ್ಥಿತಿ ಹದಗೆಡಲು ಕಾರಣವಾಗಿದೆ.
ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಪ್ರವೀಣ್ ಹತ್ಯೆ ಪ್ರಕರಣದ ತನಿಖೆಯನ್ನು ಮುಕ್ತ, ಪಾರದರ್ಶಕವಾಗಿ ಮಾಡಬೇಕು. ಈವರೆಗೂ ನಡೆದಿರುವ ಕೋಮು ಗಲಭೆ ಹಾಗೂ ಕೋಮುಹತ್ಯೆಯನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕು
ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ

ರಾಜ್ಯ ಸರ್ಕಾರ ಸಾವಿನಲ್ಲೂ ಅನುಕಂಪ ಗಿಟ್ಟಿಸುವ ಕೆಲಸ ಮಾಡುತ್ತಿದೆ. ಇನ್ನಾದರೂ ಕಂಡವರ ಮಕ್ಕಳನ್ನು ಸಾವಿನ ದವಡೆಗೆ ನೂಕಿ ಮತ ಫಸಲು ತೆಗೆಯುವ ನರಹಂತಕ ರಾಜಕಾರಣ ನಿಲ್ಲಿಸಲಿ
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ಭೇದಿಸುವವರೆಗೆ ದಣಿವಿಲ್ಲದೇ ಕ್ರಮ: ಬೊಮ್ಮಾಯಿ

ದೇಶ ಛಿದ್ರ ಮಾಡುವ ಭಯೋತ್ಪಾದಕ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಳ್ಳಾರೆ (ದಕ್ಷಿಣ ಕನ್ನಡ): 'ಪ್ರವೀಣ್ ನೆಟ್ಟಾರು ಅವರ ಹತ್ಯೆಯನ್ನು ನಾವು ಕೇವಲ ಕೊಲೆ ಪ್ರಕರಣವಾಗಿ ನೋಡುತ್ತಿಲ್ಲ. ಇದನ್ನು ದೇಶವನ್ನು ಛಿದ್ರ ಮಾಡುವ ಯೋಜನಾಬದ್ಧ ಭಯೋತ್ಪಾದಕ ಕೃತ್ಯ ಎಂದೇ ಪರಿಗಣಿಸಿದ್ದೇವೆ. ಈ ಆಯಾಮದಲ್ಲೇ ತನಿಖೆ ಪ್ರಾರಂಭವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಇಲ್ಲಿಯ ನೆಟ್ಟಾರುವಿನಲ್ಲಿ ಪ್ರವೀಣ್ ಅವರ ಕುಟುಂಬದವರನ್ನು ಗುರುವಾರ ಭೇಟಿಯಾಗಿ ಸಾಂತ್ವನ ಹೇಳಿದ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ಇದೊಂದು ಪೂರ್ವಯೋಜಿತ ಕೃತ್ಯ ಎಂದು ಮೇಲ್ನೋಟಕ್ಕೆ ತಿಳಿಯುತ್ತದೆ. ಹತ್ತು ವರ್ಷಗಳಿಂದ ಈ ಭಾಗದಲ್ಲಿ ಇಂತಹ ಚಟುವಟಿಕೆಗಳು ನಡೆಯುತ್ತಿವೆ. ಸಮಾಜಘಾತುಕ ಶಕ್ತಿಗಳು ಬೆಂಬಲ ನೀಡಿರುವುದರಿಂದಲೇ ದುಷ್ಕರ್ಮಿಗಳು ನಿರ್ಭಿಡೆಯಿಂದ ಈ ಕೃತ್ಯವನ್ನು ನಡೆಸಿದ್ದಾರೆ' ಎಂದರು.

'ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ಹಲವಾರು ವರ್ಷಗಳಿಂದ ಇಂತಹ ದುಷ್ಕೃತ್ಯಗಳಲ್ಲಿ ತೊಡಗಿರುವ ಸಮಾಜಘಾತುಕ ಶಕ್ತಿಗಳ ಜಾಡು ಹಿಡಿದು ವಿಚಾರಣೆ ಆರಂಭಿಸಿದ್ದಾರೆ. ಕೃತ್ಯದ ಹಿಂದಿರುವ ಸಂಘಟನೆಗಳನ್ನು ಗಮನಿಸುತ್ತಿದ್ದೇವೆ. ಕೆಲವು ಆರೋಪಿಗಳು ರಾಜ್ಯದ ಗಡಿ ದಾಟಿರುವ ಸಾಧ್ಯತೆಯೂ ಇದೆ. ಈ ಆಯಾಮದಿಂದಲೂ ತನಿಖೆ ಮಾಡಲಾಗುತ್ತಿದೆ. ಕೆಲವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಅವರಿಂದ ಪಡೆದ ಮಾಹಿತಿಯ ಆಧಾರದಲ್ಲಿ ತನಿಖೆ ಮುಂದುವರಿಯಲಿದೆ. ಶೀಘ್ರದಲ್ಲಿ ಎಲ್ಲ ಆರೋಪಿಗಳನ್ನು ಬಂಧಿಸುವ ವಿಶ್ವಾಸವಿದೆ' ಎಂದರು.

'ಈ ಕೃತ್ಯದಲ್ಲಿ ಭಾಗಿಯಾಗಿರುವ ಎಲ್ಲ ಜಾಲವನ್ನು ಭೇದಿಸಲಾಗುವುದು. ಈ ಕೃತ್ಯಕ್ಕೆ ಬೆಂಬಲ ನೀಡಿರುವವರನ್ನೂ ವಿಚಾರಣೆಗೆ ಒಳಪಡಿಸಲು ಸೂಚಿಸಿದ್ದೇನೆ' ಎಂದರು.

ಬೆಳ್ಳಾರೆಯಲ್ಲಿ ವಾರದ ಹಿಂದಷ್ಟೇ ನಡೆದ ಮಸೂದ್ ಹತ್ಯೆಗೂ, ಪ್ರವೀಣ್ ಹತ್ಯೆಗೂ ಸಂಬಂಧವಿದೆಯೇ ಎಂಬ ಬಗ್ಗೆ ತನಿಖೆ ಪೂರ್ಣಗೊಂಡ ಬಳಿಕವಷ್ಟೇ ತಿಳಿಯಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪ್ರತಿಭಟನಾನಿರತ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿ ಚಾರ್ಜ್ ನಡೆಸಿದ ಬಗ್ಗೆ ಪ್ರವೀಣ್ ಕುಟುಂಬದವರು ಹಾಗೂ ಸಿ.ಎಂ.ಬಳಿ ನೋವು ತೋಡಿಕೊಂಡಿದ್ದರು. ಇದಕ್ಕೆ ಪ್ರತಿಕ್ರಿಸಿದ ಮುಖ್ಯಮಂತ್ರಿ, 'ಪೊಲೀಸ್ ಅಧಿಕಾರಿಗಳ ಕರ್ತವ್ಯ ವೈಫಲ್ಯವಾಗಿದ್ದರೆ ಅದನ್ನೂ ತನಿಖೆಗೆ ಒಳಪಡಿಸಲಾಗುವುದು' ಎಂದು ಭರವಸೆ ನೀಡಿದರು.

₹50 ಲಕ್ಷ ನೆರವು

ಪ್ರವೀಣ್ ನೆಟ್ಟಾರು ಕುಟುಂಬಕ್ಕೆ ಸರ್ಕಾರದಿಂದ ₹25 ಲಕ್ಷ ಹಾಗೂ ಬಿಜೆಪಿ ವತಿಯಿಂದ ₹ 25 ಲಕ್ಷ ಸೇರಿ ಒಟ್ಟು ₹ 50 ಲಕ್ಷ ಮೊತ್ತದ ಪರಿಹಾರದ ಚೆಕ್ ಹಸ್ತಾಂತರಿಸಿದ್ದೇವೆ ಎಂದು ಮುಖ್ಯಮಂತ್ರಿ ತಿಳಿಸಿದರು.

'ಕುಟುಂಬಕ್ಕೆ ಪ್ರವೀಣ್ ಅವರೇ ಆಧಾರವಾಗಿದ್ದರು. ಚಿಕ್ಕ ಅಂಗಡಿಯೇ ಅವರ ಕುಟುಂಬದ ಆದಾಯದ ಮೂಲವಾಗಿತ್ತು. ಅವರ ಕುಟುಂಬದವರಿಗೆ ಪಕ್ಷ ಮತ್ತು ಸರ್ಕಾರದ ವತಿಯಿಂದ ಎಲ್ಲ ರೀತಿಯ ಸಹಕಾರ ನೀಡಲಾಗುವುದು' ಎಂದು ಅವರು ಹೇಳಿದರು.

'ಮಂಗಳೂರಿಗೆ ಎನ್‌ಐಎ ಘಟಕ ಅಗತ್ಯ'

'ರಾಜ್ಯದಲ್ಲಿ ರಾಷ್ಟ್ರೀಯ ತನಿಖಾ ದಳದ ಘಟಕವನ್ನು-(ಎನ್‌ಐಎ) ಆರಂಭಿಸುವಂತೆ ಕೇಂದ್ರ ಸರ್ಕಾರವನ್ನು ಕೋರಿದ್ದೇವೆ. ವಿಶೇಷವಾಗಿ ಮಂಗಳೂರು ಭಾಗದಲ್ಲಿ ಎನ್‌ಐಎ ಘಟಕವನ್ನು ಹೊಂದುವ ಅಗತ್ಯ ಇದೆ' ಎಂದು ಮುಖ್ಯಮಂತ್ರಿ ಹೇಳಿದರು.

'ಪ್ರವೀಣ್ ಹತ್ಯೆಯ ಪ್ರಾಥಮಿಕ ತನಿಖಾ ವರದಿ ಆಧರಿಸಿ ಹೆಚ್ಚುವರಿ ತನಿಖೆಯ ಅವಶ್ಯಕತೆ ಇದ್ದಲ್ಲಿ ಅದನ್ನು ಎನ್‌ಐಎಗೆ ವಹಿಸಲಾಗುವುದು' ಎಂದರು.

ಬೆಳ್ಳಾರೆಯಲ್ಲಿ ಆಸ್ಪತ್ರೆ ಇದ್ದರೆ ಬದುಕುತ್ತಿದ್ದರು...

'ಇನ್ನಾದರೂ ಸರ್ಕಾರ ಅಲರ್ಟ್ ಆಗಿರಬೇಕು. ನನ್ನ ಗಂಡನ ಹಾಗೆ ಅನೇಕರು ಪಕ್ಷ, ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ರಕ್ಷಣೆ ಮಾಡಿ'

'ನನ್ನ ಗಂಡನಿಗೆ ಆದ ಗತಿ ಇನ್ಯಾರಿಗೂ ಆಗೋದು ಬೇಡ'

ಸುಳ್ಯ (ದಕ್ಷಿಣ ಕನ್ನಡ): 'ಇಂತಹ ಘಟನೆ ಮರುಕಳಿಸಬಾರದು. ನಾನು ಧೈರ್ಯದಿಂದ ಇದ್ದೇನೆ. ನನ್ನ ಗಂಡನಿಗೆ ಆದ ಗತಿ ಬೇರೆ ಯಾರಿಗೂ ಆಗಬಾರದು'

ಇದು ಮೃತ ಪ್ರವೀಣ್ ನೆಟ್ಟಾರು ಅವರ ಪತ್ನಿ ನೂತನಾ ಅವರು, ತಮ್ಮ ಮನೆಗೆ ಬಂದಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ಬೇಡಿಕೊಂಡ ಪರಿ.

ಶಿಕ್ಷೆ ನೀಡಿ: ಈ ಕೃತ್ಯದ ಹಿಂದೆ ಅನೇಕರು ಇದ್ದಾರೆ. ಅವರೆಲ್ಲರನ್ನೂ ಪತ್ತೆ ಮಾಡಿ ಎಲ್ಲರಿಗೂ ಶಿಕ್ಷೆ ನೀಡಬೇಕು. ಜಾಮೀನು ನೀಡಲು ಹೋದವರಿಗೂ ಶಿಕ್ಷೆ ಆಗಬೇಕು. ಕೊಲೆ ಮಾಡಿದವರಿಗೆ ಗಲ್ಲು ಶಿಕ್ಷೆ ಆಗಬೇಕು ಎಂದು ನೂತನ ಆಗ್ರಹಿಸಿದರು. ಘಟನೆ ನಡೆದು ತುಂಬಾ ಹೊತ್ತು ತನಕ ಪ್ರವೀಣ್ ಉಸಿರಾಡುತ್ತಿದ್ದರು. ಒಂದು ವೇಳೆ ಬೆಳ್ಳಾರೆಯಲ್ಲೇ ಸುಸಜ್ಜಿತ ಆಸ್ಪತ್ರೆ ಇರುತ್ತಿದ್ದರೆ ಅವರು ಉಳಿಯುತ್ತಿದ್ದರು. ನನ್ನ ಗಂಡನ ನೆನಪಿಗಾದರೂ ಇಲ್ಲೊಂದು ಸುಸಜ್ಜಿತ ಆಸ್ಪತ್ರೆ ಮಾಡಿ ಸರ್ ಎಂದು ವಿನಂತಿಸಿದರು.

'ನಿಮ್ಮ ಬೇಡಿಕೆ ಈಡೇರಿಸುತ್ತೇವಮ್ಮ' ಎಂದು ಬೊಮ್ಮಾಯಿ ಭರವಸೆ ನೀಡಿದರು.

ಮುಸ್ಲಿಮರ ವಿರುದ್ಧ ಷಡ್ಯಂತ್ರ: ಆರೋಪ

ನಿಷ್ಪಕ್ಷಪಾತ ತನಿಖೆ ನಡೆಸಲು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಆಗ್ರಹ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಪ್ರವೀಣ್ ನೆಟ್ಟಾರು ಅವರ ಕೊಲೆಗೆ ಸಂಬಂಧಿಸಿ ಸರ್ಕಾರ ಮತ್ತು ಪೊಲೀಸ್ ಇಲಾಖೆ ಮುಸ್ಲಿಂ ಸಮುದಾಯದ ವಿರುದ್ಧ ಷಡ್ಯಂತ್ರ ಹೂಡುತ್ತಿದ್ದು ಇದರ ಫಲವಾಗಿ ಅಮಾಯಕ ಯುವಕರನ್ನು ಬಂಧಿಸಲಾಗುತ್ತಿದೆ. ನಿಷ್ಪಕ್ಷಪಾತ ತನಿಖೆ ನಡೆಸಿ ನೈಜ ಆರೋಪಿಗಳನ್ನು ಪತ್ತೆ ಮಾಡಬೇಕು' ಎಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಆಗ್ರಹಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ರಾಜ್ಯ ಘಟಕದ ಕಾರ್ಯದರ್ಶಿ ಅಶ್ರಫ್ ಎ.ಕೆ, 'ಸಂಘ ಪರಿವಾರದ ಕಾರ್ಯಕರ್ತರ ಹತ್ಯೆಯಾದಾಗಲೆಲ್ಲ ಬಿಜೆಪಿ ಸಂಸದರು ಮತ್ತು ಸಚಿವರು ಗೊಂದಲಕಾರಿ ಹೇಳಿಕೆ ನೀಡುತ್ತಾರೆ. ಅವರ ಒತ್ತಡಕ್ಕೆ ಮಣಿದು ಪೊಲೀಸರು ಮುಸ್ಲಿಂ ಯುವಕರನ್ನು ರಾತ್ರೋರಾತ್ರಿ ವಿಚಾರಣೆಗಾಗಿ ಕರೆದೊಯ್ಯುತ್ತಾರೆ. ತನಿಖೆ ರಾಜಕೀಯ ಪ್ರೇರಿತವಾಗಿಯೇ ಸಾಗುತ್ತದೆ. ಪ್ರವೀಣ್ ನೆಟ್ಟಾರು ಹತ್ಯೆಗೆ ಸಂಬಂಧಿಸಿ ಬಿಜೆಪಿ ಕಾರ್ಯಕರ್ತರೇ ಸಂಸದರು, ಸಚಿವರು ಮತ್ತು ಶಾಸಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅವರನ್ನು ಸಮಾಧಾನಪಡಿಸಲು ಸರ್ಕಾರ ಪೊಲೀಸ್ ಇಲಾಖೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ' ಎಂದು ದೂರಿದರು.

'ಸಂಘಪರಿವಾರದ ಕೆಲವು ಕಾರ್ಯಕರ್ತರ ಕೊಲೆ ಪ್ರಕರಣಗಳಲ್ಲಿ ಸಂಘಪರಿವಾರದ ಕಾರ್ಯಕರ್ತರೇ ಆರೋಪಿಗಳಾಗಿರುವುದು ಸಾಬೀತಾಗಿದೆ. ಶಿವಮೊಗ್ಗದಲ್ಲಿ ಹರ್ಷ ಹತ್ಯೆಯಲ್ಲಿ ಪಿಎಫ್‌ಐ ಕೈವಾಡವಿದೆ ಎಂದು ಬಿಜೆಪಿಯವರು ಹೇಳಿದ್ದರು. ಆದರೆ ಹರ್ಷ ರೌಡಿಶೀಟರ್ ಆಗಿದ್ದು ಪರಸ್ಪರ ವೈಷಮ್ಯವೇ ಕೊಲೆಗೆ ಕಾರಣ ಎಂದು ತನಿಖೆಯಿಂದ ಬಹಿರಂಗವಾಗಿತ್ತು. ಆದ್ದರಿಂದ ಪ್ರವೀಣ್ ಕೊಲೆ ಪ್ರಕರಣದಲ್ಲಿ ಅವರ ತಂದೆ ಸಂಶಯ ವ್ಯಕ್ತಪಡಿಸಿದ್ದಾರೆ. ಆ ಆಯಾಮದಲ್ಲೂ ತನಿಖೆ ಆಗಬೇಕು. ಶವಯಾತ್ರೆ ನೆಪದಲ್ಲಿ ಸೊತ್ತು ನಾಶಪಡಿಸಿದವರ ಮೇಲೆ ಕಠಿಣ ಕ್ರಮ ಜರುಗಿಸಬೇಕು. ಕೊಲೆಯಾದವರ ಕುಟುಂಬಗಳಿಗೆ ಪರಿಹಾರದಲ್ಲಿ ತಾರತಮ್ಯ ಆಗುವುದನ್ನು ನಿಲ್ಲಿಸಬೇಕು' ಎಂದು ಅವರು ಒತ್ತಾಯಿಸಿದರು.

ಪಿಎಫ್‌ಐ ಜಿಲ್ಲಾ ಘಟಕದ ಅಧ್ಯಕ್ಷ ಇಜಾಜ್ ಅಹಮ್ಮದ್, ಪ್ರಕರಣದಲ್ಲಿ ಅಮಾಯಕರನ್ನು ಬಲಿಮಾಡುವುದನ್ನು ತಡೆಯಲು ನ್ಯಾಯಾಂಗ ತನಿಖೆ ಆಗಬೇಕು ಎಂದು ಕೋರಿದರು.

ಮೂಲಭೂತವಾದಿಗಳಿಗೆ ಕೇರಳ ಸರ್ಕಾರ ರಕ್ಷಣೆ: ರಾಜೀವ್ ಚಂದ್ರಶೇಖರ್

ನವದೆಹಲಿ: 'ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದ ಆರೋಪಿಗಳನ್ನು ಬಂಧಿಸಲು ಕೇರಳ ಸರ್ಕಾರವು ಕರ್ನಾಟಕ ಸರ್ಕಾರಕ್ಕೆ ನೆರವಾಗಬೇಕು' ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಎಡಪಕ್ಷಗಳ ಆಡಳಿತವಿರುವ ಕೇರಳವು ಮೂಲಭೂತವಾದಿಗಳಿಗೆ ಸುರಕ್ಷಿತ ತಾಣವಾಗಿದೆ. ಕೇರಳ ನೋಂದಣಿ ಸಂಖ್ಯೆಯ ಬೈಕ್‌ನಲ್ಲಿ ಬಂದ ಹಂತಕರು ಪ್ರವೀಣ್ ನೆಟ್ಟಾರು ಅವರನ್ನು ಹತ್ಯೆ ಮಾಡಿದ್ದಾರೆ' ಎಂದರು.

'ಸಮಾಜದ ಶಾಂತಿ ಕದಡುವ ಇಸ್ಲಾಮಿಕ್ ಮೂಲಭೂತವಾದಿ ಸಂಘಟನೆಗಳಾದ ಪಿಎಫ್‌ಐ ಹಾಗೂ ಎಸ್‌ಡಿಪಿಐಗೆ ಕೇರಳ ಸರ್ಕಾರವು ಬೆಂಬಲ ನೀಡುತ್ತಿದೆ. ಕೊಲೆ ಆರೋಪಿಗಳನ್ನು ಕರ್ನಾಟಕ ಸರ್ಕಾರ ಬೇಟೆಯಾಡಲಿದೆ. ಅದಕ್ಕೆ ಕೇರಳ ಸರ್ಕಾರ ನೆರವು ನೀಡಬೇಕು' ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಭಾವಚಿತ್ರಕ್ಕೆ ಬಳೆ

ಬಾಗಲಕೋಟೆ: ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿ ಸಮಿತಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕಣದಲ್ಲಿ ಕಠಿಣ ಕ್ರಮಕೈಗೊಳ್ಳದ್ದನ್ನು ಖಂಡಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಳೆ ತೊಡಿಸಿದ ಭಾವಚಿತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಬೊಮ್ಮಾಯಿ ಅವರ ಕೈ ಮುಗಿದಿರುವ ಭಾವಚಿತ್ರಕ್ಕೆ ಬಳೆ ಹಾಕಿದಂತೆ ಬದಲಿಸಿ ಆಕ್ರೋಶ ವ್ಯಕ್ತಪಡಿಸಲಾಗಿದೆ.

'ಪಿಎಫ್‌ಐ ನಿಷೇಧಿಸಬೇಕಿದೆ'

'ಪಿಎಫ್‌ಐ ಮತ್ತು ಎಸ್‌ಡಿಪಿಐ ಸಂಘಟನೆಗಳನ್ನು ನಿಷೇಧಿಸುವ ಕುರಿತು ಕೇಂದ್ರಕ್ಕೆ ವರದಿ ಕಳಿಸಿದ್ದೇವೆ. ದೇಶದಾದ್ಯಂತ ಈ ಸಂಘಟನೆಗಳನ್ನು ನಿಷೇಧಿಸಬೇಕಾಗಿದೆ' ಎಂದು ಬೊಮ್ಮಾಯಿ ಹೇಳಿದರು.

'ಸಂಘಟನೆಗಳನ್ನು ನಿಷೇಧಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆ. ಹಲವು ರಾಜ್ಯಗಳ ಒತ್ತಡವಿರುವುದರಿಂದ ಕೇಂದ್ರವು ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಲಿದೆ' ಎಂದು ಹೇಳಿದರು.

ಅಗತ್ಯಬಿದ್ದರೆ 'ಯೋಗಿ ಮಾದರಿ': ಬೊಮ್ಮಾಯಿ

ಒಂದನೇ ಪುಟದಿಂದ...

'ಕಳೆದ ಒಂದು ವರ್ಷದಲ್ಲಿ ಸಾಕಷ್ಟು ಜನಪರ ಕೆಲಸಗಳನ್ನು ಮಾಡಿದ್ದೇವೆ. ಆದರೂ ಕೆಲವು ಸವಾಲುಗಳಿವೆ. ಕೋಮು ಸಾಮರಸ್ಯ ಇದರಲ್ಲಿ ಪ್ರಮುಖವಾದುದು. ಕೋಮು ಸೌಹಾರ್ದವನ್ನು ಕದಡಲು ಕೆಲವು ಶಕ್ತಿಗಳು ಇಡೀ ದೇಶದಲ್ಲಿ ಪಿತೂರಿ ನಡೆಸಿವೆ. ಕೇರಳ, ರಾಜಸ್ಥಾನ, ಉತ್ತರಪ್ರದೇಶಗಳಲ್ಲಿ ಇಂತಹ ಘಟನೆಗಳು ನಡೆದಿವೆ. ರಾಜ್ಯದಲ್ಲಿ 10 ವರ್ಷಗಳಿಂದ ಅಂದರೆ, 2014-15 ರಿಂದ ಈ ಶಕ್ತಿಗಳು ತಲೆ ಎತ್ತಿವೆ. ಸ್ಲೀಪರ್ ಸೆಲ್ ರಚಿಸಿಕೊಂಡು ಉಗ್ರರು ಅಡಗಿಕೊಂಡಿದ್ದಾರೆ. ಸಾಕಷ್ಟು ಜನರನ್ನು ಹಿಡಿದು ತಿಹಾರ್ ಜೈಲಿಗೆ ಕಳುಹಿಸಿದ್ದೇವೆ' ಎಂದು ಅವರು ಹೇಳಿದರು.

'ಡಿ.ಜೆ.ಹಳ್ಳಿ , ಕೆ.ಜಿ.ಹಳ್ಳಿ ಗಲಭೆ, ಮಂಗಳೂರು ಗಲಭೆಯನ್ನು ಸಮರ್ಥವಾಗಿ ನಿಭಾಯಿಸಿ ಆರೋಪಿಗಳನ್ನು ಜೈಲಿಗಟ್ಟಿದ್ದೆವು. ಹರ್ಷ ಕೊಲೆಯ ಆರೋಪಿಗಳನ್ನು 24 ಗಂಟೆಗಳಲ್ಲಿ ಬಂಧಿಸಲಾಯಿತು. ಪಾಂಡವಪುರದಲ್ಲಿ ಗಲಭೆ ಆದಾಗ ನಾನೇ ಹೋಗಿ ನಿಭಾಯಿಸಿದೆ. ನಮ್ಮದು ಕೇವಲ ಬಾಯಿ ಮಾತಲ್ಲ, ಮಾಡಿ ತೋರಿಸುತ್ತೇವೆ' ಎಂದರು.

ಹಿಜಾಬ್ ವಿವಾದ ಆರಂಭಿಸಿದ್ದೇ ಐವರು ಬಾಲಕಿಯರು. ಅದನ್ನು ಅವರು ವ್ಯವಸ್ಥಿತವಾಗಿ ಇಡೀ ರಾಜ್ಯ ವ್ಯಾಪಿಸುವಂತೆ ಮಾಡಿದರು. ರಾಜ್ಯದಲ್ಲಿ ದೊಡ್ಡ ಗಲಭೆಯನ್ನು ಸೃಷ್ಟಿಸುವ ಹುನ್ನಾರವನ್ನೂ ಮಾಡಿದ್ದರು. ಈ ಸಂದರ್ಭದಲ್ಲಿ ಸರ್ಕಾರ ಕೈಗೊಂಡ ಕ್ರಮಗಳು ಸರಿಯಾಗಿಯೇ ಇದ್ದವು ಎಂಬುದನ್ನು ಹೈಕೋರ್ಟ್ ಎತ್ತಿ ಹಿಡಿದಿದೆ ಎಂದು ಬೊಮ್ಮಾಯಿ ತಿಳಿಸಿದರು.

ಸಮಾಜ ದ್ರೋಹಿಗಳ ವಿರುದ್ಧ ನಾವು ಸಮರ ಸಾರಿದ್ದೇವೆ. ಆದ್ದರಿಂದ, ಎಲ್ಲರೂ ಸಂಯಮದಿಂದ ವರ್ತಿಸಬೇಕು.
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ದಕ್ಷಿಣಕನ್ನಡ ಜಿಲ್ಲೆ ಬೆಳ್ಳಾರೆಯಲ್ಲಿರುವ ಪ್ರವೀಣ್ ಅವರ ಮನೆಗೆ ಗುರುವಾರ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರವೀಣ್ ಅವರ ಪತ್ನಿ ನೂತನಾ, ತಾಯಿ ರತ್ನಾವತಿ ಅವರಿಗೆ ಸಾಂತ್ವನ ಹೇಳಿದರು

'ಕಾಂಗ್ರೆಸ್ ಸರ್ಕಾರ ಇದ್ದರೆ ಕಲ್ಲು ಹೊಡೆಯಬಹುದಿತ್ತು'

'ಈಗ ನಮ್ಮದೇ ಸರ್ಕಾರವಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಹತ್ಯೆಯಾಗಿದ್ರೆ ಕಲ್ಲು ಹೊಡೆಯಬಹುದಿತ್ತು' ಎಂದು ಬಿಜೆಪಿ ಸಂಸದರೂ ಆದ ಯುವಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿ ಸೂರ್ಯ ಹೇಳಿರುವುದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಚಿಕ್ಕಮಗಳೂರು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರ ಜತೆ ಮಾತನಾಡಿರುವ ಆಡಿಯೊ ಬಹಿರಂಗವಾಗಿದೆ. ರಾಜೀನಾಮೆ ನೀಡಿರುವುದನ್ನು ಹಿಂದಕ್ಕೆ ಪಡೆಯುವಂತೆ ಮನವೊಲಿಸಲು ತೇಜಸ್ವಿ ದೂರವಾಣಿ ಕರೆ ಮಾಡಿದ ಸಂದರ್ಭದಲ್ಲಿ ಅವರು ಈ ಮಾತು ಆಡಿದ್ದಾರೆ.

'ರಾಜ್ಯದಲ್ಲಿ ನಮ್ಮದೇ ಸರ್ಕಾರವಿದೆ. ಆದರೆ ಕಾರ್ಯಕರ್ತರ ಹತ್ಯೆ ಆಗುವುದು ನಿಂತಿಲ್ಲ. ನಾಯಕರು ಯಾರೂ ಗಮನಹರಿಸುತ್ತಿಲ್ಲ. ಹಾಗಿದ್ದರೆ ನಾವು ಪಕ್ಷಕ್ಕಾಗಿ ಏಕೆ ದುಡಿಯಬೇಕು? ಸರ್ಕಾರದ ಬಳಿ ಗುಪ್ತದಳ ಇದ್ದರೂ ದಾಳಿ ನಿಂತಿಲ್ಲ. ಎಲ್ಲ ಜಿಲ್ಲೆಗಳಲ್ಲೂ ಹಿಟ್‌ಲಿಸ್ಟ್ ಮಾಡಿ, ಒಬ್ಬೊಬ್ಬರನ್ನೇ ಹತ್ಯೆ ಮಾಡಲು ಸಂಚು ಮಾಡಿದ್ದಾರೆ. ನಾವು ಸಾವಿನ ಭಯದಲ್ಲಿ ಕೆಲಸ ಮಾಡಬೇಕೆ' ಎಂದು ಜಿಲ್ಲಾಧ್ಯಕ್ಷರು, ತೇಜಸ್ವಿ ಅವರನ್ನು ಪ್ರಶ್ನಿಸಿದ್ದಾರೆ ಮತ್ತು ರಾಜೀನಾಮೆ ಪತ್ರಗಳನ್ನು ಹಿಂದಕ್ಕೆ ಪಡೆಯಲು ನಿರಾಕರಿಸಿರುವುದು ಆಡಿಯೊ ಮಾತುಕತೆಯಲ್ಲಿದೆ.

ಮತ್ತೊಂದು ವಿಡಿಯೊದಲ್ಲಿ ತೇಜಸ್ವಿ ಅವರು, 'ರಾಜಸ್ಥಾನದಲ್ಲಿ ಟೈಲರ್ ಹತ್ಯೆ ಆಯಿತು. ಬೇರೆ ಬೇರೆ ಕಡೆ ಹತ್ಯೆ ನಡೆದಿವೆ. ಪ್ರತಿಯೊಬ್ಬರಿಗೂ ಪೊಲೀಸ್ ಕೊಟ್ಟು ರಕ್ಷಣೆ ವ್ಯವಸ್ಥೆ ಮಾಡಲು ಸಾಧ್ಯವೇ' ಎಂದು ಪ್ರಶ್ನಿಸಿರುವ ವಿಷಯವೂ ಟೀಕೆಗೆ ಒಳಗಾಗಿದೆ.

ಗುತ್ತಿಗಾರಿನಲ್ಲಿ ಮುಸ್ಲಿಂ ವ್ಯಾಪಾರಿಯೊಬ್ಬರ ಅಂಗಡಿಗಳ ಮೇಲೆ ದಾಳಿ ನಡೆಸಿ, ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿರುವುದು

ಮುಸ್ಲಿಮರ ಅಂಗಡಿಗಳ ಮೇಲೆ ದಾಳಿ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಪ್ರವೀಣ್ ಹತ್ಯೆಯ ಆರೋಪಿಗಳ ಬಂಧನದ ವಿಷಯ ತಿಳಿಯುತ್ತಿದ್ದಂತೆ ಗುತ್ತಿಗಾರಿನಲ್ಲಿ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಎನ್ನಲಾದ ಕೆಲವರು ಮುಸ್ಲಿಮರ ಅಂಗಡಿಗಳ ಮೇಲೆ ದಾಳಿ ನಡೆಸಿದ್ದು, ವಸ್ತುಗಳನ್ನು ಚೆಲ್ಲಾಪಿಲ್ಲಿಯಾಗಿ ಎಸೆದಿದ್ದಾರೆ.

50ಕ್ಕೂ ಹೆಚ್ಚು ಕಾರ್ಯಕರ್ತರು ಗುತ್ತಿಗಾರಿನ ಪ್ರಗತಿ ಸುಪಾರಿ ಟ್ರೇಡರ್ಸ್, ಪ್ರಗತಿ ಸ್ಟೋರ್ ಸೇರಿದಂತೆ ಬಹುತೇಕ ಮುಸ್ಲಿಮರ ಅಂಗಡಿಗಳ ಮೇಲೆ ದಾಳಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಳಗಿನ ಪೇಟೆಯಲ್ಲಿ ಸ್ಕೂಟರೊಂದಕ್ಕೆ ಬೆಂಕಿ ಹಚ್ಚಿದ್ದಾರೆ. ಪ್ರವೀಣ್ ಕೊಲೆ ಪ್ರಕರಣದಲ್ಲಿ ಬಂಧಿತ ಆರೋಪಿ ಶಫೀಕ್ ಗುತ್ತಿಗಾರು ಎಂಬಾತ ಅಡಿಕೆ ಅಂಗಡಿಯೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದ.

ಪ್ರವೀಣ್ ಅಂಗಡಿಯಲ್ಲೇ ಕೆಲಸಕ್ಕಿದ್ದ ಆರೋಪಿಯ ತಂದೆ

ಬೆಳ್ಳಾರೆ: ಪ್ರವೀಣ್ ನೆಟ್ಟಾರು ಅವರು ಬೆಳ್ಳಾರೆಯಲ್ಲಿ ನಡೆಸುತ್ತಿದ್ದ ಕೋಳಿ ಅಂಗಡಿಯಲ್ಲಿ, ಬಂಧಿತ ಆರೋಪಿ ಶಫೀಕ್ ಅವರ ತಂದೆ ಕೆಲಸಕ್ಕಿದ್ದರು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಕೆಲ ತಿಂಗಳ ಕಾಲ ಕೋಳಿ ಕೊಚ್ಚಿಕೊಡುವ ಕೆಲಸಕ್ಕಿದ್ದ ಶಫೀಕ್ ಅವರ ತಂದೆ ಬಳಿಕ ಕೆಲಸ ತ್ಯಜಿಸಿದ್ದರು.

ಸಿ.ಎಂಗೂ ತಟ್ಟಿದ ಆಕ್ರೋಶದ ಬಿಸಿ

ಒಂದನೇ ಪುಟದಿಂದ...

'ಆರೋಪಿ ಮಹಮ್ಮದ್ ಝಾಕೀರ್ ಎಂಬಾತ ಪುತ್ತೂರು ತಾಲ್ಲೂಕಿನ ಎಸ್‌ಡಿಪಿಐ ಸರ್ವೆ ಗ್ರಾಮ ಘಟಕದ ಅಧ್ಯಕ್ಷ ಹಾಗೂ ಶಫೀಕ್ ಎಸ್‌ಡಿಪಿಐ ಸಂಘಟನೆಯ ಕಾರ್ಯಕರ್ತ' ಎಂದು ಮೂಲಗಳು ತಿಳಿಸಿವೆ. 'ಬಂಧಿತ ಆರೋಪಿಯೊಬ್ಬರ ಪತ್ನಿ ತಮ್ಮ ಪತಿ ಪಿಎಫ್‌ಐ ಕಾರ್ಯಕರ್ತ ಎಂದು ಹೇಳಿದ್ದಾರೆ. ಆದರೆ, ಇವರು ನಮ್ಮ ಕಾರ್ಯಕರ್ತರು ಹೌದೇ ಎಂಬುದನ್ನು ಪರಿಶೀಲಿಸುತ್ತೇವೆ' ಎಂದು ಪಿಎಫ್‌ಐ ಮುಖಂಡರು ಮಂಗಳೂರಲ್ಲಿ ಹೇಳಿದ್ದಾರೆ.

ಪ್ರವೀಣ್ ಪಾರ್ಥಿವ ಶರೀರದ ಮೆರವಣಿಗೆ ವೇಳೆ ಸಂಘ ಪರಿವಾರದ ಸಂಘಟನೆಗಳ ಹಾಗೂ ಬಿಜೆಪಿ ಕಾರ್ಯಕರ್ತರು ಸಿಟ್ಟಿನಿಂದಾಗಿ ಉದ್ವಿಗ್ನಗೊಂಡಿದ್ದ ಬೆಳ್ಳಾರೆಯಲ್ಲಿ ಗುರುವಾರ ಜನಜೀವನ ಸಹಜ ಸ್ಥಿತಿಗೆ ಬಂದಿದೆ. ಪರಿಸ್ಥಿತಿ ಹತೋಟಿಯಲ್ಲಿರುವುದು ಹಾಗೂ ಇಬ್ಬರ ಬಂಧನವಾಗುತ್ತಿದ್ದಂತೆ ಬೆಂಗಳೂರಿನಿಂದ ಧಾವಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರವೀಣ್ ಅವರ ಮನೆಗೆ ಭೇಟಿನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಬಳಿಕ ಮುಖ್ಯಮಂತ್ರಿ ಅವರು ಪ್ರವೀಣ್ ಅವರ ತಂದೆ ಶೇಖರ ಪೂಜಾರಿ ಅವರ ಬಳಿ ಮಾತನಾಡುತ್ತಿದ್ದರು. ಆಗ ಪ್ರವೀಣ್ ಅವರ ಭಾವ ವಸಂತ್ ನೋವು ತೋಡಿಕೊಂಡರು. ಬಿಜೆಪಿ ನಾಯಕರು, 'ಅದನ್ನೆಲ್ಲ ಈಗ ಹೇಳುವುದು ಬೇಡ' ಎಂದರು. ಅಷ್ಟರಲ್ಲಿ ಸ್ಥಳದಲ್ಲಿದ್ದ ಬಿಜೆಪಿ ಕಾರ್ಯಕರ್ತರ ತಾಳ್ಮೆಯ ಕಟ್ಟೆ ಒಡೆಯಿತು. ನ್ಯಾಯಬೇಕು ಎಂದು ಏಕಾಏಕಿ ಘೋಷಣೆ ಕೂಗಲಾರಂಭಿಸಿದರು. ಕೆಲವರು ಸರ್ಕಾರಕ್ಕೆ ಧಿಕ್ಕಾರ ಎಂಬ ಘೋಷಣೆಯನ್ನೂ ಕೂಗಿದರು.

ಏತನ್ಮಧ್ಯೆ, ಬಿಜೆಪಿಯಲ್ಲಿ ರಾಜೀನಾಮೆ ಪರ್ವ ಮುಂದುವರೆದಿದೆ. ರಾಜ್ಯದ ವಿವಿಧೆಡೆ ಪದಾಧಿಕಾರಿಗಳು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರೆ, ಕೆಲ ಶಾಸಕರು-ಮುಖಂಡರು ತಮ್ಮ ಪಕ್ಷದ ಸರ್ಕಾರದ ವಿರುದ್ಧವೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆರೋಪಿಗಳನ್ನು ಎನ್‌ಕೌಂಟರ್ ಮಾಡಬೇಕು ಎಂದೂ ಕೆಲವರು ಒತ್ತಾಯಿಸುತ್ತಿದ್ದಾರೆ. ಚಿಕ್ಕಮಗಳೂರು ಜಿಲ್ಲೆ ಕೊಪ್ಪದಲ್ಲಿ ಬಂದ್ ನಡೆಸಲಾಯಿತು.

'ಗಲಾಟೆ ಸೃಷ್ಟಿಸಿ ಲಾಭ ಮಾಡಿಕೊಳ್ಳುವ ಉದ್ದೇಶ'

ಸುಳ್ಯ ಶಾಸಕ ಸಂಜೀವ್ ಮಠಂದೂರು ಅವರು ಸಾಂತ್ವನ ಹೇಳಲು ಗುರುವಾರ ಬೆಳಿಗ್ಗೆ ಪ್ರವೀಣ್ ಅವರ ಮನೆಗೆ ಭೇಟಿ ನೀಡಿದ್ದ ವೇಳೆ ಕುಟುಂಬಸ್ಥರು ಅವರನ್ನು ತರಾಟೆಗೆ ತೆಗೆದುಕೊಂಡರು.

'ನಿಮ್ಮ ಸಾಂತ್ವನದ ಮಾತುಗಳು ಬೇಕಿಲ್ಲ. ಬಿಜೆಪಿ ನಾಯಕರು ಬುಧವಾರ ಉದ್ದೇಶಪೂರ್ವಕವಾಗಿಯೇ ಮನೆಗೆ ಬಂದಿಲ್ಲ. ಗಲಾಟೆ ಸೃಷ್ಟಿಸಿ ಲಾಭ ಮಾಡಿಕೊಳ್ಳುವುದಷ್ಟೇ ನಿಮ್ಮ ಉದ್ದೇಶ' ಎಂದು ಪ್ರವೀಣ್ ಅವರ ಚಿಕ್ಕಪ್ಪ ಜಯರಾಮ ಪೂಜಾರಿ ಹೇಳಿದರು.

'ನಳಿನ್ ಕುಮಾರ್ ಕಟೀಲ್ ಹಾಗೂ ಸುನಿಲ್ ಕುಮಾರ್ ಅವರು ಬೆಳ್ಳಾರೆಗೆ ಬರುವವರೆಗೂ ಯಾವುದೇ ಗಲಾಟೆ ಆಗಿರಲಿಲ್ಲ. ಪಾರ್ಥಿವ ಶರೀರದ ಮೆರವಣಿಗೆ ಬರುವಾಗ ನಿಂತಿಕಲ್ಲುವಿನಲ್ಲಿ ಸಾವಿರಾರು ಕಾರ್ಯಕರ್ತರು ಸೇರಿದ್ದರು. ಆದರೂ ಯಾವುದೇ ಗೊಂದಲ ಉಂಟಾಗಿರಲಿಲ್ಲ. ನಾಯಕರು ಬಂದ ಬಳಿಕ ಕಾರ್ಯಕರ್ತರು ಸಹಜವಾಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಕ್ಷಕ್ಕೆ ದುಡಿದ ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್ ಮಾಡಿಸುವ ಮೂಲಕ ಅವರನ್ನು ಪಕ್ಷವು ಹೇಗೆ ನಡೆಸಿಕೊಳ್ಳುತ್ತದೆ ಎಂದು ತೋರಿಸಿಕೊಟ್ಟಿದ್ದೀರಿ' ಎಂದು ನೋವಿನಿಂದ ಹೇಳಿದರು.

'ನಾಯಕರು ದಯವಿಟ್ಟು ಮನೆಗೆ ಬರಬೇಡಿ. ಹಂತಕರಿಗೆ ಶಿಕ್ಷೆ ಕೊಡಿಸುವ ಮೂಲಕ ಪ್ರವೀಣ್ ಸಾವಿಗೆ ನ್ಯಾಯ ಕೊಡಿಸಿ, ಇನ್ನಾದರೂ ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರಿಗೆ, ಪ್ರವೀಣ್‌ಗೆ ಬಂದ ಸ್ಥಿತಿ ಬರದಂತೆ ನೋಡಿಕೊಳ್ಳಿ' ಎಂದು ವಿನಂತಿಸಿದರು.

'ನಮ್ಮ ಕುಟುಂಬ ಇಂದು ನರಕ ಅನುಭವಿಸುತ್ತಿದೆ. ನಾಳೆ ಮತ್ತೊಂದು ನಡೆಯುತ್ತದೆ. ನಿಮ್ಮ ಮನೆಯ ಮಗಳಿಗೆ ಈ ಪರಿಸ್ಥಿತಿ ಬರುತ್ತಿದ್ದರೆ ಏನು ಮಾಡುತ್ತಿದ್ರಿ? ಎರಡು ದಿನ ಬಿಟ್ಟು ಮನೆಗೆ ಹೋಗುತ್ತಿದ್ರಾ' ಎಂದು ಪ್ರವೀಣ್ ಅವರ ಪತ್ನಿ ನೂತನಾ ಅವರು ಶಾಸಕರನ್ನು ಪ್ರಶ್ನಿಸಿದರು.

ಇಬ್ಬರು ಆರೋಪಿಗಳನ್ನು ಬಂಧಿಸಿದ್ದೇವೆ. ಎಸ್‌ಡಿಪಿಐ, ಪಿಎಫ್‌ಐ ಸೇರಿದಂತೆ ಯಾವುದಾದರೂ ಸಂಘಟನೆಯ ಕೈವಾಡ ಇದೆಯೇ? ಎಂಬುದರ ವಿಸ್ತೃತ ತನಿಖೆ ನಂತರವಷ್ಟೇ ಗೊತ್ತಾಗಲಿದೆ.
ಅಲೋಕ್‌ಕುಮಾರ್, ಎಡಿಜಿಪಿ

ಸರಪಣಿಯಂತೆ ಇಂತಹ ಘಟನೆಗಳು ಮರುಕಳಿಸುತ್ತಿವೆ. ಉತ್ತರ ಪ್ರದೇಶ ಮಾದರಿಯ ಕಾನೂನು ಸಾಲದು, ಅದಕ್ಕಿಂತಲೂ ಹೆಚ್ಚಿನ ಕ್ರಮದ ಅಗತ್ಯ ಇದೆ
ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ

ಭಯ ಸೃಷ್ಟಿಸಬೇಕು: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಇದಕ್ಕೆ ಗೃಹ ಸಚಿವರನ್ನು ಹೊಣೆ ಮಾಡಲಾಗದು' ಎಂದು ಶಾಸಕ ಕೆ.ಎಸ್. ಈಶ್ವರಪ್ಪ ಅಭಿಪ್ರಾಯಪಟ್ಟರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾನೂನು, ಸುವ್ಯವಸ್ಥೆ ಬಿಗಿಯಾಗಿದ್ದರೆ ಪ್ರವೀಣ್ ಕೊಲೆಯೇ ನಡೆಯುತ್ತಿರಲಿಲ್ಲ. ಬಿಜೆಪಿ ಹಾಗೂ ಸಂಘ ಪರಿವಾರದ ಕಾರ್ಯಕರ್ತರನ್ನು ಮುಟ್ಟಲು ಉತ್ತರ ಪ್ರದೇಶದಲ್ಲಿ ಹೆದರುತ್ತಾರೆ. ಹಿಂದೂ ಸಮಾಜದ ತಂಟೆಗೆ ಬಂದರೆ ಕುಟುಂಬವನ್ನು ಸರ್ವನಾಶ ಮಾಡಲಾಗುವುದು ಎಂಬ ಭಯ ಸೃಷ್ಟಿಸಬೇಕು. ಈ ಸಂಬಂಧ ಕಾನೂನು ರೂಪಿಸಲು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಕೋರುತ್ತೇನೆ' ಎಂದರು.

'ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಸಂಘ ಪರಿವಾರದ ಹಲವರ ಹತ್ಯೆಯಾಗಿತ್ತು. ಬಿಜೆಪಿ ಅಧಿಕಾರದಲ್ಲಿದ್ದಾಗಲೂ ಕಾರ್ಯಕರ್ತರ ಕೊಲೆಗಳನ್ನು ತಡೆಯಲು ಸಾಧ್ಯವಾಗದಿರುವುದಕ್ಕೆ ಬೇಸರವಿದೆ. ಇನ್ನು ಮುಂದೆ ಒಬ್ಬ ಕಾರ್ಯಕರ್ತ ಕೂಡ ಹೀಗೆ ಬಲಿಯಾಗಬಾರದು. ಸೈದ್ಧಾಂತಿಕ ವೈಷಮ್ಯದ ಕೊಲೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಠಿಣ ಕಾನೂನು ರೂಪಿಸುವ ಅಗತ್ಯವಿದೆ' ಎಂದರು.

ಪ್ರವೀಣ್ ನೆಟ್ಟಾರು ಅವರ ಹಂತಕರನ್ನು ಎನ್‌ಕೌಂಟರ್ ಮಾಡಬೇಕು. ಇಲ್ಲವೇ ಒಂದು ತಿಂಗಳಲ್ಲಿ ತನಿಖೆ ಪೂರ್ಣಗೊಳಿಸಿ ಗಲ್ಲು ಶಿಕ್ಷೆ ವಿಧಿಸಬೇಕು
ಪ್ರಮೋದ್ ಮುತಾಲಿಕ್ ಶ್ರೀರಾಮ ಸೇನೆ ಅಧ್ಯಕ್ಷ

'ಮುಸ್ಲಿಂ ಗೂಂಡಾ ವಿರುದ್ಧ ತಿರುಗಲಿ ಆಕ್ರೋಶ'

ಪ್ರವೀಣ್ ಕೊಲೆ ಪ್ರಕರಣದಲ್ಲಿ ಹತಾಶೆಗೊಂಡು ಪಕ್ಷದ ಹುದ್ದೆಗಳಿಗೆ ರಾಜೀನಾಮೆ ನೀಡುತ್ತಿರುವ ಬಿಜೆಪಿ ಯುವ ನಾಯಕರ ಸಿಟ್ಟು, ಆಕ್ರೋಶ ಮುಸ್ಲಿಂ ಗೂಂಡಾಗಳ ವಿರುದ್ಧ ತಿರುಗಬೇಕು ಎಂದು ಈಶ್ವರಪ್ಪ ಸಲಹೆ ನೀಡಿದರು.

'₹ 10 ಲಕ್ಷ ನೆರವು'

ಬೆಂಗಳೂರು: ಹತ್ಯೆಯಾದ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಅವರ ಕುಟುಂಬಕ್ಕೆ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ವೈಯಕ್ತಿಕವಾಗಿ ₹ 10 ಲಕ್ಷ ನೆರವು ನೀಡಿದ್ದಾರೆ.

ಹೆಸರು ಪ್ರಸ್ತಾಪಿಸಿದ್ದಕ್ಕೆ ಕಾಂಗ್ರೆಸ್ ಅಧ್ಯಕ್ಷೆ ಆಕ್ಷೇಪ: ಸಂಸತ್ತಿನಲ್ಲಿ 'ಕಮಲ'–'ಕೈ' ಸಂಸದರ ಸಂಘರ್ಷ

ಸಂಸತ್ತಿನಲ್ಲಿ ಸೋನಿಯಾ–ಸ್ಮೃತಿ ಜಟಾಪಟಿ

ನವದೆಹಲಿ (ಪಿಟಿಐ): 'ರಾಷ್ಟ್ರಪತ್ನಿ' ಹೇಳಿಕೆಯ ವಿವಾದದ ಸ್ಫೋಟದ ಸಮಯದಲ್ಲೇ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಬಿಜೆಪಿ ಸಂಸದೆ ರಮಾದೇವಿ ನಡುವೆ ಸಣ್ಣ ಪ್ರಮಾಣದ ಮಾತಿನ ಚಕಮಕಿ ನಡೆಯಿತು. ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಸೋನಿಯಾ-ರಮಾದೇವಿ ಮಾತುಕತೆಯಲ್ಲಿ ಮಧ್ಯಪ್ರವೇಶಿಸಿದ್ದರಿಂದ ಇನ್ನಷ್ಟು ಬಿಗಡಾಯಿಸಿತು.

ಕಾಂಗ್ರೆಸ್ ಪಕ್ಷವು ರಾಷ್ಟ್ರಪತಿಗೆ ಅವಮಾನ ಮಾಡಿದ್ದು, ಸ್ವತಃ ಸೋನಿಯಾ ಅವರೇ ಕ್ಷಮೆ ಕೇಳಬೇಕು ಎಂದು ಬಿಜೆಪಿ ಪಟ್ಟು ಹಿಡಿಯಿತು. ಉಭಯ ಪಕ್ಷಗಳ ಸದಸ್ಯರ ಪ್ರತಿಭಟನೆ ನಡೆಸಿದ್ದರಿಂದ ಮಧ್ಯಾಹ್ನ 12 ಗಂಟೆಗೆ ಕಲಾಪವನ್ನು ಮುಂದೂಡಲಾಯಿತು. ತಕ್ಷಣ ಸೋನಿಯಾ ಅವರು ಆಡಳಿತ ಪಕ್ಷದ ಸಾಲಿನ ಕಡೆಗೆ ಧಾವಿಸಿ, ರಮಾದೇವಿ ಅವರ ಜೊತೆ ಮಾತುಕತೆಗೆ ಮುಂದಾದರು. ಅಧಿರ್ ಅವರು ಈಗಾಗಲೇ ಕ್ಷಮೆ ಕೇಳಿದ ಮೇಲೂ ಬಿಜೆಪಿ ಏಕೆ ಕ್ಷಮೆಯಾಚನೆ ಬಯಸುತ್ತಿದೆ ಎಂದು ಸೋನಿಯಾ ಅವರು ರಮಾದೇವಿ ಅವರನ್ನು ಪ್ರಶ್ನಿಸಿದರು.

ಸೋನಿಯಾ ಅವರಿಗೆ ಉತ್ತರಿಸಿದ ರಮಾದೇವಿ, ಪಕ್ಷದ ನಾಯಕಿ ಆಗಿರುವ ಕಾರಣಕ್ಕೆ ಕ್ಷಮೆ ಕೇಳಬೇಕು ಎಂದು ಒತ್ತಾಯಿಸುವುದು ಸಹಜ ಎಂದು ಹೇಳಿದರು. ಈ ಮಾತುಕತೆಯಲ್ಲಿ ಸ್ಮೃತಿ ಇರಾನಿ ಮಧ್ಯಪ್ರವೇಶಿಸಿದರು. ಈ ವಿಷಯವಾಗಿ ತಮ್ಮೊಂದಿಗೆ ಮಾತನಾಡಬಹುದು ಎಂದು ಸೋನಿಯಾ ಅವರಿಗೆ ಸೂಚಿಸಿದ್ದಾಗಿ ಸ್ಮೃತಿ ಅವರು ಹೇಳಿಕೊಂಡಿದ್ದಾರೆ. ಆರಂಭದಲ್ಲಿ ಸ್ಮೃತಿ ಅವರ ಮಾತನ್ನು ನಿರ್ಲಕ್ಷಿಸಿದ್ದ ಸೋನಿಯಾ, 'ನನ್ನ ಜೊತೆ ಮಾತನಾಡಬೇಡಿ' ಎಂದು ಸಚಿವೆಗೆ ಹೇಳಿದರು.

ಈ ವೇಳೆ, ರಮಾದೇವಿ-ಸೋನಿಯಾ ಅವರ ಸುತ್ತ ಬಿಜೆಪಿ ಮಹಿಳಾ ಸಂಸದರು ಜಮಾವಣೆಗೊಂಡು ಗದ್ದಲ ಸೃಷ್ಟಿಸಿದರು. ತಕ್ಷಣವೇ, ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ಹಾಗೂ ಟಿಎಂಸಿ ಸಂಸದೆ ಅಪರೂಪ ಪೊದ್ದಾರ್ ಅವರು ಸೋನಿಯಾ ಗಾಂಧಿ ಅವರನ್ನು ಸದನದಿಂದ ಹೊರಕ್ಕೆ ಕರೆತಂದರು.

ಸದನದ ಹೊರಗಡೆ ಮಾತನಾಡಿದ ರಮಾದೇವಿ ಅವರು, 'ರಾಷ್ಟ್ರಪತ್ನಿ ವಿವಾದದಲ್ಲಿ ನನ್ನ ಹೆಸರನ್ನು ಏಕೆ ಎಳೆದು ತರುತ್ತಿದ್ದೀರಾ. ಇದರಲ್ಲಿ ನನ್ನ ತಪ್ಪೇನಿದೆ ಎಂಬುದಾಗಿ ಸೋನಿಯಾ ನನ್ನನ್ನು ಪ್ರಶ್ನಿಸಿದರು' ಎಂದರು. ಆಗ ಸೋನಿಯಾ ಅವರಿಗೆ, 'ನೀವು ಪಕ್ಷದ ಅಧ್ಯಕ್ಷರು, ಚೌಧರಿ ಅವರನ್ನು ನೇಮಕ ಮಾಡಿದ್ದು ನೀವೇ' ಎಂದು ಉತ್ತರಿಸಿದ್ದಾಗಿ ರಮಾದೇವಿ ಹೇಳಿದ್ದಾರೆ.

'ಸೋನಿಯಾ ಅವರು ಬಿಜೆಪಿ ಸದಸ್ಯರ ಜೊತೆ ಬೆದರಿಸುವ ಧಾಟಿಯಲ್ಲಿ ಮಾತನಾಡಿದರು' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆರೋಪಿಸಿದ್ದಾರೆ. 'ಸೋನಿಯಾ ಅವರು ಬೆದರಿಸುವ ಧಾಟಿಯಲ್ಲಿ ಮಾತನಾಡಿಲ್ಲ. ಆದರೆ, ರಮಾದೇವಿ ಅವರ ಜೊತೆ ಮಾತನಾಡುವಾಗ ಸ್ಮೃತಿ ಇರಾನಿ ಅವರು ಪ್ರವೇಶಿಸಿದ್ದಕ್ಕೆ ಸೋನಿಯಾ ಅಸಮಾಧಾನಗೊಂಡಿದ್ದರು' ಎಂದು ಕಾಂಗ್ರೆಸ್ಸೇತರ ಹಾಗೂ ಬಿಜೆಪಿಯೇತರ ಸದಸ್ಯರು ಹೇಳಿದ್ದಾರೆ.

ಬಿಜೆಪಿ ಸಂಸದರು ಸೋನಿಯಾ ಅವರಿಗೆ ಮುತ್ತಿಗೆ ಹಾಕಿ, ನಿಂದಿಸಿ, ಬೆದರಿಸಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದೆ. ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಹೇಳಿಕೆ ಬಿಡುಗಡೆ ಮಾಡಿದ್ದಾರೆ. 'ಸ್ಮೃತಿ ಅವರು ಸೋನಿಯಾ ಅವರ ಜೊತೆ ಅನುಚಿತವಾಗಿ ವರ್ತಿಸಿ ನಿಂದನಾತ್ಮಕ ಶಬ್ದಗಳನ್ನು ಪ್ರಯೋಗಿಸಿದ್ದಾರೆ.

'ನಾನು ಬಿಜೆಪಿ ಸಂಸದೆ ಜೊತೆ ಮಾತನಾಡುತ್ತಿದ್ದೇನೆಯೇ ಹೊರತು ನಿಮ್ಮ ಜತೆ ಅಲ್ಲ' ಎಂದು ಸ್ಮೃತಿ ಅವರಿಗೆ ಸೋನಿಯಾ ಹೇಳಿದ್ದಾರೆ. ಆದರೆ ಸೋನಿಯಾ ಮಾತಿನಿಂದ ಸಿಟ್ಟಿಗೆದ್ದ ಸ್ಮೃತಿ ಅವರು 'ನಾನು ಯಾರೆಂದು ಗೊತ್ತಿಲ್ಲವೇ' ಎಂಬುದಾಗಿ ಕೂಗಾಡಿದರು' ಎಂದು ರಮೇಶ್ ಉಲ್ಲೇಖಿಸಿದ್ದಾರೆ.

ಸೋನಿಯಾ ಅವರಿಗೆ ಕಾಂಗ್ರೆಸ್ಸೇತರ ಪಕ್ಷಗಳ ಸಂಸದರಿಂದಲೂ ಬೆಂಬಲ ವ್ಯಕ್ತವಾಗಿದೆ.

ಸೋನಿಯಾ

ಸ್ಮೃತಿ ಇರಾನಿ

> 75 ವರ್ಷದ ಹಿರಿಯ ನಾಯಕಿ ಸೋನಿಯಾ ಅವರ ಮೇಲೆ ತೋಳಗಳ ಗುಂಪಿನಂತೆ ಬಿಜೆಪಿ ಸಂಸದರು ಎರಗಿದ್ದಾರೆ. ಘಟನೆ ಬಗ್ಗೆ ಮಾಧ್ಯಮ ವರದಿಗಳು ಮತ್ತು ಬಿಜೆಪಿಯ ಸುಳ್ಳುಗಳಿಂದ ಜಗಜ್ಜಾಹೀರು ಬಂದಿದೆ
> **ಮಹುವಾ ಮೊಯಿತ್ರಾ**, ಟಿಎಂಸಿ ಸಂಸದೆ

> ಬಿಜೆಪಿ ಸಂಸದರ ಗೂಂಡಾ ವರ್ತನೆ ನಾಚಿಕೆಗೇಡು. ನಕಲಿ ಶೈಕ್ಷಣಿಕ ಪ್ರಮಾಣಪತ್ರ, ಗೋವಾದಲ್ಲಿ ಅಕ್ರಮ ಬಾರ್ ವ್ಯವಹಾರದ ಆರೋಪ ವಿರುವ ಭ್ರಷ್ಟೋದ್ರಿಕ್ತ ಸಚಿವೆಯ ಈ ಪುಂಡಾಟ ಖಂಡನೀಯ
> **ಪ್ರಿಯಾಂಕಾ ಚತುರ್ವೇದಿ**, ರಾಜ್ಯಸಭೆಯಲ್ಲಿ ಶಿವಸೇನಾ ಉಪನಾಯಕಿ

'ರಾಷ್ಟ್ರಪತ್ನಿ': ಅಧಿರ್ ರಂಜನ್ ಹೇಳಿಕೆಗೆ ಬಿಜೆಪಿ ಆಕ್ರೋಶ

ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಶೋಭಾ ಕರಂದ್ಲಾಜೆ ಮತ್ತು ಬಿಜೆಪಿಯ ಸಂಸದೆಯರು ಸಂಸತ್ ಭವನದ ಮುಂದೆ ಗುರುವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಒಂದನೇ ಪುಟದಿಂದ

ಸಂಸತ್ತಿನಲ್ಲಿ ಮತ್ತು ಹೊರಗೆ ಬಿಜೆಪಿ ಟೀಕಾ ಪ್ರಹಾರ ನಡೆಸಿದೆ. ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ಸ್ಮೃತಿ ಇರಾನಿ ಅವರು ಈ ಟೀಕಾ ಪ್ರಹಾರದ ನೇತೃತ್ವ ವಹಿಸಿದ್ದರು. 'ರಾಷ್ಟ್ರಪತ್ನಿ' ಎಂಬ ಪದವು ಮುರ್ಮು ಮತ್ತು ಅವರ ಸ್ಥಾನವನ್ನು ಅವಮಾನಿಸುತ್ತದೆ ಎಂಬುದರ ಅರಿವಿದ್ದೇ ಅಧಿರ್ ಮಾತನಾಡಿದ್ದಾರೆ ಎಂದಿದ್ದಾರೆ.

ರಾಷ್ಟ್ರಪತಿ ಮುರ್ಮು ಅವರನ್ನು ವಿರೋಧ ಪಕ್ಷವು ಅವಮಾನಿಸಿದೆ ಎಂದು ಬಿಜೆಪಿ ಆರೋಪಿಸಿದೆ. ಬಿಜೆಪಿ ಸಂಸದರು ಲೋಕಸಭೆಯಲ್ಲಿ ಗುರುವಾರ ಗದ್ದಲ ಸೃಷ್ಟಿಸಿದ್ದಾರೆ. ವಿರೋಧ ಪಕ್ಷಗಳ ಸದಸ್ಯರೂ ಘೋಷಣೆ ಕೂಗಿದ್ದಾರೆ. ಸಂಜೆ 4 ಗಂಟೆಯ ವರೆಗೆ ಕಲಾಪವನ್ನು ಮುಂದೂಡಲಾಯಿತು. ಮತ್ತೆ ಸದನ ಸೇರಿದಾಗಲೂ ಗದ್ದಲ ಕಡಿಮೆಯಾಗದ ಕಾರಣ ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಲಾಗಿದೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಚೌಧರಿ ಹೇಳಿಕೆಗೆ ಸಂಬಂಧಿಸಿ ಕ್ಷಮೆ ಕೇಳಬೇಕು ಎಂದು ಬಿಜೆಪಿ ಸಂಸದರು ಬೆಳಿಗ್ಗೆ 11 ಗಂಟೆಗೆ ಕಲಾಪ ಆರಂಭವಾದಾಗಲೇ ಒತ್ತಾಯಿಸಿದರು.

'ಪ್ರಧಾನಿ ನರೇಂದ್ರ ಮೋದಿ ಅವರು ಬಡ ಆದಿವಾಸಿ ಮಹಿಳೆಯನ್ನು ರಾಷ್ಟ್ರಪತಿ ಅಭ್ಯರ್ಥಿ ಮಾಡಿದ್ದನ್ನು ಕಾಂಗ್ರೆಸ್‌ಗೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ಆರೋಪಿಸಿದರು. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಸಂಸದರು ಘೋಷಣೆ ಕೂಗಿ ಗದ್ದಲ ಎಬ್ಬಿಸಿದರು. ಸೋನಿಯಾ ಕ್ಷಮೆ ಕೇಳಬೇಕು ಎಂದು ಸಂಸದೀಯ ವ್ಯವಹಾರ ಸಚಿವ ಪ್ರಲ್ಹಾದ ಜೋಶಿ ಅವರೂ ಹೇಳಿದರು.

ಮುರ್ಮು ಅವರನ್ನು ಕಾಂಗ್ರೆಸ್ ದ್ವೇಷಿಸುತ್ತಿದೆ. ಅಧಿರ್ ರಂಜನ್ ಚೌಧರಿ ಅವರ ಹೇಳಿಕೆಯು ಆದಿವಾಸಿ ವಿರೋಧಿ, ಬಡವರ ವಿರೋಧಿ ಮತ್ತು ಮಹಿಳಾ ವಿರೋಧಿಯಾಗಿದೆ ಎಂದು ಸ್ಮೃತಿ ಇರಾನಿ ಹೇಳಿದರು.

'ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಗೆ ಏರಿದ ಬಡ ಆದಿವಾಸಿ ಮಹಿಳೆಯನ್ನು ಅವಮಾನಿಸುವುದಕ್ಕೆ ಕಾಂಗ್ರೆಸ್ ಅಧ್ಯಕ್ಷೆಯೇ ಮಂಜೂರಾತಿ ನೀಡಿದ್ದಾರೆ' ಎಂದರು.

'ಸೋನಿಯಾ ಗಾಂಧಿ ಅವರೇ, ನಿಮ್ಮ ಪಕ್ಷದ ಪುರುಷ ಮುಖಂಡರು ಬಡ ಆದಿವಾಸಿ ಮಹಿಳೆಯನ್ನು ಅವಮಾನಿಸಿದ್ದಾರೆ. ಬಡವರು, ಆದಿವಾಸಿಗಳು ಮತ್ತು ದೇಶದ ಮಹಿಳೆಯರು ಈ ಅವಮಾನವನ್ನು ಸಹಿಸುವುದಿಲ್ಲ' ಎಂದು ಸ್ಮೃತಿ ಹೇಳಿದರು. ಬಿಜೆಪಿ ಸಂಸದರು ಸ್ಮೃತಿ ಅವರನ್ನು ಬೆಂಬಲಿಸಿದರು. ಕಾಂಗ್ರೆಸ್ ಸಂಸದರು ಸೋನಿಯಾ ಬೆಂಬಲಕ್ಕೆ ನಿಂತರು.

ಅಧಿರ್ ಹೇಳಿಕೆಯು ಬಾಯ್ತಪ್ಪಿನಿಂದ ಬಂದಿದ್ದಲ್ಲ. ಇದು ಉದ್ದೇಶಪೂರ್ವಕವಾದ ಹೇಳಿಕೆ. ಲಿಂಗಬೇಧ ಮಾಡಿ ಅವಮಾನಿಸುವುದೇ ಇದರ ಉದ್ದೇಶ' ಎಂದು ನಿರ್ಮಲಾ ಅವರು ರಾಜ್ಯಸಭೆಯಲ್ಲಿ ಹೇಳಿದರು. ಆದಿವಾಸಿ ಮಹಿಳೆಯೊಬ್ಬರು ರಾಷ್ಟ್ರಪತಿಯಾಗಿರುವುದನ್ನು ಇಡೀ ದೇಶವೇ ಸಂಭ್ರಮಿಸುತ್ತಿದೆ. ಹಾಗಿರುವಾಗ, ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರು ರಾಷ್ಟ್ರಪತಿಯನ್ನು ರಾಷ್ಟ್ರಪತ್ನಿ ಎಂದು ಹೇಳಿ ಅವಮಾನಿಸಿದ್ದಾರೆ ಎಂದು ನಿರ್ಮಲಾ ಹೇಳಿದ್ದಾರೆ.

ಅಧಿರ್ ಹೇಳಿಕೆ ಬಗ್ಗೆ ಸೋನಿಯಾ ಅಸಮಾಧಾನಗೊಂಡಿದ್ದಾರೆ ಎಂದು ಮೂಲಗಳು ಹೇಳಿವೆ. ಹಿಂದಿ ಗೊತ್ತಿಲ್ಲದಿರುವುದೇ ಈ ಯಡವಟ್ಟಿಗೆ ಕಾರಣ ಎಂದು ಅಧಿರ್ ಹೇಳಿಕೊಂಡಿದ್ದಾರೆ.

ಸುದ್ದಿ 2 ನಿಮಿಷ

ಉನ್ನತ ಶಿಕ್ಷಣದಲ್ಲಿ 23 ಸಾವಿರ ಕೋರ್ಸ್ ಉಚಿತ ಲಭ್ಯ: ಯುಜಿಸಿ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ), ಸೈಬರ್ ಭದ್ರತೆ ಮತ್ತು ಬಾಲ್ಯಾವಸ್ಥೆಯ ಆರೈಕೆ ಸೇರಿ 23 ಸಾವಿರ ಉನ್ನತ ಶಿಕ್ಷಣ ಕೋರ್ಸ್‌ಗಳು ಇಂಗ್ಲಿಷ್ ಸೇರಿ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ಈಗ ಹೊಸ ವೆಬ್ ಪೋರ್ಟಲ್‌ನಲ್ಲಿ ಉಚಿತವಾಗಿ ಲಭಿಸಲಿವೆ ಎಂದು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ತಿಳಿಸಿದೆ.

ದೇಶದ ಮೂಲೆಮೂಲೆಗೂ ಎಲ್ಲರಿಗೂ ಉನ್ನತ ಶಿಕ್ಷಣವನ್ನು ಡಿಜಿಟಲ್ ಸಂಪನ್ಮೂಲದ ಮೂಲಕ ಒದಗಿಸುವ ಗುರಿ ಹೊಂದಿರುವ ಜಾಲತಾಣವನ್ನು ರಾಷ್ಟ್ರೀಯ ಶಿಕ್ಷಣ ನೀತಿ-2020ರ ಎರಡನೇ ವಾರ್ಷಿಕೋತ್ಸವದ ಭಾಗವಾಗಿ ಶುಕ್ರವಾರ ಪ್ರಾರಂಭಿಸಲಾಗುವುದು. ಉನ್ನತ ಶಿಕ್ಷಣದ ಉಚಿತ ಕೋರ್ಸ್‌ಗಳನ್ನು ಮುಂಬರುವ 2022-23ರ ಶೈಕ್ಷಣಿಕ ವರ್ಷದಿಂದ ಆರಂಭಿಸಲು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಯುಜಿಸಿ ಅಧ್ಯಕ್ಷ ಎಂ. ಜಗದೀಶ್ ಕುಮಾರ್ ತಿಳಿಸಿದ್ದಾರೆ.

ನೌಕಾಪಡೆಗೆ 'ವಿಕ್ರಾಂತ್' ಹಸ್ತಾಂತರ

ನವದೆಹಲಿ (ಪಿಟಿಐ): ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಪ್ರಪ್ರಥಮ ಯುದ್ಧವಿಮಾನಗಳ ನಿರ್ವಹಣೆಯ 'ವಿಕ್ರಾಂತ್' ಹಡಗನ್ನು ಗುರುವಾರ ಭಾರತೀಯ ನೌಕಾಪಡೆಗೆ ಹಸ್ತಾಂತರಿಸಲಾಯಿತು.

ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್ ಸಂಸ್ಥೆಯು ಸುಮಾರು ₹ 20 ಸಾವಿರ ಕೋಟಿ ವೆಚ್ಚದಲ್ಲಿ ವಿಕ್ರಾಂತ್ ಅನ್ನು ಅಭಿವೃದ್ಧಿಪಡಿಸಿದೆ. ಮೂರು ವಾರಗಳ ಹಿಂದೆ ಸಮುದ್ರದಲ್ಲಿ ಇದರ ಬಳಕೆಯ ನಾಲ್ಕನೇ ಮತ್ತು ಅಂತಿಮ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಲಾಗಿತ್ತು.

ಈ ಮೂಲಕ ಭಾರತ ಯುದ್ಧವಿಮಾನಗಳ ನಿರ್ವಹಣೆಯ ಹಡಗನ್ನು ದೇಶೀಯವಾಗಿ ವಿನ್ಯಾಸ ಮತ್ತು ಅಭಿವೃದ್ಧಿಪಡಿಸುವ ಆಯ್ದ ರಾಷ್ಟ್ರಗಳ ಸಮೂಹಕ್ಕೆ ಭಾರತವು ಸೇರ್ಪಡೆಯಾಯಿತು. ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೇಶೀಯ ಯುದ್ಧವಿಮಾನಗಳ ವಾಹಕ (ಐಎಸಿ) ಸೇರ್ಪಡೆಯು 'ಚಾರಿತ್ರಿಕ'ವಾದುದು ಎಂದು ನೌಕಾಪಡೆ ಬಣ್ಣಿಸಿದೆ.

ಯುದ್ಧ ಹಡಗು 'ವಿಕ್ರಾಂತ್' ಮೂಲಕ ಮಿಗ್–29ಕೆ, ಕಾಮೊವ್–31 ಹೆಲಿಕಾಪ್ಟರ್, ಎಂಎಚ್–60ಆರ್ ಬಹುಪಯೋಗಿ ಹೆಲಿಕಾಪ್ಟರ್‌ಗಳನ್ನು ನಿರ್ವಹಣೆ ಮಾಡಬಹುದಾಗಿದೆ. ಇದು, 2,300 ವಿಭಾಗಗಳನ್ನು ಹೊಂದಿದ್ದು, 1700 ಸಿಬ್ಬಂದಿಗೆ ಪೂರಕವಾಗಿ ವಿನ್ಯಾಸಗೊಳಿಸಲಾಗಿದೆ. ಮಹಿಳಾ ಅಧಿಕಾರಿಗಳಿಗೂ ಪ್ರತ್ಯೇಕ ಕ್ಯಾಬಿನ್ ಅನ್ನು ವಿನ್ಯಾಸಗೊಳಿಸಲಾಗಿದೆ. 262 ಮೀಟರ್ ಉದ್ದ, 62 ಮೀಟರ್ ಅಗಲ ಮತ್ತು 59 ಮೀಟರ್ ಎತ್ತರವಿದೆ. ಇದರ ನಿರ್ಮಾಣಕಾರ್ಯ 2009ರಲ್ಲಿ ಆರಂಭವಾಗಿತ್ತು.

ಬಾಯ್ತಪ್ಪಿನ ಮಾತು: ಅಧಿರ್ ರಂಜನ್

ಅಧಿರ್ ರಂಜನ್

ವಿವಿಧ ವಿಚಾರಗಳ ಕುರಿತು ಸಂಸತ್ತಿನ ಹೊರಗೆ ಮಾಧ್ಯಮ ಪ್ರತಿನಿಧಿಗಳ ಜತೆಗೆ ಬುಧವಾರ ಮಾತನಾಡಿದ್ದ ಅಧಿರ್ ರಂಜನ್ ಅವರು ಮುರ್ಮು ಅವರನ್ನು 'ರಾಷ್ಟ್ರಪತ್ನಿ' ಎಂದಿದ್ದರು. ಬಳಿಕ, ಬಾಯ್ತಪ್ಪಿನಿಂದಾಗಿ ಹಾಗೆ ಹೇಳಿರುವುದಾಗಿ ಸ್ಪಷ್ಟನೆ ಕೊಟ್ಟಿದ್ದಾರೆ. ಬಿಜೆಪಿಯವರು 'ಸಣ್ಣ ಹುತ್ತವನ್ನು ಪರ್ವತ ಮಾಡುತ್ತಿದ್ದಾರೆ' ಎಂದೂ ಹೇಳಿದ್ದಾರೆ.

'ನಿನ್ನೆ (ಬುಧವಾರ) ನಾವು ವಿಜಯ ಚೌಕದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾಗ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ್ದೆ. ಎಲ್ಲಿಗೆ ಹೋಗುವಿರಿ ಎಂದು ಅವರು ಕೇಳಿದ್ದಕ್ಕೆ 'ರಾಷ್ಟ್ರಪತ್ನಿ' ಬಳಿಗೆ ಎಂದಿದ್ದೆ. ಬಾಯ್ತಪ್ಪಿನಿಂದ ಒಂದು ಬಾರಿ ಹಾಗೆ ಹೇಳಿದ್ದೆ. ತಪ್ಪು ಮಾಡಿದೆ ಎಂಬುದು ನನಗೆ ಅರಿವಾಗಿತ್ತು. ಆ ವಿಡಿಯೊವನ್ನು ಪ್ರಸಾರ ಮಾಡಬೇಡಿ ಎಂದು ನಾನು ಕೋರಿದ್ದೆ. ಆದರೆ ಬಿಜೆಪಿ ಅದನ್ನು ವಿವಾದ ಮಾಡಿದೆ' ಎಂದು ಅವರು ಹೇಳಿದ್ದಾರೆ.

'ನಾನು ಏನು ಮಾಡಲಿ? ತಪ್ಪು ಪದ ಹೇಳಿದ್ದು ಅರ್ಥವಾಗಿದೆ. ವಿಡಿಯೊವನ್ನು ಪ್ರಸಾರ ಮಾಡಬೇಡಿ ಎಂದು ಹೇಳುವುದಕ್ಕಾಗಿ ನಾನು ಹೇಳಿಕೆ ಕೊಟ್ಟ ಮಾಧ್ಯಮ ಪ್ರತಿನಿಧಿಗಳನ್ನು ಭೇಟಿಯಾಗುವ ಪ್ರಯತ್ನವನ್ನೂ ಮಾಡಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ' ಎಂದಿದ್ದಾರೆ.

'ಶುಕ್ರವಾರ ಭೇಟಿಗೆ ಅವಕಾಶ ಕೊಡುವಂತೆ ರಾಷ್ಟ್ರಪತಿಯವರನ್ನು ಕೋರಿದ್ದೇನೆ. ನನ್ನ ಹೇಳಿಕೆಯಿಂದ ನೊಂದಿದ್ದರೆ ರಾಷ್ಟ್ರಪತಿಯವರ ಕ್ಷಮೆ ಕೇಳುತ್ತೇನೆ' ಎಂದು ಅಧಿರ್ ರಂಜನ್ ಹೇಳಿದ್ದಾರೆ.

'ಭಾರತದ ರಾಷ್ಟ್ರಪತಿಯು ಬ್ರಾಹ್ಮಣರಾಗಿರಲಿ, ಆದಿವಾಸಿ ಆಗಿರಲಿ, ಎಲ್ಲರೂ ಗೌರವಿಸಬೇಕು' ಎಂದು ವಿಡಿಯೊ ಸಂದೇಶದಲ್ಲಿ ಅಧಿರ್ ಹೇಳಿದ್ದಾರೆ.

ಮಹಿಳಾ ಆಯೋಗದಿಂದ ಅಧಿರ್‌ಗೆ ನೋಟಿಸ್ ಜಾರಿ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು 'ರಾಷ್ಟ್ರಪತ್ನಿ' ಎಂದಿರುವುದಕ್ಕೆ ಅಧಿರ್ ಅವರಿಗೆ ರಾಷ್ಟ್ರೀಯ ಮಹಿಳಾ ಆಯೋಗವು (ಎನ್‌ಸಿಡಬ್ಲ್ಯು) ನೋಟಿಸ್ ನೀಡಿದ್ದು ಖುದ್ದು ಹಾಜರಾಗುವಂತೆ ಮತ್ತು ಲಿಖಿತ ವಿವರಣೆ ಕೊಡುವಂತೆ ಸೂಚಿಸಿದೆ. ವಿಚಾರಣೆಗಾಗಿ ಮಂಗಳವಾರ ಬೆಳಿಗ್ಗೆ 11.30ಕ್ಕೆ ಹಾಜರಾಗುವಂತೆ ತಿಳಿಸಿದೆ. ಸೋನಿಯಾ ಗಾಂಧಿ ಅವರಿಗೂ ಆಯೋಗವು ಪತ್ರ ಬರೆದಿದೆ.

ಅಪಮಾನಕಾರಿ ಹೇಳಿಕೆ ನೀಡಿರುವ ಚೌಧರಿ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದೆ.

ಎನ್‌ಸಿಡಬ್ಲ್ಯು ಮತ್ತು 13 ರಾಜ್ಯಗಳ ಮಹಿಳಾ ಆಯೋಗಗಳು ಜಂಟಿ ಹೇಳಿಕೆ ನೀಡಿವೆ. ಚೌಧರಿ ಅವರ ಹೇಳಿಕೆಯು 'ತೀರಾ ಅವಮಾನಕಾರಿ, ಲಿಂಗ ತಾರತಮ್ಯದಿಂದ ಕೂಡಿದ್ದು, ರಾಷ್ಟ್ರಪತಿಯವರನ್ನು ಅವಮಾನಿಸುವ ಯತ್ನ' ಎಂದು ಹೇಳಿವೆ.

ರಾಜ್ಯಸಭೆ ಕಲಾಪ ನುಂಗಿದ ಪ್ರತಿಭಟನೆ

ನವದೆಹಲಿ (ಪಿಟಿಐ): ಸಂಸದರ ಅಮಾನತು, ಬೆಲೆ ಏರಿಕೆ ಮತ್ತು ಗುಜರಾತ್ ಕಳ್ಳಬಟ್ಟಿ ದುರಂತದ ವಿಷಯಗಳ ಬಗ್ಗೆ ಚರ್ಚೆಗೆ ಪಟ್ಟುಹಿಡಿದು ವಿರೋಧ ಪಕ್ಷಗಳ ಸದಸ್ಯರು ನಡೆಸಿದ ನಿರಂತರ ಪ್ರತಿಭಟನೆ ರಾಜ್ಯಸಭೆಯ ಗುರುವಾರದ ಕಲಾಪವನ್ನೂ ನುಂಗಿಹಾಕಿತು. ದಿನದಲ್ಲಿ ಹಲವು ಬಾರಿ ಕಲಾಪ ಮುಂದೂಡಿಕೆಗೆ ಮೇಲ್ಮನೆ ಸಾಕ್ಷಿಯಾಯಿತು.

ಈವರೆಗೆ ರಾಜ್ಯಸಭೆಯಿಂದ ವಿರೋಧ ಪಕ್ಷಗಳ 23 ಸದಸ್ಯರು ಮತ್ತು ಲೋಕಸಭೆಯಿಂದ ನಾಲ್ವರು ಕಾಂಗ್ರೆಸ್ ಸಂಸದರು ವಾರದ ಕಲಾಪದಿಂದ ಅಮಾನತಾಗಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಪಟ್ಲ ಸತೀಶ್ ಶೆಟ್ಟಿ
ಯಕ್ಷಗಾನ ಭಾಗವತರು, ಮಂಗಳೂರು
ಸೆಲೆಬ್ರಿಟಿ LIVE
ಯಕ್ಷಧ್ರುವ
ಬೆಳಿಗ್ಗೆ 11 ರಿಂದ 12

ಷೇರುಪೇಟೆ ವಹಿವಾಟು 1041



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,642
ಇಂದಿನ ಅಂತ್ಯ	16,930
▲	288
ದಿನದ ಗರಿಷ್ಠ	16,947

ವಿನಿಮಯ ದರ

$ ಡಾಲರ್	79.69
£ ಪೌಂಡ್	96.75
€ ಯುರೊ	81
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹425

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1620)
ಸೋಯಾ (ರಿಫೈನ್ಡ್)	₹1240 (1225)
ಸೂರ್ಯಕಾಂತಿ (ರಿಫೈನ್ಡ್)	₹1570 (1570)
ಪಾಮೋಲಿನ್	₹1235 (1214)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹333-721
ದ್ವಿತಳಿ (ಬಿ.ವಿ)	₹255-608

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹167
ಆರ್‌ಎಸ್‌ಎಸ್-5	₹158
ಗುಡ್ ಲಾಟ್	₹152

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಅಮೆರಿಕ: ಆರ್ಥಿಕ ಹಿಂಜರಿತದ ಭೀತಿ

ವಾಷಿಂಗ್ಟನ್ (ಎಪಿ/ಎಎಫ್‌ಪಿ): ಅಮೆರಿಕದ ಅರ್ಥ ವ್ಯವಸ್ಥೆಯು ಜೂನ್ ತ್ರೈಮಾಸಿಕದಲ್ಲಿ ಶೇಕಡ (–) 0.9ರಷ್ಟು ಕುಸಿದಿದೆ. ಇದರಿಂದಾಗಿ ಸತತ ಎರಡು ತ್ರೈಮಾಸಿಕಗಳಲ್ಲಿ ಅರ್ಥ ವ್ಯವಸ್ಥೆ ಕುಸಿತ ಕಂಡಂತೆ ಆಗಿದೆ. ಅಮೆರಿಕವು ಆರ್ಥಿಕ ಹಿಂಜರಿತದತ್ತ ಸಾಗುತ್ತಿದೆ ಎಂಬ ಭೀತಿ ವ್ಯಕ್ತವಾಗಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಅಮೆರಿಕದ ಜಿಡಿಪಿ (ಒಟ್ಟು ಆಂತರಿಕ ಉತ್ಪಾದನೆ) ಶೇ (–)1.6ರಷ್ಟು ಕುಸಿತ ಕಂಡಿತ್ತು. ಜಿಡಿಪಿಯು ಸತತವಾಗಿ ಕುಸಿಯುತ್ತಿರುವುದು ಆರ್ಥಿಕ ಹಿಂಜರಿತ ಎದುರಾಗುತ್ತಿರುವುದರ ಅನಧಿಕೃತ ಸೂಚನೆ.

ಅಮೆರಿಕದ ಫೆಡರಲ್ ರಿಸರ್ವ್ ಬುಧವಾರ ಬಡ್ಡಿ ದರವನ್ನು 75 ಮೂಲಾಂಶದಷ್ಟು ಹೆಚ್ಚಿಸಿದೆ. ಆರ್ಥಿಕ ಬೆಳವಣಿಗೆ ದರ ಕುರಿತು ಪ್ರತಿಕ್ರಿಯೆ ನೀಡಿರುವ ಅಮೆರಿಕದ ಅಧ್ಯಕ್ಷ ಜೋ ಬೈಡೆನ್, 'ಅರ್ಥ ವ್ಯವಸ್ಥೆಯು ಸರಿಯಾದ ದಿಕ್ಕಿನಲ್ಲಿ ಸಾಗಿದೆ' ಎಂದು ಹೇಳಿದ್ದಾರೆ.

'ಅರ್ಥ ವ್ಯವಸ್ಥೆಯು ನಿಧಾನಗತಿಗೆ ತಿರುಗಿರುವುದರಲ್ಲಿ ಆಶ್ಚರ್ಯವಾಗುವಂಥದ್ದು ಏನೂ ಇಲ್ಲ. ಏಕೆಂದರೆ, ಹಣದುಬ್ಬರವನ್ನು ಕಡಿಮೆ ಮಾಡಲು ಫೆಡರಲ್ ರಿಸರ್ವ್ ಪ್ರಯತ್ನಿಸುತ್ತಿದೆ' ಎಂದು ಅವರು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ 28-7-2022

ಜಾವಾ 70/80(ಹೊಸ)	11200-11250
ಜಾವಾ 80/90(ಹೊಸ)	10600-10650
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	10600-10650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1630)
ಒಂದು ವಾರದ ಡೆಲಿವರಿ	1615 (1625)
ಸೋಯಾ ಕಚ್ಚಾ	1170 (1170)
ಪಾಮ್ ವಾರದ ಡೆಲಿವರಿ	1233 (1212)
ಸೂರ್ಯಕಾಂತಿ ಎಣ್ಣೆ ಕಚ್ಚಾ	1480 (1480)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,200 (50,550)
ಬೆಳ್ಳಿ ಕೆ.ಜಿ 56,200 (54,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಚಿನ್ನದ ಬೇಡಿಕೆ ಶೇ 43ರಷ್ಟು ಹೆಚ್ಚಳ

2022ರ ಏಪ್ರಿಲ್–ಜೂನ್ ತ್ರೈಮಾಸಿಕ: ಡಬ್ಲ್ಯುಜಿಸಿ ವರದಿ

ಚಿನ್ನದ ಬೇಡಿಕೆ
₹79,270 ಕೋಟಿ — 2022 ಏಪ್ರಿಲ್–ಜೂನ್
₹51,540 ಕೋಟಿ — 2021 ಏಪ್ರಿಲ್–ಜೂನ್

ಚಿನ್ನದ ಮೇಲಿನ ಹೂಡಿಕೆ
₹14,140 ಕೋಟಿ — 2022 ಏಪ್ರಿಲ್–ಜೂನ್
₹10,930 ಕೋಟಿ — 2021 ಏಪ್ರಿಲ್–ಜೂನ್

ಮುಂಬೈ (ಪಿಟಿಐ): ದೇಶದಲ್ಲಿ ಚಿನ್ನದ ಬೇಡಿಕೆಯು ಈ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇಕಡ 43ರಷ್ಟು ಹೆಚ್ಚಾಗಿದ್ದು, 170.7 ಟನ್‌ಗಳಿಗೆ ತಲುಪಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ಗುರುವಾರ ತಿಳಿಸಿದೆ. 2021ರ ಇದೇ ಅವಧಿಯಲ್ಲಿ ಚಿನ್ನದ ಬೇಡಿಕೆಯು 119.6 ಟನ್ ಆಗಿತ್ತು.

ಮದುವೆ ಸಮಾರಂಭ ಮತ್ತು ಅಕ್ಷಯ ತೃತೀಯಾ ಸಂದರ್ಭದಲ್ಲಿ ಚಿನ್ನಾಭರಣ ಖರೀದಿಯು ಶೇ 49ರಷ್ಟು ಹೆಚ್ಚಾಗಿದ್ದು 140.3 ಟನ್‌ಗೆ ತಲುಪಿದೆ. ಹಿಂದಿನ ವರ್ಷದ ಎರಡನೇ ತ್ರೈಮಾಸಿಕದಲ್ಲಿ ಕೋವಿಡ್‌ನ ಎರಡನೇ ಅಲೆಯಿಂದಾಗಿ ಬೇಡಿಕೆ ಮೇಲೆ ಪರಿಣಾಮ ಉಂಟಾಗಿತ್ತು ಎಂದು ಡಬ್ಲ್ಯುಜಿಸಿನ ಭಾರತದ ಸಿಇಒ ಸೋಮಸುಂದರಂ ಪಿ.ಆರ್. ತಿಳಿಸಿದ್ದಾರೆ.

2022ರಲ್ಲಿ ದೇಶದಲ್ಲಿ ಚಿನ್ನದ ಬೇಡಿಕೆಯು 800–850 ಟನ್‌ಗಳಷ್ಟು ಇರುವ ಅಂದಾಜು ಮಾಡಲಾಗಿದೆ. ಆದರೆ, ಹಣದುಬ್ಬರ, ಚಿನ್ನದ ದರ, ರೂಪಾಯಿ–ಡಾಲರ್ ವಿನಿಮಯ ದರ ಮತ್ತು ಹಣಕಾಸು ನೀತಿಯು ಮುಂಬರುವ ದಿನಗಳಲ್ಲಿ ಚಿನ್ನದ ಖರೀದಿ ಮೇಲೆ ಪರಿಣಾಮ ಬೀರಲಿವೆ ಎಂದು ಅವರು ತಿಳಿಸಿದ್ದಾರೆ. 2021ರಲ್ಲಿ ಚಿನ್ನದ ಬೇಡಿಕೆಯು 797 ಟನ್ ಆಗಿತ್ತು ಎಂದು ಅವರು ಮಾಹಿತಿ ನೀಡಿದ್ದಾರೆ.

ಜೂನ್ ತ್ರೈಮಾಸಿಕದಲ್ಲಿ 23.3 ಟನ್ ಚಿನ್ನವನ್ನು ಸಂಸ್ಕರಿಸಿ ಪುನರ್ಬಳಕೆ ಮಾಡಲಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 19.7 ಟನ್ ಚಿನ್ನವನ್ನು ಸಂಸ್ಕರಿಸಿ ಪುನರ್ಬಳಕೆ ಮಾಡಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಜೂನ್ ತ್ರೈಮಾಸಿಕದಲ್ಲಿ ಜಾಗತಿಕ ಚಿನ್ನ ಬೇಡಿಕೆಯು ಶೇ 8ರಷ್ಟು ಇಳಿಕೆ ಆಗಿದೆ ಎಂದು ವರದಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಶುಕ್ರವಾರವೂ ನಡೆಯಲಿದೆ 5ಜಿ ಹರಾಜು

ನವದೆಹಲಿ (ಪಿಟಿಐ): 5ಜಿ ತರಂಗಾಂತರ ಹರಾಜು ಪ್ರಕ್ರಿಯೆಯು ಶುಕ್ರವಾರವೂ ಮುಂದುವರಿಯಲಿದೆ. ಗುರುವಾರದವರೆಗೆ ಒಟ್ಟು 16 ಸುತ್ತಿನ ಹರಾಜು ಪ್ರಕ್ರಿಯೆ ಪೂರ್ಣಗೊಂಡಿದ್ದು, ₹ 1.49 ಲಕ್ಷ ಕೋಟಿ ಮೊತ್ತದ ಬಿಡ್‌ಗಳು ಸಲ್ಲಿಕೆಯಾಗಿವೆ.

ದೂರಸಂಪರ್ಕ ಉದ್ಯಮವು ದೇಶದ ಗ್ರಾಮೀಣ ಪ್ರದೇಶಗಳಿಗೂ 5ಜಿ ಸೇವೆಗಳನ್ನು ಕೊಂಡೊಯ್ಯುವ ಬದ್ಧತೆ ಹೊಂದಿದೆ ಎಂದು ಕೇಂದ್ರ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಟಿವಿಎಸ್‌ಗೆ ₹ 297 ಕೋಟಿ ಲಾಭ

ನವದೆಹಲಿ (ಪಿಟಿಐ): ಜೂನ್ ತ್ರೈಮಾಸಿಕದಲ್ಲಿ ಟಿವಿಎಸ್ ಮೋಟರ್ ಕಂಪನಿಯ ಒಟ್ಟು ನಿವ್ವಳ ಲಾಭವು ₹ 297 ಕೋಟಿ ಆಗಿದೆ. ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ₹ 15 ಕೋಟಿ ನಷ್ಟ ಅನುಭವಿಸಿತ್ತು.

ದ್ವಿಚಕ್ರ ಹಾಗೂ ತ್ರಿಚಕ್ರ ವಾಹನ ತಯಾರಿಕಾ ವಲಯದ ಪ್ರಮುಖ ಕಂಪನಿಯಾಗಿರುವ ಟಿವಿಎಸ್, ಜೂನ್ ತ್ರೈಮಾಸಿಕದಲ್ಲಿ ₹ 7,348 ಕೋಟಿ ವರಮಾನ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯ ವರಮಾನವು ₹ 4,692 ಕೋಟಿ ಆಗಿತ್ತು.

ಈ ವರ್ಷದ ಜೂನ್ ತ್ರೈಮಾಸಿಕದ ಹಣಕಾಸಿನ ಫಲಿತಾಂಶವನ್ನು ಹಿಂದಿನ ವರ್ಷದ ಜೂನ್ ತ್ರೈಮಾಸಿಕದ ಜೊತೆ ಹೋಲಿಸುವುದು ಸರಿಯಾಗದು ಎಂದು ಕಂಪನಿ ಹೇಳಿದೆ. ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಲಾಕ್‌ಡೌನ್ ಕ್ರಮಗಳು ಜಾರಿಯಲ್ಲಿದ್ದವು.

ಪೆಟ್ರೋಲ್‌ಗೆ ಎಥನಾಲ್ ಮಿಶ್ರಣ 10 ಪಟ್ಟು ಹೆಚ್ಚಳ: ಪ್ರಧಾನಿ ಮೋದಿ

ಹಿಮ್ಮತ್‌ನಗರ, ಗುಜರಾತ್ (ಪಿಟಿಐ): ಪೆಟ್ರೋಲ್ ಜತೆಗೆ ಎಥನಾಲ್ ಮಿಶ್ರಣ ಕಳೆದ ಎಂಟು ವರ್ಷಗಳಿಂದ ಹತ್ತು ಪಟ್ಟು ಹೆಚ್ಚಾಗಿದ್ದು, ರೈತರ ಆದಾಯವನ್ನು ಹೆಚ್ಚಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದರು.

ಉತ್ತರ ಗುಜರಾತ್‌ನ ಸಾಬರ್‌ಕಂಠ ಜಿಲ್ಲೆಯ ಹಿಮ್ಮತ್‌ನಗರ ಸಮೀಪದ ಸಬರ್ ಡೈರಿ ಬಳಿ ವಿವಿಧ ಯೋಜನೆಗಳನ್ನು ಉದ್ಘಾಟಿಸಿದ ನಂತರ ನೆರೆದಿದ್ದ ಅಪಾರ ಜನಸ್ತೋಮ ಉದ್ದೇಶಿಸಿ ಅವರು ಮಾತನಾಡಿದರು.

ಕಬ್ಬು ಮತ್ತು ಜೋಳದಿಂದ ಉತ್ಪಾದಿಸುವ ಎಥನಾಲ್ ಅನ್ನು ಪೆಟ್ರೋಲ್ ಜತೆಗೆ ಶೇ 10ರಷ್ಟು ಪ್ರಮಾಣದಲ್ಲಿ ಮಿಶ್ರಣ ಮಾಡಲಾಗುತ್ತಿದೆ. ಇದು 2014ರ ಹಿಂದೆ 40 ಕೋಟಿ ಲೀಟರ್‌ಗೂ ಕಡಿಮೆ ಇತ್ತು. ಈಗ 400 ಕೋಟಿ ಲೀಟರ್‌ಗಳಿಗೆ ಮೀರಿ ಏರಿಕೆಯಾಗಿದೆ ಎಂದು ಮೋದಿ ಹೇಳಿದರು.

ಹಣಕಾಸು, ಬ್ಯಾಂಕಿಂಗ್, ಐ.ಟಿ. ಷೇರುಗಳ ಮೌಲ್ಯ ಹೆಚ್ಚಳ

ಬಿಎಸ್‌ಇ ಸೆನ್ಸೆಕ್ಸ್ 1,041 ಅಂಶ ಏರಿಕೆ



ಮುಂಬೈ (ಪಿಟಿಐ): ಹಣಕಾಸು, ಬ್ಯಾಂಕಿಂಗ್ ಮತ್ತು ಐ.ಟಿ. ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಸಿದ ಕಾರಣ ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರ ಉತ್ತಮ ಪ್ರಮಾಣದಲ್ಲಿ ಜಿಗಿತ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,041 ಅಂಶ ಏರಿಕೆ ಕಂಡು 56,857 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 288 ಅಂಶ ಹೆಚ್ಚಾಗಿ 16,930 ಅಂಶಗಳಿಗೆ ಏರಿಕೆ ಆಯಿತು.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರವನ್ನು 75 ಮೂಲಾಂಶದಷ್ಟು ಹೆಚ್ಚಳ ಮಾಡಿದ ಬಳಿಕವೂ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಚೇತರಿಕೆ ಕಂಡಿರುವುದು ಸಹ ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು ಎಂದು ವರ್ತಕರು ಹೇಳಿದ್ದಾರೆ.

ನಿಧಾನ ಗತಿಯಲ್ಲಿ ಹಣಕಾಸು ನೀತಿಯನ್ನು ಬಿಗಿಗೊಳಿಸುವ ಸಾಧ್ಯತೆ ಇದೆ ಎಂದು ಅಮೆರಿಕದ ಫೆಡರಲ್ ರಿಸರ್ವ್ ಸುಳಿವು ನೀಡಿರುವುದರಿಂದಾಗಿ ನಿಫ್ಟಿ ಹೆಚ್ಚಿನ ಏರಿಕೆ ಕಂಡಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ರಿಟೇಲ್ ವಿಭಾಗದ ಮುಖ್ಯಸ್ಥ ದೀಪಕ್ ಜಸನಿ ಹೇಳಿದ್ದಾರೆ.

ಐ.ಟಿ. ಸೂಚ್ಯಂಕ ಶೇ 2.51ರಷ್ಟು ಗಳಿಕೆ ಕಂಡಿತು. ಹಣಕಾಸು (ಶೇ 2.21), ತಂತ್ರಜ್ಞಾನ (ಶೇ 2.19), ರಿಯಲ್ ಎಸ್ಟೇಟ್ (ಶೇ 2.03) ಮತ್ತು ಬ್ಯಾಂಕ್ (ಶೇ 1.72) ಸೂಚ್ಯಂಕಗಳೂ ಏರಿಕೆ ಕಂಡಿವೆ.

ಸರ್ಕಾರಿ ಸಾಲಪತ್ರಗಳ ಜುಲೈ ತಿಂಗಳ ಅವಧಿಯು ಗುರುವಾರ ಮುಕ್ತಾಯ ಆಗುವುದರಿಂದ ಷೇರುಪೇಟೆಗಳ ವಹಿವಾಟು ಏರಿಕೆ ಕಂಡಿತು. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಹೆಚ್ಚಳವು ನಿರೀಕ್ಷಿತ ಆಗಿದ್ದರಿಂದ ಅಮೆರಿಕದ ಮಾರುಕಟ್ಟೆಯಲ್ಲಿ ಏರಿಕೆ ವಹಿವಾಟು ನಡೆಯಿತು. ಭಾರತದ ಷೇರುಪೇಟೆಯ ಮೇಲೆಯೂ ಅದರ ಪ್ರಭಾವ ಕಂಡುಬಂತು. ಐ.ಟಿ., ಲೋಹ ಮತ್ತು ರಿಯಲ್ ಎಸ್ಟೇಟ್ ವಲಯದ ಷೇರುಗಳು ಹೆಚ್ಚಿನ ಖರೀದಿಗೆ ಒಳಗಾದವು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 1.36ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 108.1 ಡಾಲರ್‌ಗೆ ತಲುಪಿತು.

ರೂಪಾಯಿ 22 ಪೈಸೆ ಹೆಚ್ಚಳ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಗುರುವಾರ 22 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 79.69ರಂತೆ ವಿನಿಮಯಗೊಂಡಿತು.

ತಯಾರಿಕಾ ವಲಯ: ಎಫ್‌ಡಿಐ ಶೇ 76ರಷ್ಟು ಏರಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯವು 2021–22ರಲ್ಲಿ ಒಟ್ಟು 21.34 ಬಿಲಿಯನ್ ಅಮೆರಿಕನ್ ಡಾಲರ್ (ಅಂದಾಜು ₹ 1.70 ಲಕ್ಷ ಕೋಟಿ) ವಿದೇಶಿ ನೇರ ಬಂಡವಾಳ ಆಕರ್ಷಿಸಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ಗುರುವಾರ ಹೇಳಿದೆ. ಈ ಮೊತ್ತವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 76ರಷ್ಟು ಹೆಚ್ಚು.

ಎಫ್‌ಡಿಐ ನೀತಿಯ ವಿಚಾರದಲ್ಲಿ ಹಲವು ಸುಧಾರಣೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ವಿಮೆ, ರಕ್ಷಣೆ, ದೂರಸಂಪರ್ಕ, ಹಣಕಾಸು ಸೇವೆಗಳು, ಔಷಧ, ರಿಟೇಲ್ ವಹಿವಾಟು ಮತ್ತು ಇ–ವಾಣಿಜ್ಯ ವಲಯಗಳಲ್ಲಿ ಈ ಸುಧಾರಣೆಗಳು ಜಾರಿಗೆ ಬಂದಿವೆ ಎಂದು ಸಚಿವಾಲಯ ಹೇಳಿದೆ.

2020–21ರಲ್ಲಿ ತಯಾರಿಕಾ ವಲಯದಲ್ಲಿನ ಎಫ್‌ಡಿಐ 12.09 ಅಮೆರಿಕನ್ ಡಾಲರ್ (ಅಂದಾಜು ₹ 96 ಸಾವಿರ ಕೋಟಿ) ಆಗಿತ್ತು ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.



ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಕುಮಟ	
ಚಿಪ್ಪು	23199-32609
ಕೋಕ	15069-31099
ಹೊಸ ಚಾಲಿ	35179-40599
ಪುತ್ತೂರು	
ಕೋಕ	11000-26000
ಹೊಸತು	31500-44500
ಕಾರ್ಕಳ	
ಹೊಸತು	40000-45000
ಹಳತು	46000-56000
ಸಾಗರ	
ಬಿಳಿಗೋಟು	18560-30199
ಚಾಲಿ	34009-38260
ಕೋಕ	25199-34501
ಕೆಂಪುಗೋಟು	24899-38899
ರಾಶಿ	38899-50399
ಸಿಪ್ಪೆಗೋಟು	17269-21899
ಶಿವಮೊಗ್ಗ	
ರಾಶಿ	46200-50501
ಸಿದ್ದಾಪುರ	
ಬಿಳಿಗೋಟು	29891-33033
ಚಾಲಿ	37809-40389
ಕೋಕ	23699-32000
ಕೆಂಪುಗೋಟು	31900-31900
ರಾಶಿ	44599-49099
ತಟ್ಟಿಬೆಟ್ಟೆ	38699-47099
ಶಿರಸಿ	
ಬೆಟ್ಟೆ	38913-43299
ಬಿಳಿಗೋಟು	24599-33899
ಚಾಲಿ	37399-40599
ರಾಶಿ	47199-48218
ಸಿದ್ದಾಪುರ	
ಬಿಳಿಗೋಟು	26899-33012
ಚಾಲಿ	34499-40299
ಕೋಕ	19300-29109
ಕೆಂಪುಗೋಟು	27019-34699
ರಾಶಿ	48389-53829
ತಟ್ಟಿಬೆಟ್ಟೆ	38969-45369

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	15800	16000	219.10 ಸೆಂಟ್ಸ್
ಎಸಿ	8820	8400	8900	
ಆರ್‌ಪಿ	9500	9500	9700	ಲಂಡನ್
ಆರ್‌ಸಿ	4700	4500	4550	2009 ಡಾಲರ್ಸ್

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಸ್ವಾಭಿಮಾನವನ್ನು ಇಟ್ಟುಕೊಂಡು ಯೋಗ್ಯ ರೀತಿಯಲ್ಲಿ ಬದುಕಬೇಕಾದರೆ ಕಷ್ಟಗಳನ್ನು ಜಯಿಸಬೇಕಾಗುತ್ತದೆ.
–ಡಾ.ಬಿ.ಆರ್. ಅಂಬೇಡ್ಕರ್

ಕೋಮು ದ್ವೇಷ ಹತ್ತಿಕ್ಕಲು ಕಠಿಣ ಕ್ರಮ ಅಗತ್ಯ

ರಾಜ್ಯದಲ್ಲಿ ರಾಜಕೀಯ ಕಾರ್ಯಕರ್ತನೊಬ್ಬನ ಹತ್ಯೆಯಾಗಿದೆ. ಬಿಜೆಪಿ ಯುವ ಮೋರ್ಚಾ ಮುಖಂಡ, ದಕ್ಷಿಣ ಕನ್ನಡ ಜಿಲ್ಲೆ ನೆಟ್ಟಾರು ಗ್ರಾಮದ ಪ್ರವೀಣ್ ನೆಟ್ಟಾರು ಅವರ ಹತ್ಯೆಯನ್ನು ಕಟುವಾದ ಶಬ್ದಗಳಲ್ಲಿ ಖಂಡಿಸಬೇಕಾಗಿದೆ. ರಾಜ್ಯದಲ್ಲಿ ಈ ರೀತಿಯ ಹತ್ಯೆಗಳು ಪದೇ ಪದೇ ಆಗುತ್ತಿರುವುದು ಆತಂಕಕಾರಿ. ಇಂತಹ ಹತ್ಯೆಗಳು ಸರ್ಕಾರದ ವೈಫಲ್ಯವನ್ನು ಬಟಾಬಯಲು ಮಾಡಿವೆ ಎಂದು ಆಡಳಿತಾರೂಢ ಬಿಜೆಪಿಯ ಕೆಲವು ಕಾರ್ಯಕರ್ತರೇ ಹೇಳಿರುವುದು ಗಮನಾರ್ಹ. ಈ ಹಿಂದೆ ನಡೆದ ಕೋಮು ಆಧಾರಿತ ಹತ್ಯೆ ಪ್ರಕರಣಗಳಲ್ಲಿ ಕಠಿಣ ಕ್ರಮ ಕೈಗೊಂಡಿದ್ದಿದ್ದರೆ, ಗುಪ್ತಚರ ವ್ಯವಸ್ಥೆಯನ್ನು ಬಿಗಿ ಮಾಡಿದ್ದಿದ್ದರೆ ಈ ರೀತಿಯ ಹತ್ಯೆಗಳು ಮರುಕಳಿಸುತ್ತಿರಲಿಲ್ಲ ಎಂಬ ಅವರ ಅನಿಸಿಕೆಯಲ್ಲಿ ಹುರುಳಿಲ್ಲದೇ ಇಲ್ಲ. ಪ್ರವೀಣ್ ಹತ್ಯೆಯನ್ನು ಮತೀಯ ನೆಲೆಯಲ್ಲಿ ನೋಡಬಾರದು. ರಾಜ್ಯದ ಪ್ರಜೆಯೊಬ್ಬನ ಹತ್ಯೆ ಎಂದು ಇಡೀ ಪ್ರಕರಣವನ್ನು ಧರ್ಮನಿರಪೇಕ್ಷವಾಗಿ ನೋಡಬೇಕು. ಎಲ್ಲ ಆಯಾಮಗಳಿಂದಲೂ ತನಿಖೆ ಮಾಡಿ, ಆರೋಪಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಜೊತೆಗೆ ರಾಜ್ಯದಲ್ಲಿ ಇಂತಹ ಹತ್ಯೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕಾಗಿರುವುದೂ ರಾಜ್ಯ ಸರ್ಕಾರದ ಆದ್ಯ ಕರ್ತವ್ಯ. ಈ ಹತ್ಯೆಗೆ ಕಾರಣಗಳನ್ನು ಪತ್ತೆ ಮಾಡಿ ಅದಕ್ಕೆ ಮದ್ದು ಕಂಡುಕೊಳ್ಳಬೇಕಿದೆ. ಪ್ರವೀಣ್ ಹತ್ಯೆಯಿಂದಾಗಿ ಬಿಜೆಪಿ ಹಾಗೂ ಬಜರಂಗದಳ ಕಾರ್ಯಕರ್ತರು ಆಕ್ರೋಶಗೊಂಡಿದ್ದಾರೆ. ರಾಜ್ಯ ಸರ್ಕಾರದ ವಿರುದ್ಧ ಬಹಿರಂಗವಾಗಿ ಸಿಟ್ಟು ವ್ಯಕ್ತಪಡಿಸಿದ್ದಾರೆ. ಪರಿಸ್ಥಿತಿಯನ್ನು ಸರ್ಕಾರವು ದಕ್ಷವಾಗಿ ನಿಭಾಯಿಸಬೇಕಿದೆ. ಕೋಮುದ್ವೇಷ ಹರಡದಂತೆ ನೋಡಿಕೊಳ್ಳಬೇಕಿದೆ. ಕಾನೂನು ಮತ್ತು ಸುವ್ಯವಸ್ಥೆ ಪಾಲನೆ ವಿಷಯದಲ್ಲಿ ರಾಜಕೀಯವಾಗಲೀ, ಧರ್ಮವಾಗಲೀ ನುಸುಳಬಾರದು. ಹತ್ಯೆಗೆ ಸಂಬಂಧಿಸಿದಂತೆ, ಬಿಜೆಪಿ ನಾಯಕರು ಪ್ರಚೋದನಕಾರಿಯಾಗಿ ಮಾತನಾಡಬಾರದು ಎಂದು ಕಟ್ಟಾಜ್ಞೆ ಮಾಡುವ ಧೈರ್ಯವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತೋರಿಸಬೇಕಾಗಿದೆ. ಇಂತಹ ಕೃತ್ಯಗಳನ್ನು ರಾಜಕೀಯ ಮುಖಂಡರು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅದಕ್ಕೆ ಅವಕಾಶ ನೀಡಬಾರದು. ಕಾನೂನು–ಸುವ್ಯವಸ್ಥೆ ಕಾಪಾಡುವುದು ಸರ್ಕಾರದ ಹೊಣೆ. ಹಾಗಾಗಿ, ಆಡಳಿತ ಪಕ್ಷವು ಈ ವಿಚಾರದಲ್ಲಿ ಹೆಚ್ಚು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ವಿರೋಧ ಪಕ್ಷಗಳ ಮುಖಂಡರು ಸಹ ಸಂಯಮವನ್ನು ಕಾಯ್ದುಕೊಳ್ಳಬೇಕಿದೆ. ವಿಧಾನಸಭೆ ಚುನಾವಣೆ ಸನಿಹದಲ್ಲಿರುವ ಸಂದರ್ಭದಲ್ಲಿ ಕೋಮು ದ್ವೇಷ ಕೆರಳಿಸಲು ಸ್ವಾರ್ಥಶಕ್ತಿಗಳು ಯತ್ನಿಸಬಹುದು. ಅದಕ್ಕೆ ಆಸ್ಪದ ದೊರೆಯದಂತೆ ಸರ್ಕಾರ ನೋಡಿಕೊಳ್ಳಬೇಕು. ಸಮಾಜದಲ್ಲಿ ಸೌಹಾರ್ದ ಮತ್ತು ಶಾಂತಿಗೆ ಭಂಗ ಬಾರದಂತೆ ಸರ್ಕಾರವು ಎಚ್ಚರ ವಹಿಸಬೇಕು. ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದೆ. ಮತೀಯ ಅಥವಾ ರಾಜಕೀಯ ದ್ವೇಷದ ಕಾರಣಕ್ಕೆ ಹತ್ಯೆಯಾದಾಗ ಸಂತ್ರಸ್ತರ ಕುಟುಂಬಕ್ಕೆ ಒಂದಿಷ್ಟು ಪರಿಹಾರ ನೀಡಿ, ಆ ಬಳಿಕ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಣಮರೆವು ಪ್ರದರ್ಶಿಸುವುದು ಅಧಿಕಾರಸ್ಥರ ಚಾಳಿ. ಅದು ಇಲ್ಲಿ ಮರುಕಳಿಸಬಾರದು.

ಸಮಾಜದಲ್ಲಿ ಸೌಹಾರ್ದ ಮತ್ತು ಶಾಂತಿಗೆ ಭಂಗ ಬಾರದಂತೆ ಸರ್ಕಾರವು ಎಚ್ಚರ ವಹಿಸಬೇಕು

ಕೋಮು ಸೌಹಾರ್ದ ಕದಡುವವರನ್ನು ಬಗ್ಗುಬಡಿಯಲು ಉತ್ತರಪ್ರದೇಶ ಸರ್ಕಾರ ಅನುಸರಿಸುತ್ತಿರುವ ಮಾದರಿಯನ್ನು ಅಗತ್ಯವಾದರೆ ಕರ್ನಾಟಕದಲ್ಲಿಯೂ ಅನುಸರಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಹೀಗೆ ಮಾಡುವುದು ಮೂರ್ಖತನದ ಪರಮಾವಧಿ ಆದೀತು. ಉತ್ತರಪ್ರದೇಶದ 'ಬುಲ್ಡೋಜರ್ ಅಸ್ತ್ರ'ವು ಕಾನೂನುಬಾಹಿರ. ಅದು ಸಂವಿಧಾನ ವಿರೋಧಿ ನಡೆಯೂ ಹೌದು. ಬುಲ್ಡೋಜರ್‌ಗಳನ್ನು ಅಕ್ರಮ ಕಟ್ಟಡ ನೆಲಸಮಕ್ಕೆ ಬಳಸಬೇಕೇ ವಿನಾ ಸೌಹಾರ್ದವನ್ನು ನೆಲಸಮ ಮಾಡಲು ಅಲ್ಲ. ಕರ್ನಾಟಕವು ಕೋಮು ಸೌಹಾರ್ದಕ್ಕೆ ಹೆಸರುವಾಸಿಯಾದ ರಾಜ್ಯ. ಅದನ್ನು ಕಾಪಾಡುವ ಕೆಲಸವು ಕಾನೂನಿಗೆ ಅನುಗುಣವಾಗಿ ಆಗಬೇಕು. ಕರ್ನಾಟಕದ ಉಪಕ್ರಮಗಳು ಇತರ ರಾಜ್ಯಗಳಿಗೆ ಮಾದರಿಯಾಗುವಂತೆ ಇದ್ದರೆ ಚೆನ್ನ. ಯಾವುದೇ ಕ್ರಮ ಕೈಗೊಂಡರೂ ಅದು ಸಂವಿಧಾನ ಬದ್ಧವಾಗಿಯೇ ಇರಬೇಕು. ಇಂತಹ ಸಂದರ್ಭಗಳಲ್ಲಿ ಮುಖ್ಯಮಂತ್ರಿ ಭಾವುಕ ನೆಲೆಯಲ್ಲಿ ಪ್ರತಿಕ್ರಿಯಿಸಬಾರದು. ಬಿಜೆಪಿ ಕಾರ್ಯಕರ್ತರ ಆಕ್ರೋಶವನ್ನು ಶಮನಗೊಳಿಸಲು ಅವರು ಇಂತಹ ಹೇಳಿಕೆ ನೀಡಿರಬಹುದು. ಆದರೆ, ಇಂತಹ ಹೇಳಿಕೆಗಳು ಪರಿಣಾಮದಲ್ಲಿ ಒಂದು ಸಮುದಾಯದ ವಿರುದ್ಧ ಪಕ್ಷದ ಕಾರ್ಯಕರ್ತರನ್ನು ಎತ್ತಿಕಟ್ಟಬಹುದು. ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತವರು ಆಡುವ ಮಾತು ಇದಲ್ಲ. ಚುನಾವಣೆ ಹತ್ತಿರವಾಗುತ್ತಿದೆ. ಇಂತಹ ಹೊತ್ತಲ್ಲಿ ರಾಜ್ಯದ ಚಿತ್ತಭಿತ್ತಿಯನ್ನು ಕಲಕುವ ಯಾವ ಕ್ರಿಯೆಗೂ ಯಾವ ಮಾತಿಗೂ ಯಾರೂ ಅವಕಾಶ ಕೊಡಬಾರದು.

ದಿನದ ಟ್ವೀಟ್

ಆತ್ಮಾವಲೋಕನ ಮಾಡಿಕೊಳ್ಳಲಿ

ಶಾಂತಿ, ಸುವ್ಯವಸ್ಥೆ ಸಮಸ್ಯೆಯಿಂದ ಆರ್ಥಿಕ ಹಿಂಜರಿತ ಉಂಟಾಗಿ ಕೈಗಾರಿಕೆಗಳು ವಲಸೆ ಹೋದರೆ ಎದುರಾಗುವ ನಿರುದ್ಯೋಗ ಸಮಸ್ಯೆಗೆ ಯಾರು ಹೊಣೆ ಆಗುತ್ತಾರೆ? ನಿರುದ್ಯೋಗವೇ ಇಂಥ ಘಟನೆಗಳಿಗೆ ಕಾರಣ. ಹತಾಶ ಯುವಕರ ಮನಸ್ಸು ಕೆಡಿಸಲಾಗುತ್ತಿದೆ. ಈ ಬಗ್ಗೆ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು.

ಎಚ್‌.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕಿಡಿನುಡಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕರ್ನಾಟಕದಲ್ಲಿ ಉತ್ತರಪ್ರದೇಶ ಮಾದರಿಯನ್ನು ಅಳವಡಿಸಿಕೊಳ್ಳುವ ಬಯಕೆ ತೋರಿರುವುದು ತಮ್ಮ ಸರ್ಕಾರದ ಮಾದರಿಯ ವೈಫಲ್ಯವನ್ನು ಒಪ್ಪಿಕೊಳ್ಳುವುದಕ್ಕೆ ಸಮ. ಸಮಸ್ಯೆ ಸೃಷ್ಟಿಸಲು ಬಿಜೆಪಿಯು ಕೋಮು ಭಾವನೆ ಕೆರಳಿಸುತ್ತದೆ. ನಂತರ ಅಲ್ಪಸಂಖ್ಯಾತರನ್ನು ಗುರಿಮಾಡಲು ಉತ್ತರಪ್ರದೇಶ ಮಾದರಿಯನ್ನು ಅಳವಡಿಸಿಕೊಳ್ಳುತ್ತದೆ. ಯಾವ ಸಮುದಾಯವೂ ಸುರಕ್ಷಿತವಲ್ಲದ ಅಪ್ರಯೋಜಕ ಆಡಳಿತ ಮಾದರಿಯನ್ನು ಅಳವಡಿಸಿಕೊಳ್ಳುವುದನ್ನು ನಾನು ಖಂಡಿಸುತ್ತೇನೆ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 29-7-1997

- **ಪಾಸ್ವಾನ್ ರಾಜೀನಾಮೆಗೆ ಸಂಸತ್ತಿನಲ್ಲಿ ಆಗ್ರಹ**

ನವದೆಹಲಿ, ಜುಲೈ 28 (ಪಿಟಿಐ, ಯುಎನ್‌ಐ)– ಇಲ್ಲಿಗೆ ಸಮೀಪದ ಫರಿದಾಬಾದ್‌ನಲ್ಲಿ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಹಿಮಸಾಗರ್ ರೈಲಿಗೆ ಡಿಕ್ಕಿ ಹೊಡೆದು ಪ್ರಯಾಣಿಕರ ಸಾವು- ನೋವಿಗೆ ಕಾರಣವಾದ ಘಟನೆ ಇಂದು ಸಂಸತ್ತಿನ ಉಭಯ ಸದನಗಳಲ್ಲಿ ಪ್ರಸ್ತಾಪಗೊಂಡು, ರಾಜ್ಯಸಭೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ನೈತಿಕ ಜವಾಬ್ದಾರಿ ಹೊತ್ತು ರೈಲ್ವೆ ಸಚಿವ ರಾಂ ವಿಲಾಸ್ ಪಾಸ್ವಾನ್ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಸಮಯವನ್ನು ರದ್ದುಗೊಳಿಸಿ ರೈಲು ದುರಂತದ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಉದ್ರಿಕ್ತ ಸದಸ್ಯರು ಆಗ್ರಹಪಡಿಸಿದರು.

- **ಶಾಮಿಯಾನ, ಆಹಾರ ಸರಬರಾಜಿಗೆ ಸೇವಾ ತೆರಿಗೆ ಆಗಸ್ಟ್ 1ರಿಂದ**

ನವದೆಹಲಿ, ಜುಲೈ 28 (ಯುಎನ್‌ಐ)– ಕೇಂದ್ರ ಸರ್ಕಾರವು ಇನ್ನೆರಡು ಸೇವೆಗಳಿಗೆ ಸೇವಾ ತೆರಿಗೆಯನ್ನು ವಿಧಿಸಲು ತೀರ್ಮಾನಿಸಿದೆ. ಹೊರಗಡೆ ಆಹಾರ ಸರಬರಾಜು ಮಾಡುವ ಗುತ್ತಿಗೆದಾರರಿಗೆ ಮತ್ತು ಪೆಂಡಾಲ್ ಅಥವಾ ಶಾಮಿಯಾನ ಗುತ್ತಿಗೆದಾರರಿಗೆ ಈ ಸೇವಾ ತೆರಿಗೆಯನ್ನು ವಿಧಿಸಲಾಗುವುದು.

ಆಗಸ್ಟ್ 1ರಿಂದ ಈ ಸೇವಾ ತೆರಿಗೆ ಜಾರಿಗೆ ಬರಲಿದೆ. ತಮ್ಮ ಸ್ವಂತ ಸ್ಥಳ ಬಿಟ್ಟು ಬೇರೆಡೆ ಆಹಾರ ಸರಬರಾಜು ಮಾಡುವುದು, ಆಹಾರ ತಯಾರಿಸಿಕೊಡುವುದು, ಮಾದಕ ಅಥವಾ ಮಾದಕ ರಹಿತ ಪಾನೀಯ ಸರಬರಾಜು ಮಾಡುವುದು ಸೇವಾ ತೆರಿಗೆಗೆ ಒಳಪಡುತ್ತದೆ.

50 ವರ್ಷಗಳ ಹಿಂದೆ

ಶನಿವಾರ, 29-7-1972

- **ಸಿಮ್ಲಾ ಒಪ್ಪಂದಕ್ಕೆ ಭಾರತದ ಅನುಮೋದನೆ, ರಾಷ್ಟ್ರಪತಿ ಸಹಿ**

ನವದೆಹಲಿ, ಜುಲೈ 28– ಪಡೆಗಳ ವಾಪಸಾತಿ ಹಾಗೂ ಪರಸ್ಪರ ಸಂಧಾನದ ಮೂಲಕ ಎರಡು ರಾಷ್ಟ್ರಗಳ ನಡುವಣ ವಿವಾದಗಳ ಇತ್ಯರ್ಥಕ್ಕೆ ಕರೆ ನೀಡಿರುವ ಸಿಮ್ಲಾ ಒಪ್ಪಂದಕ್ಕೆ ಭಾರತ ಇಂದು ಅನುಮೋದನೆ ನೀಡಿತು.

ರಾಷ್ಟ್ರಪತಿ ವಿ.ವಿ. ಗಿರಿಯವರು ಇಂದು ಸಿಮ್ಲಾ ಒಪ್ಪಂದದ ಅನುಮೋದನೆ ಪತ್ರಕ್ಕೆ ಸಹಿ ಹಾಕಿದರು. ಪಾಕಿಸ್ತಾನ ಈ ತಿಂಗಳ 15ರಂದು ಸಿಮ್ಲಾ ಒಪ್ಪಂದಕ್ಕೆ ಅನುಮೋದನೆ ನೀಡಿತು.

ಸಹಿ ಹಾಕಿದ ಅನುಮೋದನೆ ಪತ್ರಗಳನ್ನು ಭಾರತ- ಪಾಕಿಸ್ತಾನ ವಿನಿಮಯ ಮಾಡಿಕೊಂಡ ನಂತರ ಸಿಮ್ಲಾ ಒಪ್ಪಂದ ಜಾರಿಗೆ ಬರುತ್ತದೆ.

- **ಒಂದು ನಕಲಿ ಮಾರ್ಕ್ಸ್ ಕಾರ್ಡ್ ಬೆಲೆ 800 ರೂ.!**

ಬೆಂಗಳೂರು, ಜುಲೈ 28– ಒಂದು ನಕಲಿ ಮಾರ್ಕ್ಸ್ ಕಾರ್ಡಿನ ಬೆಲೆ 800 ರೂಪಾಯಿ– ಇದು ಮೈಸೂರು ವಿಶ್ವವಿದ್ಯಾನಿಲಯದ ಹೆಸರಿನಲ್ಲಿ ನಕಲಿ ಮಾರ್ಕ್ಸ್ ಕಾರ್ಡ್ ಚಲಾವಣೆಗೆ ತಂದ ತಂಡದ ವ್ಯವಹಾರ.

ಈ ತಂಡಕ್ಕೆ ಸೇರಿದವರೆಂದು ಹೇಳಲಾದ ತುಮಕೂರಿನ ಪ್ರಥಮ ದರ್ಜೆ ಕಾಲೇಜಿನ ಗುಮಾಸ್ತರೊಬ್ಬರನ್ನು ಸಿಐಡಿ ಪೊಲೀಸರು ಇಂದು ಬಂಧಿಸಿದ್ದಾರೆ.

ಆರ್ಥಿಕ ಪ್ರಗತಿಗೆ ನಿಸರ್ಗದ ರಕ್ಷಣೆ ಅಗತ್ಯವೆಂದು ಅಧಿಕಾರ ರಾಜಕಾರಣ ಒಪ್ಪುವುದು ಯಾವಾಗ?

'ಸಹ್ಯಾದ್ರಿ'ಕಾಂಡದ ನಿರ್ಣಾಯಕ ಘಟ್ಟ

ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಕರಾವಳಿಯಲ್ಲಿ ಮತ್ಸ್ಯಕ್ಷಾಮ ತಲೆದೋರುತ್ತಿದೆ. ಮಲೆನಾಡಿನಲ್ಲಿ ಭೂಮಿಯೇ ಕುಸಿಯುತ್ತಿದೆ. ಒಳನಾಡಿನಲ್ಲಾದರೋ ಮಳೆಗಾಲದಲ್ಲಿ ನೆರೆ, ಬೇಸಿಗೆಯಲ್ಲಿ ಬರ! ನಾಡಿನಾದ್ಯಂತ, ವಿಭಿನ್ನ ಭೌಗೋಳಿಕ ಪ್ರದೇಶಗಳಲ್ಲಿ ಜರುಗುತ್ತಿರುವ ಈ ವೈವಿಧ್ಯಮಯ ವಿದ್ಯಮಾನಗಳಲ್ಲಿ ಏನಾದರೂ ಸಮಾನ ಅಂಶಗಳಿವೆಯೇ? ಖಂಡಿತಾ ಇವೆ. ಈ ಸಂಕಷ್ಟಗಳ ಮೂಲಕಾರಣವೆಂದರೆ, ನಾಡಿನ ಜೀವನಾಡಿಯಂತಿರುವ ಪಶ್ಚಿಮಘಟ್ಟಗಳ ಕಾಡು-ಗೋಮಾಳ, ಜಲಮೂಲಗಳು, ಪಾರಂಪರಿಕ ಕೃಷಿ ವಿಧಾನ- ಇತ್ಯಾದಿಗಳೆಲ್ಲ ವೇಗವಾಗಿ ನಾಶವಾಗುತ್ತಿರುವುದು. ವೈಜ್ಞಾನಿಕ ಅಧ್ಯಯನಗಳು ಹಾಗೂ ಸರ್ಕಾರಿ ದಾಖಲೆಗಳು ಇದನ್ನು ನಿರೂಪಿಸುತ್ತಲೇ ಇವೆ. ನೈಸರ್ಗಿಕ ಸಂಪತ್ತನ್ನು ಸರಿಯಾಗಿ ನಿಭಾಯಿಸದೆ, ಸುಸ್ಥಿರ ಆರ್ಥಿಕ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಅವು ಎಚ್ಚರಿಸುತ್ತಿವೆ ಸಹ. ಆದರೆ, ಸರ್ಕಾರಗಳನ್ನು ಮುನ್ನಡೆಸುವ ಅಧಿಕಾರ ರಾಜಕಾರಣಕ್ಕೆ ಮಾತ್ರ ಇದು ಅರ್ಥವಾಗುತ್ತಲೇ ಇಲ್ಲ!

ಜೀವವೈವಿಧ್ಯ ಹಾಗೂ ಜಲಮೂಲದ ಮೂಲ ಸೆಲೆಯಾದ ಪಶ್ಚಿಮಘಟ್ಟಗಳ ಸಂರಕ್ಷಣೆ ಕುರಿತ ಜಾಗೃತಿ ಆರಂಭವಾಗಿ ನಾಲ್ಕು ದಶಕಗಳೇ ಸಂದಿವೆ. ಸಂಶೋಧನಾ ಆಧಾರಿತ ಅದೆಷ್ಟೋ ಶಿಫಾರಸುಗಳು ಹಾಗೂ ತಜ್ಞ ವರದಿಗಳು ಸರ್ಕಾರಕ್ಕೆ ಸಲ್ಲಿಕೆಯಾಗಿವೆ. ತಮ್ಮ ನೆಲವನ್ನು ಉಳಿಸಿಕೊಳ್ಳಲು ಇಲ್ಲಿನ ವನವಾಸಿ ಸಮುದಾಯಗಳು ಹಾಗೂ ರೈತರು ಹಕ್ಕೊತ್ತಾಯ ಮಾಡುತ್ತಲೂ ಬಂದಿದ್ದಾರೆ. ದೇಶದಾದ್ಯಂತದ ವಿವಿಧ ಕ್ಷೇತ್ರಗಳ ತಜ್ಞರು ಸ್ಥಳೀಯ ಜನಸಮುದಾಯಗಳ ಜೊತೆ ಸೇರಿ ಎಂಬತ್ತರ ದಶಕದ ಕೊನೆಯಲ್ಲಿ ಸಂಘಟಿಸಿದ್ದ ಐತಿಹಾಸಿಕ 'ಪಶ್ಚಿಮಘಟ್ಟ ಉಳಿಸಿ ಪಾದಯಾತ್ರೆ'ಯಂತೂ ಇದರ ಸಂರಕ್ಷಣೆಯ ಮಹತ್ವವನ್ನು ಎಳೆಎಳೆಯಾಗಿ ಸರ್ಕಾರದ ಮುಂದೆ ಬಿಡಿಸಿಟ್ಟಿತ್ತು. ಈ ಎಲ್ಲ ಬಗೆಯ ವ್ಯಾಪಕ ಅರಿವು- ಒತ್ತಡಗಳ ಪರಿಣಾಮವಾಗಿಯೇ, ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯವು 2011ರಲ್ಲಿ ವಿಜ್ಞಾನಿ ಮಾಧವ ಗಾಡ್ಗೀಳ್ ನೇತೃತ್ವದಲ್ಲಿ ಉನ್ನತ ಮಟ್ಟದ ತಜ್ಞ ಸಮಿತಿಯನ್ನು ರಚಿಸಿ, ಸೂಕ್ತ ಸಂರಕ್ಷಣಾ ನೀತಿ ರೂಪಿಸುವಂತೆ ಕೋರಿತು. ವ್ಯಾಪಕ ಸಂಶೋಧನೆ ಹಾಗೂ ಸಮಾಲೋಚನೆಗಳನ್ನು ಆಧರಿಸಿ 2012ರಲ್ಲಿ ಅದು ತನ್ನ ವರದಿ ನೀಡಿತು. ಆದರೆ, ಅದರ ಆಶಯಗಳನ್ನೇ ಅರ್ಥೈಸಿಕೊಳ್ಳದ ರಾಜಕೀಯ ನಾಯಕರು ಪಕ್ಷಾತೀತವಾಗಿ ಅದನ್ನು ವಿರೋಧಿಸಿದ್ದರಿಂದ, ಕೇಂದ್ರ ಸರ್ಕಾರ ಅದನ್ನು ಬೀಡಬೇಕಾಯಿತು!

ಗಾಡ್ಗೀಳ್ ವರದಿಯನ್ನು ಪರಿಷ್ಕರಿಸಲು ವಿಜ್ಞಾನಿ ಕಸ್ತೂರಿರಂಗನ್ ನೇತೃತ್ವದಲ್ಲಿ 2012ರಲ್ಲಿ ಮತ್ತೊಂದು ಸಮಿತಿ ರಚಿಸಬೇಕಾಯಿತು. 'ಪರಿಸರ ಸಂರಕ್ಷಣಾ ಕಾನೂನು' (1986) ಅನ್ವಯ, ಪಶ್ಚಿಮಘಟ್ಟ ಶ್ರೇಣಿಯ ಕನಿಷ್ಠ ಶೇಕಡ 37ರಷ್ಟು ಪ್ರದೇಶವನ್ನಾದರೂ 'ಪರಿಸರ-ಸೂಕ್ಷ್ಮ ಪ್ರದೇಶ'ಗಳೆಂದು ಗುರುತಿಸಿ ಸಂರಕ್ಷಿಸಲು ಅದು ಸಲಹೆ ಮಾಡಿತ್ತು. ಅದಕ್ಕೂ ವ್ಯಾಪಕ ವಿರೋಧವು ರಾಜಕೀಯ ವರ್ಗದಿಂದಲೇ ಬಂತು! ಒಂದು ದಶಕದಿಂದ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಯು ಹಲವು ಬಾರಿ ಅದನ್ನು ಪರಿಷ್ಕರಿಸಿ ಪ್ರಕಟಿಸಲು ಪ್ರಯತ್ನಿಸಿತಾದರೂ ರಾಜ್ಯ ಸರ್ಕಾರಗಳು ಹಾಗೂ ರಾಜಕೀಯ ನಾಯಕರಿಂದ ಅದಕ್ಕೆ ಅಂಗೀಕಾರ ದೊರೆಯಲೇ ಇಲ್ಲ. ಇತ್ತ, ಪಶ್ಚಿಮಘಟ್ಟವು ನಾಶವಾಗುತ್ತಲೇ ಸಾಗಿದೆ. ಹೀಗಾಗಿಯೇ, ಈ ಕುರಿತು ಶೀಘ್ರ ಕ್ರಮ ಕೈಗೊಳ್ಳಲು ಸುಪ್ರೀಂ ಕೋರ್ಟ್ ಹಾಗೂ ರಾಷ್ಟ್ರೀಯ ಹಸಿರು ನ್ಯಾಯಾಲಯವು ಸರ್ಕಾರಕ್ಕೆ ಆದೇಶಿಸಬೇಕಾಗಿ ಬಂತು. ಈಗ, ಈ ತಿಂಗಳ 6ರಂದು ಪುನಃ ಹೊಸ ಕರಡು ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ.

ಇಷ್ಟಕ್ಕೂ ಈ ಅಧಿಸೂಚನೆಯಲ್ಲಿ ಏನಿದೆ? ಇಲ್ಲಿನ ನೆಲ-ಜಲ, ಕಾಡು-ಕಣಿವೆಗಳ ನಿರ್ವಹಣೆಯಲ್ಲಿ ತೋರಬೇಕಾದ ಕನಿಷ್ಠ ಶಿಸ್ತನ್ನಷ್ಟೇ ಅದು ಸೂಚಿಸುತ್ತಿದೆ. ಸ್ಥಳೀಯ ರೈತರು, ವನವಾಸಿಗಳು, ವ್ಯಾಪಾರಸ್ಥರು, ಜಮೀನುರಹಿತ ಕುಶಲ-ಕರ್ಮಿಗಳು- ಇವರೆಲ್ಲರ ಉದ್ಯೋಗ ಅಥವಾ ಜೀವನೋಪಾಯಕ್ಕೆ ತೊಂದರೆಯಾಗುವ ಯಾವ ಸಂಗತಿಗಳೂ ಅದರಲ್ಲಿಲ್ಲ. ಜಮೀನು ಕೊಡು-ಕೊಳ್ಳುವುದು, ಬಡವರಿಗೆ ಸರ್ಕಾರಿ ಜಮೀನು ಪಟ್ಟಾ ನೀಡುವುದು, ಸಣ್ಣ ಕೈಗಾರಿಕೆಗಳ ಸ್ಥಾಪನೆ, ಮನೆಕಟ್ಟುವುದು, ರಸ್ತೆಯಂಥ ಸಾರ್ವಜನಿಕ ಕಾಮಗಾರಿ- ಇವನ್ನೆಲ್ಲ ನಿಯಂತ್ರಿಸುವ ಪ್ರಸ್ತಾವವೂ ಅದರಲ್ಲಿಲ್ಲ. ರೈತರು ಅಥವಾ ವನವಾಸಿಗಳನ್ನು ಒಕ್ಕಲೆಬ್ಬಿಸುವ ಇಂಗಿತವೂ ಇಲ್ಲ. ಆದರೆ, ಕೆಲವರು ಉದ್ದೇಶಪೂರ್ವಕವಾಗಿ ಈ ಸತ್ಯಸಂಗತಿಗಳನ್ನೆಲ್ಲ ಮರೆಮಾಚಿ, ಅಧಿಸೂಚನೆ ಕುರಿತು ಜನರಿಗೆ ಹಸಿಸುಳ್ಳು ಹೇಳುತ್ತಿದ್ದಾರೆ. ತಪ್ಪು ಮಾಹಿತಿ ನೀಡುತ್ತಾ ಸರ್ಕಾರವನ್ನೇ ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಇದರಿಂದಾಗಿ, ರಾಜ್ಯ ಸರ್ಕಾರವು ಈ ಅಧಿಸೂಚನೆಯನ್ನು ಸಾರಾಸಗಟಾಗಿ ತಿರಸ್ಕರಿಸುವ ಮಾತುಗಳನ್ನು ಆಡುತ್ತಿದೆ! ಇದು ವಿಷಾದದ ಸಂಗತಿ.

ಸೂಕ್ಷ್ಮವೆಂದು ಇದರಲ್ಲಿ ಗುರುತಿಸಿರುವ ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳ 1,572 ಗ್ರಾಮಗಳಾದರೂ ಯಾವುವು? ಕಾವೇರಿ, ತುಂಗಭದ್ರಾ, ನೇತ್ರಾವತಿ, ಶರಾವತಿ, ಬೇಡ್ತಿ, ಕಾಳಿ ಸೇರಿದಂತೆ ನಾಡಿನ ಪ್ರಮುಖ ನದಿಗಳಿಗೆ ನೀರುಣಿಸುವ ಜಲಮೂಲ ಹಾಗೂ ಜಲಾನಯನ ಪ್ರದೇಶಗಳವು. ಇತ್ತೀಚೆಗೆ ಹೆಚ್ಚಿರುವ ಮುಂಗಾರಿನ ನೆರೆ ಹಾಗೂ ಬೇಸಿಗೆಯ ನದಿನೀರಿನ ಕೊರತೆಯು ಈ ಪ್ರದೇಶಗಳು ನಾಶವಾಗುತ್ತಿರುವುದರಿಂದಲೇ ಘಟಿಸುತ್ತಿರುವುದು. ಇಲ್ಲಿನ ಕಾಡು ಛಿದ್ರವಾಗುತ್ತಿರುವುದರಿಂದಲೇ ವನ್ಯಪ್ರಾಣಿಗಳು ಕೃಷಿಜಮೀನಿಗೆ ದಾಳಿಯಿಡುತ್ತಿರುವುದು. ಅಳಿದುಳಿದ ನೈಸರ್ಗಿಕ ಪ್ರದೇಶಗಳನ್ನಾದರೂ ಈಗ ರಕ್ಷಿಸದಿದ್ದರೆ, ನದಿಮೂಲಗಳು ಬತ್ತಬಹುದು; ವನ್ಯಪ್ರಾಣಿ-ಮಾನವ ಸಂಘರ್ಷ ಇನ್ನಷ್ಟು ಹೆಚ್ಚಾಗಬಹುದು!

ಒಂದು ದಶಕದಿಂದ ಮಲೆನಾಡಿನಲ್ಲಿ ಭಾರಿ ಭೂಕುಸಿತಗಳಾಗುತ್ತಿವೆ. ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ ಹಾಗೂ 'ಇಸ್ರೊ'ದ ಅಧ್ಯಯನಗಳು ನಿರೂಪಿಸಿರುವಂತೆ, ಈ ಭಾರಿ ಭೂಕುಸಿತಗಳೆಲ್ಲ ಸಂಭವಿಸುತ್ತಿರುವುದು ಈಗ ಗುರುತಿಸಿರುವ ಸೂಕ್ಷ್ಮಪ್ರದೇಶಗಳಲ್ಲೇ! ಇವನ್ನು ವ್ಯವಸ್ಥಿತವಾಗಿ ನಿರ್ವಹಿಸದಿದ್ದಲ್ಲಿ, ಭವಿಷ್ಯದಲ್ಲಿ ಭೂಕುಸಿತಗಳು ಇನ್ನಷ್ಟು ಹೆಚ್ಚಬಹುದೆಂದು ಭೂಗರ್ಭಶಾಸ್ತ್ರಜ್ಞರು ಎಚ್ಚರಿಸುತ್ತಿದ್ದಾರೆ. ಹೀಗಾಗಿ, ಸಹ್ಯಾದ್ರಿಗೆ ಸೂಕ್ತ ನೆಲ- ಜಲ ಬಳಕೆ ನೀತಿ ಹಾಗೂ ಜನಸಹಭಾಗಿತ್ವದ ಸಂರಕ್ಷಣಾ ಸೂತ್ರಗಳ ಜರೂರತ್ತಿದೆ. ಈ ದಿಸೆಯಲ್ಲಿ ಕೆಲವು ವಿಧಿ- ನಿಷೇಧಗಳನ್ನಷ್ಟೇ ಈ ಅಧಿಸೂಚನೆಯಲ್ಲಿ ಸೂಚಿಸಲಾಗಿದೆ. ನಗರೀಕರಣ ಹಾಗೂ ಕೈಗಾರಿಕೆಗಳನ್ನು ಶಿಸ್ತಿಗೆ ಒಳಪಡಿಸುವ ಸಲಹೆಗಳಿವೆ. ಅಪಾಯಕಾರಿಯಾಗಿ ನೀರು ಹಾಗೂ ಮಣ್ಣನ್ನು ಮಾಲಿನ್ಯಗೊಳಿಸುವ 'ಕೆಂಪು ವರ್ಗ'ದ ಭಾರಿ ಕೈಗಾರಿಕೆಗಳು ಹಾಗೂ ಗಣಿಗಳನ್ನು ಮಾತ್ರ ನಿಷೇಧಿಸುವ ಪ್ರಸ್ತಾವವಿದೆ. ಸಾಮೂಹಿಕ ಭವಿಷ್ಯದ ಹಿತಕ್ಕಾಗಿ ಅಂಥ ಕನಿಷ್ಠ ಶಿಸ್ತನ್ನು ಅನುಸರಿಸಲೇಬೇಕಾದ ಕಾಲಬಂದಿದೆ ತಾನೇ?

ಇಷ್ಟಕ್ಕೂ ಇದು ಕರಡು. ಆಕ್ಷೇಪಗಳಿದ್ದಲ್ಲಿ ಅವನ್ನು ಚರ್ಚಿಸಿ, ಅಂತಿಮ ಅದೇಶದಲ್ಲಿ ಸೂಕ್ತ ಬದಲಾವಣೆ ತರುವ ಅವಕಾಶ ರಾಜ್ಯ ಸರ್ಕಾರಕ್ಕಿದೆ. ಹೀಗಾಗಿ, ಈ ಮಹತ್ವದ ಸಂರಕ್ಷಣಾ ಸೂತ್ರಗಳನ್ನು ತಿರಸ್ಕರಿಸುವ ಆತುರದ ಹಾಗೂ ರಾಜಕೀಯಪ್ರೇರಿತ ನಿರ್ಧಾರವನ್ನು ಸರ್ಕಾರ ಕೈಬಿಡಬೇಕಿದೆ. ಈ ವರದಿಯನ್ನು ಕನ್ನಡಕ್ಕೆ ಭಾಷಾಂತರಿಸಿ ಜನರ ಕೈಗಿಡಬೇಕಿದೆ. ಗ್ರಾಮಮಟ್ಟದಲ್ಲಿ ಎಲ್ಲ ಭಾಗಿದಾರರೊಂದಿಗೆ ಮುಕ್ತ ಸಮಾಲೋಚನೆ ನಡೆಸುವ ಅವಕಾಶಗಳನ್ನೂ ಸರ್ಕಾರ ತೆರೆದಿಡಬೇಕು. ಜನಪ್ರತಿನಿಧಿಗಳು ಪ್ರಾಮಾಣಿಕವಾಗಿ ಈ ಪ್ರಕ್ರಿಯೆಗೆ ತೆರೆದುಕೊಂಡರೆ, ಸಹ್ಯಾದ್ರಿಯನ್ನು ಸಂರಕ್ಷಿಸುತ್ತಲೇ ಅಭಿವೃದ್ಧಿ ಸಾಧಿಸುವ ಮಾರ್ಗಗಳು ತೋಚಬಲ್ಲವು. ಇಲ್ಲಿಯ ವಿಶಿಷ್ಟ ಅರಣ್ಯಕೃಷಿ, ಕೃಷಿ-ತೋಟಗಾರಿಕೆ, ಮೀನುಗಾರಿಕೆ, ಹೈನುಗಾರಿಕೆ, ಜೇನುಸಾಕಣೆ, ಔಷಧಿಮೂಲಿಕೆಗಳ ಮೌಲ್ಯವರ್ಧನೆ- ಇವೆಲ್ಲ, ಸುಸ್ಥಿರ ಆರ್ಥಿಕ ಅಭಿವೃದ್ಧಿಯ ಅವಕಾಶಗಳೆಂಬುದು ಅರಿವಾಗಬಲ್ಲದು.

ನಾಡಿನ ಜೀವನಾಡಿಯಾದ ಸಹ್ಯಾದ್ರಿಯ ಸಂರಕ್ಷಣೆಗಾಗಿ ದೀರ್ಘಕಾಲದಿಂದ ನಡೆಯುತ್ತಿರುವ ಪ್ರಯತ್ನಗಳು ಈಗ ನಿರ್ಣಾಯಕ ಘಟ್ಟ ತಲುಪಿರುವಂತಿದೆ. ಈ ಕರಡು ಅಧಿಸೂಚನೆಯ ಆಶಯಗಳನ್ನು ಸರ್ಕಾರವು ಒಪ್ಪಿದರೆ, ಬಹುಜನರ ಭವಿಷ್ಯವನ್ನು ರಕ್ಷಿಸಿದ ಹಾಗೆ. ಬದಲಾಗಿ, ಕೆಲವೇ ಕೆಲವು ಸ್ವಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಈ ಅಧಿಸೂಚನೆಯನ್ನು ಧಿಕ್ಕರಿಸಿದರೆ, ಮತ್ತಷ್ಟು ನೆರೆ- ಬರ, ಭೂಕುಸಿತ, ಮೇಲ್ಮಣ್ಣು ಸವೆತದಿಂದಾಗಿ ಕೃಷಿ ಉತ್ಪಾದನೆಯ ನಷ್ಟ ಇತ್ಯಾದಿ ದೌರ್ಭಾಗ್ಯಗಳಿಗೆ ಕೋಟೆಬಾಗಿಲು ತೆರೆದಹಾಗೆ!

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ

ಹೊಸ ಹೊಸ ಸ್ಪರ್ಧೆ!

• ಬಿ.ಎನ್.ಮಲ್ಲೇಶ್

'ರೀ... ಕಾಮನ್‌ವೆಲ್ತ್ ಕ್ರೀಡಾಕೂಟ ಶುರುವಾಗೇತಲ್ಲ, ನಮ್ಮೋರು ಪದಕ ಗೆಲ್ತಾರೆ ಅಂತೀರಾ?'

'ಗೆದ್ದೇ ಗೆಲ್ತಾರೆ, ಈ ಸಲ ಪದಕಪಟ್ಟೀಲಿ ನಾವೇ ಟಾಪಲ್ಲಿರ್ತೀವಿ ನೋಡ್ತಿರು...'

'ಕರೆಕ್ಟ್, ಅದಕ್ಕೆ ಕಾರಣ ನಾವು... ಮಹಿಳೆಯರು, ನಾವೇ ಜಾಸ್ತಿ ಪದಕ ಗೆಲ್ಲೋದು...'

'ಯಾಕೋ... ನಾವು ಪುರುಷರು ಏನ್ ಕಮ್ಮಿ?'

'ಪುರುಷರಿಗೆ ಬೇರೆ ಬೇರೆ ಸ್ಪರ್ಧೆ ಇಟ್ಟಿದ್ರೆ ಪದಕ ಗೆಲ್ತಿದ್ರು ಅನ್ಸುತ್ತೆ...'

'ಬೇರೆ ಸ್ಪರ್ಧೆನಾ? ಯಾವವು?'

'ದುಡ್ಡು ಹೊಡಿಯೋ ಸ್ಪರ್ಧೆ, ಹೊಡೆದ ದುಡ್ಡನ್ನ ಎಲ್ಲೆಲ್ಲಿ ಬಚ್ಚಿಡಬಹುದು ಅನ್ನೋ ಸ್ಪರ್ಧೆ, ಪಕ್ಷದಿಂದ ಪಕ್ಷಕ್ಕೆ ಹಾರೋ ಸ್ಪರ್ಧೆ, ಮಂತ್ರಿಗಿರಿಗೆ ಲಾಬಿ ಮಾಡೋ ಸ್ಪರ್ಧೆ, ದೇಶ ಬಿಟ್ಟು ಪರಾರಿ ಆಗೋ ಸ್ಪರ್ಧೆ...'

'ಅದಕ್ಕೆಲ್ಲ ಹೆಂಡ್ತೀರು ಕೂಡಾ ಕಾರಣ ಅಲ್ವೇ, ನಿಮ್ಮ ನೂರೆಂಟು ಆಸೆ ಪೂರೈಸೋಕೆ ಗಂಡಸರು ದುಡ್ಡು ಹೊಡೀತಾರೆ... ನಿಮಗೂ ಹೊಸ ಹೊಸ ಸ್ಪರ್ಧೆ ಇಟ್ಟಿದ್ರೆ ಎಲ್ಲ ಪದಕ ನೀವೇ ಗೆಲ್ತಿದ್ರಿ..'

'ಹೊಸ ಸ್ಪರ್ಧೆನಾ? ಯಾವವು?'

'ಅಡುಗೆ ಮನೇಲಿ ಪಾತ್ರೆ ಬಿಸಾಕೋ ಸ್ಪರ್ಧೆ, ಮಾತು ಮಾತಿಗೆ ಕಣ್ಣೀರು ಹಾಕೋ ಸ್ಪರ್ಧೆ, ಗಂಟೆಗಟ್ಲೆ ಮೇಕಪ್ ಮಾಡ್ಕಳೋ ಸ್ಪರ್ಧೆ, ದಿನಗಟ್ಲೆ ಸೀರೆ ಆರಿಸೋ ಸ್ಪರ್ಧೆ... ಇತ್ಯಾದಿ'

'ಹಾ... ನೆನಪು ಮಾಡಿದ್ದು ಛಲೋ ಆತು, ಹೊಸ ಸೀರೆ ಯಾವಾಗ ಕೊಡಿಸ್ತೀರಾ?'

'ಸೀರೆನಾ? ಅಲ್ಲಿ ಅಡುಗೆ ಮನೇಲಿ ಏನೋ ಸೀದ ವಾಸನೆ ಬರ್ತಿದೆ ನೋಡು...'

ಗಂಡನ ಜಾಣತನಕ್ಕೆ ಹೆಂಡತಿಗೂ ನಗು ಬಂತು.

ಸಂಗತ

ಹತ್ಯೆಗಳಿಗೆ ತಾರ್ಕಿಕ ಅಂತ್ಯ?

ಎಲ್ಲ ರೀತಿಯ ಸಮಾಜಘಾತುಕ ಶಕ್ತಿಗಳನ್ನು ನಿಯಂತ್ರಿಸಲು ನಾಗರಿಕರ ನಡುವೆ ಜಾಗೃತಿ ಮೂಡಿಸುವ ಕೆಲಸ ಆಗಬೇಕು

• ನಾ. ದಿವಾಕರ

ಸಮಾಜದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದೆಂದರೆ ಮೇಲ್ನೋಟಕ್ಕೆ ಮಾತ್ರ ಶಾಂತಿಯುತ ವಾತಾವರಣ ಕಾಪಾಡುವುದು ಅಲ್ಲ. ನಿತ್ಯ ಜೀವನದಲ್ಲಿ ಸಮಾಜವು ಸದಾ ಶಾಂತಿಯುತವಾಗಿಯೇ ಕಾಣುತ್ತದೆ. ಜನರ ನಿತ್ಯದ ಬದುಕಿನ ಜಂಜಾಟಗಳ ನಡುವೆ ಏರ್ಪಡುವ ಜಗಳ, ವಾಗ್ವಾದ, ಕಚ್ಚಾಟಗಳು ಸಾಮಾಜಿಕ ಜೀವನದ ಒಂದು ಭಾಗವಾಗಿ ನಡೆಯುತ್ತಲೇ ಇರುತ್ತವೆ. ವ್ಯಕ್ತಿಗತ ನೆಲೆಯಲ್ಲಿ, ಕೌಟುಂಬಿಕ ನೆಲೆಯಲ್ಲಿ ನಡೆಯುವ ಈ ವ್ಯಾಜ್ಯಗಳು ಸಮಾಜದ ಶಾಂತಿಯನ್ನೇನೂ ಕದಡುವುದಿಲ್ಲ.

ಈ ದೃಷ್ಟಿಯಿಂದ ನೋಡಿದಾಗ ನಮ್ಮ ಸಮಾಜ ಎಷ್ಟು ಶಾಂತಿಯುತವಾಗಿದೆ ಎಂದು ಭಾಸವಾದರೂ ಅಚ್ಚರಿಯೇನಿಲ್ಲ. ಸರ್ಕಾರ ಸಹ ತಾನು ಕಾನೂನು ಸುವ್ಯವಸ್ಥೆಯನ್ನು ನಿರ್ವಹಣೆ ಮಾಡುತ್ತಿರುವ ವಿಧಾನದ ಬಗ್ಗೆ ಸಮಾಧಾನದಿಂದ ಇರಲು ಸಾಧ್ಯ. ಆದರೆ, ರಾಜ್ಯದಲ್ಲಿ ರಾಜಕೀಯ ಕಾರಣಗಳಿಗಾಗಿ, ಸೈದ್ಧಾಂತಿಕ ಕಾರಣಗಳಿಗಾಗಿ ಯುವಕರ ಹತ್ಯೆಗಳು ಆಗಾಗ ನಡೆಯುತ್ತಿವೆ ಎಂದಾದರೆ, ಅಂತಹ ಹತ್ಯೆಗಳ ನಂತರದಲ್ಲಿ ಸಮುದಾಯಗಳ ನಡುವೆ ಬಿಗುವಿನ ವಾತಾವರಣ ನಿರ್ಮಾಣ ಆಗುತ್ತದೆ ಎಂದಾದಲ್ಲಿ ಸರ್ಕಾರ ಮತ್ತು ಸಮಾಜ ಎಚ್ಚೆತ್ತುಕೊಳ್ಳಬೇಕಾಗುತ್ತದೆ.

ಕೊಲೆಗೆ ಕಾರಣ ಏನೇ ಇರಲಿ, ಸಮಾಜದಲ್ಲಿ ಕೊಲೆ ಮಾಡುವಂತಹ ವಾತಾವರಣ ಹೆಚ್ಚಾಗುತ್ತಿದೆ ಎಂದರೆ ಅದು ಪ್ರಜ್ಞಾವಂತರನ್ನು ಮತ್ತು ಸರ್ಕಾರವನ್ನು ಎಚ್ಚರಿಸಬೇಕಾದ ಸಂಗತಿ. ಸುಳ್ಯ ಬಳಿಯ ಬೆಳ್ಳಾರೆಯಲ್ಲಿ ಪ್ರವೀಣ್ ನೆಟ್ಟಾರು ಎಂಬ ಯುವಕನ ಹತ್ಯೆಯಾಗಿದೆ. ಪ್ರವೀಣ್ ಬಿಜೆಪಿ ಕಾರ್ಯಕರ್ತ ಕೂಡ ಆಗಿದ್ದ. ಅವರ ಹತ್ಯೆಯು ರಾಜ್ಯದಾದ್ಯಂತ ಸಂಚಲನ ಮೂಡಿಸಿದೆ. ಕೆಲವೇ ದಿನಗಳ ಹಿಂದೆ ಇದೇ ಪ್ರದೇಶದಲ್ಲಿ ಮಸೂದ್ ಎಂಬ ವ್ಯಕ್ತಿಯ ಹತ್ಯೆಯಾಗಿತ್ತು.

ನಮ್ಮ ಸಾರ್ವಜನಿಕ ಪ್ರಜ್ಞೆ ಎಷ್ಟು ಕಲುಷಿತವಾಗಿದೆ ಎಂದರೆ ರಾಜಕೀಯ ಸಿದ್ಧಾಂತ, ಮತೀಯ ಅಸ್ಮಿತೆ ಅಥವಾ ಜಾತಿ ಅಸ್ಮಿತೆಗಳನ್ನು ಹೊತ್ತ ಹತ್ಯೆಗಳು ಮಾತ್ರವೇ ನಮ್ಮನ್ನು ಚಿಂತೆಗೆ ನೂಕುತ್ತವೆ. ಇದರಿಂದ ಆಚೆಗಿನ ಹತ್ಯೆಗಳು ನಮ್ಮನ್ನು ಹೆಚ್ಚಾಗಿ ಕಾಡುವುದಿಲ್ಲ.

ಹಂತಕರು ಯಾರು, ಹತ್ಯೆಗೀಡಾದವರು ಯಾರು ಎಂಬ ಪ್ರಶ್ನೆ ಎದುರಾದ ಕೂಡಲೇ ಯಾವುದೋ ಒಂದು ಅಸ್ಮಿತೆ ನಮ್ಮ ಆಲೋಚನೆ, ಮಾತುಕತೆಗಳ ಕೇಂದ್ರಬಿಂದುವಾಗಿ ಬರುತ್ತದೆ. ಹತ್ಯೆಯ ಹಿಂದಿನ ಕಾರಣ, ಹಂತಕನ ಹಿನ್ನೆಲೆ, ಹತ್ಯೆಗೀಡಾದವರ ಹಿನ್ನೆಲೆ ಎಲ್ಲವೂ ಈ ಅಸ್ಮಿತೆಗಳ ಚೌಕಟ್ಟಿನಲ್ಲೇ ನಿಷ್ಕರ್ಷೆಗೆ ಒಳಗಾಗುತ್ತವೆ. ಮತ ದ್ವೇಷ, ಜಾತಿ ದ್ವೇಷ, ಜಾತಿ ಶ್ರೇಷ್ಠತೆ, ಮತಾಂಧತೆ ಈ ಎಲ್ಲ ಅವಗುಣಗಳು ಯುವಜನರ ಮನಸ್ಸುಗಳಲ್ಲಿ ಉದ್ದೀಪನಗೊಳಿಸುವ ಉನ್ಮಾದ ಬಹಳ ಅಪಾಯಕಾರಿ. ಇಂತಹ ಉನ್ಮಾದವನ್ನು ಪ್ರಚೋದಿಸುವ ಅಂಶಗಳು ಯುವಕರ ಮನಸ್ಸನ್ನು ವ್ಯವಸ್ಥಿತವಾಗಿ ಆವರಿಸುತ್ತಿದ್ದು, ಯಾರದೋ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ, ಅವ್ಯಕ್ತ ಗುರಿಯನ್ನು ತಲುಪುವ ಸಲುವಾಗಿ ಯುವ ಪೀಳಿಗೆಯು ಹಿಂಸಾತ್ಮಕ ಮಾರ್ಗ ಹಿಡಿಯುತ್ತಿದೆ.

ಬೆಳ್ಳಾರೆಯ ಪ್ರವೀಣ್ ಮತ್ತು ಮಸೂದ್ ಇಬ್ಬರೂ ಇಂತಹುದೇ ಉನ್ಮಾದದ ಬಲಿಪಶುಗಳೇ? ತನಿಖೆಯಿಂದ ಇದು ಗೊತ್ತಾಗಬೇಕು. ಇವರಂತೆಯೇ ಕಳೆದ ಮೂರ್ನಾಲ್ಕು ತಿಂಗಳಲ್ಲಿ ಹಲವು ಯುವಕರು ಪ್ರಾಣ ತೆತ್ತಿದ್ದಾರೆ. ಪ್ರತೀ ಸಲ ಹತ್ಯೆ ಸಂಭವಿಸಿದಾಗಲೂ, ಸರ್ಕಾರದ ವಕ್ತಾರರು 'ಉಗ್ರ ಕ್ರಮ ಕೈಗೊಳ್ಳುತ್ತೇವೆ, ಆರೋಪಿಗಳು ಎಲ್ಲೇ ಇದ್ದರೂ ಬಂಧಿಸುತ್ತೇವೆ, ಶಿಕ್ಷೆಗೊಳಪಡಿಸುತ್ತೇವೆ' ಎಂಬ ಮಾತು ಹೇಳುತ್ತಲೇ ಬಂದಿದ್ದಾರೆ.

ಆಡಳಿತಾರೂಢ ಪಕ್ಷದ ನಾಯಕರ ಪ್ರತಿಕ್ರಿಯೆಗಳು ಸಾಮಾನ್ಯವಾಗಿ, ಹತ್ಯೆಗೊಳಗಾದವರ ಅಸ್ಮಿತೆಗಳನ್ನು ಆಧರಿಸಿ ವ್ಯಕ್ತವಾಗುತ್ತವೆ. ವಿರೋಧ ಪಕ್ಷಗಳು ಪ್ರತಿಯೊಂದು ಪ್ರಕರಣ ವರದಿಯಾದಾಗಲೂ ಸರ್ಕಾರದ ವೈಫಲ್ಯದತ್ತ ಬೆಟ್ಟು ಮಾಡುತ್ತವೆ. ಸರ್ಕಾರವು ಈ ಹತ್ಯೆಗಳನ್ನು ನಿಗ್ರಹಿಸಲು ಅಗತ್ಯವಾದ ಕಠಿಣ ಶಾಸನಗಳ ಬಗ್ಗೆ ಚಿಂತೆ ಮಾಡುತ್ತದೆ. ಕಠಿಣ ಶಾಸನಗಳು ಅಪರಾಧಿಗಳನ್ನು ಶಿಕ್ಷಿಸಲು ಬಳಸುವ ಪ್ರಭಾವಶಾಲಿ ಸಾಧನಗಳಾದೀತೇ ವಿನಾ ಹತ್ಯೆಗಳನ್ನು, ದಾಳಿಗಳನ್ನು ನಿಯಂತ್ರಿಸಲು ನೇರವಾಗಿ ನೆರವಾಗುವುದಿಲ್ಲ. ವರದಕ್ಷಿಣೆಗೆ ಸಂಬಂಧಿಸಿದ ಕೊಲೆಗಳು, ಜಾತಿ ವೈಷಮ್ಯ ಆಧರಿಸಿದ ಹತ್ಯೆಗಳು, ಮರ್ಯಾದೆಗೇಡು ಹತ್ಯೆಗಳು, ಮತದ್ವೇಷದ ಕೊಲೆಗಳು, ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ಹತ್ಯೆಗಳು ಇವೆಲ್ಲವನ್ನೂ ನಿಯಂತ್ರಿಸುವ ಕಾನೂನು ನಮ್ಮ ನಡುವೆ ಇದ್ದರೂ ಇಂತಹ ಕೊಲೆಗಳಿಗೆ ಸಮಾಜ ಸಾಕ್ಷಿಯಾಗುತ್ತಿದೆ.

ಸಂದರ್ಭಾನುಸಾರ ವ್ಯಕ್ತವಾಗುವ ಭಾವನಾತ್ಮಕ ಸನ್ನಿವೇಶಗಳನ್ನು ಬದಿಗಿಟ್ಟು ನೋಡಿದಾಗ, ಇದೊಂದು ಸಾಮಾಜಿಕ ಸಮಸ್ಯೆ ಎಂದೇ ಗುರುತಿಸಬಹುದು. ಈ ಸಾಮಾಜಿಕ ಕ್ಷೋಭೆಯನ್ನು ನಿವಾರಿಸುವ ಬಗೆ ಹೇಗೆ? ಅಧಿಕಾರದಲ್ಲಿರುವವರನ್ನು ಮತ್ತು ಇಡೀ ರಾಜಕೀಯ ವ್ಯವಸ್ಥೆಯನ್ನು, ಪ್ರಜ್ಞಾವಂತ ಸಮಾಜವನ್ನು ಕಾಡಬೇಕಿರುವ ಪ್ರಶ್ನೆ ಇದು. ಹತ್ಯೆ ಮತ್ತು ಹಂತಕರ ಹಿಂದಿನ ಉದ್ದಿಶ್ಯಗಳನ್ನೇ ಪ್ರಧಾನವಾಗಿ ಪರಿಗಣಿಸುವುದರಿಂದ ಸಮಾಜದಲ್ಲಿ ಬೇರೂರುತ್ತಿರುವ ಪಾತಕ ಮನೋಭಾವವನ್ನು ಹೋಗಲಾಡಿಸಲಾಗುವುದಿಲ್ಲ. ಪಾತಕ ಸಾಮ್ರಾಜ್ಯವನ್ನು ವಿಸ್ತರಿಸಲು ನೆರವಾಗುತ್ತಿರುವ ಎಲ್ಲ ರೀತಿಯ ಸಮಾಜಘಾತುಕ ಶಕ್ತಿಗಳನ್ನು ನಿಯಂತ್ರಿಸಲು ನಾಗರಿಕರ ನಡುವೆ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಆಗಲೇ ಈ ಹತ್ಯೆ ಸರಣಿಗಳನ್ನು ಕೊನೆಗೊಳಿಸಲು ಸಾಧ್ಯ.

ವಾಚಕರ ವಾಣಿ

ಸಾಂಕೇತಿಕ ಮಹತ್ವ

'ಪ್ರಗತಿಗೆ ತಾಳ...' ಲೇಖನದಲ್ಲಿ (ಪ್ರ.ವಾ., ಜುಲೈ 28) ಪಟ್ಟಿ ಮಾಡಿರುವ ಸಾಧನೆಗಳ ಪೈಕಿ ಕೆಲವಕ್ಕೆ ಸಾಂಕೇತಿಕ ಮಹತ್ವ ಮಾತ್ರ ಇದೆ. ಮಹಿಳೆಯರಿಗೆ ಪ್ರತ್ಯೇಕ ಕೃಷಿ ಪ್ರಶಸ್ತಿ ಸ್ಥಾಪನೆಯೂ ಅದರಲ್ಲಿ ಒಂದು. ಇದಕ್ಕೂ ಮೊದಲು ಕೃಷಿ ಪ್ರಶಸ್ತಿಗಳನ್ನು ಮಹಿಳೆಯರಿಗೆ ಕೊಡಬಾರದು ಎಂದೇನೂ ಇರಲಿಲ್ಲ. ಸೆಕೆಂಡರಿ ಕೃಷಿ ನಿರ್ದೇಶನಾಲಯ ಇಲ್ಲಿಯವರೆಗೆ ಕಾಣುವಂತಹ ಕೆಲಸ ಮಾಡಿಲ್ಲ. ಹೊಸ ಸಂಸ್ಥೆಗಳನ್ನು ಸ್ಥಾಪಿಸುವುದು, ಪ್ರಾರಂಭದಲ್ಲಿ ಸ್ವಲ್ಪ ಹಣ ನೀಡುವುದು ಇಷ್ಟರಿಂದಲೇ ನೈಜ ಬದಲಾವಣೆ ಅಥವಾ ಅಭಿವೃದ್ಧಿ ಆಗುವ ಸಾಧ್ಯತೆ ಕಡಿಮೆ. ಉಳಿದಿರುವ ಕೆಲವು ತಿಂಗಳುಗಳಲ್ಲಿ ನಿಷ್ಠುರ ನಿರ್ಧಾರಗಳು ಸಾಧ್ಯವೇ?

ರಾಜಕೀಯವಾಗಿ ಹೇಳಬೇಕೆಂದರೆ ಬಿಜೆಪಿಯ ವರಿಷ್ಠರಿಗೆ ಇಲ್ಲಿ ಒಂದು ಸಂಭಾವಿತ ಮುಖ ಬೇಕಾಗಿತ್ತು- ಚುನಾವಣೆ ಎದುರಿಸುವವರೆಗಾದರೂ. ವರಿಷ್ಠರ ಬೆಂಬಲ ಇರುವವರೆಗೆ ಬಸವರಾಜ ಬೊಮ್ಮಾಯಿ ಸ್ಥಿರವಾಗಿರಬಲ್ಲರು. ಮುಂದಿನದನ್ನು ಪರದೆ ಮೇಲೆ ನೋಡಿಯೇ ಆನಂದಿಸಬೇಕು.

ಎಚ್‌.ಎಸ್‌. ಮಂಜುನಾಥ, ಬೆಂಗಳೂರು

ಎಲ್ಲ ಸಿದ್ಧಾಂತಗಳಿಗೂ ಮಿಗಿಲು ಮನುಷ್ಯತ್ವ

ಮತ್ತೊಂದು ಅಮಾನುಷ ಹತ್ಯೆಯಾಗಿದೆ. ಇದು ರಾಜಕೀಯಪ್ರೇರಿತವೋ, ಧರ್ಮಕಾರಣವೋ ಎಂಬ ಪ್ರಶ್ನೆ ಸದ್ಯಕ್ಕೆ ಅನಪೇಕ್ಷಿತ. ಪ್ರವೀಣ್, ಹರ್ಷ, ಟೇಲರ್ ಕನ್ಹಯ್ಯ ಲಾಲ್, ಮಸೂದ್ ಯಾರದ್ದೇ ಕೊಲೆ ಅತ್ಯಂತ ಖಂಡನೀಯ. ಮಾನವ ಕುಲ ನಾಚಿ ತಲೆ ತಗ್ಗಿಸುವಂಥದು. ರಾಜಕೀಯ ಪಕ್ಷಗಳು, ಯಾವುದೇ ಸಿದ್ಧಾಂತಕ್ಕೆ ಅಂಟಿಕೊಂಡವರು ಎಲ್ಲ ಸಿದ್ಧಾಂತಗಳಿಗೂ ಮಿಗಿಲಾದುದು ಮನುಷ್ಯತ್ವ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಔಚಿತ್ಯಪೂರ್ಣವಾದುದು. ಅದು ಇಂದಿನ ಅಗತ್ಯ ಕೂಡ.

ಹಂತಕರು ಯಾರೇ ಇದ್ದರೂ, ಯಾವ ಧರ್ಮ, ಜಾತಿ, ಪಂಗಡ, ಪಕ್ಷಕ್ಕೆ ಸೇರಿದ್ದರೂ ಅವರಿಗೆ ಉಗ್ರ ಶಿಕ್ಷೆಯಾಗಲೇಬೇಕು. ಕಾನೂನು ಈ ದಿಸೆಯಲ್ಲಿ ತನ್ನ ಮಹತ್ವದ ಪಾತ್ರ ವಹಿಸುವುದು ತುಂಬಾ ಮುಖ್ಯ. ಇದು ಕಾನೂನಿನ ಮೇಲೆ ಜನರಿಟ್ಟಿರುವ ಅಪಾರ ನಂಬಿಕೆಯನ್ನು ದೃಢೀಕರಿಸಬಲ್ಲದು.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ಬಿಎಸ್‌ಎನ್‌ಎಲ್: ವೈಭವ ಮರುಕಳಿಸುವುದೇ?

ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಆರೋಗ್ಯ ಕೆಟ್ಟಿದೆ. ಈ ಸಂಸ್ಥೆಯ ಪುನಶ್ಚೇತನಕ್ಕೆ ರೂಪಿಸಿರುವ ₹ 1.64 ಲಕ್ಷ ಕೋಟಿ ಮೊತ್ತದ ಪ್ಯಾಕೇಜ್‌ಗೆ ಇದೀಗ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿರುವುದು ಸಂಸ್ಥೆಯ ಭವಿಷ್ಯದ ಬಗ್ಗೆ ತುಸು ಭರವಸೆ ಮೂಡಿಸಿದೆ. ಸೇವೆ ಒದಗಿಸುವಲ್ಲಿನ ಅದಕ್ಷತೆ, ಸರ್ಕಾರದ ನಿರ್ಲಕ್ಷ್ಯ ಸೇರಿದಂತೆ ಹಲವು ಕಾರಣಗಳಿಂದ ಬಿಎಸ್‌ಎನ್‌ಎಲ್ ಸೊರಗಿದೆ. ಸಾವಿರಾರು ನೌಕರರು ಸ್ವಯಂ ನಿವೃತ್ತಿ ಪಡೆದಿದ್ದಾರೆ. ಗ್ರಾಹಕರು ವಿಶ್ವಾಸ ಕಳೆದುಕೊಂಡಿದ್ದಾರೆ. ಈ ಪ್ಯಾಕೇಜ್‌ನಿಂದ ಪುನಶ್ಚೇತನ ಸಾಧ್ಯವಾದರೆ ಗ್ರಾಹಕರ ವಿಶ್ವಾಸ ಪುನಃ ಗಳಿಸಬಹುದು. ಆದರೆ, ಇದಕ್ಕೆ ಇಚ್ಛಾಶಕ್ತಿ ಬೇಕು. ನೌಕರರು ಅಂತಹ ಬದ್ಧತೆ ತೋರಿದರೆ, ಸರ್ಕಾರವು ಅವರಿಗೆ ಬೆಂಬಲವಾಗಿ ನಿಂತರೆ ಗತವೈಭವ ಮತ್ತೆ ಮರುಕಳಿಸಬಹುದೋನೋ!

ರಾಸುಮ ಭಟ್, ಚಿಕ್ಕಮಗಳೂರು

ಮುಟ್ಟಿನ ಕುರಿತು ಮೂಢನಂಬಿಕೆ ಸಲ್ಲ

ಮಹಾರಾಷ್ಟ್ರದ ನಾಸಿಕ್‌ನಲ್ಲಿ ವಿದ್ಯಾರ್ಥಿನಿಯರು ಮುಟ್ಟಾಗಿದ್ದ ಕಾರಣಕ್ಕೆ ಶಿಕ್ಷಕರೊಬ್ಬರು ಶಾಲಾ ಆವರಣದಲ್ಲಿ ಗಿಡ ನೆಡಲು ಅವಕಾಶ ನೀಡದಿರುವ ಕುರಿತು ಮಾಧ್ಯಮಗಳಲ್ಲಿ ವರದಿಯಾಗಿದೆ. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸಬೇಕಾದ ಶಿಕ್ಷಕರಲ್ಲೇ ಇಂಥ ಮೂಢನಂಬಿಕೆ ಇರುವುದು ವಿಷಾದನೀಯ.

ಮುಟ್ಟಾಗಿರುವವರು ಗಿಡ ನೆಟ್ಟರೆ ಅದು ಬೆಳೆಯುವುದಿಲ್ಲ, ಉಪ್ಪಿನಕಾಯಿ ಭರಣಿ ಮುಟ್ಟಿದರೆ ಹಾಳಾಗುತ್ತದೆ, ದೇವರ ಪೂಜೆ ಮಾಡಿದರೆ ದೇವರ ಶಾಪಕ್ಕೆ ಗುರಿಯಾಗಬೇಕಾಗುತ್ತದೆ ಎಂಬೆಲ್ಲಾ ಮೂಢನಂಬಿಕೆಗಳು ಸಮಾಜದಲ್ಲಿ ಹಾಸುಹೊಕ್ಕಾಗಿವೆ. ಸಂತಾನೋತ್ಪತ್ತಿ ಕ್ರಿಯೆಗಾಗಿ ಪ್ರಕೃತಿ ನೀಡಿರುವ ವರದಾನವನ್ನು ಈ ರೀತಿಯ ಮೂಢನಂಬಿಕೆಗಳ ಹೆಸರಲ್ಲಿ ಹೆಣ್ಣುಮಕ್ಕಳನ್ನು ಮಾನಸಿಕವಾಗಿ ಕುಗ್ಗಿಸುವಂಥದ್ದು ಸರಿಯಲ್ಲ. ಶಾಲಾ– ಕಾಲೇಜುಗಳಲ್ಲಿ ಈ ಬಗ್ಗೆ ವೈಜ್ಞಾನಿಕವಾಗಿ ತಿಳಿವಳಿಕೆ ಮೂಡಿಸುವ ಅಗತ್ಯವಿದೆ.

ಕಾವ್ಯಶ್ರೀ ನಾಯಕ್, ಮುಂಬೈ

ಅಪೌಷ್ಟಿಕತೆ ನಿವಾರಣೆಯು ಆದ್ಯತೆಯಾಗಲಿ

ಒಂದರಿಂದ ಐದನೇ ತರಗತಿಯವರೆಗೆ ಮಕ್ಕಳಿಗೆ ಬೆಳಗಿನ ತಿಂಡಿಯನ್ನು ಉಚಿತವಾಗಿ ಪೂರೈಸಲು ತಮಿಳುನಾಡು ಸರ್ಕಾರ ನಿರ್ಧರಿಸಿರುವುದು ಸ್ವಾಗತಾರ್ಹ. ಮಕ್ಕಳಲ್ಲಿನ ಅಪೌಷ್ಟಿಕತೆ ನಿವಾರಣೆಗೆ ಇದೊಂದು ಒಳ್ಳೆಯ ಉಪಕ್ರಮ. ಶಾಲಾ ಹಾಜರಾತಿ ಹೆಚ್ಚಳಕ್ಕೂ ಸಹಕಾರಿ. ಎಂ.ಕೆ. ಸ್ಟಾಲಿನ್ ನೇತೃತ್ವದ ಸರ್ಕಾರದ ಈ ನಡೆ ಅನುಕರಣೀಯ.

ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ಆದರೆ ಹಸಿವು ಮತ್ತು ಅಪೌಷ್ಟಿಕತೆಯಂತಹ ಸಮಸ್ಯೆಗಳಿಂದ ಮುಕ್ತಿ ಪಡೆಯಲು ನಮಗೆ ಇನ್ನೂ ಸಾಧ್ಯವಾಗಿಲ್ಲ. ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ನಮ್ಮ ಸ್ಥಾನ ಶೋಚನೀಯವಾಗಿದೆ. ಅಪೌಷ್ಟಿಕತೆ ನಿವಾರಣೆಯು ಆದ್ಯತೆಯ ಕೆಲಸ ಆಗಬೇಕು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗಬಹುದಾದ ಯಾವುದೇ ಉಪಕ್ರಮವನ್ನು ಪಕ್ಷಭೇದವಿಲ್ಲದೆ ಎಲ್ಲರೂ ಸ್ವಾಗತಿಸಬೇಕು.

ಉಮೇಶ ತಳವಾರ, ಬೆಳಗಾವಿ

ಮಹಾರಾಷ್ಟ್ರದ ಹುನ್ನಾರ: ಇರಲಿ ಎಚ್ಚರ

ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯವು ಕರ್ನಾಟಕದ ಕೆಲವು ಗಡಿ ಗ್ರಾಮಗಳ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಮುಂದಾಗಿರುವ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ನಮ್ಮ ಸರ್ಕಾರಕ್ಕೆ ಪತ್ರ ಬರೆದು ಎಚ್ಚರಿಸಿದ್ದಾರೆ. ಗಡಿ ತಂಟೆಗೆ ಸಾಕ್ಷ್ಯವಾಗಿ ಇದನ್ನು ಬಳಸಿಕೊಳ್ಳುವುದು ಮಹಾರಾಷ್ಟ್ರದ ಹುನ್ನಾರ ಎಂದು ಅವರು ಹೇಳಿದ್ದಾರೆ. ಇದನ್ನು ನಮ್ಮ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು.

ಅಶೋಕರಾವ ಪಾಟೀಲ, ನಿಪ್ಪಾಣಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿಶ್ವ ಹುಲಿ ದಿನ ಇಂದು

ಪ್ರತಿ ವರ್ಷ ಜುಲೈ 29ರಂದು 'ವಿಶ್ವ ಹುಲಿ ದಿನ' ಆಚರಿಸಲಾಗುತ್ತದೆ. 20ನೇ ಶತಮಾನದ ಆರಂಭದಲ್ಲಿ ವಿಶ್ವದಾದ್ಯಂತ 1 ಲಕ್ಷಕ್ಕೂ ಹೆಚ್ಚು ಹುಲಿಗಳು ಇದ್ದವು. ಆದರೆ 21ನೇ ಶತಮಾನದ ವೇಳೆಗೆ ಅವುಗಳ ಸಂಖ್ಯೆ 4,000ಕ್ಕಿಂತ ಕಡಿಮೆಯಾಗಿತ್ತು. ಹುಲಿಗಳ ಸಂರಕ್ಷಣೆಯ ಮಹತ್ವವನ್ನು ಸಾರುವ ಮತ್ತು ಹುಲಿಗಳನ್ನು ಸಂರಕ್ಷಿಸುವ ಉದ್ದೇಶದಿಂದ 2010ರಲ್ಲಿ ವಿಶ್ವ ಹುಲಿ ದಿನವನ್ನು ಮೊದಲ ಬಾರಿಗೆ ಆಚರಿಸಲಾಯಿತು. ಹನ್ನೆರಡನೆಯ ವಿಶ್ವ ಹುಲಿ ದಿನದ ಸಂದರ್ಭದಲ್ಲಿ, ವಿಶ್ವದಲ್ಲಿನ ಹುಲಿ ಪ್ರಭೇದಗಳತ್ತ ಒಂದು ನೋಟ

ಕ್ಯಾಸ್ಪಿಯಾ ಪ್ರದೇಶದ ಹುಲಿ

8-11 ಅಡಿ ಮೂಗಿನಿಂದ ಬಾಲದ ತುದಿವರೆಗಿನ ಸರಾಸರಿ ಉದ್ದ

160-250 ಕೆ.ಜಿ. ಸರಾಸರಿ ತೂಕ

ಆವಾಸ: ಅಫ್ಗಾನಿಸ್ತಾನ, ಇರಾನ್, ಟರ್ಕಿಯ ಕಾಡುಗಳಲ್ಲಿ ಇದ್ದವು

- ಕ್ಯಾಸ್ಪಿಯಾ ಪ್ರದೇಶದ ಹುಲಿಗಳು ಬದುಕಿದ್ದಾಗ, ಬೇರೆಲ್ಲಾ ಹುಲಿಗಳಿಗಿಂತ ದೊಡ್ಡ ಗಾತ್ರದವು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದವು. ಮೂಗಿನ ತುದಿಯಿಂದ ಬಾಲದ ತುದಿಯವರೆಗೆ 11.8 ಅಡಿ ಉದ್ದವಿದ್ದ ಹುಲಿಯೊಂದನ್ನು 20ನೇ ಶತಮಾನದ ಆರಂಭದಲ್ಲಿ ಗುರುತಿಸಲಾಗಿತ್ತು. ಇವುಗಳ ಬಣ್ಣ ಬೂದಾಗಿದ್ದ ಕಾರಣ ಇವುಗಳನ್ನು ಬೂದು ಹುಲಿಗಳು ಎಂದೂ ಕರೆಯಲಾಗುತ್ತಿತ್ತು. ಬೇಟೆಯ ಕಾರಣದಿಂದಲೇ ಇವು ಸಂಪೂರ್ಣವಾಗಿ ನಾಮಾವಶೇಷವಾಗಿವೆ

ಮಲಯ ಹುಲಿ

7-9 ಅಡಿ ಮೂಗಿನಿಂದ ಬಾಲದ ತುದಿವರೆಗಿನ ಸರಾಸರಿ ಉದ್ದ

100-130 ಕೆ.ಜಿ. ಸರಾಸರಿ ತೂಕ

200ಕ್ಕಿಂತ ಕಡಿಮೆ ಹುಲಿಗಳು ಉಳಿದಿವೆ ಎಂದು ಅಂದಾಜಿಸಲಾಗಿದೆ

ಆವಾಸ: ದಕ್ಷಿಣ ಮ್ಯಾನ್ಮಾರ್, ಮಲೇಷ್ಯಾ, ದಕ್ಷಿಣ ಥಾಯ್ಲೆಂಡ್

- ಇವು ಈಗಿನ ಹುಲಿ ಪ್ರಭೇದಗಳಲ್ಲೇ ಅತ್ಯಂತ ಸಣ್ಣ ಗಾತ್ರದ ಮತ್ತು ಕಡಿಮೆ ತೂಕದ ಹುಲಿಗಳು. ಧಾರ್ಮಿಕ ವಿಧಿವಿಧಾನಗಳು, ಆಹಾರ ಮತ್ತು ಔಷಧಿಗಾಗಿ ಇವುಗಳ ಮಾಂಸ ಮತ್ತು ದೇಹದ ಭಾಗಗಳನ್ನು ಬಳಸಲಾಗುತ್ತದೆ. ಹೀಗಾಗಿ ಇವುಗಳ ಬೇಟೆ ಅವ್ಯಾಹತವಾಗಿ ನಡೆಯುತ್ತಿದೆ. ಇದರಿಂದ ಅವು ಅಳಿವಿನತ್ತ ಸಾಗುತ್ತಿವೆ

ಸುಮಾತ್ರಾ ಹುಲಿ

7-8.5 ಅಡಿ ಮೂಗಿನಿಂದ ಬಾಲದ ತುದಿವರೆಗಿನ ಸರಾಸರಿ ಉದ್ದ

100-130 ಕೆ.ಜಿ. ಸರಾಸರಿ ತೂಕ

400-600 ಹುಲಿಗಳು ಉಳಿದಿವೆ ಎಂದು ಅಂದಾಜಿಸಲಾಗಿದೆ

ಆವಾಸ: ಇಂಡೊನೇಷ್ಯಾದ ಸುಮಾತ್ರಾ ದ್ವೀಪದಲ್ಲಿ ಮಾತ್ರ ಇವೆ

- ಸುಮಾತ್ರಾ ದ್ವೀಪದಲ್ಲಿ ಮಾತ್ರ ಇವು ಇದ್ದು, ತೀರಾ ಅಪಾಯದಲ್ಲಿ ಇವೆ ಎನ್ನಲಾಗಿದೆ. ಇವುಗಳ ಬಣ್ಣ ದಟ್ಟವಾಗಿದ್ದು, ಭೀಕರವಾಗಿ ಕಾಣುತ್ತವೆ. ಆದರೆ ಇವುಗಳ ಗಾತ್ರ ಚಿಕ್ಕದು

ಇಂಡೊ–ಚೀನಾ ಹುಲಿ

8-9.5 ಅಡಿ ಮೂಗಿನಿಂದ ಬಾಲದ ತುದಿವರೆಗಿನ ಸರಾಸರಿ ಉದ್ದ

130-180 ಕೆ.ಜಿ. ಸರಾಸರಿ ತೂಕ

300-400 ಹುಲಿಗಳು ಉಳಿದಿವೆ ಎಂದು ಅಂದಾಜಿಸಲಾಗಿದೆ

ಆವಾಸ: ಆಗ್ನೇಯ ಚೀನಾ, ಮ್ಯಾನ್ಮಾರ್, ಲಾವೋಸ್, ಥಾಯ್ಲೆಂಡ್, ವಿಯೆಟ್ನಾಂ, ಕಾಂಬೋಡಿಯಾ

- ಈ ಹುಲಿಗಳಲ್ಲಿ ಪಟ್ಟೆಗಳದ್ದೇ ವಿಶೇಷ. ಇವುಗಳ ಪಟ್ಟೆಗಳು ಅತ್ಯಂತ ಸಪೂರವಾಗಿದ್ದು, ಮೊನಚಾಗಿರುತ್ತವೆ. ಜತೆಗೆ ಇವುಗಳಲ್ಲಿ ಜೋಡಿ ಪಟ್ಟೆಗಳು ಕಂಡುಬರುವುದಿಲ್ಲ

ಸೈಬೀರಿಯದ ಹುಲಿ

7-11 ಅಡಿ ಮೂಗಿನಿಂದ ಬಾಲದ ತುದಿವರೆಗಿನ ಸರಾಸರಿ ಉದ್ದ

130-200 ಕೆ.ಜಿ. ಸರಾಸರಿ ತೂಕ

600 ಹುಲಿಗಳು ಉಳಿದಿವೆ ಎಂದು ಅಂದಾಜಿಸಲಾಗಿದೆ

ಆವಾಸ: ಪೂರ್ವ ಚೀನಾ, ಕೊರಿಯಾ, ದಕ್ಷಿಣ ಪೂರ್ವ ರಷ್ಯಾ

- ಈಗ ಜಗತ್ತಿನಲ್ಲಿರುವ ಹುಲಿಗಳಲ್ಲೇ ಅತ್ಯಂತ ದೈತ್ಯ ಹುಲಿ ಎಂಬ ಹೆಗ್ಗಳಿಕೆ ಸೈಬೀರಿಯ ಹುಲಿಗಳದ್ದು. ಈಗಾಗಲೇ ನಿರ್ನಾಮವಾಗಿರುವ ಕ್ಯಾಸ್ಪಿಯಾ ಹುಲಿಗಳ ಹತ್ತಿರದ ಸಂಬಂಧಿ. 12 ಅಡಿಗೂ ಹೆಚ್ಚು ಉದ್ದದ ಹುಲಿಗಳನ್ನು ಗುರುತಿಸಲಾಗಿದೆ

ದಕ್ಷಿಣ ಚೀನಾ ಹುಲಿ

8-9 ಅಡಿ ಮೂಗಿನಿಂದ ಬಾಲದ ತುದಿವರೆಗಿನ ಸರಾಸರಿ ಉದ್ದ

110-170 ಕೆ.ಜಿ. ಸರಾಸರಿ ತೂಕ

30-40 ಹುಲಿಗಳು ಉಳಿದಿವೆ ಎಂದು ಅಂದಾಜಿಸಲಾಗಿದೆ

ಆವಾಸ: ಮಧ್ಯ ಮತ್ತು ಪೂರ್ವ ಚೀನಾ

- ಇವುಗಳು ಅಳಿವಿನ ಅಂಚಿನಲ್ಲಿರುವ ಪ್ರಭೇದದ ಹುಲಿಗಳಾಗಿವೆ. ಚೀನಾದ ಮೃಗಾಲಯಗಳಲ್ಲಿ 30–40ರಷ್ಟು ವಯಸ್ಕ ಹುಲಿಗಳು ಇವೆ ಎಂದು ಅಂದಾಜಿಸಲಾಗಿದೆ. ಅವುಗಳ ಸಹಜ ಆವಾಸದಲ್ಲಿ ಅವು ಸಂಪೂರ್ಣವಾಗಿ ನಿರ್ನಾಮವಾಗಿವೆ ಎನ್ನಲಾಗಿದೆ. ತಮ್ಮ ಸಹಜ ಪರಿಸರದಲ್ಲಿ ಬದುಕುಳಿಯುವ ಮತ್ತು ವಂಶಾಭಿವೃದ್ಧಿ ಮಾಡುವ ಸಾಮರ್ಥ್ಯ ಕ್ಷೀಣಿಸಿದೆ ಎನ್ನಲಾಗಿದೆ

ಜಾವಾ ಹುಲಿ 2

8-9 ಅಡಿ/ ಮೂಗಿನಿಂದ ಬಾಲದ ತುದಿವರೆಗಿನ ಸರಾಸರಿ ಉದ್ದ

100-130 ಕೆ.ಜಿ./ ಸರಾಸರಿ ತೂಕ

ಆವಾಸ: ಇಂಡೊನೇಷ್ಯಾದ ಜಾವಾ ದ್ವೀಪ

- ಬೇಟೆಯ ಕಾರಣದಿಂದಲೇ ಇವು ಸಂಪೂರ್ಣವಾಗಿ ನಾಮಾವಶೇಷವಾಗಿವೆ. ಈ ಪ್ರಭೇದದ ಹುಲಿಯನ್ನು ಕೊನೆಯ ಬಾರಿಗೆ ನೋಡಿದ್ದು 1970ರಲ್ಲಿ. ಈಗಲೂ ಜಾವಾದ ಕಾಡುಗಳಲ್ಲಿ ಈ ಹುಲಿಗಳು ಇವೆ ಎನ್ನಲಾಗುತ್ತದೆ, ಆದರೆ ಅದು ಸಾಬೀತಾಗಿಲ್ಲ

ಬಾಲಿ ಹುಲಿ 3

7-8 ಅಡಿ/ ಮೂಗಿನಿಂದ ಬಾಲದ ತುದಿವರೆಗಿನ ಸರಾಸರಿ ಉದ್ದ

90-100 ಕೆ.ಜಿ./ ಸರಾಸರಿ ತೂಕ

ಆವಾಸ: ಇಂಡೊನೇಷ್ಯಾದ ಬಾಲಿ ದ್ವೀಪ

- ಈ ಹುಲಿಗಳು ಬದುಕಿದ್ದಾಗ, ಬೇರೆಲ್ಲಾ ಹುಲಿಗಳಿಗಿಂತ ಸಣ್ಣದಾಗಿದ್ದವು.ಬೇಟೆಯ ಕಾರಣದಿಂದಲೇ ಇವು ಸಂಪೂರ್ಣವಾಗಿ ನಾಮಾವಶೇಷವಾಗಿವೆ. ಇಂಡೊನೇಷ್ಯಾದ ಜನಪದ ಕಲೆ, ಶಿಲ್ಪಕಲೆಗಳಲ್ಲಿ ಈ ಹುಲಿಗೆ ಪ್ರಧಾನ ಸ್ಥಾನವಿದೆ

ಭಾರತದ ಹುಲಿಯ ಗತ್ತು, ತಾಕತ್ತು

'ರಾಯಲ್ ಬೆಂಗಾಲ್ ಟೈಗರ್' ಎಂದರೆ ಅದರ ಗತ್ತು ಮತ್ತು ತಾಕತ್ತು ಕಣ್ಣ ಮುಂದೆ ಬರುತ್ತದೆ. ಇಂಡಿಯನ್ ಟೈಗರ್ ಅಥವಾ ಬೆಂಗಾಲ್ ಟೈಗರ್ ಎಂದೂ ಕರೆಯಲಾಗುವ ಈ ಹುಲಿ ಭಾರತದ ರಾಷ್ಟ್ರೀಯ ಪ್ರಾಣಿಯೂ ಹೌದು. ಈ ಪ್ರಭೇದದ ಹುಲಿಗಳೇ ಜಗತ್ತಿನಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿವೆ. ಭಾರತದಲ್ಲೇ ಅಧಿಕ ಸಂಖ್ಯೆಯಲ್ಲಿವೆ. ಪಕ್ಕದ ಚೀನಾ, ಭೂತಾನ್, ಬಾಂಗ್ಲಾದೇಶ ಹಾಗೂ ಮ್ಯಾನ್ಮಾರ್‌ನಲ್ಲೂ ಕಂಡುಬರುತ್ತವೆ.

ಹುಲಿಗಳ ಚಟುವಟಿಕೆ, ದೇಹರಚನೆ, ಜೀವನಕ್ರಮದಲ್ಲಿ ಆಸಕ್ತಿಕರ ವಿಚಾರಗಳಿವೆ. ಬೆಂಗಾಲ್ ಟೈಗರ್ ತಳಿಯ ಹುಲಿಗಳು ನೋಡಲು ಸಾಮಾನ್ಯವಾಗಿ ಒಂದೇ ರೀತಿ ಕಂಡರೂ, ಸೂಕ್ಷ್ಮ ವ್ಯತ್ಯಾಸಗಳಿರುತ್ತವೆ. ಹುಲಿಗಳ ಮೈಮೇಲಿರುವ ಪಟ್ಟೆಗಳು ಒಂದಕ್ಕಿಂತ ಒಂದು ಭಿನ್ನವಾಗಿರುತ್ತವೆ. ಜಗತ್ತಿನ ಯಾವ ಹುಲಿಯ ಪಟ್ಟೆಯೂ ಮತ್ತೊಂದು ಹುಲಿಯ ಪಟ್ಟೆಯ ರೀತಿ ಇರುವುದಿಲ್ಲ. ಪಟ್ಟೆಗಳು ಹಳದಿ, ತಿಳಿ ಕೇಸರಿ, ಕಡುಬೂದು, ಕಪ್ಪು ಬಣ್ಣವನ್ನು ಹೊಂದಿರುತ್ತವೆ. ಕೆಲವು ಬಿಳಿ ಹುಲಿಗಳೂ ಇವೆ.

ಬೆಂಗಾಲ್ ಟೈಗರ್ ಜೀವಿತಾವಧಿ 10–15 ವರ್ಷಗಳು. ಒಂದು ಸಾಮಾನ್ಯ ಗಂಡು ಹುಲಿಯ ತೂಕ 225 ಕೆ.ಜಿ. ಇದ್ದರೆ, ಹೆಣ್ಣು ಹುಲಿ 135 ಕೆ.ಜಿ ಇರುತ್ತದೆ. ಗಂಡು ಹುಲಿ ಸರಾಸರಿ 9 ಅಡಿ, ಹೆಣ್ಣು ಹುಲಿ 8 ಅಡಿ ಉದ್ದವಿರುತ್ತದೆ. ಬಾಲ ಸುಮಾರು 33 ಇಂಚು ಉದ್ದವಿರುತ್ತದೆ. ಬಲಿಷ್ಠ ಹಲ್ಲುಗಳನ್ನು ಹೊಂದಿದ್ದು, ಅವು 7.5ರಿಂದ 10 ಸೆಂಟಿಮೀಟರ್‌ನಷ್ಟಿರುತ್ತವೆ. ಜಿಂಕೆ, ಕಾಡುಕೋಣ, ಹಂದಿ ಮೊದಲಾದ ಸಸ್ತನಿಗಳು ಇವುಗಳ ಮುಖ್ಯ ಆಹಾರ. ಬೇಟೆಯಲ್ಲಿ ನಿಷ್ಣಾತವಾಗಿರುವ ಬೆಂಗಾಲ್ ಟೈಗರ್ ಹುಟ್ಟಿನಿಂದಲೇ ಈ ಕಲೆಯನ್ನು ಮೈಗೂಡಿಸಿಕೊಂಡಿರುತ್ತವೆ. ಇದಕ್ಕೆ ತಮ್ಮದೇ ರಣತಂತ್ರ ರೂಪಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲಿ ಇವು ಬೇಟೆಯಾಡುತ್ತವೆ. ಮರವನ್ನು ಹತ್ತುವ ಕಲೆಯಲ್ಲಿ ಹುಲಿಗಳು ಅಷ್ಟಾಗಿ ಪಳಗಿಲ್ಲವಾದರೂ, ಬೇಟೆ ಮರದ ಮೇಲಿದೆ ಎಂಬ ಕಾರಣಕ್ಕೆ ಅದನ್ನು ಸುಮ್ಮನೆ ಕೈಬಿಡುವುದಿಲ್ಲ. ಅವು ಎಷ್ಟು ಶಕ್ತಿಶಾಲಿಗಳೆಂದರೆ, ಟನ್ ತೂಕದ ಕಾಡೆಮ್ಮೆಯನ್ನು ಎಳೆದೊಯ್ಯುವಷ್ಟು ಸಮರ್ಥವಾಗಿರುತ್ತವೆ. ಜೌಗು ಪ್ರದೇಶಗಳು, ಕಾಂಡ್ಲಾ ಕಾಡು ಹಾಗೂ ಹುಲ್ಲುಗಾವಲುಗಳಲ್ಲಿ ಇವು ಸಾಮಾನ್ಯವಾಗಿ ಕಂಡುಬರುತ್ತವೆ. ಚಳಿಗಾಲದಲ್ಲಿ ಸಂತಾನೋತ್ಪತ್ತಿಯಲ್ಲಿ ತೊಡಗುತ್ತವೆ. ಒಮ್ಮೆಗೆ 4–5 ಮರಿಗಳಿಗೆ ಜನ್ಮ ನೀಡುತ್ತವೆ. ಇವುಗಳ ನೆನಪಿನ ಶಕ್ತಿ ಅಗಾಧವಾಗಿದ್ದು, ಮನುಷ್ಯ ಹಾಗೂ ಇತರ ಪ್ರಾಣಿಗಳಿಗಿಂತ ಹೆಚ್ಚಿರುತ್ತದೆ.

ದೇಶದಲ್ಲಿವೆ 2,967 ಹುಲಿ

646 ಶಿವಾಲಿಕ್ ಬೆಟ್ಟಗಳು, ಗಂಗಾನದಿ ಬಯಲು ಪ್ರದೇಶ

1,033 ಮಧ್ಯಭಾರತ ಮತ್ತು ಪೂರ್ವ ಘಟ್ಟ ಪ್ರದೇಶ

981 ಪಶ್ಚಿಮ ಘಟ್ಟ ಪ್ರದೇಶ

307 ಈಶಾನ್ಯ ಬೆಟ್ಟಗಳು ಹಾಗೂ ಬ್ರಹ್ಮಪುತ್ರಾ ಬಯಲು ವಲಯ, ಸುಂದರ ಬನ್ಸ್

ಆಧಾರ: ವರ್ಲ್ಡ್ ವೈಲ್ಡ್‌ಲೈಫ್ ಫಂಡ್, ಗ್ಲೋಬಲ್ ಟೈಗರ್ ಫೋರಂ, ಭಾರತದಲ್ಲಿ ಹುಲಿ ಸ್ಥಿತಿಗತಿ ವರದಿ– 2018

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಪರಿಸರಕ್ಕೆ ಧಕ್ಕೆಯಾಗುವ ಆತಂಕಗಳಿದ್ದರೂ ಮೇಕೆದಾಟು ಯೋಜನೆ ಜಾರಿಗೆ ಕರ್ನಾಟಕ ಮುಂದಾಗಬೇಕೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 185

ಮೃತ್ಯುಂಜಯಮಂತ್ರದ ಉಪದೇಶ

ದಕ್ಷಬ್ರಹ್ಮ ಹತನಾದ ಕಥೆ ಕೇಳಿದ ನಾರದ, 'ಓ ವಿಧಿಯೇ, ಶಿವನನ್ನು ಬಿಟ್ಟು ದೇವತೆಗಳೊಡನೆ ದಕ್ಷಯಜ್ಞಕ್ಕೆ ವಿಷ್ಣು ಹೋಗಲು ಕಾರಣವೇನು? ಶಿವಗಣಗಳೊಂದಿಗೆ ಯುದ್ಧಮಾಡಿದುದೇಕೆ?' ಎನ್ನುತ್ತಾನೆ. ಆಗ ಬ್ರಹ್ಮ 'ಎಲೈ ನಾರದನೆ, ದಧೀಚಿಮುನಿಯ ಶಾಪದಿಂದ ವಿಷ್ಣುವು ದಕ್ಷಬ್ರಹ್ಮನ ಯಜ್ಞದ ವಿಷಯದಲ್ಲಿ ಮೂಢನಾಗಿ ತಪ್ಪು ಮಾಡಿದ. ಆ ಚಂದ್ರಶೇಖರನ ದಿವ್ಯಚರಿತ್ರೆಯನ್ನು ಹೇಳುವೆನು' ಎಂದು 'ಕ್ಷುವ'ನ ಕಥೆ ಹೇಳತೊಡಗುತ್ತಾನೆ.

ಹಿಂದೆ ಕ್ಷುವನೆಂಬ ರಾಜನಿದ್ದ. ಅವನು ದಧೀಚಿಯ ಮಿತ್ರ. ಒಮ್ಮೆ ಇವರಿಬ್ಬರ ನಡುವೆ ವಾಗ್ವಾದವಾಯಿತು. ದಧೀಚಿಯು ಬ್ರಾಹ್ಮಣನೇ ಶ್ರೇಷ್ಠ ಎಂದರೆ, ಕ್ಷತ್ರಿಯನೇ ಶ್ರೇಷ್ಠ ಅಂತ ಕ್ಷುವರಾಜ ವಾದಿಸಿದ. ಕ್ಷುವರಾಜ 'ಎಲ್ಲಾ ದೇವತೆಗಳ ಸ್ವರೂಪ ರಾಜ ಎಂದು ಶ್ರುತಿಯು ಹೇಳುವುದು. ಆದುದರಿಂದ ರಾಜನು ಬ್ರಾಹ್ಮಣನಿಗಿಂತಲೂ ಶ್ರೇಷ್ಠ' ಎಂದು ಹೇಳಿದ.

ಶ್ರುತಿಸ್ಮೃತಿಗಳಿಗೆ ವಿರುದ್ಧವಾದ ಕ್ಷುವರಾಜನ ಮಾತನ್ನು ಕೇಳಿ ದಧೀಚಿಗೆ ಕೋಪಬಂದು, ಕ್ಷುವರಾಜನ ತಲೆಗೆ ಪ್ರಹರಿಸಿದ. ಇದಕ್ಕೆ ಪ್ರತಿಯಾಗಿ ಕ್ಷುವರಾಜ ವಜ್ರಾಯುಧದಿಂದ ಹೊಡೆದು ದಧೀಚಿಯನ್ನು ಗಾಯಗೊಳಿಸಿದ. ನಿಶ್ಚೇತನನಾದ ದಧೀಚಿಯು ತನ್ನ ವಂಶದ ಮೂಲಪುರುಷನಾದ ಶುಕ್ರಾಚಾರ್ಯನನ್ನು ಸ್ಮರಿಸಿದ. ಆಗ ಶುಕ್ರಾಚಾರ್ಯ ದಧೀಚಿಯ ಶರೀರಕ್ಕೆ ಮತ್ತೆ ಪ್ರಾಣವನ್ನು ಸೇರಿಸಿ, ಪುನಶ್ಚೇತನಗೊಳಿಸಿದ. ಶುಕ್ರಾಚಾರ್ಯನು ದಧೀಚಿಗೆ ಮೃತ್ಯುಂಜಯಮಂತ್ರವನ್ನು ಬೋಧಿಸಿದ.

ಶ್ರುತಿಯಲ್ಲಿ ಹೇಳಲ್ಪಟ್ಟಿರುವ ಮೃತ್ಯುಂಜಯ ಮಹಾಮಂತ್ರವು ಪರಮೇಶ್ವರನ ಸ್ವರೂಪ. ಮೂರು ಕಣ್ಣುಳ್ಳ ಮಹಾಶಿವ ಆಕಾಶ-ಭೂಮಿ-ಪಾತಾಳ ಎಂಬ ಮೂರು ಜಗತ್ತಿಗೆ ತಂದೆಯು, ಸೂರ್ಯ-ಚಂದ್ರ-ಅಗ್ನಿ ಎಂಬ ಮೂರು ರೂಪದ ಮಂಡಲಗಳಿಗೆ ಒಡೆಯನೂ, ಸತ್ವ-ರಜಸ್ಸು-ತಮಸ್ಸು ಎಂಬ ಮೂರು ಗುಣಗಳಿಗೂ ಅಧಿಪತಿಯು. ಅಂಥ ಪರಮೇಶ್ವರನನ್ನು ಪೂಜಿಸುವೆವು ಎಂದು ಹವಿರ್ಭಾಗವನ್ನು ಅರ್ಪಿಸಿ ಸಂತೋಷಗೊಳಿಸಬೇಕು.

ಮುಕ್ಕಣ್ಣನಾದ ಶಿವನು ಪ್ರಕೃತಿ, ಪುರುಷ ಮತ್ತು ಭೌತಿಕ ಜಗತ್ತು ಎಂಬ ಮೂರು ತತ್ವಗಳಿಗೂ, ಭೂತ-ವರ್ತಮಾನ-ಭವಿಷ್ಯತ್ ಎಂಬ ಮೂರು ಕಾಲಗಳಿಗೂ, ದಕ್ಷಿಣಾಗ್ನಿ-ಗಾರ್ಹಪತ್ಯ-ಅಹವನೀಯ ಎಂಬ ಮೂರು ಅಗ್ನಿಗಳಿಗೂ ಕರ್ತನು. ಬ್ರಹ್ಮ-ವಿಷ್ಣು-ರುದ್ರ ಎಂಬ ತ್ರಿಮೂರ್ತಿಸ್ವರೂಪನು, ಋಗ್ವೇದ-ಯಜುರ್ವೇದ-ಸಾಮವೇದಗಳ ತ್ರಿವೇದಸ್ವರೂಪನು. ಇಂತಹ ಪುಣ್ಯಗಂಧಸ್ವರೂಪನಾದ ಮಹಾದೇವನು ಜಗತ್ತನ್ನು ಪೋಷಿಸುವವನು. ಎಲ್ಲ ವಸ್ತುಗಳಲ್ಲು ಅಂತರ್ಯಾಮಿಯಾಗಿದ್ದು ಪೋಷಿಸುವವನಾದುದರಿಂದಲೇ ಶ್ರುತಿಯು ಪರಮೇಶ್ವರನನ್ನು 'ಪುಷ್ಟಿವರ್ಧನ' ಎಂದು ಕರೆದಿರುವುದು. ಇಂತಹ ಮಹಿಮೆಯುಳ್ಳ ಮಹಾರುದ್ರನನ್ನು ಕರ್ಮ, ತಪಸ್ಸು, ವೇದಾಧ್ಯಯನ, ಯೋಗ, ಧ್ಯಾನಗಳಿಂದ ಅರ್ಚಿಸಬೇಕು. ಹಾಗೆ ಅರ್ಚಿಸಿದವನು ದೇವಸ್ವರೂಪವನ್ನೇ ಹೊಂದುವನು. ಪರಮೇಶ್ವರನು ಪ್ರಸನ್ನನಾಗಿ ಮೃತ್ಯುಪಾಶದಿಂದ ಬಿಡಿಸುವನು.

ಶಿವನನ್ನು ಸ್ಮರಿಸುತ್ತಾ ನಿತ್ಯವೂ ನಿಯಮದಿಂದ ಮೃತ್ಯುಂಜಯಮಂತ್ರವನ್ನು ಜಪಿಸಬೇಕು. ಆಮೇಲೆ ಹೋಮಮಾಡಬೇಕು. ಬರಿಯ ಜಲವನ್ನೇ ಆಹಾರವಾಗಿ ಸೇವಿಸಬೇಕು. ಶಿವಲಿಂಗದ ಸನ್ನಿಧಿಯಲ್ಲಿ ಧ್ಯಾನಮಾಡಿದರೆ ಮೃತ್ಯುಭಯವೇ ಬರುವುದಿಲ್ಲ. ಶಿವನನ್ನು ವಿಧಿವತ್ತಾಗಿ ಸಾವಧಾನತೆಯಿಂದ ಅರ್ಚಿಸಬೇಕು. ಮೃತ್ಯುಂಜಯನ ಎರಡು ಕೈಗಳಲ್ಲಿ ನೀರಿನ ಕಲಶಗಳಿವೆ. ಅದರಿಂದ ಶೀತಲಜಲವನ್ನು ಕೈನಿಂದ ತೆಗೆದುಕೊಂಡು ಶಿರಸ್ಸಿನಲ್ಲಿ ಪ್ರೋಕ್ಷಿಸುತ್ತಿರುತ್ತಾನೆ. ಪಾರ್ವತಿಯೊಡನೆ ಕಮಲದಲ್ಲಿ ಕುಳಿತು, ಬಲಗೈನಲ್ಲಿ ಜಪಸರವನ್ನು, ಎಡಗೈನಲ್ಲಿ ಜಿಂಕೆಯನ್ನು ಹಿಡಿದಿರುತ್ತಾನೆ. ಅವನ ಶಿರಸ್ಸಿನಲ್ಲಿರುವ ಚಂದ್ರನು ಸುರಿಸುವ ಅಮೃತ ಶಿವನ ಮೇಲೆ ಬೀಳುತ್ತಿರುತ್ತದೆ. ಇಂತಹ ಮೃತ್ಯುಂಜಯನನ್ನು ಭಜಿಸುವೆನು ಎನ್ನುತ್ತಾ ಧ್ಯಾನಮಾಡಬೇಕು – ಎಂದು ಶುಕ್ರಾಚಾರ್ಯನು ದಧೀಚಿಗೆ ಉಪದೇಶಿಸಿದ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜುಲೈ 29, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುದ್ಧ ಪ್ರತಿಪದ್ ಗಂ. 25-22 ನಕ್ಷತ್ರ: ಪುಷ್ಯ ಗಂ. 09-47 ಯೋಗ: ಸಿದ್ಧಿ(ಆಸ್ರಿಕ್) ಗಂ. 18-35, ಕರಣ: ಕಿಂಸ್ತುಘ್ನ ಗಂ. 12-26, ಕರ್ಕಾಟಕ ಮಾಸದ 12 ನೇ ದಿನ.

ರಾಹುಕಾಲ : ಬೆಳಿಗ್ಗೆ 10:30 – 12:00

ಸೂರ್ಯೋದಯ : 06-19 ಸೂರ್ಯಾಸ್ತ : 06-56

ಮುಸ್ಲಿಂ ದಿನಾಂಕ : 29 ಜುಲ್‌ಹಿಜಾನ್

ದಿನ ವಿಶೇಷ : ಶ್ರಾವಣ ಶುಕ್ರವಾರ , ಅದೃಷ್ಟ ಸಂಖ್ಯೆ : 4, 12

ಮೇಷ : ಹಲವು ಬಗೆಯ ಖರ್ಚು ವೆಚ್ಚಗಳನ್ನು ಮಾಡಬೇಕಾದರೂ ಆದಾಯದ ಹೊಸ ಮೂಲವೊಂದು ಕುಡಿಯೊಡೆದು ಹೆಚ್ಚಿನ ಲಾಭ ಬರುವುದರಿಂದ ಸಂತೋಷ. ಕೃಷಿ ಕ್ಷೇತ್ರದಲ್ಲಿನ ತುಸು ಚೇತರಿಕೆ ನೆಮ್ಮದಿಯನ್ನು ತರುವುದು.

ವೃಷಭ : ವಿಮೆ ಸಲಹೆಗಾರರಿಗೆ ವೃತ್ತಿ ರಂಗದಲ್ಲಿ ಉತ್ತಮ ಪ್ರಚೋದನೆಯಿಂದ ಯಶಸ್ಸು ಕಂಡು ಬರಲಿದೆ. ಇಂದಿನ ದೂರದ ಪ್ರಯಾಣ ಸುಖಕರವಾಗಿರುವುದು. ಮನೆಯ ಮಂಗಳ ಕಾರ್ಯಕ್ಕಾಗಿ ಶುಭದಿನದ ನಿಶ್ಚಯ ಮಾಡುವಿರಿ.

ಮಿಥುನ : ಮೇಲಧಿಕಾರಿಗಳ ಅನುಗ್ರಹವಿದ್ದು , ನಿಮ್ಮ ಇಷ್ಟಾರ್ಥಗಳೆಲ್ಲಾ ಪೂರೈಸುವುದು. ಪಾಲುದಾರಿಕೆಯ ಆರ್ಥಿಕ ಪರಿಸ್ಥಿತಿಯಿಂದಾಗಿ ಮುಂದುವರಿಯಲು , ಕಾರ್ಯ ಕ್ಷೇತ್ರವನ್ನು ವಿಸ್ತರಿಸಲು ಪೂರಕವಾಗುವುದು.

ಕರ್ಕಾಟಕ : ಚರ್ಮವ್ಯಾಧಿಯಂತಹ ಅನಾರೋಗ್ಯವು ಎದುರಾಗಬಹುದು. ಹಾಡುಗಾರರಿಗೆ ತಮ್ಮ ಸಾಧನೆಯಿಂದ ಜನಪ್ರಿಯತೆ ಹೆಚ್ಚುತ್ತದೆ. ನಿಮ್ಮ ದ್ವಿಸ್ವಭಾವದ ನಡವಳಿಕೆಯನ್ನು ಕೊಂಚ ಹಿಡಿತದಲ್ಲಿಟ್ಟುಕೊಳ್ಳಿ.

ಸಿಂಹ : ನಿಮ್ಮ ಭಾವನೆಗಳನ್ನು ಹಂಚಿಕೊಂಡು ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲ ವ್ಯಕ್ತಿಗಳ ಪರಿಚಯ, ಸ್ನೇಹವು ಆಗಲಿದೆ. ಹೆಚ್ಚಿನ ಖರ್ಚಿಗೆ ದಾರಿಯಾದರೂ, ಅದರ ಫಲದಿಂದ ಮನಸ್ಸಿಗೆ ಸಂತೋಷವಿರುವುದು.

ಕನ್ಯಾ : ಮಾತಾ-ಪಿತೃಗಳಿಂದ ನಿಮ್ಮ ಆಸೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಮನೆ ನಿರ್ಮಾಣದ ಕೆಲಸದಲ್ಲಿ ಇರುವ ಅಡೆತಡೆಗಳಿಗೆ ಸಹೋದರ ವರ್ಗದವರಿಂದ ಸನ್ಮಾರ್ಗ ದೊರಕುವುದು.

ತುಲಾ : ಕಠಿಣ ಪರಿಶ್ರಮದ ಮೂಲಕ ಸಹೋದ್ಯೋಗಿಗಳ ಮನವನ್ನು ಗೆಲ್ಲಲು ಪ್ರಯತ್ನಿಸಿ. ನಿಮ್ಮ ಒರಟು ವ್ಯಕ್ತಿತ್ವದಿಂದ ಅಥವಾ ನಿಮ್ಮ ಕಹಿಯ ಮಾತುಗಳಿಂದ ಸಹಭಾಗಿಗೆ ಅಥವಾ ಮಕ್ಕಳಿಗೆ ನೋವಾಗಬಹುದು.

ವೃಶ್ಚಿಕ : ಈ ದಿನ ಅವಿವಾಹಿತರಿಗೆ ಸೂಕ್ತ ಸಂಬಂಧಗಳು ದೊರೆಯಲಿದೆ. ವೃತ್ತಿಯಲ್ಲಿ ಸಮಸ್ಯೆಗಳು ಎದುರಾಗುವ ಪ್ರಸಂಗ ಬಂದರೂ ಧೈರ್ಯದಿಂದ ಎದುರಿಸಿ, ಹಿಂಜರಿಕೆ ಬೇಡ. ಸಂಶೋಧಕರಿಗೆ ಒಳ್ಳೆಯ ದಿನ.

ಧನು: ಕೆಲಸದ ನಿಮಿತ್ತ ಮಗಳನ್ನು ವಿದೇಶಕ್ಕೆ ಕಳುಹಿಸುವಿರಿ. ಯೋಗಾಭ್ಯಾಸದಿಂದ ನಿಮ್ಮ ಆರೋಗ್ಯವು ಚೆನ್ನಾಗಿರುವುದು. ಯೋಜನೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚೆ ನಡೆಸುವುದು ಸೂಕ್ತ.

ಮಕರ : ಕೈಗಾರಿಕೆ ಹಾಗೂ ವಾಣಿಜ್ಯ ಉದ್ಯಮದ ಸುಧಾರಣೆಗೆ ಸಾಕಷ್ಟು ಅವಕಾಶಗಳು ಒದಗಿ ಬರುವುವು. ದಂತ ವೈದ್ಯರಿಗೆ ಈ ದಿನ ಅನುಕೂಲವಾಗಿರುವುದು. ಕೀರ್ತಿ ನಿಮ್ಮನ್ನು ಅರಸಿ ಬರುವುದು.

ಕುಂಭ : ನಿಮಗಿರುವ ಉತ್ತಮ ದೈವಾನುಗ್ರಹದಿಂದ ಕೆಲಸಗಳೆಲ್ಲವೂ ನಿರಾತಂಕವಾಗಿ, ನಿರಾಳವಾಗಿ ನೆರವೇರುವುದು. ಧಾರ್ಮಿಕ ವಿಚಾರಗಳತ್ತ ಮನಸ್ಸು ಹರಿಯುವುದು.

ಮೀನ : ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಂದರ್ಶನಕ್ಕಾಗಿ ಬೇಕಾದ ಪೂರ್ವ ತಯಾರಿ ಮಾಡಿಕೊಳ್ಳಿರಿ. ಸಾರಿಗೆ ಸಂಸ್ಥೆ ಕೆಲಸ ಗಾರರಿಗೆ ಬಡ್ತಿ ದೊರೆಯಲಿದೆ. ದುರ್ಗಾಪರಮೇಶ್ವರಿಯ ದರ್ಶನದಿಂದ ಒಳ್ಳೆಯ ದಾಗುವುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಸವೆಸು ಜನ್ಮವನು

ದಿವಸದಿಂ ದಿವಸಕ್ಕೆ, ನಿಮಿಷದಿಂ ನಿಮಿಷಕ್ಕೆ |
ಭವಿಷಿಯವ ಚಿಂತಿಸದೆ ಬದುಕನೂಕುತಿರು ||
ವಿವರಗಳ ಜೋಡಿಸುವ ಯಜಮಾನ ಬೇರಿಹನು |
ಸವೆಸು ನೀಂ ಜನುಮವನು – ಮಂಕುತಿಮ್ಮ ||
682||

ಪದ-ಅರ್ಥ: ಬೇರಿಹನು = ಬೇರೆ + ಇಹನು, ಸವೆಸು = ಕರಗಿಸು, ಕಳೆ, ಜನುಮವನು = ಜನ್ಮವನ್ನು

ವಾಚ್ಯಾರ್ಥ: ಪ್ರತಿಕ್ಷಣ, ಪ್ರತಿದಿನ ಭವಿಷ್ಯವನ್ನು ಚಿಂತಿಸದೆ ಬದುಕನ್ನು ಸಾಗಿಸು. ಬದುಕಿನ ಎಲ್ಲ ವಿವರಗಳನ್ನು ಜೋಡಿಸುವ ಯಜಮಾನ ಬೇರೆ ಇದ್ದಾನೆ. ನೀನು ನಿನ್ನ ಜನ್ಮವನ್ನು ಚಿಂತೆ ಮಾಡದೆ ಸವೆಸು.

ವಿವರಣೆ: ಕುವೆಂಪುರವರ ಅತ್ಯಂತ ಸುಂದರವಾದ ಭಾವಗೀತೆ, "ದೋಣಿ ಸಾಗಲಿ, ಮುಂದೆ ಹೋಗಲಿ, ದೂರ ತೀರವ ಸೇರಲಿ". ಭಾವಗೀತೆಯ ಮೊದಮೊದಲು ಅದು ದೋಣಿಯಾತ್ರೆಯ ಸುಂದರ ಚಿತ್ರಣ ಎನ್ನಿಸುತ್ತದೆ. ನಿಸರ್ಗದ ಮನಮೋಹಕ ದೃಶ್ಯದ ವರ್ಣನೆ ಮನ ತಟ್ಟುತ್ತದೆ. ಆದರೆ ಭಾವಗೀತೆಯ ಕೊನೆಯ ಎರಡು ಸಾಲುಗಳ ಪದ್ಯವನ್ನು ಥಟ್ಟನೆ ಅಧ್ಯಾತ್ಮಿಕ ಮಟ್ಟಕ್ಕೆ ಎತ್ತಿಬಿಡುತ್ತದೆ.

"ನಾವು ಲೀಲಾಮಾತ್ರಜೀವರು ನಮ್ಮ ಜೀವನ ಲೀಲೆಗೆ |

ನಿನ್ನೆ ನಿನ್ನೆಗೆ, ಇಂದು ಇಂದಿಗೆ, ಇರಲಿ ನಾಳೆಯು ನಾಳೆಗೆ ||"

ಎಂಥ ಮಾರ್ಮಿಕವಾದ ಮಾತು! ನಿನ್ನೆ ಸತ್ತು ಹೋಗಿದೆ. ಅದೆಂದೂ ಮರಳಿ ಬರದು. ನಾಳೆಯನ್ನು ಕಂಡವರಿಲ್ಲ. ಅದು ಅನಿಶ್ಚಿತ. ಅದು ಎಂದಿಗೂ ಬರುವುದಿಲ್ಲ, ಯಾಕೆಂದರೆ ಮರುದಿನದ 'ನಾಳೆ' ಮತ್ತೆ ಮುಂದೆಯೇ ಇದೆ. ಸತ್ತ 'ನಿನ್ನೆ', ಹುಟ್ಟದ 'ನಾಳೆ'ಗಳಿಗೆ ನಾವು ಚಿಂತೆ ಮಾಡುತ್ತೇವೆ. ಆಗ ನಮ್ಮ 'ಇಂದು' ತನ್ನ ಸೊಬಗನ್ನು, ಸಂತೋಷವನ್ನು ಕಳೆದುಕೊಳ್ಳುತ್ತದೆ. ನಮಗೆ ಭವಿಷ್ಯದ ಬಗ್ಗೆ ಅಸಾಧ್ಯ ಭರವಸೆ. ನಾಳೆ ಒಳ್ಳೆಯದಾದೀತು ಎಂದು ಪ್ರಾರ್ಥಿಸುತ್ತೇವೆ. ನಾಳೆಗಾಗಿ ದುಡಿಯುತ್ತೇವೆ, ನಾಳೆಗಾಗಿ ಇಂದನ್ನು ಕಳೆದುಕೊಂಡು ಹಣ ಕೂಡಿಡುತ್ತೇವೆ. ನಮ್ಮ ನಾಳೆಗಳು ತರಬಹುದಾದ ಸಂತೋಷದ ಕಾಮನಬಿಲ್ಲನ್ನು ನಿರೀಕ್ಷಿಸುತ್ತ ಕನಸು ಕಾಣುತ್ತೇವೆ. ನಾಳೆಗಳು ಚೆಂದವಾಗಲಿ ಎಂದು ಇಂದು ಅನೈತಿಕ, ಭ್ರಷ್ಟ ಜೀವನವನ್ನು ನಡೆಸುವುದನ್ನು ಕಂಡಿದ್ದೇವೆ. ಅದಕ್ಕಾಗಿ ಕೊಲೆ, ಸುಲಿಗೆಗಳು ನಡೆದಿವೆ.

ಆದರೆ ನಾಳೆಗಳು ಚೆಂದವಾದಾವೇ? ಆ ವಿವರಗಳು ನಮ್ಮ ಬಳಿ ಇಲ್ಲ. ಅವುಗಳನ್ನು ಜೋಡಿಸುವ ಯಜಮಾನನಾದ ವಿಧಿ ಬೇರೆಯೇ ಇದ್ದಾನೆ. ಅವನಿಗೆ ಮಾತ್ರ ನಾಳೆಯ ಜಾತಕ ಗೊತ್ತು. ಆದ್ದರಿಂದ ನಾವು ತಲೆಬಿಸಿ ಮಾಡಿಕೊಂಡರೆ, ಬಿಸಿಯಾದದ್ದೇ ಬಂತು, ನಾಳೆ ಬದಲಾಗಲಾರದು. ಆದ್ದರಿಂದ, ಕಗ್ಗ ಹೇಳುತ್ತದೆ, ಸುಮ್ಮನೆ ನಿಮಿಷ ನಿಮಿಷಕ್ಕೆ, ದಿನ ದಿನಕ್ಕೆ ಭವಿಷ್ಯವನ್ನು ಚಿಂತಿಸಬೇಡ. ವರ್ತಮಾನವನ್ನು ಸಂತೋಷದಿಂದ ಅನುಭವಿಸುತ್ತ ಬದುಕನ್ನು ಸವೆಯಿಸು. ಕುವೆಂಪುರವರ ಕವನ ಹೇಳುವಂತೆ, ನಾವು ಕೇವಲ "ಲೀಲಾಮಾತ್ರಜೀವರು". ಲೀಲೆಯನ್ನು ಮಾಡಿಸುವವನು ಯಜಮಾನ. ಎಲ್ಲ ವಿವರಗಳೂ ಅವನ ಬಳಿಯೇ ಇವೆ. ಇಂದಿನ ದಿನವನ್ನು ನಮ್ಮದೆಂದು ತಿಳಿದು, ಬಂದ ಕರ್ತವ್ಯವನ್ನು ನಿರ್ವಹಿಸುತ್ತ ಜೀವನ ಸಾಗಿಸುವುದು ನಮಗೆ ಸರಿಯಾದ ದಾರಿ

ಪದಬಂಧ 5033

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಾಜ ಕಾಲಾಳು ಮುಂತಾದ ಕಾಯಿಗಳಿಂದ ಆಡುವ ಆಟ(4)
3.ಈತ ಬುದ್ಧಿ ಇಲ್ಲದವನು(4)
5.ಯಾತ್ರಿಕನಲ್ಲ! ಈತ ಬೇಡುವವನು (3)
6.ನೇಸರನ ಇನ್ನೊಂದು ಹೆಸರು(4)
8.ಇದು ದ್ರವದಿಂದ ತುಂಬಿರುವುದು(4)
10.ಸುಳಿಯುತ್ತಾ ಬಳಿ ಬಂದು ಹೀಗೆ ನುಂಗು(4)
12.ಅನಂತರ ಬಂದವನು ಮಾಡಿರುವ ಗದ್ದಲ(4)
14.ಬಡಿಗೆಯನ್ನು ಹಿಡಿದಿರುವವ ದಪ್ಪನೆಯ ಮನುಷ್ಯ(3)
15.ಜೈನ ತೀರ್ಥಂಕರರಲ್ಲಿ ಕೊನೆಯವರು(4)
16.ತರತರದ ಕಾಯಿಪಲ್ಲೆ(4)

ಮೇಲಿಂದ ಕೆಳಕ್ಕೆ

1.ನಾಲ್ಕು ಕಾಲುಗಳನ್ನುಳ್ಳದ್ದು(4)
2.ಕಾಲ ಸೂಚಕ ಯಂತ್ರ(4)
3.ಮರದಲ್ಲಿ ಕಾಣುತ್ತಿರುವ ತುಂಬಿ(4)
4.ಮಧ್ಯವಯಸ್ಸಿದು(4)
7.ಈತ ಮುಸಲ್ಮಾನ ದೊರೆ(3)
9.ಮಹಡಿಯನ್ನು ಹಂತಹಂತವಾಗಿ ಏರಿರುವ ಧರ್ಮಾಧಿಕಾರಿ(3)
10.ವರನಿಗೆ ಕೇಳಿಸಿದ್ದು ಮಧುರವಾದ ಧ್ವನಿ(4)
11.ವಿಷ್ಣುವಿನ ಕೈಯಲ್ಲಿರುವ ಚಕ್ರಾಯುಧ(4)
12.ಆಯಾಳು ತಂದಿರುವ ಸೂಜಿಗಲ್ಲು(4)
13.ದಾರಿಯಲ್ಲಿ ಪಡೆದುಕೊಂಡಿರುವ ಪರವಾನಗಿ(4)



5032ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಾತಾವರಣ 3.ಭಕ್ಷಕ
5.ವಿಧಾನಸಭೆ 7.ಸಲಗ
8.ಹೊಸಬದುಕು 11.ಕನಸು
12.ವನಪಾಲಕ 14.ಮೆದುಳು
15.ಆಮ್ಲಜನಕ

ಮೇಲಿಂದ ಕೆಳಕ್ಕೆ:
1.ವಾಸ್ತವಿಕ 2.ವದನ
4.ಕರಗ 6.ಸಮಾಸ
7.ಸರಕು 8.ಹೊಲಸು
9.ದುರ್ದಾನ 10.ಅಕಳಂಕ
11.ಕಡಿಮೆ 13.ಪಾರಜ

ಸುಡೊಕು 5419

						5		7
	2		6		7			
	6	5		4			9	1
	4				1		7	
8				2				4
	9		7			6		
9				3		4		
			4		8			9
2		4					5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5418 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ಚೆಸ್ ಒಲಿಂಪಿಯಾಡ್ ಉದ್ಘಾಟನೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತು ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಇದ್ದರು

ಕಲಾವಿದರ ತಂಡವು ನೃತ್ಯ ಪ್ರದರ್ಶಿಸಿತು –ಎಎಫ್‌ಪಿ ಚಿತ್ರಗಳು

ಚೆನ್ನೈನಲ್ಲಿ ಚದುರಂಗ ಚಿತ್ತಾರ

ನೆಹರೂ ಕ್ರೀಡಾಂಗಣದಲ್ಲಿ ಚೆಸ್ ಒಲಿಂಪಿಯಾಡ್‌ಗೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ

44th FIDE CHESS OLYMPIAD CHENNAI 2022

ಚೆನ್ನೈ(ಪಿಟಿಐ): ವಿಶ್ವದ ಶ್ರೇಷ್ಠ ಚದುರಂಗ ಚತುರರ ಸೇರಿರುವ ಚೆಸ್ ಒಲಿಂಪಿಯಾಡ್‌ಗೆ ಗುರುವಾರ ರಾತ್ರಿ ರಂಗುರಂಗಿನ ಚಾಲನೆ ಲಭಿಸಿತು.

ಪ್ರಧಾನಿ ನರೇಂದ್ರ ಮೋದಿ ಒಲಿಂಪಿಯಾಡ್ ಉದ್ಘಾಟಿಸಿದರು. ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ಕ್ರೀಡಾಜ್ಯೋತಿ ಹಸ್ತಾಂತರಿಸಿದರು.

ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ಸೇರಿದ್ದ 187 ದೇಶಗಳ ಸ್ಪರ್ಧಿಗಳ ಸಮ್ಮುಖದಲ್ಲಿ ಕಲಾವಿದರು ಭಾರತದ ಸಾಂಪ್ರದಾಯಿಕ ನೃತ್ಯ, ಸಂಗೀತ ಕಲೆಗಳ ರಸದೌತಣ ಉಣಬಡಿಸಿದರು.

ಕಥಕ್, ಒಡಿಸಿ, ಕುಚುಪುಡಿ, ಕಥಕ್ಕಳಿ, ಮೋಹಿನಿಆಟ್ಟಂ, ಮಣಿಪುರಿ, ಸತ್ರಿಯಾ ಮತ್ತು ಭರತನಾಟ್ಯ ಕಲಾವಿದರ ನೃತ್ಯಗಳು ಕಣ್ಮನ ಸೆಳೆದವು.

ಜಪಾನ್, ಚೀನಾ, ಆಸ್ಟ್ರೇಲಿಯಾ, ಜರ್ಮನಿ, ಇಟಲಿ, ದಕ್ಷಿಣ ಆಫ್ರಿಕಾ, ಆಸ್ಟ್ರೀಯ, ಅಲ್ಬೇನಿಯಾ, ಅಲ್ಜಿರಿಯಾ, ಅಂಗೋಲಾ, ಅರ್ಜೆಂಟಿನಾ ಮತ್ತು ಬಾರ್ಬಡಿಸ್ ಸೇರಿದಂತೆ ಬೇರೆ ಬೇರೆ ದೇಶಗಳ ಸ್ಪರ್ಧಿಗಳು ಹಾಜರಿದ್ದರು.

ಸಂಗೀತ ದಿಗ್ಗಜ ಎ.ಆರ್. ರೆಹಮಾನ್ ಅವರ ಸಂಯೋಜನೆಯ 'ಜೈ ಹೋ..' ಹಾಗೂ 'ವಂದೇ ಮಾತರಂ' ಗೀತೆಗಳೂ ಮೊಳಗಿದವು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ ಮೋದಿಯವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು. ತಮಿಳುನಾಡಿನ ಸಾಂಪ್ರದಾಯಿಕವಾದ ಪೋಷಾಕು ಧರಿಸಿದ್ದ ಮೋದಿಯವರ ಮೇಲೆ ಹೂಮಳೆಗರೆಯಲಾಯಿತು.

'ಭಾರತದಲ್ಲಿ ಇದೇ ಮೊದಲ ಬಾರಿ ನಡೆಯುತ್ತಿರುವ ಫಿಡೆ ಚೆಸ್ ಒಲಿಂಪಿಯಾಡ್ ಉದ್ಘಾಟಿಸುತ್ತಿರುವೆ' ಎಂದು ಮೋದಿ ಘೋಷಿಸಿದರು.

'ಯಾವ ಕ್ರೀಡಾಪಟುವೂ ಸೋಲುವುದಿಲ್ಲ. ಇಲ್ಲಿ ಎಲ್ಲರೂ ವಿಜಯಿಗಳು ಮತ್ತು ಭವಿಷ್ಯದ ಜಯಶಾಲಿಗಳು ಅಷ್ಟೇ. ಆದ್ದರಿಂದ ಸೋಲಿಗೆ ದೃತಿಗೆಡದೇ ಮುನ್ನುಗ್ಗಿ' ಎಂದು ಮೋದಿ ಅವರು ಹೇಳಿದರು.

ಹೈಕೋರ್ಟ್ ತರಾಟೆ: ಚೆಸ್ ಒಲಿಂಪಿಯಾಡ್ ಪ್ರಚಾರದಲ್ಲಿ ರಾಷ್ಟ್ರಪತಿ ಮತ್ತು ಪ್ರಧಾನಿಯವರ ಚಿತ್ರಗಳನ್ನು ಪ್ರದರ್ಶಿಸದಿರುವುದು ಸಮಂಜಸವಲ್ಲ ಎಂದು ಮದ್ರಾಸ್ ಹೈಕೋರ್ಟ್ ತಮಿಳುನಾಡು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

ಈ ಕುರಿತು ಮಧುರೈನ ಆರ್. ರಾಜೇಶ್‌ಕುಮಾರ್ ಅವರು ಈ ಕುರಿತು ದಾಖಲಿಸಿರುವ ಸಾರ್ವಜನಿಕ ಹಿತಾಸಕ್ತಿ ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿ ಎಂ.ಎ ಭಂಡಾರಿ ಮತ್ತು ಎಸ್. ಅನಂತಿ ಅವರ ಪೀಠವು ಗುರುವಾರ ವಿಚಾರಣೆ ನಡೆಸಿತು.

ಟಿ20 ಕ್ರಿಕೆಟ್: ಮೊದಲ ಪಂದ್ಯ ಇಂದು

ವಿಂಡೀಸ್‌ಗೆ ಭಾರತದ ಸವಾಲು

ತರೋಬಾ, ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಮುಂಬರಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಸಂಭವನೀಯ ಆಟಗಾರರ ಭಾರತ ತಂಡವು ಶುಕ್ರವಾರ ಇಲ್ಲಿ ವೆಸ್ಟ್ ಇಂಡೀಸ್ ಎದುರು ಆರಂಭವಾಗಲಿರುವ ವೆಸ್ಟ್ ಇಂಡೀಸ್ ಎದುರಿನ ಸರಣಿಯಲ್ಲಿ ಕಣಕ್ಕಿಳಿಯಲಿದೆ.

ಏಕದಿನ ಸರಣಿಯಿಂದ ವಿಶ್ರಾಂತಿ ಪಡೆದಿದ್ದ ರೋಹಿತ್ ಶರ್ಮಾ ತಂಡಕ್ಕೆ ಮರಳಿದ್ದು ನಾಯಕತ್ವ ವಹಿಸಲಿದ್ದಾರೆ. ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್, ದಿನೇಶ್ ಕಾರ್ತಿಕ್, ಕೆ.ಎಲ್. ರಾಹುಲ್ ಮತ್ತು ಕುಲದೀಪ್ ಯಾದವ್ ಕೂಡ ಮರಳಿದ್ದಾರೆ. ಆದರೆ ರಾಹುಲ್ ಮತ್ತು ಕುಲದೀಪ್ ಅವರು 'ಮ್ಯಾಚ್ ಫಿಟ್‌ನೆಸ್' ಬಗ್ಗೆ ಇನ್ನೂ ಖಚಿತವಾಗಿಲ್ಲ. ಆದ್ದರಿಂದ ಅಂತಿಮ ಹನ್ನೊಂದರ ಬಳಗದಲ್ಲಿ ಅವರು ಸ್ಥಾನ ಪಡೆಯುವುದು ಕೂಡ ಇನ್ನೂ ಖಚಿತವಾಗಿಲ್ಲ.

ವಿರಾಟ್ ಕೊಹ್ಲಿ ಈ ಸರಣಿಯಿಂದಲೂ ವಿಶ್ರಾಂತಿ ತೆಗೆದುಕೊಂಡಿದ್ದಾರೆ. ಆದ್ದರಿಂದ ಕೊಹ್ಲಿ ಜಾಗದಲ್ಲಿ ದೀಪಕ್ ಹೂಡಾ ಅಥವಾ ಶ್ರೇಯಸ್ ಅಯ್ಯರ್ ಅವರಿಗೆ ಸ್ಥಾನ ಸಿಗುವ ಸಾಧ್ಯತೆ ಇದೆ. ರಿಷಭ್ ಪಂತ್ ಮರಳಿರುವುದರಿಂದಾಗಿ ದಿನೇಶ್ ಕಾರ್ತಿಕ್‌ಗೆ ಕೀಪಿಂಗ್ ಅವಕಾಶ ಸಿಗಲಿಕ್ಕಿಲ್ಲ. ಆದರೆ ಮಧ್ಯಮ ಕ್ರಮಾಂಕದ ಭರವಸೆಯ ಆಟಗಾರನಾಗಿ ಸ್ಥಾನ ಪಡೆಯುವ ಸಾಧ್ಯತೆ ಹೆಚ್ಚು.

ಇಂಗ್ಲೆಂಡ್‌ನಲ್ಲಿ ಸರಣಿ ಜಯ, ವಿಂಡೀಸ್ ಎದುರಿನ ಏಕದಿನ ಸರಣಿಯ ಗೆಲುವುಗಳಿಂದ ತಂಡದ ಆತ್ಮವಿಶ್ವಾಸ ಹೆಚ್ಚಿದೆ. ಆದರೆ ವಿಂಡೀಸ್ ಬಳಗವು ಚುಟುಕು ಕ್ರಿಕೆಟ್‌ನಲ್ಲಿ ತನ್ನ ಸಾಮರ್ಥ್ಯವನ್ನು ಪಣಕ್ಕೊಡ್ಡುವ ಸವಾಲು ಎದುರಿಸುತ್ತಿದೆ. ದೊಡ್ಡ ಹೊಡೆತಗಳ ಪರಾಕ್ರಮವನ್ನು ತೋರಿದರೆ ಮಾತ್ರ ಭಾರತದ ಬೌಲಿಂಗ್ ಪಡೆ ಮೇಲೆ ಒತ್ತಡ ಹಾಕಲು ಸಾಧ್ಯ.

ಪಂದ್ಯ: ರಾತ್ರಿ 8ರಿಂದ

ನೇರಪ್ರಸಾರ: ಡಿಡಿ ಸ್ಪೋರ್ಟ್ಸ್, ಫ್ಯಾನ್‌ಕೋಡ್

ರೋಹಿತ್ ಶರ್ಮಾ

ಫಾರ್ಮುಲಾ ಒನ್: ನಿವೃತ್ತಿಗೆ ವೆಟಲ್ ನಿರ್ಧಾರ

ಹಂಗರೊರಿಂಗ್, ಹಂಗರಿ(ಎಎಫ್‌ಪಿ): ನಾಲ್ಕು ಬಾರಿಯ ಫಾರ್ಮುಲಾ ಒನ್ ವಿಶ್ವ ಚಾಂಪಿಯನ್ ಸೆಬಾಸ್ಟಿಯನ್ ವೆಟಲ್ ಅವರು ಈ ವರ್ಷಾಂತ್ಯದಲ್ಲಿ ನಿವೃತ್ತಿಯಾಗುವುದಾಗಿ ತಿಳಿಸಿದ್ದಾರೆ.

'ವಿದಾಯ ಕಷ್ಟದ ನಿರ್ಧಾರ ಎಂದು 'ಸಾರ್ವಕಾಲಿಕ ಶ್ರೇಷ್ಠ ಫಾರ್ಮುಲಾ ಚಾಲಕ'ರಲ್ಲಿ ಒಬ್ಬರಾದ, ಜರ್ಮನಿಯ 35 ವರ್ಷದ ವೆಟಲ್ ಹೇಳಿದ್ದಾರೆ.

2010, 2011, 2012 ಮತ್ತು 2013ರಲ್ಲಿ ಅವರು ವಿಶ್ವ ಚಾಂಪಿಯನ್ ಆಗಿದ್ದರು.

ಹಿಂದೆ ಸರಿದ ಪಾಕಿಸ್ತಾನ

ನವದೆಹಲಿ(ಪಿಟಿಐ): ಮಹಾಬಲಿಪುರಂನಲ್ಲಿ ನಡೆಯುತ್ತಿರುವ 44ನೇ ಚೆಸ್ ಒಲಿಂಪಿಯಾಡ್‌ನಿಂದ ಹಿಂದೆ ಸರಿದಿರುವ ಪಾಕಿಸ್ತಾನ ತಂಡದ ನಿರ್ಧಾರವನ್ನು ಭಾರತ ಖಂಡಿಸಿದೆ. ಪಾಕಿಸ್ತಾನದ ಈ ನಡೆಯು ಅತ್ಯಂತ ದುರದೃಷ್ಟಕರ ಎಂದಿರುವ ಭಾರತ, ಪ್ರತಿಷ್ಠಿತ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ರಾಜಕೀಯ ಬೆರೆಸಲಾಗುತ್ತಿದೆ ಎಂದು ಟೀಕಿಸಿದೆ.

ಪಾಕ್ ನಿರ್ಧಾರದ ಕುರಿತು ಪ್ರತಿಕ್ರಿಯಿಸಿರುವ ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ, ಪಾಕಿಸ್ತಾನ ಕೂಟದಲ್ಲಿ ಏಕಾಏಕಿ ಭಾಗವಹಿಸದಿರುವ ನಿರ್ಧಾರ ಕೈಗೊಂಡಿರುವುದು ಅಚ್ಚರಿಯನ್ನುಂಟುಮಾಡಿದೆ ಎಂದಿದ್ದಾರೆ.

ಮುಕ್ತ ಶೂಟಿಂಗ್ ನಾಳೆಯಿಂದ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾಡಳಿತದ ಸಹಯೋಗದಲ್ಲಿ ಮಂಗಳೂರು ಶೂಟಿಂಗ್ ಕ್ಲಬ್ ಆಯೋಜಿಸಿರುವ ರಾಷ್ಟ್ರ ಮಟ್ಟದ ಓಪನ್ ಶೂಟಿಂಗ್ ಸ್ಪರ್ಧೆ ಇದೇ 30ರಿಂದ ಆಗಸ್ಟ್ 7ರ ವರೆಗೆ ನಡೆಯಲಿದೆ.

ಆರಂಭಿಕ ಸುತ್ತಿನ ಸ್ಪರ್ಧೆಗಳು ಕದ್ರಿಯ ಮಲ್ಲಿಕಟ್ಟೆಯಲ್ಲಿರುವ ಜುಗಲ್ ಟವರ್ಸ್‌ನಲ್ಲಿ, ಫೈನಲ್ ಸ್ಪರ್ಧೆಗಳು ಜಿಲ್ಲಾ ಕ್ರೀಡಾಂಗಣದ ಯು.ಎಸ್. ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿವೆ. '10 ಮೀಟರ್ ಏರ್ ರೈಫಲ್ ಮತ್ತು ಏರ್ ಪಿಸ್ತೂಲು ವಿಭಾಗದಲ್ಲಿ ಸೀನಿಯರ್, ಯೂತ್, ಸಬ್ ಯೂತ್ ಮತ್ತು ಜೂನಿಯರ್ ವಿಭಾಗಗಳಲ್ಲಿ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆಗಳು ಇರುತ್ತವೆ. ಒಟ್ಟು ₹ 6.45 ಲಕ್ಷ ಮೊತ್ತದ ಬಹುಮಾನ ನೀಡಲಾಗುವುದು. ' ಎಂದು ಮಂಗಳೂರು ಶೂಟಿಂಗ್ ಕ್ಲಬ್ ಕಾರ್ಯದರ್ಶಿ ಮುಕೇಶ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕ್ರಿಕೆಟ್: ಶಿಖರ್ ಪಡೆಗೆ ಸರಣಿ ಕಿರೀಟ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಯಜುವೇಂದ್ರ ಚಾಹಲ್ ಸ್ಪಿನ್ ಮೋಡಿಯ ಮುಂದೆ ಬುಧವಾರ ತಡ ರಾತ್ರಿ ಮುಗಿದ ಏಕದಿನ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಸೋಲಿನ ಕಹಿ ಅನುಭವಿಸಿತು.

ಕ್ವೀನ್ಸ್ ಪಾರ್ಕ್ ಓವಲ್‌ನಲ್ಲಿ ಶಿಖರ್ ಧವನ್ ನಾಯಕತ್ವದ ಭಾರತ ತಂಡವು ಮೂರನೇ ಹಾಗೂ ಕೊನೆಯ ಪಂದ್ಯದಲ್ಲಿ 119 ರನ್‌ಗಳಿಂದ ಜಯಿಸಿತು. 3–0 ಯಿಂದ ಕ್ಲೀನ್‌ಸ್ವೀಪ್ ಸಾಧನೆ ಮಾಡಿತು. ಮಳೆಯಿಂದಾಗಿ ಕೆಲಹೊತ್ತು ಪಂದ್ಯ ಸ್ಥಗಿತವಾದ ಕಾರಣ ಡಕ್ವರ್ಥ್–ಲೂಯಿಸ್ ನಿಯಮದ ಅನ್ವಯ 36 ಓವರ್‌ಗಳಿಗೆ ಇನಿಂಗ್ಸ್ ನಿಗದಿಯಾಗಿತ್ತು.

ಭಾರತ ತಂಡವು ಸತತ 12ನೇ ಏಕದಿನ ಸರಣಿ ಗೆದ್ದ ವಿಶ್ವದಾಖಲೆ ಬರೆಯಿತು. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತ ತಂಡವು ಶುಭಮನ್ ಗಿಲ್ (ಔಟಾಗದೆ 98; 74ಎಸೆತ, 4X7) ಮತ್ತು ಶಿಖರ್ ಧವನ್ (58; 74ಎ) ಮೊದಲ ವಿಕೆಟ್‌ಗೆ 113 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಇದರಿಂದಾಗಿ ತಂಡವು 36 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 225 ರನ್ ಗಳಿಸಿತು. ಅದಕ್ಕುತ್ತರವಾಗಿ ಆತಿಥೇಯ ತಂಡವು 26 ಓವರ್‌ಗಳಲ್ಲಿ 137 ರನ್‌ಗಳಿಗೆ ಆಲೌಟ್ ಆಯಿತು. ಚಾಹಲ್ (17ಕ್ಕೆ4) ವಿಂಡೀಸ್ ತಂಡಕ್ಕೆ ಬಲವಾದ ಪೆಟ್ಟುಕೊಟ್ಟರು. ಮಧ್ಯಮವೇಗಿ ಮೊಹಮ್ಮದ್ ಸಿರಾಜ್ (14ಕ್ಕೆ2) ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿಯೇ ಆರಂಭಿಕ ಬ್ಯಾಟರ್ ಕೈಲ್ ಮೇಯರ್ಸ್ ಮತ್ತು ಶಾಮ್ರಾ ಬ್ರೂಕ್ಸ್ ವಿಕೆಟ್‌ಗಳನ್ನು ಕಬಳಿಸಿದರು. ಇದರಿಂದಾಗಿ ತಂಡವು ರನ್ ಖಾತೆ ತೆರೆಯುವ ಮುನ್ನವೇ ಎರಡು ವಿಕೆಟ್‌ಗಳು ಉರುಳಿದರು. ತುಸು ಪ್ರತಿರೋಧ ತೋರಿದ ಶಾಯ್ ಹೋಪ್ (22; 33ಎ) ವಿಕೆಟ್ ಕಬಳಿಸಿದ ಚಾಹಲ್ ಗಾಯಕ್ಕೆ ಬರೆ ಎಳೆದರು.

ಮಧ್ಯದಲ್ಲಿ ಬ್ರೆಂಡನ್ ಕಿಂಗ್ ಮತ್ತು ನಿಕೊಲಸ್ ಪೂರನ್ ತಲಾ 42 ರನ್ ಗಳಿಸಿ ಇನಿಂಗ್ಸ್ ಬೆಳೆಸುವತ್ತ ಚಿತ್ತ ನೆಟ್ಟರು. ಆದರೆ, ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ಕನ್ನಡಿಗ ಪ್ರಸಿದ್ಧಕೃಷ್ಣ ಕ್ರಮವಾಗಿ ಕಿಂಗ್ ಮತ್ತು ಪೂರನ್ ವಿಕೆಟ್ ಪಡೆದು ಮಹತ್ವದ ತಿರುವು ನೀಡಿದರು. ಈ ಹಂತದಲ್ಲಿ ಚಾಹಲ್ ಕೊನೆಕ್ರಮಾಂಕದ ಮೂವರು ಬ್ಯಾಟರ್‌ಗಳ ವಿಕೆಟ್ ಕಬಳಿಸಿ ಇನಿಂಗ್ಸ್‌ಗೆ ತೆರೆಯೆಳೆದರು.

ಸಂಕ್ಷಿಪ್ತ ಸ್ಕೋರು: ಭಾರತ: 36 ಓವರ್‌ಗಳಲ್ಲಿ 3ಕ್ಕೆ225, ವೆಸ್ಟ್ ಇಂಡೀಸ್: 26 ಓವರ್‌ಗಳಲ್ಲಿ 137 (ಬ್ರೆಂಡನ್ ಕಿಂಗ್ 42, ನಿಕೊಲಸ್ ಪೂರನ್ 42, ಚಾಹಲ್ 17ಕ್ಕೆ4, ಶಾರ್ದೂಲ್ 17ಕ್ಕೆ2, ಮೊಹಮ್ಮದ್ ಸಿರಾಜ್ 14ಕ್ಕೆ2) ಫಲಿತಾಂಶ: ಭಾರತಕ್ಕೆ 119 ರನ್‌ಗಳ ಜಯ (ಡಿಎಲ್‌ಎಸ್ ಪದ್ಧತಿ).

ಭಾರತದ ಆಟಗಾರರ ಸಂಭ್ರಮ– ಎಎಫ್‌ಪಿ ಚಿತ್ರ

ಬೆಂಗಳೂರಿನ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ (ಕೆಎಸ್‌ಸಿಎ) ಗುರುವಾರ ಕೆಎಸ್‌ಸಿಎ ಅಂತರಕ್ಲಬ್ ಬ್ಯಾಡ್ಮಿಂಟನ್ ಟೂರ್ನಿಗೆ ಚಾಲನೆ ನೀಡಿದ ವಿಶ್ವ ಬ್ಯಾಡ್ಮಿಂಟನ್ ಕಂಚಿನ ಪದಕ ವಿಜೇತ ಆಟಗಾರ ಬಿ.ಸಾಯಿ ಪ್ರಣೀತ್. ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ (ಬಲ) ಮತ್ತಿತರರು ಇದ್ದಾರೆ– ಪ್ರಜಾವಾಣಿ ಚಿತ್ರ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ನವ ಭಾರತಕ್ಕಾಗಿ ನವ ಕರ್ನಾಟಕ

ವಸತಿ ಇಲಾಖೆ
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

ವರ್ಷ ಒಂದು
ಸಾಧನೆ ನೂರೊಂದು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

- 2021-22 ಸಾಲಿಗೆ ವಿವಿಧ ವಸತಿ ಯೋಜನೆಗಳಡಿ 5 ಲಕ್ಷ ಹೊಸ ಮನೆಗಳ ಗುರಿ ನೀಡಿದ್ದು, ಈ ಪೈಕಿ ಈಗಾಗಲೇ 1.50 ಲಕ್ಷ ಮನೆಗಳಿಗೆ ಕಾರ್ಯಾದೇಶ ನೀಡಿದೆ.
- ಕಳೆದ 3 ವರ್ಷಗಳ ಅವಧಿಯಲ್ಲಿ 3.56 ಲಕ್ಷ ಮನೆಗಳನ್ನು ಪೂರ್ಣಗೊಳಿಸಿ ರೂ. 6,034 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.
- ಕಳೆದ ಒಂದು ವರ್ಷದ ಅವಧಿಯಲ್ಲಿ ಒಟ್ಟು 1.03 ಲಕ್ಷ ಮನೆಗಳು ಪೂರ್ಣ ಹಾಗೂ ರೂ. 2,218 ಕೋಟಿ ಅನುದಾನ ಬಿಡುಗಡೆ ಮಾಡಿದೆ.
- ಕಳೆದ ಒಂದು ವರ್ಷದ ಅವಧಿಯಲ್ಲಿ 2,343 ನಿವೇಶನಗಳ ಹಂಚಿಕೆ ಮಾಡಿ, 5,565 ಎಕರೆ ಜಮೀನು ಕಾಯ್ದಿರಿಸಿದ್ದು, 1.60 ಲಕ್ಷ ನಿವೇಶನಗಳ ಹಂಚಿಕೆಗೆ ಕ್ರಮ.
- **ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)**
  - 2018ರ ಸಮೀಕ್ಷೆಯಂತೆ ರಾಜ್ಯದಲ್ಲಿ ಗುರುತಿಸಿದ ಒಟ್ಟು 25.40 ಲಕ್ಷ ವಸತಿ/ ನಿವೇಶನ ರಹಿತರ ಪಟ್ಟಿಗೆ ಕೇಂದ್ರದಿಂದ ಅನುಮೋದನೆ ನೀಡಿದ್ದು, ಇದರಿಂದ ರಾಜ್ಯದ 25 ಲಕ್ಷಕ್ಕೂ ಅಧಿಕ ವಸತಿ ರಹಿತರಿಗೆ ಅನುಕೂಲವಾಗಲಿದೆ.
  - 2021-22ನೇ ಸಾಲಿಗೆ ಕೇಂದ್ರದಿಂದ ರಾಜ್ಯಕ್ಕೆ 1.41 ಲಕ್ಷ ಮನೆಗಳ ಗುರಿ ಹಂಚಿಕೆ ಮಾಡಿದೆ.
  - ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ನೀಡಲಾಗುತ್ತಿದ್ದ ಸಹಾಯಧನ ರೂ.1.50 ಲಕ್ಷಗಳಿಂದ ರೂ.1.75 ಲಕ್ಷಗಳಿಗೆ ಹೆಚ್ಚಿಸಲಾಗಿದೆ.
- **ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)**
  - ಕಳೆದ ಒಂದು ವರ್ಷದಲ್ಲಿ 25941 ಮನೆಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದಿದ್ದು 10,926 ಮನೆಗಳನ್ನು ಪೂರ್ಣಗೊಳಿಸಲಾಗಿದೆ.
  - ಎ.ಎಚ್.ಪಿ ಘಟಕದಡಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ರಾಜೀವ್ ಗಾಂಧಿ ವಸತಿ ನಿಗಮದಿಂದ 11,546 ಮನೆಗಳು ಹಾಗೂ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ 97,134 ಮನೆಗಳ ನಿರ್ಮಾಣದ ಕಾಮಗಾರಿ ಪ್ರಾರಂಭಿಸಲಾಗಿದೆ.
- **ಮುಖ್ಯ ಮಂತ್ರಿಗಳ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ**
  - 413 ಎಕರೆ ಜಮೀನಿನಲ್ಲಿ 48,498 ಮನೆಗಳ ಕಾಮಗಾರಿ ಪ್ರಾರಂಭಿಸಿದ್ದು, ಈ ಪೈಕಿ 2,000 ಮನೆಗಳು ಪೂರ್ಣಗೊಂಡಿದ್ದು ಹಾಗೂ 10,000 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿವೆ.
  - ಈಗಾಗಲೇ 43,735 ಅರ್ಜಿ ಆನ್ ಲೈನ್ ನಲ್ಲಿ ಸ್ವೀಕರಿಸಿದ್ದು 5,744 ಅರ್ಜಿದಾರರಿಂದ ಮನೆಗಳ ಆಯ್ಕೆ ಪೂರ್ಣಗೊಂಡಿದೆ.
- **ರಾಜ್ಯದ ನೆರೆ ಸಂತ್ರಸ್ಥರಿಗೆ ಪುನರ್ ವಸತಿ ಯೋಜನೆ**
  2021-22ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ 53,636 ಮನೆಗಳಿಗೆ ರೂ. 341.56 ಕೋಟಿಗಳ ಪರಿಹಾರಧನ ಬಿಡುಗಡೆ ಮಾಡಿದೆ.
- **ಅಲೆಮಾರಿ / ಅರೆ ಅಲೆಮಾರಿ / ಕಾಡುಗೊಲ್ಲ / ಕೊರಗ / ಜೇನುಕುರುಬ, ಇತ್ಯಾದಿ ಜನರಿಗೆ** ಆದ್ಯತೆಯ ಮೇಲೆ ವಸತಿ ಸೌಕರ್ಯ ಕಲ್ಪಿಸಲು ದೇವರಾಜ ಅರಸು ವಸತಿ ಯೋಜನೆಯಡಿ 69,000 ಮನೆಗಳ ಹಂಚಿಕೆಗೆ ಕ್ರಮವಹಿಸಿದೆ.
- **ವಸತಿ ಫಲಾನುಭವಿಗಳ ನಿವೇಶನದ ಅಡಮಾನಕ್ಕೆ ಸಂಪೂರ್ಣ ವಿನಾಯಿತಿ :** ವಸತಿ ಯೋಜನೆಗಳಡಿ ಸ್ವಂತ ನಿವೇಶನದಲ್ಲಿ ಸಹಾಯಧನ ಪಡೆದು ನಿರ್ಮಿಸಿಕೊಂಡಿರುವ / ನಿರ್ಮಿಸಿಕೊಳ್ಳುತ್ತಿರುವ ಫಲಾನುಭವಿಗಳ ಮನೆ / ನಿವೇಶನಗಳನ್ನು ಸರ್ಕಾರದ ಹೆಸರಿಗೆ 10 ವರ್ಷಗಳವರೆಗೆ ಅಡಮಾನ ಇಡುವ ನಿಯಮಕ್ಕೆ ಸಂಪೂರ್ಣ ವಿನಾಯಿತಿ ನೀಡಿದೆ.
- ವಸತಿ ಯೋಜನೆಗಳಡಿ ಫಲಾನುಭವಿಗಳ ವಾರ್ಷಿಕ ಆದಾಯದ ಮಿತಿ ಗ್ರಾಮೀಣ ಪ್ರದೇಶದಲ್ಲಿ ರೂ.32,000/-ಗಳಿಂದ ರೂ.1.20 ಲಕ್ಷಕ್ಕೆ ಹಾಗೂ ನಗರ ಪ್ರದೇಶದಲ್ಲಿ 87,600/-ಗಳಿಂದ ರೂ.2.00 ಲಕ್ಷಕ್ಕೆ ಹೆಚ್ಚಿಸಲಾಗಿದೆ.

ಮಾಸ್ಕ್ ಧರಿಸಿ | ವ್ಯಕ್ತಿಗತ ಅಂತರ ಕಾಪಾಡಿ | ಆರೋಗ್ಯದಿಂದಿರಿ

ಮಾನ್ಯ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಶ್ರೀ ವಿ. ಸೋಮಣ್ಣನವರು ಯೋಜನೆಗಳ ಕಾಮಗಾರಿಗಳನ್ನು ಪರಿಶೀಲಿಸುತ್ತಿರುವುದು

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
ಕಾವೇರಿ ಭವನ, 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕೆಂಪೇಗೌಡ ರಸ್ತೆ, ಬೆಂಗಳೂರು - 560009. ದೂರವಾಣಿ: 080-2311 8888, ಫ್ಯಾಕ್ಸ್: 080-22247317

ಡಾ. ಜೆ. ರವಿಶಂಕರ್ ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿ
ವಸತಿ ಇಲಾಖೆ

ಡಾ. ಬಸವರಾಜು ಎಸ್. ಭಾ.ಆ.ಸೇ
ವ್ಯವಸ್ಥಾಪಕ ನಿರ್ದೇಶಕರು
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸಿನಿಮಾ ಪುರವಣಿ

‘ಡೊಳ್ಳು’ ಸದ್ದು ಕಾರ್ತಿಕ್ ಹೆಜ್ಜೆಯೂ...

ಕನ್ನಡದ ಹಲವು ಧಾರಾವಾಹಿಗಳಲ್ಲಿ ಮಿಂಚಿದ ಮೈಸೂರಿನ ಹುಡುಗ ಕಾರ್ತಿಕ್ ಮಹೇಶ್ ಅವರು ನಾಯಕ ನಟನಾಗಿರುವ ಮೊದಲ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಬಂದಿದೆ. ಬಿಎಸ್‌ಸಿ ಕಂಪ್ಯೂಟರ್ ವಿಜ್ಞಾನದ ವಿದ್ಯಾರ್ಥಿಗೆ ನಟನೆಯ ಗೀಳು ಅದ್ಹೇಗೆ ಹತ್ತಿತೋ ಗೊತ್ತಿಲ್ಲ. ಅಂತೂ ಬಣ್ಣದ ಬದುಕು ಕೈ ಹಿಡಿದಿದೆ. ‘ಡೊಳ್ಳು’ ಚಿತ್ರ ಆ. 19ರಂದು ಬಿಡುಗಡೆ ಆಗುತ್ತಿರುವ ಹೊತ್ತಿನಲ್ಲಿ ಕಾರ್ತಿಕ್ ಜೊತೆ ಒಂದಿಷ್ಟು ಮಾತುಕತೆ.

ಶರತ್ ಹೆಗ್ಡೆ

● ಬೆಳ್ಳಿ ತೆರೆಗೆ ಬರುವ ಮುನ್ನ ನಿಮ್ಮ ಸಿದ್ಧತೆ ಹೇಗಿತ್ತು?

– ಕಾಲೇಜು ದಿನಗಳಲ್ಲಿ ನಾಟಕ, ಮೂಕಾಭಿನಯ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಪ್ರೇಕ್ಷಕರ ಚಪ್ಪಾಳೆ, ಪ್ರೋತ್ಸಾಹ ನೋಡಿದಾಗ ಇದನ್ನೇ ಮುಂದುವರಿಸಬೇಕು ಎಂಬ ತುಡಿತ ನಿಧಾನಕ್ಕೆ ನನ್ನಲ್ಲಿ ಮೂಡಿತು. ಜನರನ್ನು ಸೆಳೆಯಬಲ್ಲೆ ಎಂಬ ವಿಶ್ವಾಸವೂ ನನ್ನಲ್ಲಿತ್ತು. ನನ್ನೊಳಗೇ ಒಂದು ಕಿಡಿ ಹೊತ್ತಿತು. ರಂಗಕರ್ಮಿಯಾಗಿದ್ದ ಸೋದರ ಮಾವನ ಪ್ರಭಾವವೂ ಇತ್ತು. ಹಾಗಾಗಿಯೇ ಆಗಾಗ ಬೆಂಗಳೂರಿಗೆ ಬಂದು ಆಡಿಷನ್‌ನಲ್ಲಿ ಭಾಗವಹಿಸುತ್ತಿದ್ದೆ. ಸ್ಟಾರ್ ಸುವರ್ಣದ ‘ಖುಷಿ’, ‘ಅಕ್ಕ’ ‘ಮಹಾಕಾಳಿ’, ‘ರಾಜಿ’, ಕಲರ್ಸ್ ಕನ್ನಡದ ‘ಶನಿ’, ಜೀ ಕನ್ನಡದ, ‘ಪುಟ್ಟಕ್ಕನ ಮಕ್ಕಳು’ ಧಾರಾವಾಹಿಗಳಲ್ಲಿ ಕಾಣಿಸಿಕೊಂಡಿದ್ದೇನೆ. ಈಗಲೂ ‘ರಾಜಿ’ ಧಾರಾವಾಹಿಯಲ್ಲಿ ನಟನೆ ಮುಂದುವರಿದಿದೆ. ಈ ವೇಳೆಗೆ ಸುನೀಲ್ ಪುರಾಣಿಕ್ ಅವರ ಅಭಿನಯದ ಧಾರಾವಾಹಿಯಲ್ಲಿ ನಟಿಸಿದ್ದೆ. ಹಾಗೆ ಅವರ ಪುತ್ರ ಸಾಗರ್ ಜೊತೆ ಸ್ನೇಹ ಬೆಳೆಯಿತು. ಈಗ ಇಲ್ಲಿವರೆಗೆ ಬಂದಿದ್ದೇನೆ.

● ಜೀವನ ಹೇಗಿದೆ?

ಈಗ ಪರವಾಗಿಲ್ಲ. ಕಷ್ಟದ ದಿನಗಳನ್ನು ನೋಡಿಯೇ ಬಂದಿದ್ದೇನೆ. ಈಗ ಕುಟುಂಬ ಸಲಹುವಷ್ಟರ ಮಟ್ಟಿಗೆ ಗಳಿಕೆ ಇದೆ. ಕೋವಿಡ್‌ನಿಂದಾಗಿ ತಂದೆ ತೀರಿಕೊಂಡರು. ಅವರ ಫ್ಯಾಬ್ರಿಕೇಷನ್ ಉದ್ಯಮವನ್ನೂ ನೋಡಿಕೊಳ್ಳುತ್ತಿದ್ದೇನೆ. ಸಹೋದರಿಯ ಮದುವೆ ಸಿದ್ಧತೆಯಲ್ಲಿದ್ದೇನೆ. ಕಲಾ ಬದುಕು ಎಲ್ಲವನ್ನೂ ಕೊಟ್ಟಿದೆ. ಕೊಡುತ್ತಲೂ ಇದೆ.

● ‘ಡೊಳ್ಳು’ ಚಿತ್ರಕ್ಕೆ ಪ್ರಶಸ್ತಿಯ ನಿರೀಕ್ಷೆ ಇತ್ತೇ?

ಖಂಡಿತಾ ಇರಲಿಲ್ಲ. ಆ ಸುದ್ದಿ ಕೇಳಿದಾಕ್ಷಣ ನನಗೇ ನಂಬಲಾಗಲಿಲ್ಲ. ನನ್ನ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದೇನೆ ಎಂದಷ್ಟೇ ಹೇಳಬಲ್ಲೆ. ಇದಕ್ಕೆ ಕಾರಣರಾದವರು ನಿರ್ದೇಶಕ ಸಾಗರ್ ಪುರಾಣಿಕ್, ನಿರ್ಮಾಪಕ ಪವನ್ ಒಡೆಯರ್ ಸೇರಿದಂತೆ ಇಡೀ ಚಿತ್ರ ತಂಡ. ಅವರೆಲ್ಲರಿಗೆ ನಾನು ಕೃತಜ್ಞ.

● ಈ ಚಿತ್ರದ ಅನುಭವ?

ತುಂಬಾ ಇದೆ. ‘ಡೊಳ್ಳು’ ನಮ್ಮ ನಾಡಿನ ಕಲೆ, ಸಂಸ್ಕೃತಿಯನ್ನು ಎತ್ತಿ ಹಿಡಿಯುವ ವಾದ್ಯ. ಚಿತ್ರದಲ್ಲಿ ತೋರಿಸಿರುವ ವಸ್ತುವೂ ಅದೇ. ಹಾಗಾಗಿ ಚಿತ್ರದ ವಸ್ತುವಿನ ಮೇಲೆ ಪ್ರೀತಿಯಿದೆ. ನನಗೆ ಡೊಳ್ಳು ಬಾರಿಸಲು ಗೊತ್ತಿಲ್ಲ. ಅದನ್ನು ಆ ವೃತ್ತಿಯವರಿಂದ ಕಲಿತೆ. ಅವರಿಂದ ಕಲಿತು, ಶೂಟಿಂಗ್ ವೇಳೆ ಅವರ ಜೊತೆಗೇ ಹೆಜ್ಜೆ ಹಾಕಬೇಕಿತ್ತು. ತುಂಬಾ ಸವಾಲು ಇತ್ತು. ಒಂದೊಂದು ಷಾಟ್ ಮುಗಿದಾಗಲೂ ಸುಸ್ತು ಹೊಡೆಯುತ್ತಿದ್ದೆವು. ಬಿಸಿಲಿಗೆ ಚರ್ಮ ಸುಟ್ಟು ಹೋಗುತ್ತಿತ್ತು. ಕಾಲಿನಲ್ಲಿ ಬೊಬ್ಬೆ ಏಳುತ್ತಿದ್ದವು. ಹಾಗಿದ್ದರೂ ಎಲ್ಲ ನೋವುಗಳನ್ನು ಬದಿಗಿರಿಸಿ ಕೆಲಸ ಮಾಡಿದ್ದೇನೆ. ಉಳಿದವರೂ ಶ್ರಮವಹಿಸಿದ್ದಾರೆ. ಒಳ್ಳೆಯ ಕೆಲಸಕ್ಕೆ ಒಳ್ಳೆಯ ಫಲ ಬಂದೇ ಬರುತ್ತದೆ ಎಂಬುದಕ್ಕೆ ಇದೇ ಉದಾಹರಣೆ ನೋಡಿ.

● ಮುಂದಿನ ಕನಸುಗಳೇನು? ಅಭಿಮಾನಿಗಳಿಗೆ ಏನು ಹೇಳುತ್ತೀರಿ?

ದೊಡ್ಡ ಕನಸುಗಳೇನೂ ಇಲ್ಲ. ಜನ ಭರವಸೆ ಇಟ್ಟುಕೊಳ್ಳುವ ಒಳ್ಳೆಯ ನಟ ಅನ್ನಿಸಿಕೊಳ್ಳಬೇಕು. ನಾನು ಕಲಿಯುವುದು ಇನ್ನೂ ತುಂಬಾ ಇದೆ. ಆಗಸ್ಟ್ 19ರಂದು ‘ಡೊಳ್ಳು’ ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗುತ್ತಿದೆ. ಬಂದು ಚಿತ್ರ ನೋಡಿ ಎಂದು ಅಭಿಮಾನಿಗಳಲ್ಲಿ ವಿನಂತಿಸುತ್ತೇನೆ. ಅವರ ಪ್ರತಿಕ್ರಿಯೆ ಏನು ಬರುತ್ತದೋ ಎಂಬ ಕುತೂಹಲ ಮತ್ತು ಆತಂಕ ಎರಡೂ ಇವೆ. ಆದರೂ ಅವರಿಟ್ಟ ನಂಬಿಕೆಯನ್ನು ನಮ್ಮ ಚಿತ್ರ ಉಳಿಸುತ್ತದೆ ಎಂಬ ವಿಶ್ವಾಸವೂ ನನ್ನದು. ❖

ಸಿನಿಮಾತು
ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸಿನಿ ಸಂಕ್ಷಿಪ್ತ

‘ಓಮಿನಿ’ ಸಂಚಾರಕ್ಕೆ ಸಿದ್ಧ

‘ಓಮಿನಿ’ ಅಂದರೆ ಎಲ್ಲಾ, ಸರ್ವಾಂತರ್ಯಾಮಿ ಎಂದೆಲ್ಲಾ ಅರ್ಥವಿದೆ. ಆದರೆ, ಈ ಶಬ್ದ ಜನಪ್ರಿಯವಾದದ್ದು ಓಮ್ನಿ ಹೆಸರಿನ ಕಾರಿನಿಂದ. ಈಗ ಅದೇ ಹೆಸರಿನಲ್ಲಿ ‘ಓಮಿನಿ’ ಎಂಬ ಚಿತ್ರ ಬಂದಿದೆ. ಚಿತ್ರದ ಟ್ರೇಲರ್ ಅನ್ನು ಗೃಹಸಚಿವ ಆರಗ ಜ್ಞಾನೇಂದ್ರ ಬಿಡುಗಡೆಗೊಳಿಸಿದರು.

ತೀರ್ಥಹಳ್ಳಿಯವರಾದ ಮಂಜು ಹೆದ್ದೂರು ಈ ಚಿತ್ರದ ನಿರ್ದೇಶಕ. ಕಥೆಯೂ ಅವರದ್ದೇ. ಶೀರ್ಷಿಕೆಯ ಹಾಗೆಯೇ ‘ಓಮಿನಿ’ ಕಾರು ಕೂಡಾ ಈ ಚಿತ್ರದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಆ. 19ರಂದು ಚಿತ್ರ ಬಿಡುಗಡೆಯಾಗಲಿದೆ.

‘ಚಿತ್ರವೊಂದರ ಒಳಗೆ ಚಿತ್ರವನ್ನು ತೋರಿಸುವ ಪ್ರಯತ್ನ ಮಾಡಿದ್ದೇವೆ. ಲವ್, ಸಸ್ಪೆನ್ಸ್, ಹಾರರ್ ಎಲ್ಲಾ ಅಂಶಗಳು ನಮ್ಮ ಚಿತ್ರದಲ್ಲಿವೆ. ತೀರ್ಥಹಳ್ಳಿಯ ಸುಂದರ ಪರಿಸರದಲ್ಲೇ ಹೆಚ್ಚು ಚಿತ್ರೀಕರಣ ನಡೆದಿದೆ. ದಾವಣಗೆರೆಯ ಗ್ಲಾಸ್ ಹೌಸ್‌ನಲ್ಲಿ ಚಿತ್ರೀಕರಣ ನಡೆದಿದೆ. ಇದು ನಾನು ನಾಯಕನಾಗಿ ನಟಿಸಿರುವ ಮೊದಲ ಚಿತ್ರ’ ಎಂದರು ನಾಯಕ ಸಿದ್ದು ಮೂಲಿಮನಿ.

‘ಹಲವು ವರ್ಷಗಳ ನಂತರ ಕನ್ನಡ ಚಿತ್ರವೊಂದರಲ್ಲಿ ನಟಿಸಿದ್ದೇನೆ. ಒಳ್ಳೆಯ ಪಾತ್ರ ನೀಡಿದ್ದಾರೆ. ನಾನು ಮಲೆನಾಡ ಹುಡುಗಿ. ಅದೇ ಊರಿನ ಹುಡುಗಿ ಪಾತ್ರ ಸಿಕ್ಕಿರುವುದು ಖುಷಿಯಾಗಿದೆ’ ಎಂದರು ನಾಯಕಿ ಅಶ್ವಿನಿ ಚಂದ್ರಶೇಖರ್.

ಶ್ರೀ ಬೆಳ್ಳುಡಿ ಫಿಲಂಸ್ ಹಾಗೂ ಎಸ್ ಆರ್ ಗ್ರೂಪ್ಸ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಮಂಜು ಹೆದ್ದೂರ್ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಅರ್ಜುನ್ ರಾಮು ಸಂಗೀತ ನಿರ್ದೇಶನ ಹಾಗೂ ಎಂ.ಬಿ. ಅಳ್ಳಿಕಟ್ಟಿ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಪೂಜಾ ಜನಾರ್ದನ, ಭರತ್ ಬೋಪಣ್ಣ, ಮಂಜು ಹೆದ್ದೂರ್, ಆಕಾಂಕ್ಷಾ ಪಟಮಕ್ಕಿ, ಮೋಹನ್ ಜುನೇಜ, ಪ್ರಕಾಶ್ ತೂಮಿನಾಡು, ಮನಸ್ವಿತ್ ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ರಂಗಸಮುದ್ರ ಚಿತ್ರೀಕರಣ ಮುಕ್ತಾಯ

ಹೊಯ್ಸಳ ಕ್ರಿಯೇಷನ್ಸ್‌ನಿಂದ ಕೆ.ಆರ್. ಹೊಯ್ಸಳ ನಿರ್ಮಿಸುತ್ತಿರುವ ‘ರಂಗಸಮುದ್ರ’ ಚಿತ್ರದ ಚಿತ್ರೀಕರಣ ಇತ್ತೀಚೆಗೆ ಮುಕ್ತಾಯವಾಗಿದೆ. ಶೇ 85ರಷ್ಟು ಚಿತ್ರೀಕರಣ ರಾಜ್ಯದ ವಿವಿದೆಡೆಗಳಲ್ಲಿ ನಡೆದಿದೆ. ಬೆಂಗಳೂರು ಹೊರವಲಯದ ವಿದ್ಯಾನಗರದಲ್ಲಿ ಚಿತ್ರದ ಅಂತಿಮ ಹಂತದ ಪೂರಕ ಸನ್ನಿವೇಶಗಳನ್ನು ನಿರ್ದೇಶಕ ರಾಜಕುಮಾರ್ ಅಸ್ಕಿ ನಿರ್ದೇಶನದಲ್ಲಿ ಹಿರಿಯ ಛಾಯಾಗ್ರಾಹಕ ಗಿರಿ ಚಿತ್ರೀಕರಿಸಿಕೊಂಡರು.

ರಂಗಾಯಣ ರಘು, ಸಂಪತ್ ರಾಜ್, ಕರಾವಳಿಯ ಕೆವಿಆರ್ ಮತ್ತು ದಿವ್ಯಾ ಗೌಡ, ಗುರುರಾಜ್ ಹೊಸಕೋಟೆ ಮೋಹನ್ ಜುನೇಜ, ಮೂಗು ಸುರೇಶ್, ಉಗ್ರಂ ಮಂಜು, ಸ್ಕಂದ ತೇಜಸ್, ಡ್ರಾಮಾ ಜ್ಯೂನಿಯರ್ ಮಹೇಂದ್ರ ಮತ್ತಿತರರು ಚಿತ್ರದ ಭೂಮಿಕೆಯಲ್ಲಿದ್ದಾರೆ. ಚಿತ್ರದ ಪ್ರಮುಖ ದೃಶ್ಯಕ್ಕೆ ಅಂತಿಮ ಹಂತದ ಚಿತ್ರೀಕರಣ ಕಳೆದ ಅಕ್ಟೋಬರ್‌ನಲ್ಲಿ ನಡೆಯಬೇಕಿತ್ತು. ಇದಕ್ಕಾಗಿ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರನ್ನು ಚಿತ್ರತಂಡ ಸಂಪರ್ಕಿಸಿತ್ತು. ಆದರೆ ವಿಧಿ ಅವರನ್ನು ಹಠಾತ್ ಸೆಳೆದೊಯ್ದಿತ್ತು. ಈ ಘಟನೆಯಿಂದ ಚಿತ್ರತಂಡ ಶಾಕ್ ಗೆ ಒಳಗಾಗಿತ್ತು. ಇದೀಗ ಇನ್ನೊಬ್ಬರು ಸ್ಟಾರ್ ನಟರು ಆ ದೃಶ್ಯದಲ್ಲಿ ನಟಿಸಿದ್ದಾರೆ. ಆ ನಟ ಯಾರು ಎಂಬ ಗುಟ್ಟನ್ನು ಚಿತ್ರತಂಡ ಬಹಿರಂಗಪಡಿಸಿಲ್ಲ.

ಚಿತ್ರಕ್ಕೆ ದೇಸೀ ಮೋಹನ್ ಸಂಗೀತ ನೀಡಿದ್ದಾರೆ. ಸಂಕಲನ ಶ್ರೀಕಾಂತ್, ವಾಗೀಶ್ ಚನ್ನಗಿರಿ ಗೀತ ಸಾಹಿತ್ಯ ನೀಡಿದ್ದಾರೆ. ಚಿತ್ರದ ಹಾಡುಗಳಿಗೆ ಖ್ಯಾತ ಗಾಯಕರಾದ ಕೈಲಾಶ್ ಖೇರ್, ಕೀರವಾಣಿ, ವಿಜಯ್ ಪ್ರಕಾಶ್, ಸಂಜಿತ್ ಹೆಗ್ಡೆ ಧ್ವನಿಯಾಗಿದ್ದಾರೆ. ಶೀಘ್ರದಲ್ಲಿಯೇ ಚಿತ್ರದ ಟೀಸರ್ ಬಿಡುಗಡೆಯಾಗಲಿದೆ ಎಂದು ನಿರ್ಮಾಪಕ ಕೆ.ಆರ್.ಹೊಯ್ಸಳ ಅವರು ತಿಳಿಸಿದ್ದಾರೆ. ❖

ಒಟಿಟಿ

ವೂಟ್‌ನಲ್ಲಿ ಚಾರ್ಲಿ, ಪ್ರೈಮ್‌ನಲ್ಲಿ ಟಕ್ಕರ್

ರಂಜನಿ ರಾಘವನ್, ಮನೋಜ್

777 ಚಾರ್ಲಿ (ಕನ್ನಡ)

ನಾಯಿ ಮತ್ತು ಮನುಷ್ಯನ ನಡುವಿನ ಬಾಂಧವ್ಯದ ಕಥೆಯ ‘777 ಚಾರ್ಲಿ’ ಈಗ ವೂಟ್ (Voot Select) ಒಟಿಟಿ ವೇದಿಕೆ ಹತ್ತಿದೆ. ಜುಲೈ 29ರಿಂದ ‘...ಚಾರ್ಲಿ’ಯ ಕನ್ನಡ ಆವೃತ್ತಿಯನ್ನು ವೂಟ್‌ನಲ್ಲಿ ವೀಕ್ಷಿಸಬಹುದು. 48 ದಿನಗಳ ಕಾಲ ಯಶಸ್ವಿ, ಭರ್ಜರಿ ಪ್ರದರ್ಶನ ಕಂಡ ಚಾರ್ಲಿಯನ್ನು ಈಗ ಬೇಕೆಂದಾಗ ವೀಕ್ಷಿಸುವ ಅವಕಾಶವಿದೆ ಎಂದು ವೂಟ್ ತಂಡ ಹೇಳಿದೆ. 50ನೇ ದಿನದ ಸಂಭ್ರಮಾಚರಣೆಗೆ ಚಿತ್ರತಂಡ ಥಾಯ್ಲೆಂಡ್‌ಗೆ ತೆರಳಲಿದೆಯಂತೆ.

ಟಕ್ಕರ್

ಮೇ ತಿಂಗಳಲ್ಲಿ ಬಿಡುಗಡೆಯಾಗಿದ್ದ ಸಿನಿಮಾ ಟಕ್ಕರ್. ಈಗ ಅಮೆಜ಼ಾನ್ ಪ್ರೈಮ್‌ನಲ್ಲಿ ಪ್ರಸಾರವಾಗುತ್ತಿದೆ. ಸೈಬರ್ ಕ್ರೈಂ ಕಥಾವಸ್ತು ಹೊಂದಿರುವ ಚಿತ್ರ ಟಕ್ಕರ್. ಕಾಲೇಜಿನ ಎರಡು ಗುಂಪುಗಳ ಸುತ್ತ ಬೆಳೆಯುವ ಕಥೆ, ಹೊಡೆದಾಟ, ಪೊಲೀಸ್ ಸ್ಟೇಷನ್, ಕೋರ್ಟ್... ಇತ್ಯಾದಿ ಮಸಾಲೆಯನ್ನೂ ಹೊಂದಿದೆ. ಮನೋಜ್ ಕುಮಾರ್ ಈ ಚಿತ್ರದ ನಾಯಕ. ರಂಜನಿ ರಾಘವನ್ ನಾಯಕಿ. ಭಜರಂಗಿ ಲೋಕಿ, ಸಾಧುಕೋಕಿಲ ಮತ್ತಿತರರು ತಾರಾಗಣದಲ್ಲಿದ್ದಾರೆ. ❖

ಶೀರ್ಷಿಕೆಯಲ್ಲಿ ಅನ್ ಲಾಕ್ ಆದ ‘...ರಾಘವ’

ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ, ‘ರಾಮಾ ರಾಮಾ ರೇ’, 'ಒಂದಲ್ಲಾ ಎರಡಲ್ಲಾ', ‘ಮ್ಯಾನ್ ಆಫ್ ದಿ ಮ್ಯಾಚ್’ನಂತಹ ಅಪರೂಪದ ಸಿನಿಮಾ ಕಥೆ ಹೇಳಿ ಯಶಸ್ವಿಯಾಗಿರುವ ನಿರ್ದೇಶಕ ಸತ್ಯಪ್ರಕಾಶ್ ನಿರ್ಮಾಣದ ಹೊಸ ಸಿನಿಮಾ ‘ಅನ್ ಲಾಕ್ ರಾಘವ’.



ರಾಚೆಲ್ ಡೇವಿಡ್, ಮಿಲಿಂದ್

ಸತ್ಯ ಆ್ಯಂಡ್ ಮಯೂರ ಪಿಕ್ಚರ್ಸ್ ವತಿಯಿಂದ ಈ ಚಿತ್ರ ನಿರ್ಮಾಣವಾಗುತ್ತಿದೆ. ಚಿತ್ರದ ಶೀರ್ಷಿಕೆ ಹಾಗೂ ಫಸ್ಟ್‌ಲುಕ್ ಅನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ಇತ್ತೀಚೆಗೆ ಬಿಡುಗಡೆ ಮಾಡಿದರು.

ನಿರ್ಮಾಪಕ ಸತ್ಯಪ್ರಕಾಶ್ ಮಾತನಾಡಿ, ಈ ಕ್ಷೇತ್ರಕ್ಕೆ ಬಂದಾಗ ದೊಡ್ಡ ತಂಡ ಕಟ್ಟಬೇಕು ಎಂಬ ಆಸೆ ಇತ್ತು. ದೀಪಕ್ ಮಧುವನಹಳ್ಳಿ ನಿರ್ದೇಶನ ಮಾಡುತ್ತಿರುವ ಈ ಸಿನಿಮಾ ನಿಜವಾದ ಕಮರ್ಷಿಯಲ್ ಸಿನಿಮಾ. ಪ್ರಸ್ತುತಿಯೂ ಹೊಸ ರೀತಿ ಇದೆ. ಇಡೀ ಸಿನಿಮಾ ರೋಮ್ಯಾಂಟಿಕ್ ಕಾಮಿಡಿ ಒಳಗೊಂಡಿದೆ. ಇಲ್ಲಿ ಮೂರು ರೀತಿಯ ಕಾಮಿಡಿ ಇದೆ. ಪಾತ್ರ ಏನು ಮಾತನಾಡುತ್ತದೆ ಎಂದು ಗೊತ್ತಿಲ್ಲ. ಆದರೆ ಪ್ರೇಕ್ಷಕ ನಗುತ್ತಾನೆ. ಅನೂಪ್ ಸೀಳಿನ್ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ’ ಎಂದರು.

‘ಭಾಗ್ಯರಾಜ್’, ‘ಕಳ್ಬೆಟ್ಟದ ದರೋಡೆಕೋರರು’, ‘ರಾಜು ಜೇಮ್ಸ್ ಬಾಂಡ್’ ಚಿತ್ರಗಳನ್ನು ನಿರ್ದೇಶಿಸಿರುವ ದೀಪಕ್ ಮಧುವನಹಳ್ಳಿ ಈ ಚಿತ್ರದ ನಿರ್ದೇಶಕರು. ‘ವೀಕೆಂಡ್’ ಸಿನಿಮಾ ಮೂಲಕ ಭರವಸೆ ಮೂಡಿಸಿರುವ ನವನಟ ಮಿಲಿಂದ್ ನಾಯಕ ಹಾಗೂ ‘ಲವ್ ಮಾಕ್ಟೇಲ್ – 2’ ಚಿತ್ರದ ರೇಚಲ್ ಡೇವಿಡ್ ನಾಯಕಿ. ಸಾಧುಕೋಕಿಲ, ಅವಿನಾಶ್, ರಮೇಶ್ ಭಟ್, ಸುಂದರ್ ವೀಣಾ, ಧರ್ಮಣ್ಣ ಕಡೂರು, ಭೂಮಿಶೆಟ್ಟಿ ಮೊದಲಾದ ಕಲಾವಿದರು ಮುಖ್ಯಭೂಮಿಕೆಯಲ್ಲಿ ನಟಿಸುತ್ತಿದ್ದಾರೆ. ಲವಿತ್ ಛಾಯಾಗ್ರಹಣ ಹಾಗೂ ಅಜಯ್ ಕುಮಾರ್ ಸಂಕಲನವಿದೆ. ❖

‘ಅಮ್ಮನ ಮದುವೆ’ ‘ವಿಜಯದಶಮಿ’ ಸಂಭ್ರಮ

ನಟ ರಾಘವೇಂದ್ರ ರಾಜ್‌ಕುಮಾರ್ – ಮಂಗಳಾ ರಾಜ್‌ಕುಮಾರ್ ಅವರು ತಮ್ಮ ಪೂರ್ಣಿಮಾ ಎಂಟರ್‌ಪ್ರೈಸಸ್ ಬ್ಯಾನರ್ ಅಡಿ ನಿರ್ಮಿಸಿದ ‘ವಿಜಯ ದಶಮಿ’ ಮತ್ತು ನ್ಯೂ ಡಿ2 ಮೀಡಿಯಾ ನಿರ್ಮಾಣದ ‘ಅಮ್ಮನ ಮದುವೆ’ ಧಾರಾವಾಹಿಗಳು ಆಗಸ್ಟ್ 1ರಿಂದ ಸಿರಿ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಲಿದೆ.

‘ಅಮ್ಮನ ಮದುವೆ’ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 8ಕ್ಕೆ, ‘ವಿಜಯ ದಶಮಿ’ ಧಾರಾವಾಹಿ ಇದೇ ದಿನಗಳಂದು ರಾತ್ರಿ 8.30ಕ್ಕೆ ಪ್ರಸಾರವಾಗಲಿವೆ.

ಮದುವೆಯಾಗಿ ಜೀವನ ರೂಪಿಸಿಕೊಳ್ಳಲು ಹೊರಟ ಮಗಳು, ತಾಯಿಯ ಒಂಟಿತನಕ್ಕೆ ಉತ್ತರವಾಗಿ ಅವಳಿಗೊಂದು ಬದುಕು ಕಟ್ಟಿಕೊಡಲು ನಡೆಸುವ ಹೋರಾಟದ ಭಾವುಕ ಕಥೆ ‘ಅಮ್ಮನ ಮದುವೆ’.

ವಿಜಯ, ದಶಮಿ ಎಂಬ ಇಬ್ಬರು ನಾಯಕಿಯರ ಬದುಕಿನಲ್ಲಿ ನಡೆಯುವ ಸನ್ನಿವೇಶಗಳು ‘ವಿಜಯದಶಮಿ’ಯ ಕಥೆ. ಈ ಧಾರಾವಾಹಿಯ ಚಿತ್ರೀಕರಣ ದೇಶದ ವಿವಿಧ ಪ್ರದೇಶಗಳಲ್ಲಿ ನಡೆದಿದೆ. ಪ್ರೋಮೋ ಕೂಡಾ ಮೆಚ್ಚುಗೆ ಪಡೆದಿದೆ ಎಂದರು ರಾಘವೇಂದ್ರ ರಾಜ್‌ಕುಮಾರ್. ❖

ಕಿರುತೆರೆ

ಇಬ್ಬರು ಎಸ್ಪಿಗಳ ವರ್ಗಾವಣೆ

ಅಹಮದಾಬಾದ್ (ಪಿಟಿಐ): ನಕಲಿ ಮದ್ಯ ಸೇವನೆಯಿಂದ ಈವರೆಗೂ 42 ಮಂದಿ ಮೃತಪಟ್ಟಿದ್ದಾರೆ. ಈ ಸಂಬಂಧ ಗುಜರಾತ್ ಗೃಹ ಸಚಿವಾಲಯವು ಬೊಟಾಡದ ಮತ್ತು ಅಹಮದಾಬಾದ್‌ನ ಎಸ್ಪಿಯನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ಜತೆಗೆ ಆರು ಮಂದಿ ಪೊಲೀಸರನ್ನು ಅಮಾನತು ಮಾಡಿದೆ. 'ಕರ್ತವ್ಯದ ಬಗೆಗೆ ನಿರ್ಲಕ್ಷ್ಯ, ರಾಸಾಯನಿಕ ಮಿಶ್ರಣದ ಮದ್ಯದ ರವಾನೆ ತಡೆಯಲು ವಿಫಲರಾಗಿದ್ದಕ್ಕಾಗಿ ಅಮಾನತು ಮಾಡಲಾಗಿದೆ' ಎಂದು ಗೃಹ ಸಚಿವಾಲಯ ಹೇಳಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪ್ರಥಮ ವರ್ಷದ ಪುಣ್ಯಸ್ಮರಣೆ

ಶ್ರೀ ಮದ್ದೂರಪ್ಪ

ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ.

(DOB: 07.12.1965 - DOD: 29.07.2021)

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ನಿಮ್ಮ ಆದರ್ಶವೇ ನಮಗೆ ದಾರಿ ದೀಪ. ಸದಾ ನಿಮ್ಮ ನೆನಪಿನಲ್ಲಿರುವ.
ಇಂತಿ ದುಃಖತಪ್ತರು: ಮಕ್ಕಳು, ತಮ್ಮಂದಿರು ಹಾಗೂ ಕುಟುಂಬಸ್ಥರು

OBITUARY



Justice S. R. Venkatesha Murthy
Former Judge, High Court of Karnataka
We regret to inform of his Sad Demise on 27-07-2022.
Last Rights will be held today at T. R. Mills Crematorium Ground, Bangalore at 10.00 a.m.
Deeply Mourned by
Family & Friends
9449662000 / 9844422912

ಸವಿ ನೆನಪು



ಶ್ರೀ ಬಿ.ಕೆ. ಪುಟ್ಟಸ್ವಾಮಿ

ಮರಣ: 29.07.2021

ಶಿಕ್ಷಕರ ನೇಮಕಾತಿ ಹಗರಣ: ಇ.ಡಿ ಬಂಧನದ ಹಿಂದೆಯೇ ಟಿಎಂಸಿ ಕ್ರಮ

ಸಚಿವ ಸ್ಥಾನದಿಂದ ಪಾರ್ಥ ಚಟರ್ಜಿ ವಜಾ

ಕೋಲ್ಕತ್ತ (ಪಿಟಿಐ): ಶಿಕ್ಷಕರ ನೇಮಕಾತಿ ಹಗರಣ ಸಂಬಂಧ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬಂಧನಕ್ಕೊಳಗಾಗಿರುವ ಪಾರ್ಥ ಚಟರ್ಜಿ ಅವರನ್ನು ಸಚಿವ ಸ್ಥಾನದಿಂದ ಗುರುವಾರ ವಜಾಗೊಳಿಸಲಾಗಿದೆ.

ಪಾರ್ಥ ಅವರ ಆಪ್ತೆ ಅರ್ಪಿತಾ ಮುಖರ್ಜಿಗೆ ಸೇರಿದ್ದ ಎರಡು ಫ್ಲ್ಯಾಟ್‌ಗಳಲ್ಲಿ ಶೋಧ ನಡೆಸಿದ್ದ ಇ.ಡಿ ಅಧಿಕಾರಿಗಳು ಈವರೆಗೂ ಸುಮಾರು ₹50 ಕೋಟಿ ನಗದು ಹಾಗೂ ಚಿನ್ನಾಭರಣ ಜಪ್ತಿ ಮಾಡಿದ್ದರು. ಈ ಬೆಳವಣಿಗೆಯ ನಂತರ ಪಕ್ಷವು ಈ ತೀರ್ಮಾನ ಕೈಗೊಂಡಿದೆ.

ಪಾರ್ಥ ಅವರು ಕೈಗಾರಿಕಾ ಮತ್ತು ವಾಣಿಜ್ಯ, ಮಾಹಿತಿ ತಂತ್ರಜ್ಞಾನ ಮತ್ತು ಎಲೆಕ್ಟ್ರಾನಿಕ್ಸ್, ಸಂಸದೀಯ ವ್ಯವಹಾರ ಖಾತೆಗಳನ್ನು ನಿಭಾಯಿಸುತ್ತಿದ್ದರು. ಸಂಪುಟ ಪುನರ್ ರಚನೆಯಾಗುವವರೆಗೂ ಪಾರ್ಥ ಅವರಿಂದ ತೆರವಾಗಿರುವ ಖಾತೆಗಳನ್ನು ತಮ್ಮ ಬಳಿಯೇ ಉಳಿಸಿಕೊಳ್ಳುವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಅರ್ಪಿತಾ ಅವರ ಫ್ಲ್ಯಾಟ್‌ನಲ್ಲಿ ಇ.ಡಿ ಅಧಿಕಾರಿಗಳು ಜಪ್ತಿ ಮಾಡಿರುವ ನಗದು ಹಾಗೂ ಚಿನ್ನಾಭರಣ–ಪಿಟಿಐ ಚಿತ್ರ

ಪಕ್ಷದಿಂದ ಅಮಾನತು: ತೃಣಮೂಲ ಕಾಂಗ್ರೆಸ್‌ನಿಂದಲೂ (ಟಿಎಂಸಿ) ಪಾರ್ಥ ಅವರನ್ನು ಅಮಾನತು ಮಾಡಲಾಗಿದೆ.

ಪಕ್ಷದ ಶಿಸ್ತು ಸಮಿತಿ ಸಭೆಯ ಬಳಿಕ ಮಾತನಾಡಿದ ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ, 'ಪ್ರಕರಣದ ತನಿಖೆ ಪೂರ್ಣಗೊಳ್ಳುವವರೆಗೂ ಪಾರ್ಥ ಅವರನ್ನು ಅಮಾನತಿನಲ್ಲಿಡಲಾಗುತ್ತದೆ. ನಿರ್ದೋಷಿ ಎಂದು ಸಾಬೀತಾದ ಬಳಿಕ ಅವರು ಮತ್ತೆ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಹುದು' ಎಂದು ಹೇಳಿದ್ದಾರೆ.

'ನಿಗದಿತ ಕಾಲಮಿತಿಯೊಳಗೆ ಪ್ರಕರಣದ ತನಿಖೆ ಪೂರ್ಣಗೊಳಿಸಬೇಕೆಂಬುದು ನಮ್ಮ ಆಗ್ರಹ. ಭ್ರಷ್ಟಾಚಾರದಲ್ಲಿ ಭಾಗಿಯಾದವರನ್ನು ಪಕ್ಷವು ರಕ್ಷಣೆ ಮಾಡುವ ಮಾತೇ ಇಲ್ಲ' ಎಂದು ತಿಳಿಸಿದ್ದಾರೆ.

ಪಾರ್ಥ ಅವರು ಸುಮಾರು ಎರಡು ದಶಕಗಳಿಂದ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಈ ವರ್ಷದ ಆರಂಭದಲ್ಲಿ ಅವರನ್ನು ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿತ್ತು.

ಟಿಎಂಸಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕುನಾಲ್ ಘೋಷ್, ವಕ್ತಾರ ದೇವಾಂಶು ಭಟ್ಟಾಚಾರ್ಯ ಸೇರಿದಂತೆ ಪಕ್ಷದ ಕೆಲ ನಾಯಕರು ಪಾರ್ಥ ಅವರ ವಜಾಕ್ಕೆ ಆಗ್ರಹಿಸಿದ್ದರು.

'ಪಾರ್ಥ ಅವರನ್ನು ಪಕ್ಷ ಹಾಗೂ ಸಚಿವ ಸ್ಥಾನದಿಂದ ತಕ್ಷಣವೇ ವಜಾಗೊಳಿಸಬೇಕು. ಈ ಹೇಳಿಕೆ ತಪ್ಪೆನಿಸಿದರೆ ನನ್ನನ್ನೇ ವಜಾಮಾಡಬಹುದು. ಆ ಅಧಿಕಾರ ಪಕ್ಷಕ್ಕಿದೆ' ಎಂದು ಕುನಾಲ್ ಘೋಷ್ ಟ್ವೀಟ್ ಮಾಡಿದ್ದರು. ಬಳಿಕ ಅದನ್ನು ಅಳಿಸಿ ಹಾಕಿದ್ದರು.

ಅರ್ಪಿತಾ ಮನೆಯಲ್ಲಿ ₹50 ಕೋಟಿ ಹಣ, ಕೆ.ಜಿಗಟ್ಟಲೆ ಚಿನ್ನಾಭರಣ ಪತ್ತೆ

ಪಾರ್ಥ ಅವರ ಆಪ್ತೆ ಅರ್ಪಿತಾ ಮುಖರ್ಜಿಗೆ ಸೇರಿದ ಫ್ಲ್ಯಾಟ್‌ಗಳಲ್ಲಿ ಶೋಧ ಕಾರ್ಯ ಮುಂದುವರಿಸಿರುವ ಇ.ಡಿ ಅಧಿಕಾರಿಗಳು ಸುಮಾರು ₹50 ಕೋಟಿ ನಗದು ಜಪ್ತಿ ಮಾಡಿದ್ದಾರೆ.

'ಅರ್ಪಿತಾ ಅವರ ಬೆಲ್‌ಘರಿಯಾ ಅಪಾರ್ಟ್‌ಮೆಂಟ್‌ನಲ್ಲಿ ಬುಧವಾರ ರಾತ್ರಿ ₹27.9 ಕೋಟಿ ನಗದು ಸಿಕ್ಕಿದೆ. ಮೂರು ಯಂತ್ರಗಳ ಮೂಲಕ ರಾತ್ರಿಯೆಲ್ಲಾ ನೋಟುಗಳನ್ನು ಎಣಿಸಲಾಗಿದೆ. ಕೆ.ಜಿಗಟ್ಟಲೆ ಚಿನ್ನಾಭರಣವನ್ನೂ ಜಪ್ತಿ ಮಾಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಪ್ತಿ ಮಾಡಿರುವ ಚಿನ್ನಾಭರಣದ ಮೌಲ್ಯ ಅಂದಾಜು ₹4.31 ಕೋಟಿ ಎಂದು ಸುದ್ದಿಸಂಸ್ಥೆಯೊಂದು ವರದಿ ಮಾಡಿದೆ.

ದಕ್ಷಿಣ ಕೋಲ್ಕತ್ತದ ಟೋಲಿಗಂಜ್ ಪ್ರದೇಶದಲ್ಲಿ ಅರ್ಪಿತಾ ಫ್ಲ್ಯಾಟ್‌ವೊಂದನ್ನು ಹೊಂದಿದ್ದು, ಕೆಲ ದಿನಗಳ ಹಿಂದೆ ಅಲ್ಲಿ ಶೋಧ ನಡೆಸಿದ್ದಾಗ ಅಧಿಕಾರಿಗಳಿಗೆ ₹21 ಕೋಟಿ ನಗದು ಲಭ್ಯವಾಗಿತ್ತು. ವಿಚಾರಣೆ ವೇಳೆ, ತನ್ನ ಒಡೆತನದ ಫ್ಲ್ಯಾಟ್‌ಗಳ ಬಗ್ಗೆ ಅರ್ಪಿತಾ ಬಾಯ್ಬಿಟ್ಟಿದ್ದರು.

ಭಾರತ–ಚೀನಾ: ನಾಲ್ಕು ಅಂಶಗಳಲ್ಲಿ ಒಮ್ಮತ

ಬೀಜಿಂಗ್ (ಪಿಟಿಐ): ಭಾರತದ ಜೊತೆ ಇತ್ತೀಚೆಗೆ ನಡೆದ ಕೋರ್ ಕಮಾಂಡರ್ ಮಟ್ಟದ ಮಾತುಕತೆಯಲ್ಲಿ ನಾಲ್ಕು ಅಂಶಗಳಲ್ಲಿ ಒಮ್ಮತ ಮೂಡಿದೆ ಎಂದು ಚೀನಾದ ಸೇನೆ ಗುರುವಾರ ಹೇಳಿದೆ. ದ್ವಿಪಕ್ಷೀಯ ಮಾತುಕತೆಯನ್ನು ಮುಂದುವರಿಸುವುದು, ಭಿನ್ನಾಭಿಪ್ರಾಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು ಮತ್ತು ಗಡಿಗಳಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವ ಅಂಶಗಳು ಇದರಲ್ಲಿ ಸೇರಿವೆ.

ಭಿನ್ನಾಭಿಪ್ರಾಯ ಬಾಕಿ ಉಳಿದಿರುವ ವಿಚಾರಗಳಿಗೆ ಸಂಬಂಧಿಸಿ ಜುಲೈ 17ರಂದು ನಡೆದ 16ನೇ ಸುತ್ತಿನ ಮಾತುಕತೆಯಲ್ಲಿ ಯಾವುದೇ ಗಮನಾರ್ಹ ಬೆಳವಣಿಗೆ ಕಂಡುಬಂದಿಲ್ಲ. ಆದರೆ, ಎರಡೂ ಕಡೆ ಸಹಮತದ ನಿರ್ಣಯ ಬರುವವರೆಗೂ ಮಾತುಕತೆಯನ್ನು ಮುಂದುವರಿಸಲು ನಿರ್ಧರಿಸಲಾಯಿತು.

ಮಾತುಕತೆಯ ಮರುದಿನ ಬಿಡುಗಡೆ ಮಾಡಲಾದ ಜಂಟಿ ಹೇಳಿಕೆಯಲ್ಲಿ, 'ಇನ್ನೂ ಭಿನ್ನಾಭಿಪ್ರಾಯ ಉಳಿದುಕೊಂಡಿರುವ ವಿಷಯಗಳಲ್ಲಿ ಒಮ್ಮತ ಸಾಧ್ಯವಾದರೆ, ವಾಸ್ತವ ಗಡಿ ನಿಯಂತ್ರಣ ರೇಖೆ ಹಾಗೂ ವಿವಾದಿತ ಪ್ರದೇಶದಲ್ಲಿ ಶಾಂತಿ ಸ್ಥಾಪನೆಗೆ ನೆರವಾಗಲಿದ್ದು, ಉಭಯ ದೇಶಗಳ ಸಂಬಂಧವೂ ಸುಧಾರಿಸಲಿದೆ' ಎಂದು ಉಲ್ಲೇಖಿಸಲಾಗಿದೆ.

ವಿವಾದಿತ ಪ್ರದೇಶದ ಎಲ್ಲ ಗಡಿಗಳಿಂದ ಸೇನೆಯನ್ನು ವಾಪಸ್ ಪಡೆಯಬೇಕು ಹಾಗೂ 2020 ಏಪ್ರಿಲ್‌ನಲ್ಲಿ ಇದ್ದ ಸ್ಥಿತಿಯನ್ನು ಕಾಯ್ದುಕೊಳ್ಳಬೇಕು ಎಂದು ಮಾತುಕತೆಯಲ್ಲಿ ಭಾರತ ಬಲವಾಗಿ ಪ್ರತಿಪಾದಿಸಿತ್ತು.

ಮಾಧ್ಯಮಗಳ ವರದಿಗೆ ಸುಪ್ರೀಂ ಕೋರ್ಟ್ ಅಸಮಾಧಾನ

'ನ್ಯಾಯಾಧೀಶರ ವಿರುದ್ಧ ಟೀಕೆ ಬೇಡ'

ನವದೆಹಲಿ (ಪಿಟಿಐ): 'ನ್ಯಾಯಾಧೀಶರ ಮೇಲೆ ಟೀಕಾ ಪ್ರಹಾರ ಬೇಡ. ನ್ಯಾಯಾಧೀಶರಿಗೂ ಸ್ವಲ್ಪ ಸಮಯ ಕೊಡಿ' ಎಂದು ಸುಪ್ರೀಂಕೋರ್ಟ್ ಗುರುವಾರ ಮಾಧ್ಯಮಗಳಿಗೆ ಹೇಳಿದೆ.

ದೇಶದಾದ್ಯಂತ ಕ್ರೈಸ್ತ ಸಂಸ್ಥೆಗಳು ಮತ್ತು ಪಾದ್ರಿಗಳ ಮೇಲೆ ಹೆಚ್ಚುತ್ತಿರುವ ದಾಳಿಯ ಸಂಬಂಧ ಸಲ್ಲಿಸಿರುವ ಮನವಿ ಅರ್ಜಿ ವಿಚಾರಣೆ ವಿಳಂಬವಾಗುತ್ತಿದೆ ಎಂಬುದಾಗಿ ಮಾಧ್ಯಮಗಳಲ್ಲಿ ವರದಿಯಾದ ಸುದ್ದಿಗಳಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಸೂರ್ಯಕಾಂತ್ ಅವರಿದ್ದ ಪೀಠವು 'ನ್ಯಾಯಾಧೀಶರರನ್ನು ಗುರಿಯಾಗಿಸಿ ಟೀಕಿಸಲೂ ಒಂದು ಮಿತಿ ಇರುತ್ತದೆ' ಎಂದು ಹೇಳಿದೆ.

'ಕಳೆದ ಬಾರಿ ಈ ಅರ್ಜಿ ವಿಚಾರಣೆಗೆ ಕೈಗೆತ್ತಿಕೊಳ್ಳಲಿಲ್ಲ, ಏಕೆಂದರೆ ನಾನು ಕೋವಿಡ್‌ನಿಂದ ಬಳಲುತ್ತಿದ್ದೆ. ಆದರೆ, ಸುಪ್ರೀಂಕೋರ್ಟ್ ಈ ಅರ್ಜಿ ವಿಚಾರಣೆಗೆ ವಿಳಂಬ ಮಾಡುತ್ತಿದೆ ಎಂಬುದಾಗಿ ಪತ್ರಿಕೆಗಳಲ್ಲಿ ವರದಿ ಮಾಡಿದ್ದೀರಿ. ಇಂತಹ ಸುದ್ದಿಗಳನ್ನೆಲ್ಲ ನಿಮಗೆ ಯಾರು ಪೂರೈಸುತ್ತಾರೆ?' ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹರಿಹಾಯ್ದರು.

'ಅರ್ಜಿ ವಿಚಾರಣೆಗೆ ನ್ಯಾಯಾಧೀಶರು ವಿಳಂಬ ಮಾಡುತ್ತಿದ್ದಾರೆ ಎನ್ನುವ ಸುದ್ದಿ ಯನ್ನು ಆನ್‌ಲೈನ್‌ನಲ್ಲಿ ನೋಡಿರುವೆ. ನಮಗೂ ಸಮಯ ಕೊಡಿ. ಒಬ್ಬ ನ್ಯಾಯಾಧೀಶರು ಕೋವಿ ಡ್‌ನಿಂದ ಬಳಲುತ್ತಿದ್ದ ಕಾರಣಕ್ಕೆ ಅರ್ಜಿ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗಲಿಲ್ಲ. ಈಗ ನಾವು ಈ ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡುತ್ತೇವೆ, ಇಲ್ಲದಿದ್ದರೆ ಇದು ಕೂಡ ಮತ್ತೊಂದು ರೀತಿ ಸುದ್ದಿಯಾಗುತ್ತದೆ' ಎಂದು ಪೀಠವು ಹೇಳಿದೆ.

ಅರ್ಜಿದಾರರ ವಕೀಲರು, ವಿಚಾರಣೆ ನಡೆಸುವಂತೆ ಕೋರಿದಾಗ ನ್ಯಾಯಪೀಠ ಈ ಮೇಲಿನ ಅಭಿಪ್ರಾಯ ವ್ಯಕ್ತಪಡಿಸಿತು. ಅರ್ಜಿದಾರರ ಪರ ಹಿರಿಯ ವಕೀಲ ಕೊಲಿನ್ ಗೊನ್ಸಾಲ್ವೆಸ್ ಅವರು ಜೂನ್‌ನಲ್ಲಿ ರಜೆ ಕಾಲದ ಪೀಠದ ಎದುರು, ' ದೇಶದಾದ್ಯಂತ ಕ್ರೈಸ್ತ ಸಂಸ್ಥೆಗಳು, ಪಾದ್ರಿಗಳ ಮೇಲೆ ತಿಂಗಳು ಸರಾಸರಿ 45 ರಿಂದ 50 ದಾಳಿ ನಡೆಯುತ್ತಿವೆ' ಎಂದು ವಾದಿಸಿದ್ದರು.

ಬಾಂಗ್ಲಾ: ಆರು ಯೋಧರಿಗೆ ಗಲ್ಲು

ಢಾಕಾ (ಪಿಟಿಐ): ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ (1971) ಪಾಕಿಸ್ತಾನ ಸೇನೆ ಜತೆ ಸೇರಿ 'ಮಾನವೀಯತೆಯ ವಿರುದ್ಧ ಅಪರಾಧ' ಎಸಗಿದ ಕಾರಣಕ್ಕೆ, ಕುಖ್ಯಾತ ಅರೆಸೇನಾ ಪಡೆ 'ರಜಾಕಾರ್ ಬಾಹಿನಿ'ಯ ಆರು ಯೋಧರಿಗೆ ಬಾಂಗ್ಲಾ ದೇಶದ ಅಂತರರಾಷ್ಟ್ರೀಯ ಅಪರಾಧ ವಿಚಾರಣಾ ನ್ಯಾಯಮಂಡಳಿ ಗುರುವಾರ ಗಲ್ಲು ಶಿಕ್ಷೆ ವಿಧಿಸಿದೆ.

ಮಗುವಿನ ಉಪನಾಮ ನಿರ್ಧರಿಸಲು ತಾಯಿಗೆ ಹಕ್ಕಿದೆ: 'ಸುಪ್ರೀಂ'

ನವದೆಹಲಿ (ಪಿಟಿಐ): 'ತಂದೆಯ ನಿಧನದ ನಂತರ ಮಗುವಿಗೆ ತಾಯಿಯೇ ಸಹಜ ರಕ್ಷಕಿ. ಹಾಗಾಗಿ ಮಗುವಿನ ಉಪನಾಮವನ್ನು (ಸರ್‌ನೇಮ್) ನಿರ್ಧರಿಸುವ ಹಕ್ಕು ತಾಯಿಗೆ ಇದೆ' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಮತ್ತು ಕೃಷ್ಣ ಮುರಾರಿ ಅವರಿದ್ದ ಪೀಠವು ಆಂಧ್ರ ಪ್ರದೇಶ ಹೈಕೋರ್ಟ್ ನೀಡಿದ್ದ ತೀರ್ಪೊಂದನ್ನು ವಜಾಗೊಳಿಸಿದೆ. ಮಹಿಳೆಯೊಬ್ಬರು ಎರಡನೇ ಗಂಡನ ಹೆಸರನ್ನು ತಮ್ಮ ಮಗುವಿನ ಮಲತಂದೆ ಎಂದು ದಾಖಲೆಗಳಲ್ಲಿ ಉಲ್ಲೇಖಿಸಬೇಕು ಎಂದು ಆಂಧ್ರ ಪ್ರದೇಶ ಹೈಕೋರ್ಟ್ ತೀರ್ಪು ನೀಡಿತ್ತು.

'ಮಹಿಳೆಯ ಎರಡನೇ ಪತಿಯ ಹೆಸರನ್ನು ಮಗುವಿನ ದಾಖಲೆಯಲ್ಲಿ ಸೇರಿಸುವಂತೆ ಹೈಕೋರ್ಟ್ ನೀಡಿರುವ ನಿರ್ದೇಶನ, ಅತ್ಯಂತ ಕ್ರೂರ ಮತ್ತು ಅರ್ಥಹೀನ. ಇದು ಮಗುವಿನ ಮಾನಸಿಕ ಆರೋಗ್ಯ ಮತ್ತು ಆತ್ಮಗೌರವದ ಮೇಲೆ ಪರಿಣಾಮ ಬೀರುತ್ತದೆ' ಎಂದು ಪೀಠ ಹೇಳಿದೆ.

ನ್ಯಾಯಾಧೀಶರ ಹತ್ಯೆ: ಆಟೊ ರಿಕ್ಷಾ ಚಾಲಕ ಸೇರಿ ಇಬ್ಬರು ದೋಷಿ

ರಾಂಚಿ: ಕಳೆದ ವರ್ಷ ಜಾರ್ಖಂಡ್‌ನ ಧನಬಾದ್‌ನಲ್ಲಿ ನಡೆದಿದ್ದ ನ್ಯಾಯಾಧೀಶ ಉತ್ತಮ್ ಆನಂದ್ ಹತ್ಯೆ ಪ್ರಕರಣದಲ್ಲಿ ಆಟೋರಿಕ್ಷಾ ಚಾಲಕ ಮತ್ತು ಇನ್ನೊಬ್ಬನನ್ನು ದೋಷಿ ಎಂದು ಜಾರ್ಖಂಡ್‌ನ ವಿಶೇಷ ಸಿಬಿಐ ನ್ಯಾಯಾಲಯ ಗುರುವಾರ ತೀರ್ಪು ನೀಡಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾಗಿದ್ದ ಆನಂದ್ ಹತ್ಯೆ ಪ್ರಕರಣದಲ್ಲಿ ಆಟೋರಿಕ್ಷಾ ಚಾಲಕ ಲಖನ್ ವರ್ಮಾ ಮತ್ತು ಆತನ ಸಹಚರ ರಾಹುಲ್ ವರ್ಮಾ ತಪ್ಪಿತಸ್ಥರೆಂದು ಸಿಬಿಐ ನ್ಯಾಯಾಲಯದ ನ್ಯಾಯಾಧೀಶ ರಜನಿಕಾಂತ್ ಪಾಠಕ್ ತೀರ್ಪು ನೀಡಿದರು.

ಇಬ್ಬರು ಅಪರಾಧಿಗಳ ಶಿಕ್ಷೆಯ ಪ್ರಮಾಣವನ್ನು ಆಗಸ್ಟ್ 6 ರಂದು ಪ್ರಕಟಿಸಲಾಗುತ್ತದೆ ಎಂದು ಕೋರ್ಟ್ ಹೇಳಿದೆ. 49 ವರ್ಷದ ನ್ಯಾಯಾಧೀಶ ಆನಂದ್ ಅವರನ್ನು ಕಳೆದ ವರ್ಷ ಜುಲೈ 28 ರಂದು ಜಾಗಿಂಗ್ ಮಾಡುತ್ತಿದ್ದಾಗ ಆಟೋ ರಿಕ್ಷಾದಿಂದ ಗುದ್ದಿ ಕೊಲ್ಲಲಾಗಿತ್ತು.

ನ್ಯಾಯಾಧೀಶ ಆನಂದ್ ಹತ್ಯೆ ಪ್ರಕರಣದ ವಿಚಾರಣೆ ಈ ವರ್ಷದ ಫೆಬ್ರವರಿಯಲ್ಲಿ ಪ್ರಾರಂಭವಾಗಿತ್ತು.

ಧನ್‌ಬಾದ್‌ನ ರಣಧೀರ್ ವರ್ಮಾ ಚೌಕ್‌ನಲ್ಲಿ ನ್ಯಾಯಾಧೀಶರು ರಸ್ತೆಯ ಒಂದು ಬದಿಯಲ್ಲಿ ಜಾಗಿಂಗ್ ಮಾಡುತ್ತಿದ್ದಾಗ ಹಿಂದಿನಿಂದ ಬಂದ ಆಟೋ ರಿಕ್ಷಾ ಡಿಕ್ಕಿ ಹೊಡೆದು ಪರಾರಿಯಾಗಿರುವುದು ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳಲ್ಲಿ ದಾಖಲಾಗಿತ್ತು.

ಪ್ರಕರಣವನ್ನು ಜಾರ್ಖಂಡ್ ಸರ್ಕಾರವು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ)ಹಸ್ತಾಂತರಿಸಿತ್ತು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–14/7331/2022–23 ದಿನಾಂಕ: 26.07.2022

ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಒ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಸಿ.ಇ.ಐ ದರ್ಜೆ–2 (ವಿದ್ಯುತ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: ಚಿಕ್ಕಬಳ್ಳಾಪುರ ಜಿಲ್ಲೆ, ಮಸ್ತೇನಹಳ್ಳಿ 1ನೇ ಹಂತ ಕೈಗಾರಿಕಾ ಪ್ರದೇಶದ ರಸ್ತೆಗಳಿಗೆ ಎಲ್.ಇ.ಡಿ ಬೀದಿ ದೀಪಗಳನ್ನು ಕಲ್ಪಿಸುವ ಕಾಮಗಾರಿ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.08.2022 ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/1532/Zenkar/2022-23

ಕರ್ನಾಟಕ ಸರಕಾರ
ಕಾರ್ಯಪಾಲಕ ಇಂಜಿನೀಯರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ
ಸಂಖ್ಯೆ: ಕಾಪಾಅ/ಗ್ರಾನೀಸಮತ್ತುನೈ/ವಿಯಾ/ಟೆ.ಪ್ರ/ಪಿ.ಬಿ/JJM/2022–23/ ದಿನಾಂಕ:25–07–2022

:: ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ ಲಕೋಟೆ) "ಇ–ಪ್ರೋಕ್ಯೂರಮೆಂಟ" ಮೂಲಕ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ಹೆಸರು : Gajarkot - Est Cost Rs. 396.00 lakhs - Indent No. 44155, In YADGIR Taluka, 2) ಲೆಕ್ಕ ಶೀರ್ಷಿಕೆ : Jal Jeevan Mission-2022-23, 3) ಗುತ್ತಿಗೆದಾರರ ಅರ್ಹತೆ : 2ನೇ ಹಾಗೂ ಮೇಲ್ಪಟ್ಟು ದರ್ಜೆ, 4) ಟೆಂಡರ ಫಾರಂ ಪಡೆಯುವ ದಿನಾಂಕ: 29–07–2022 ರಿಂದ 06–08–2022, 5) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ, 6) Pre Bid Meeting Date : 01-08-2022 & Address : Office of the Executive Engineer, RDWS&S Division Yadgir at 11.00 am, 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 06–08–2022 ಸಾಯಂಕಾಲ 4.30 ಗಂಟೆವರೆಗೆ, 8) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ : 08–08–2022 ಬೆಳಿಗ್ಗೆ 11.00 ಗಂಟೆಯ ನಂತರ, 9) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ : 12–08–2022 ಬೆಳಿಗ್ಗೆ 11.00 ಗಂಟೆಯ ನಂತರ, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. 11) ಅಂತರ್ಜಾಲ ತಾಣದ ವಿಳಾಸ : www.eproc.karnataka.gov.in
ಸಹಿ/– ಕಾರ್ಯಪಾಲಕ ಇಂಜಿನೀಯರರು,
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/187/ಎಂಸಿ&ಎ/2022–23

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು. ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 10,000- 15,000, 8951315839, 9880545002

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಸಾರ್ವಜನಿಕ ಪ್ರಕಟಣೆ

IN THE HIGH COURT OF DELHI AT NEW DELHI
(ORDINARY ORIGINAL CIVIL JURISDICTION)
CS(COMM.) 557/2021
Apnatime Tech. Pvt. Ltd. & Anr. ....Plaintiff
VERSUS
TMP Technologies Pvt. Ltd. ....Defendants
To,
Defendant:
2. Opennworks Solutions LLP, Zee Plaza, # 1678, 3rd Floor, 23rd Cross, 27th Main, HSR Layout, Sector-2, Bengaluru-560102, Karnataka.
Email: borojutikas@gmail.com
WHEREAS the above named plaintiff has instituted a suit against you FOR PERMANENT INJUCTION RESTRAINING PASSING OFF, RENDITION OF ACCOUNTS, DAMAGES, DELIVERY UP, ETC.
AND WHEREAS it has been shown to the satisfaction of the Court that it is not possible to serve you in the ordinary way, therefore, this notice is given by advertisement directing you to make appearance before the Joint Registrar (Judicial) of this Hon'ble Court on 02.08.2022 at 11.10 A.M.
Take notice that in default of your appearance on the day mentioned above, the suit will be heard and determined in your absence.
Given under my hand and the seal of the Court in terms of order dated 20th day of May 2022.
Joint Registrar
for REGISTRAR GENERAL

ವೈಯಕ್ತಿಕ

Lost

ಸಿದ್ದಗಂಗಯ್ಯ S/Oಅಂಗಡತಿಮ್ಮಯ್ಯ ಆದನಾನು ನಮ್ಮ ನಿವೇಶನದ ಹಕ್ಕುಪತ್ರವನ್ನು ಮನೆಬದಲಾಯಿಸುವಸಂಧರ್ಭದಲ್ಲಿ ಕಳೆದುಕೊಂಡಿರುತ್ತೇನೆ ನೀವೇಶನದವಿಳಾಸ 3 ಬೂದಿಹಾಲ್ ಗ್ರಾಮ ನೆಲಮಂಗಲತಾಲ್ಲೂಕುಈವಿಷಯ ದಬಗ್ಗೆಪೋಲಿಸ್ಠಾಣೆಯಲ್ಲಿ(596/22)ದೂರುನೀಡಿರುತ್ತೇನೆ ವಕೀಲರಿಂದ ಅಫಿಡವಿಟ್ಟಲ್ಲಿಸಿರುತ್ತೇನೆ(222old no4833)ಹಕ್ಕುಪತ್ರಸಿಕ್ಕಿದ್ದಲ್ಲಿಸಂಪರ್ಕಿಸಿ9741225213

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ರಿಯಲ್ ಎಸ್ಟೇಟ್ ಸೆಲ್ಲಿಂಗ್

Residential/ Commercial

Banashankari

ಬನಶಂಕರಿ 6ನೇ ಹಂತದಲ್ಲಿ 4 BHK 20x30 BDA ಸುಸಜ್ಜಿತ ಮನೆ ಮಾರಾಟಕ್ಕಿದೆ. ಗಣಪತಿ: 9620008681

House

Banashankari

BANASHANKARI 2ND STAGE, Building (GF, FF) for Sale 30'x45' S/F opposite to Umamaheshwara Park 9341890909.

Sites

Bannerghatta Road

BANNERGHATTA ROAD GOTTIGERE Sites Sale 'A' khatha. W/F 1) 38'x38' 2) 37'x38' 3) 33x130. 9341890909.

ಪ್ರವಾಸ

Travel

ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ್ ಸೋಮನಾಥ್,ದ್ವಾರಕಾ ನಾಗೇಶಂ 08.08.2022 ರಿಂದ 10 ದಿನಗಳು. ಯುಮುನೋತ್ರಿ ಗಂಗೋತ್ರಿ,ಕೇದಾರನಾಥ್ ಬದರಿನಾಥ್,ಹರಿದ್ವಾರ್ 15.09.2022 17.09.2022 07.10.2022 10.10.2022 ರಿಂದ 14/18 ದಿನಗಳು. ದೆಹಲಿ,ಆಗ್ರಾ,ಮಥುರ ಕಾಶಿ,ಗಯಾ,ಪ್ರಯಾಗ, ಹರಿದ್ವಾರ್ 17.09.2022 07.10.2022 10.10.2022 ರಿಂದ 13/17 ದಿನಗಳು. ಶ್ರೀಶೈಲಂ,ಮಹಾನಂದಿ ಅಹೋಬಲ ನವನಸಿಂಹ 11.08.2022 ರಿಂದ 5 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

08.09.2022 14 ದಿನಗಳ ಯುಮುನೋತ್ರಿ,ಗಂಗೋತ್ರಿ ಕೇದಾರನಾಥ್ ಬದರಿನಾಥ್ ಚಾರ್ಧಾಮ್ ಪ್ರವಾಸ. 05.10.2022 16 ದಿನಗಳ ಅಷ್ಟಜ್ಯೋತಿರ್ಲಿಂಗ ದರ್ಶನ,ನಾಸಿಕ್ ಶಿರಡಿ, ಓಂಕಾರೇಶ್ವರ್ ಉಜ್ಜಯಿನಿ ಮಹಾಕಾಳೇಶ್ವರ ವಲ್ಲಭಬಾಯಿ ಪಟೇಲರ ಪ್ರತಿಮೆ,ದ್ವಾರಕಾ ಸೋಮನಾಥ್, ಮಾತೃಗಯಾ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ ಬೆಂಗಳೂರು-70. 8050629305 9342287551

05.10.2022, 14 ದಿನಗಳ. ಚಾರ್‌ಧಾಮ್. 02.11.2022 8 ದಿನಗಳ ಕಾಶಿ,ಗಯಾ ಕೋಲ್ಕತ,ಭುವನೇಶ್ವರ್ ಪೂರಿಜಗನ್ನಾಥ್ ಯಾತ್ರೆ ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು 9448294477

ವಿಮಾನದಲ್ಲಿ 04.09.2022 13 ದಿನಗಳು ಕಾಶಿ, ನೇಪಾಳ, ಮುಕ್ತಿನಾಥ, ಗಜೇಂದ್ರಮೋಕ್ಷ, ಕಠ್ಮಂಡು ಪ್ರವಾಸ. ಆರ್. ಗಾಂಧಿ ಟೂರ್ಸ್: 9945445809, 9902433500

ನೇಪಾಳ್, ಮುಕ್ತಿನಾಥ್, ಪೊಕ್ರಾ, ಕಾಶಿ 11ದಿನಗಳು. 18.8.2022 ಚಾರ್‌ಧಾಮ್‌ಯಾತ್ರೆ 5.9.2022 26.9.2022. 15.9.2022, 29.9.2022 17/35ದಿನಗಳ, ದೆಹಲಿ, ಜಯಪುರ ವೈಷ್ಣೋದೇವಿ ಅಲಹಾಬಾದ್ ಬುದ್ಧಗಯಾ ಅಮೃತ್ಸರ್ ಹರಿದ್ವಾರ ದಕ್ಷಿಣ ಭಾರತ ಮಧ್ಯ ಭಾರತ ಶಿರಡಿ ಪ್ರವಾಸ. 9.11.2022 ಸೋಮನಾಥ್ ದ್ವಾರಕಾ, ನಾಗೇಶಂ ಓಂಕಾರೇಶ್ವರ. ಸಂಪರ್ಕಿಸಿ: ಏಷ್ಯನ್ ಟ್ರಾವೆಲ್ ಏಜೆನ್ಸಿ, ಬೆಂಗಳೂರು-4. 26574131, 8317446683, 9916408171

ಭವಿಷ್ಯ

Astrology

★॥ಶ್ರೀಕೇದಾರನಾಥ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9148773459

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ. ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಹಾರವಾಗದ ಸಮಸ್ಯೆಗಳು, ಜನ್ಮಜನ್ಮಾಂತರಗಳ ದೋಷಗಳ ನಿವಾರಣೆಗಾಗಿ ಕೂಡಲೇ ಸಂಪರ್ಕಿಸಿ. 7676750280

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ

Classifieds EDUCATION SPECIAL
SPECIAL RATES FOR
Admission Notice,
Education Success
Congratulation Ads
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮಹಿಳಾ ಹಾಕಿ: ಭಾರತಕ್ಕೆ ಇಂದು ಘಾನಾ ಮೊದಲ ಎದುರಾಳಿ; ಸವಿತಾ ನಾಯಕತ್ವಕ್ಕೆ ಸವಾಲು

ಪದಕ ಬರ ನೀಗಿಸುವತ್ತ..

ಸವಿತಾ ಪೂನಿಯಾ – ಟ್ವಿಟರ್ ಚಿತ್ರ



ಗುರ್ಜಿತ್ ಕೌರ್– ಪಿಟಿಐ ಚಿತ್ರ

ಪಂದ್ಯ ಆರಂಭ: ಸಂಜೆ 6.30

ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ವಿಶ್ವ ರ್‍ಯಾಂಕಿಂಗ್

9	ಭಾರತ
30	ಘಾನಾ

ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತದ ಸಾಧನೆ

ವರ್ಷ	ಸ್ಥಳ	ಸ್ಥಾನ/ಪದಕ
1998	ಕ್ವಾಲಾಲಂಪುರ	4
2002	ಮ್ಯಾಂಚೆಸ್ಟರ್	ಚಿನ್ನ
2006	ಮೆಲ್ಬರ್ನ್	ಬೆಳ್ಳಿ
2010	ನವದೆಹಲಿ	5
2014	ಗ್ಲಾಸ್ಗೊ	5
2018	ಗೋಲ್ಡ್‌ಕೋಸ್ಟ್	4

ಬರ್ಮಿಂಗ್‌ಹ್ಯಾಮ್(ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ 16 ವರ್ಷಗಳಿಂದ ಪದಕದ ಬರ ಎದುರಿಸುತ್ತಿರುವ ಭಾರತ ಮಹಿಳಾ ಹಾಕಿ ತಂಡವು ಈ ಬಾರಿ ವಿಜಯವೇದಿಕೆಯಲ್ಲಿ ಸಂಭ್ರಮಿಸುವ ಛಲದಲ್ಲಿದೆ.

ಸವಿತಾ ಪೂನಿಯಾ ನಾಯಕತ್ವದ ತಂಡವು ಇಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಕ್ರೀಡಾಕೂಟದ ಮೊದಲ ಪಂದ್ಯದಲ್ಲಿ ಶುಕ್ರವಾರ ಘಾನಾ ಸವಾಲು ಎದುರಿಸಲಿದ್ದು ಶುಭಾರಂಭದ ನಿರೀಕ್ಷೆಯಲ್ಲಿದೆ.

1998ರಲ್ಲಿ ಕಾಮ್‌ನವೆಲ್ತ್ ಕೂಟಕ್ಕೆ ಹಾಕಿ ಸೇರ್ಪಡೆಯಾಗಿತ್ತು. 2002ರ ಮ್ಯಾಂಚೆಸ್ಟರ್ ಆವೃತ್ತಿಯಲ್ಲಿ ತಂಡ ಚಿನ್ನದ ಪದಕ ಜಯಿಸಿತ್ತು. 2006ರ ಮೆಲ್ಬರ್ನ್ ಕೂಟದಲ್ಲಿ ತಂಡಕ್ಕೆ ಬೆಳ್ಳಿ ಪದಕ ಒಲಿದಿತ್ತು. ಕಳೆದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕದಿಂದ ವಂಚಿತವಾಗಿದ್ದ ತಂಡವು ಇಲ್ಲಿ 'ಪೋಡಿಯಂ ಫಿನಿಶ್' ಹಂಬಲದಲ್ಲಿದೆ. ಭಾರತ ಎ ಗುಂಪಿನಲ್ಲಿ ಸ್ಥಾನ ಪಡೆದಿದೆ. ಇಂಗ್ಲೆಂಡ್, ಕೆನಡಾ, ವೇಲ್ಸ್ ಮತ್ತು ಘಾನಾ ಈ ಗುಂಪಿನಲ್ಲಿವೆ.

ಆಸ್ಟ್ರೇಲಿಯಾದ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕಳೆದ ಆವೃತ್ತಿಯ ಕೂಟದಲ್ಲಿ ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಬರಿಗೈಯಲ್ಲಿ ಹಿಂದಿರುಗಿದ್ದವು. ಕಂಚಿನ ಪದಕದ ಸುತ್ತಿನಲ್ಲಿ ಮಹಿಳಾ ತಂಡವು 0–6ರಿಂದ ಇಂಗ್ಲೆಂಡ್ ಎದುರು ಎಡವಿ ನಾಲ್ಕನೇ ಸ್ಥಾನ ಗಳಿಸಿತ್ತು.ಸ್ಪೇನ್ ಮತ್ತು ನೆದರ್ಲೆಂಡ್ಸ್‌ನಲ್ಲಿ ಇತ್ತೀಚೆಗೆ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಸವಿತಾ ಪಡೆ ಒಂಬತ್ತನೇ ಸ್ಥಾನ ಗಳಿಸಿತ್ತು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದ ಭಾರತದ ಮಹಿಳೆಯರು ಪ್ರೊ ಲೀಗ್‌ನಲ್ಲೂ ಉತ್ತಮ ಸಾಮರ್ಥ್ಯ ತೋರಿ ಮೂರನೇ ಸ್ಥಾನ ತಮ್ಮದಾಗಿಸಿಕೊಂಡಿದ್ದರು. ಆದರೆ ಇಲ್ಲಿ ಪದಕ ಗಳಿಸಬೇಕಾದರೆ, ವಿಶ್ವ ರ್‍ಯಾಂಕಿಂಗ್‌ನಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ಭಾರತವು, ಆಸ್ಟ್ರೇಲಿಯಾ ಸೇರಿದಂತೆ ಬಲಿಷ್ಠ ತಂಡಗಳನ್ನು ಎದುರಿಸಬೇಕಿದೆ.

ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಾಗಿ ಪರಿವರ್ತಿಸುವಲ್ಲಿ ಎಡವುತ್ತಿರುವ ಭಾರತ, ಆ ವಿಭಾಗದಲ್ಲಿ ಸುಧಾರಣೆ ಕಂಡುಕೊಂಡರೆ ಘಾನಾ ಎದುರು ಜಯ ಸುಲಭವಾಗಲಿದೆ. ಗೋಲ್‌ಕೀಪಿಂಗ್‌ನಲ್ಲಿ ನಾಯಕಿ ಸವಿತಾ ಮತ್ತು ಡ್ರ್ಯಾಗ್‌ಫ್ಲಿಕರ್ ಗುರ್ಜಿತ್ ಕೌರ್ ಮೇಲೆ ನಿರೀಕ್ಷೆ ಹೆಚ್ಚಿದೆ. ಎ ಗುಂಪಿನ ಇನ್ನೊಂದು ಪಂದ್ಯದಲ್ಲಿ ಕೆನಡಾ ತಂಡವು ವೇಲ್ಸ್ ಎದುರು ಆಡಲಿದೆ.

ಭಾರತೀಯರ ಇಂದಿನ ಸ್ಪರ್ಧೆಗಳು

ಬ್ಯಾಡ್ಮಿಂಟನ್ (ಮಿಶ್ರ ಡಬಲ್ಸ್)	
ಬಿ.ಸುಮೀತ್ ರೆಡ್ಡಿ–ಅಶ್ವಿನಿ ಪೊನ್ನಪ್ಪ	ಸಂಜೆ 6.30ರಿಂದ
ಲಾನ್ ಬಾಲ್ಸ್	
ಪಿಂಕಿ ಕೌಶಿಕ್ ಸಿಂಗ್, ಲವ್ಲಿ ಚೌಬೆ, ತಾನಿಯಾ ಚೌಧರಿ, ನಯನಮೋನಿ ಸೈಕಿಯಾ, ರೂಪಾ ರಾಣಿ ಟರ್ಕಿ, ದಿನೇಶ್ ಕುಮಾರ್, ಚಂದನ್ ಕುಮಾರ್ ಸಿಂಗ್, ನವನೀತ್ ಸಿಂಗ್, ಸುನಿಲ್ ಬಹಾದ್ದೂರ್, ಮೃದುಲ್ ಬೊರ್ಗೊಹೈನ್	ಮಧ್ಯಾಹ್ನ 1ರಿಂದ
ಜಿಮ್ನಾಸ್ಟಿಕ್ಸ್	
ಸತ್ಯಜೀತ್ ಮಂಡಲ್, ಯೋಗೇಶ್ವರ್ ಸಿಂಗ್, ಸೈಫ್ ತಂಬೋಲಿ, ಪ್ರಣತಿ ನಾಯಕ್, ಋತುಜಾ ನಟರಾಜ್, ಪ್ರತಿಷ್ಠಾ ಸಮಂತಾ, ಬಾವ್ಲೀನ್ ಕೌರ್	ಮಧ್ಯಾಹ್ನ 1.30
ಸೈಕ್ಲಿಂಗ್	
ರೋಜಿತ್ ಯಾಂಗ್ಲೆಮ್ (ಟೀಮ್ ಸ್ಪ್ರಿಂಟ್), ರೊನಾಲ್ಡೊ ಲೈತೊಂಜಮ್ (ಸ್ಪ್ರಿಂಟ್, 1000 ಮೀ. ಟೈಮ್ ಟ್ರಯಲ್, ಕೈರಿನ್), ಇ. ಡೇವಿಡ್ ಬೆಕಮ್ (ಸ್ಪ್ರಿಂಟ್, 1000 ಮೀ. ಟೈಮ್ ಟ್ರಯಲ್), ಇಸೊ ಅಲ್ಬೆನ್ (ಸ್ಪ್ರಿಂಟ್, ಕೈರಿನ್)	ಮಧ್ಯಾಹ್ನ 2.30
ಈಜು	
ಸಜನ್ ಪ್ರಕಾಶ್ (200 ಮೀ., 100 ಮೀ, 50 ಮೀ. ಬಟರ್‌ಫ್ಲೈ), ಶ್ರೀಹರಿ ನಟರಾಜ್ (200 ಮೀ., 100 ಮೀ, 50 ಮೀ. ಬ್ಯಾಕ್‌ಸ್ಟ್ರೋಕ್), ಕುಶಾಗ್ರ ರಾವತ್ (1500 ಮೀ, 200 ಮೀ, 400 ಮೀ. ಫ್ರೀಸ್ಟೈಲ್)	ಮಧ್ಯಾಹ್ನ 3ರಿಂದ
ಟೇಬಲ್ ಟೆನಿಸ್	
ಗುಂಪು ಹಂತದ ಪಂದ್ಯಗಳು	ಮಧ್ಯಾಹ್ನ 2ರಿಂದ
ಸ್ಕ್ವಾಷ್	
ಪುರುಷರ ಸಿಂಗಲ್ಸ್: ಸೌರವ್ ಘೋಷಾಲ್, ರಮಿತ್ ಟಂಡನ್, ಅಭಯ್ ಸಿಂಗ್. **ಮಹಿಳಾ ಸಿಂಗಲ್ಸ್:** ಜೋಷ್ನಾ ಚಿಣ್ಣಪ್ಪ, ಸುನೈನಾ ಕುರುವಿಲ್ಲಾ, ಅನಾಹತ್ ಸಿಂಗ್	ಮಧ್ಯಾಹ್ನ 4.30ರಿಂದ
ಬಾಕ್ಸಿಂಗ್	
ಮೊದಲ ಸುತ್ತಿನ ಬೌಟ್‌ಗಳು	ಮಧ್ಯಾಹ್ನ 4.30ರಿಂದ
ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್	
ಎಲ್ಲ ಸ್ಪರ್ಧೆಗಳ ಸಮಯ: ಭಾರತೀಯ ಕಾಲಮಾನ	

ಬರ್ಮಿಂಗ್‌ಹ್ಯಾಮ್‌ನ ಅಲೆಕ್ಸಾಂಡರ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕಾಮನ್‌ವೆಲ್ತ್ ಗೇಮ್ಸ್ ಉದ್ಘಾಟನಾ ಸಮಾರಂಭದಲ್ಲಿ ನೃತ್ಯ ಪ್ರದರ್ಶಿಸಿದ ಕಲಾವಿದರು– ಎಎಫ್‌ಪಿ ಚಿತ್ರ

ಕ್ರಿಕೆಟ್: ಭಾರತ ತಂಡಕ್ಕೆ ಬಲಿಷ್ಠ ಆಸ್ಟ್ರೇಲಿಯಾ ಸವಾಲು

ಹರ್ಮನ್‌ಪ್ರೀತ್ ಪಡೆಗೆ ಶುಭಾರಂಭದ ನಿರೀಕ್ಷೆ

ಹರ್ಮನ್‌ಪ್ರೀತ್ ಕೌರ್– ಪಿಟಿಐ ಚಿತ್ರ

ಕಳೆದ ಐದು ಪಂದ್ಯಗಳ ಫಲಿತಾಂಶ

1. ಆಸ್ಟ್ರೇಲಿಯಾಕ್ಕೆ 14 ರನ್‌ಗಳ ಜಯ
2. ಆಸ್ಟ್ರೇಲಿಯಾಕ್ಕೆ 4 ವಿಕೆಟ್‌ಗಳ ಜಯ
3. ಫಲಿತಾಂಶವಿಲ್ಲ
4. ಆಸ್ಟ್ರೇಲಿಯಾಕ್ಕೆ 85 ರನ್‌ಗಳ ಜಯ
5. ಭಾರತಕ್ಕೆ 17 ರನ್‌ಗಳ ಗೆಲುವು

ಬರ್ಮಿಂಗ್‌ಹ್ಯಾಮ್: 24 ವರ್ಷಗಳ ಬಳಿಕ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಕ್ರಿಕೆಟ್ ಮರುಸೇರ್ಪಡೆಯಾಗಿದ್ದು, ಭಾರತ ಮಹಿಳಾ ತಂಡವು ಟಿ20 ಮಾದರಿಯ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ಸವಾಲು ಎದುರಿಸಲಿದೆ.

ಎಜ್‌ಬಾಸ್ಟನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯುವ ಹಣಾಹಣಿಯಲ್ಲಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಗೆಲುವಿನ ಭರವಸೆಯಲ್ಲಿದೆ.1998ರ ಕ್ವಾಲಾಲಂಪುರ ಕೂಟದಲ್ಲಿ ಪುರುಷರ 50 ಓವರ್‌ಗಳ ಪಂದ್ಯಗಳನ್ನು ಆಡಿಸಲಾಗಿತ್ತು. ಆ ಬಳಿಕ ಕ್ರಿಕೆಟ್ ನಡೆದಿರಲಿಲ್ಲ.

ಭಾರತ ತಂಡವು ಇತ್ತೀಚೆಗೆ ಶ್ರೀಲಂಕಾ ಎದುರಿನ ಟಿ20 ಸರಣಿಯನ್ನು 2–1ರಿಂದ ಗೆದ್ದುಕೊಂಡು ಆತ್ಮವಿಶ್ವಾಸದಲ್ಲಿದೆ. ದ್ವೀಪರಾಷ್ಟ್ರದ ಎದುರಿನ ಮೂರು ಪಂದ್ಯಗಳ ಏಕದಿನ ಸರಣಿಯನ್ನೂ ಹರ್ಮನ್‌ಪ್ರೀತ್ ಬಳಗ 3–0ಯಿಂದ ಕ್ಲೀನ್‌ಸ್ವೀಪ್ ಮಾಡಿತ್ತು. ಅದೇ ಲಯದೊಂದಿಗೆ ಆಸ್ಟ್ರೇಲಿಯಾ ತಂಡವನ್ನು ಮಣಿಸುವ ಭರವಸೆಯ-ಲ್ಲಿದೆ. ಜೆಮಿಮಾ ರಾಡ್ರಿಗಸ್, ಶೆಫಾಲಿ ವರ್ಮಾ ಅವರನ್ನೊಳಗೊಂಡಿರುವ ಬ್ಯಾಟಿಂಗ್ ಪಡೆಯಿದೆ. ಪೂನಂ ಯಾದವ್ ಮತ್ತು ರಾಧಾ ಯಾದವ್ ಬೌಲಿಂಗ್‌ನಲ್ಲಿ ಪರಿಣಾಮಕಾರಿ ಎನಿಸಬಲ್ಲರು.

ಆಸ್ಟ್ರೇಲಿಯಾ ಕೂಡ ಬಲಿಷ್ಠವಾಗಿದ್ದು, ಭಾರತಕ್ಕೆ ಸೋಲುಣಿಸುವ ಲೆಕ್ಕಾಚಾರದಲ್ಲಿದೆ.

ಮುಖಾಮುಖಿ

22	ಪಂದ್ಯಗಳು
16	ಆಸ್ಟ್ರೇಲಿಯಾ ಜಯ
6	ಭಾರತ ಗೆಲುವು

ಪಂದ್ಯ ಆರಂಭ: ಮಧ್ಯಾಹ್ನ 3.30

ಸ್ಥಳ: ಎಜ್‌ಬಾಸ್ಟನ್ ಕ್ರಿಕೆಟ್ ಕ್ರೀಡಾಂಗಣ

ಮೆಗ್ ಲ್ಯಾನಿಂಗ್

ತಂಡಗಳು

ಭಾರತ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ, ತಾನಿಯಾ ಭಾಟಿಯಾ, ಯಸ್ತಿಕಾ ಭಾಟಿಯಾ, ಹರ್ಲೀನ್ ಡಿಯೊಲ್, ರಾಜೇಶ್ವರಿ ಗಾಯಕವಾಡ, ಎಸ್. ಮೇಘನಾ, ಮೇಘನಾ ಸಿಂಗ್, ಸ್ನೇಹ್ ರಾಣಾ, ರೇಣುಕಾ ಸಿಂಗ್, ಜೆಮಿಮಾ ರಾಡ್ರಿಗಸ್, ಶೆಫಾಲಿ ವರ್ಮಾ, ದೀಪ್ತಿ ಶರ್ಮಾ, ಪೂಜಾ ವಸ್ತ್ರಕಾರ್, ರಾಧಾ ಯಾದವ್.

ಆಸ್ಟ್ರೇಲಿಯಾ: ಮೆಗ್ ಲ್ಯಾನಿಂಗ್(ನಾಯಕಿ), ರಚೇಲ್ ಹೇನ್ಸ್, ಡಾರ್ಸಿ ಬ್ರೌನ್, ನಿಕೋಲಾ ಕ್ಯಾರಿ, ಆ್ಯಶ್ಲೆ ಗಾರ್ಡನರ್, ಗ್ರೇಸ್ ಹ್ಯಾರಿಸ್, ಅಲಿಸ್ಸಾ ಹೀಲಿ, ಜೆಸ್ ಜೊನಾಸನ್, ಅಲಾನ ಕಿಂಗ್, ತಹ್ಲಿಯಾ ಮೆಕ್‌ಗ್ರಾ, ಬೆತ್ ಮೂನಿ, ಎಲಿಸ್ ಪೇರಿ, ಮೇಘನಾ ಶುಟ್, ಅನಾಬೆಲ್ ಸದರ್ಲೆಂಡ್, ಅಮಂಡಾ ಜೇಡ್ ವೆಲ್ಲಿಂಗ್ಟನ್.

ಶಿವ ಥಾಪಗೆ ಸುಲೇಮಾನ್ ಸವಾಲು

ನಿಖತ್ ಜರೀನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಮಾಜಿ ವಿಶ್ವ ಚಾಂಪಿಯನ್, ಭಾರತದ ಶಿವ ಥಾಪಾ ಅವರು ಶುಕ್ರವಾರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಆರಂಭವಾಗಲಿರುವ ಪುರುಷರ ಬಾಕ್ಸಿಂಗ್ ನಲ್ಲಿ ತಮ್ಮ ಅಭಿಯಾನ ಆರಂಭಿಸುವರು.

ಶುಕ್ರವಾರ ನಡೆಯುವ ಲೈಟ್‌ವೆಲ್ಟರ್‌ವೇಟ್ (60–63.5ಕೆ.ಜಿ) ವಿಭಾಗದಲ್ಲಿಶಿವ ಥಾಪ ಅವರು ಪಾಕಿಸ್ತಾನದ ಸುಲೇಮಾನ್ ಬಲೂಚ್ ವಿರುದ್ಧ ಕಾದಾಡುವರು.

ಮಿಡ್ಲ್‌ವೇಟ್ (71–75ಕೆಜಿ) ವಿಭಾಗದ ಮೊದಲ ಸುತ್ತಿನಲ್ಲಿ ಸುಮೀತ್ ಬೈ ಪಡೆದಿದ್ದಾರೆ. ಅವರು ಭಾನುವಾರ ನಡೆಯುವ ಎರಡನೇ ಸುತ್ತಿನಲ್ಲಿ ಆಸ್ಟ್ರೇಲಿಯಾದ ಕೆಲಂ ಪೀಟರ್ಸ್ ವಿರುದ್ಧ ಸೆಣಸುವರು.ವೆಲ್ಟರ್‌ವೇಟ್ (63.5 –67ಕೆ.ಜಿ) ವಿಭಾಗದಲ್ಲಿ ರೋಹಿತ್ ಟೋಕಾಸ್ ಅವರಿಗೆ ಮೊದಲ ಸುತ್ತಿನಲ್ಲಿ ಬೈ ಲಭಿಸಿದೆ. ಅದರಿಂದಾಗಿ ಅವರು ಆ. 2ರಂದು ಎರಡನೇ ಸುತ್ತಿನಲ್ಲಿ ಅಲ್ಫ್ರೇಡ್ ಕೊಟೆಯ ಸವಾಲು ಎದುರಿಸಲಿದ್ದಾರೆ.

ಏಷ್ಯನ್ ಗೇಮ್ಸ್ ಚಾಂಪಿಯನ್ ಅಮಿತ್ ಪಂಘಾಲ್ ಅವರು ಫ್ಲೈವೇಟ್ ವಿಭಾಗದಲ್ಲಿ ನಾಮ್ರಿ ಬೆರಿ ವಿರುದ್ಧ ಆ. 1ರಂದು ಸೆಣಸುವರು. ಹೋದ ಕಾಮನ್‌ವೆಲ್ತ್ ಕೂಟದಲ್ಲಿ ಅಮಿತ್ ಬೆಳ್ಳಿ ಗಳಿಸಿದ್ದರು. ಫೆದರ್‌ವೇಟ್ ವಿಭಾಗದಲ್ಲಿ ಶನಿವಾರ ನಡೆಯುವ ಬೌಟ್‌ನಲ್ಲಿ ಮೊಹಮ್ಮದ್ ಹಸಮುದ್ದೀನ್ ದಕ್ಷಿಣ ಆಫ್ರಿಕಾದ ಅಮ್ಜೊಲೆಲೆ ದೈಯಿ ವಿರುದ್ಧ ಸೆಣಸುವರು.

ನಿಖತ್, ಲವ್ಲಿನಾಗೆ ಸುಲಭ ಗುರಿ: ಮಹಿಳೆಯರ ವಿಶ್ವ ಬಾಕ್ಸಿಂಗ್ ಚಾಂಪಿಯನ್ ನಿಖತ್ ಜರೀನ್ ಮತ್ತು ಒಲಿಂಪಿಕ್ ಕಂಚು ಪದಕ ವಿಜೇತ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರಿಗೆ ಮಹಿಳೆಯರ ವಿಭಾಗದ ಆರಂಭಿಕ ಸುತ್ತಿನಲ್ಲಿ ಸುಲಭ ಗೆಲುವು ಒಲಿಯುವ ಅವಕಾಶವಿದೆ.

48 ರಿಂದ 50 ಕೆ.ಜಿ. ವಿಭಾಗದಲ್ಲಿ ಭಾನುವಾರ ನಡೆಯುವ ಬೌಟ್‌ನಲ್ಲಿ ನಿಖತ್ ಅವರು ಮೊಂಜಾಬಿಕ್ ದೇಶದ ಹೆಲೆನಾ ಇಸ್ಮೇಲ್ ಬಗೊ ವಿರುದ್ಧ ಸೆಣಸುವರು. ಈ ಪಂದ್ಯದಲ್ಲಿ ಜಯಿಸಿದರೆ ಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಇಡುವರು.

ಲೈಟ್ ಮಿಡ್ಲ್‌ವೇಟ್ (66–70ಕೆ.ಜಿ)ವಿಭಾಗದಲ್ಲಿ ಲವ್ಲಿನಾ ಶನಿವಾರ ನಡೆಯುವ ಹಣಾಹಣಿಯಲ್ಲಿ ನ್ಯೂಜಿಲೆಂಡ್‌ನ ಏರಿಯನ್ ನಿಕೊಲ್ಸನ್ ಅವರನ್ನು ಎದುರಿಸುವರು. ಈ ಪಂದ್ಯದಲ್ಲಿ ಜಯಿಸಿದರೆ ಲವ್ಲಿನಾ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ವೇಲ್ಸ್‌ನ ರೋಸಿ ಎಸೆಲ್ಸ್ ವಿರುದ್ಧ ಸೆಣಸುವರು.

ಬಾಕ್ಸಿಂಗ್: ಮಹಿಳೆಯರ ವಿಭಾಗದಲ್ಲಿ ನಿಖತ್, ಲವ್ಲಿನಾಗೆ ಸುಲಭ ಸವಾಲು



ಶಿವ ಥಾಪ

ರೋಸಿ ಗೋಲ್ಡ್‌ಕೋಸ್ಟ್ ಕಾಮನ್‌ವೆಲ್ತ್ ಕೂಟದಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಲೈಟ್‌ವೇಟ್ (57–60 ಕೆ.ಜಿ) ವಿಭಾಗದಲ್ಲಿ ಜಾಸ್ಮಿನ್ ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದು, ನೇರವಾಗಿ ಎಂಟರ ಘಟ್ಟ ತಲುಪಿದ್ದಾರೆ. 2018ರ ಕೂಟದ ಕಂಚಿನ ಪದಕ ವಿಜೇತ ಬಾಕ್ಸರ್ ನ್ಯೂಜಿಲೆಂಡ್‌ನ ಟ್ರಾಯ್ ಗಾರ್ಟನ್ ವಿರುದ್ಧ ಆಗಸ್ಟ್ 4ರಂದು ಜಾಸ್ಮೀನ್ ಎದುರಿಸುವರು.

ಮಿನಿಮಮ್ ವೇಟ್ (45–48ಕೆ.ಜಿ) ವಿಭಾಗದಲ್ಲಿ ಭಾರತದ ನೀತು ಅವರು ನೇರವಾಗಿ ಪದಕ ಸುತ್ತಿಗೆ ಪ್ರವೇಶ ಗಳಿಸಿದ್ದಾರೆ. ಅವರ ವಿಭಾಗದಲ್ಲಿ ಕೇವಲ ಎಂಟು ಬಾಕ್ಸರ್‌ಗಳು ಡ್ರಾನಲ್ಲಿ ಸ್ಥಾನ ಪಡೆದಿದ್ದರಿಂದ ಅವರು ಆ.3ರಂದು ನಡೆಯುವ ಕ್ವಾರ್ಟರ್‌ಫೈನಲ್‌ನಲ್ಲಿ ನಾರ್ಥರನ್ ಐರ್ಲೆಂಡ್‌ನ ನಿಕೋಲ್ ಕ್ಲೈಡ್ ವಿರುದ್ಧ ಕಣಕ್ಕಿಳಿಯಲಿದ್ದಾರೆ.

ಈಜು: ಕನ್ನಡಿಗ ಶ್ರೀಹರಿ ಮೇಲೆ ನಿರೀಕ್ಷೆ

ಶ್ರೀಹರಿ ನಟರಾಜ್

ಬರ್ಮಿಂಗ್‌ಹ್ಯಾಮ್: ಕನ್ನಡಿಗ ಶ್ರೀಹರಿ ನಟರಾಜ್ ಶುಕ್ರವಾರ ಆರಂಭವಾಗಲಿರುವ ಪುರುಷರ ಈಜು ವಿಭಾಗದ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಸ್ಪರ್ಧಿಸಲಿದ್ದಾರೆ. ಬೆಂಗಳೂರಿನ ಶ್ರೀಹರಿ ಹೋದ ವರ್ಷ ಟೋಕಿಯೊ ಒಲಿಂಪಿಕ್ ಕೂಟದಲ್ಲಿಯೂ ಸ್ಪರ್ಧಿಸಿದ್ದರು. 'ಎ' ಕೆಟಗರಿಯಲ್ಲಿ ಅವರು ಅರ್ಹತೆ ಗಿಟ್ಟಿಸಿ ಚಾರಿತ್ರಿಕ ಸಾಧನೆ ಮಾಡಿದ್ದರು. ಪುರುಷರ 50 ಮೀಟರ್ಸ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಒಲಿಂಪಿಯನ್ ಸಜನ್ ಪ್ರಕಾಶ್, 400 ಮೀ ಫ್ರೀಸ್ಟೈಲ್ ನಲ್ಲಿ ಕುಶಾಗ್ರ ರಾವತ್ ಸ್ಪರ್ಧಿಸಲಿದ್ದಾರೆ.

ಎಐಟಿಎ 16 ವರ್ಷದೊಳಗಿನವರ ಟೆನಿಸ್ ಟೂರ್ನಿ

ಫೈನಲ್‌ಗೆ ದಿಶಾ, ಆರಾಧ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಲುವಿನ ಓಟ ಮುಂದುವರಿಸಿದ ಕರ್ನಾಟಕದ ದಿಶಾ ಸಂತೋಷ್ ಅವರು ಎಐಟಿಎ 16 ವರ್ಷದೊಳಗಿನವರ ಸೂಪರ್ ಸಿರೀಸ್ ಟೆನಿಸ್ ಟೂರ್ನಿಯಲ್ಲಿ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ಗುರುವಾರ ನಡೆದ ಬಾಲಕಿಯರ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ 6-1, 6-3ರಿಂದ ವಿ. ಚಿಂಗಟಗೆರೆ ನವೀನ ಎದುರು ಗೆದ್ದರು.

ಸೆಮಿಫೈನಲ್‌ನ ಮತ್ತೊಂದು ಹಣಾಹಣಿಯಲ್ಲಿ ಹರ್ಷಿಣಿ ಎನ್. 6-4, 6-2ರಿಂದ ಸವಿತಾ ಭುವನೇಶ್ವರನ್ ಎದುರು ಗೆದ್ದರು.

ಬಾಲಕರ ವಿಭಾಗದ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಆರಾಧ್ಯ ಕ್ಷಿತಿಜ್ 6-0, 4-6, 6-3ರಿಂದ ಕ್ರಿಸ್ಟೊ ಬಾಬು ಎದುರು, ಶ್ರೀನಿಕೇತ್ 6-1, 6-2ರಿಂದ ಯಶ್ ಪಂಚಾಕ್ಷರಿ ವಿರುದ್ಧ ಗೆದ್ದು ಫೈನಲ್ ಪ್ರವೇಶಿಸಿದರು.

ಆರಾಧ್ಯ ಕ್ಷಿತಿಜ್– ಪ್ರಜಾವಾಣಿ ಚಿತ್ರ